

ಯಕ್ಷ ದರ್ಶನ

ಡಾ. ಆನಂದರಾಮ ಉಪಾಧ್ಯ

ಯಕ್ಷ ದರ್ಶನ

(ಸಂದರ್ಶನ ಲೇಖನಗಳ ಸಂಕಲನ)

ಡಾ॥ ಆನಂದರಾಮ ಉಪಾಧ್ಯ

ಗೀತಾಂಜಲಿ ಪಬ್ಲಿಕೇಷನ್ಸ್

ನಂ. 60, 2ನೇ 'ಡಿ' ಅಡ್ಡರಸ್ತೆ, 2ನೇ ಹಂತ, 3ನೇ ಬ್ಲಾಕ್,

ನಾಗರಬಾವಿ, ಬೆಂಗಳೂರು–560 072. ಫೋನ್: 9740066842

YAKSHADARSHANA

A collection of Interviews with artists of Yakshagana

Dr. Anandarama Upadhya
No. 317, 7th Cross, Avalahally,
BDA Layout, BSK 3rd Stage,
Bangalore-560 085.
Ph : 9880032560

Published by
Susheela on behalf of
Geetanjali Publications
No.60, 2 'D' Cross, 2nd Stage,
3rd Block, Nagarabhavi,
Bangalore-560 072. Ph: 9740066842

ISBN	:	978-81-949921-7-2
First Edition	:	1986
Second Edition	:	2021
Honorary Editor	:	Nidasale Puttaswamaiah
©	:	Author
Copies	:	1000
Paper used	:	70 GSM N.S. Maplitho
Size	:	1/8 Demy
Pages	:	216 + iv
Price	:	Rs. 200
Cover Design	:	D.S. Godavari
Page Design	:	Mahesh Kumar B.
Printed at	:	Jagruthi Printers # 56/1-6, Narasimhaiah Garden, Kottigepalya, Magadi Main Road, Bangalore-560 091. Phone : 9740066842

ಅರ್ಪಣೆ

ಪ್ರಸಂಗ ಸಾಹಿತ್ಯದ ಬಗ್ಗೆ ಆಸಕ್ತಿ ಮೂಡಲು ಕಾರಣರಾದ
ನನ್ನ ಅಣ್ಣ
ಸಿ. ನರಸಿಂಹ ಉಪಾಧ್ಯ
ಅವರಿಗೆ

YAKSHA DARSHANA
A collection of Interviews with artists of Yakshagana

Dr. Anandarama Upadhya
No. 317, 7th Cross, Avalahally,
BDA Layout, BSK 3rd Stage,
Bangalore-560 085
Ph : [illegible]

Published by
[illegible] on behalf of
Geetanjali Publications
No.92, 2 'D' Cross, 2nd Stage,
3rd Block, Nagarbhavi,
Bangalore-[illegible]

Title
First Edition
Second Edition
Number of copies
©
Copies
Paper used
Size
Pages
Price
Cover Design
Page Design
Printed at

ಕೃತಜ್ಞತೆ

- ಪುಸ್ತಕದ ಮೊದಲ ಮುದ್ರಣಕ್ಕೆ ಮುನ್ನುಡಿಯನ್ನು ಬರೆದುಕೊಟ್ಟ ಪ್ರೊ. ಕು.ಶಿ. ಹರಿದಾಸ ಭಟ್ ಅವರಿಗೆ,
- ಸಂಕಲನ ತರಲು ಒತ್ತಾಸೆ ನೀಡಿದ ಗೆಳೆಯರಾದ ಡಾ॥ ಎಚ್.ಎಸ್. ವೆಂಕಟೇಶ್‌ಮೂರ್ತಿ ಹಾಗೂ ಡಾ॥ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರಿಗೆ,
- ಸಂದರ್ಶನ ನೀಡಿ ಸಹಕರಿಸಿದ ಎಲ್ಲಾ ಹಿರಿಯ ಯಕ್ಷಗಾನ ಕಲಾವಿದರಿಗೆ,
- ಲೇಖನಗಳನ್ನು ಪ್ರಕಟಿಸಿದ ಪ್ರಜಾವಾಣಿ, ಉದಯವಾಣಿ, ಕನ್ನಡಪ್ರಭ, ಮುಂಗಾರು, ಸುಧಾ, ಯುಗಪುರುಷ, ವಿಜಯ ಕರ್ನಾಟಕ ಪತ್ರಿಕೆಗಳ ಸಂಪಾದಕರಿಗೆ,
- ಎರಡನೆಯ ಮುದ್ರಣದ ಅಗತ್ಯವನ್ನು ಹೇಳಿ ಒತ್ತಾಯ ಮಾಡಿದ ಶ್ರೀ ಕಟೀಲು ಸಿತ್ಲ ರಂಗನಾಥ್ ಅವರಿಗೆ,
- ಮರು ವಿವರಗಳನ್ನು ನೀಡಿ ಸಹಕರಿಸಿದ ಶ್ರೀ ದಿನೇಶ ಉಪ್ಪೂರ್, ಶ್ರೀ ಕಡತೋಕ ಗೋಪಾಲಕೃಷ್ಣ ಭಾಗವತ, ಪ್ರೊ. ಎಂ.ಎಲ್. ಸಾಮಗ, ಶ್ರೀ ಜಿ. ಗಣಪಯ್ಯ ನಾವಡ, ಶ್ರೀ ರವಿ ಮಡೋಡಿ, ಶ್ರೀ ಕೆರೆಮನೆ ಶಿವಾನಂದ ಹೆಗಡೆ, ಪ್ರೊ. ಎಂ.ಎ. ಹೆಗಡೆ, ಡಾ. ಎಂ. ಪ್ರಭಾಕರ ಜೋಷಿ, ಶ್ರೀ ಕೆರೆಮನೆ ಶಿವಾನಂದ ಹೆಗಡೆ, ಶ್ರೀಮತಿ ಉಮಾದುರ್ಗಪ್ಪ ಗುಡಿಗಾರ್ ಅವರಿಗೆ,
- ಮೊದಲ ಮುದ್ರಣದಲ್ಲಿ ಸಹಕರಿಸಿದ ಗೆಳೆಯರಾದ ಡುಂಡಿರಾಜ್, ಶರತ್ ಕಲ್ಕೋಡ್, ನಂದಳಿಕೆ ಬಾಲಚಂದ್ರರಾವ್, ರಾಘವೇಂದ್ರ ಪಾಟೀಲ, ಸಂಜೀವ ಶೆಟ್ಟಿ, ಯಜ್ಞ, ಮುನಿಧರ್ಮಯ್ಯ ಅವರಿಗೆ,

❖ ಎರಡನೆಯ ಮುದ್ರಣದ ಹೊಣೆ ಹೊತ್ತ ಗೀತಾಂಜಲಿ ಪಬ್ಲಿಕೇಷನ್ಸ್‌ನ ಶ್ರೀಮತಿ ಸುಶೀಲಾ ಅವರಿಗೂ ಹಾಗೂ ಜಾಗೃತಿ ಪ್ರಿಂಟರ್ಸ್‌ನ ಮಾಲಿಕರಾದ ನಿಡಸಾಲೆ ಪಿ. ವಿಜಯ್, ಹಾಗೇ ಜಾಗೃತಿ ಪ್ರಿಂಟರ್ಸ್‌ನ ಕಾರ್ಯನಿರ್ವಾಹಕರಾದ ಶ್ರೀ ಮಹೇಶ್ ಕುಮಾರ್ ಬಿ. ಅವರಿಗೆ,

❖ ಕೃತಿ ಹೊರ ಬರುವಲ್ಲಿ ಕಾರಣರಾದ ನನ್ನ ಕುಟುಂಬದವರಾದ ಪ್ರೇಮಾ, ಸೀಮಂತಿನಿ, ಎಸ್.ಎನ್. ವೆಂಕಟೇಶ್ ಹಾಗೂ ಆರ್ಣವ್ ಅವರಿಗೆ,

❖ ಮೊದಲ ಮುದ್ರಣವನ್ನು ಆದರದಿಂದ ಸ್ವೀಕರಿಸಿದ ಎಲ್ಲಾ ಯಕ್ಷಗಾನ ಅಭಿಮಾನಿಗಳಿಗೆ ಕೃತಜ್ಞತಾಪೂರ್ವಕ ವಂದನೆಗಳು.

21 ಜೂನ್ 2021 **– ಡಾ. ಆನಂದರಾಮ ಉಪಾಧ್ಯ**

ಮುನ್ನುಡಿ

(ಮೊದಲ ಮುದ್ರಣದಿಂದ)

ಯಕ್ಷಗಾನ ಪ್ರಪಂಚದ ಕೆಲಮಂದಿ ಮುಖ್ಯ ಕಲಾವಿದರನ್ನು ಪರಿಚಯಿಸುವ ನಿಟ್ಟಿನಲ್ಲಿ ಮಿತ್ರ ಡಾ. ಸಿ. ಆನಂದರಾಮ ಉಪಾಧ್ಯರು ತಾವು ಹಿಂದೆ ಪ್ರಚುರಪಡಿಸಿದ ಒಟ್ಟು ಇಪ್ಪತ್ತು ಸಂದರ್ಶನ ಲೇಖನಗಳನ್ನು ಪೋಣಿಸಿ ಒಂದು ಮಾಲೆ ನೆಯ್ದಿರುವರು. ಯಕ್ಷಗಾನ ಪ್ರಸಂಗಗಳ ಸಾಹಿತ್ಯಿಕ ಅಂಶಗಳನ್ನು ತಾವು ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧಕ್ಕೆ ವಿಷಯವಾಗಿ ಆರಿಸಿಕೊಂಡ ಡಾ. ಉಪಾಧ್ಯರು ಇದೀಗ ಜೀವಂತ ರಂಗಸ್ಥಳವನ್ನು ಅಲ್ಲಿನ ಜ್ವಲಂತ ನಿದರ್ಶನಗಳ ಮೂಲಕ ಅನ್ವೇಷಿಸಲು ಹೊರಟಂತೆ ಅನಿಸುತ್ತದೆ.

ಪಾರಂಪರಿಕವಾಗಿ ಯಕ್ಷಗಾನ ಭಾಗವತರಾಗಲಿ, ಕಲಾವಿದರಾಗಲಿ ಏಕರೂಪ ಮತ್ತು ಏಕತಾನವುಳ್ಳ ಜೀವನ ಕ್ರಮವನ್ನು, ವ್ಯವಸಾಯಿ ಪದ್ಧತಿಯನ್ನೂ ಅನುಸರಿಸುವಂತೆ ಈ ಸಂದರ್ಶನ ಮಾಲೆ ಸಾಬೀತುಗೊಳಿಸುತ್ತದೆ. ಇದಕ್ಕೆ ಕಾರಣ ಈ ಕಲಾಪ್ರಂಪಚದ ಬಿಗುವಾದ ಸಾಂಪ್ರದಾಯಿಕ ಚೌಕಟ್ಟು, ಅಲ್ಲದೆ ಈ ಕಲೆ ಹುಟ್ಟಿ ಬಂದ ಗ್ರಾಮೀಣ ಪರಿಸರದ ವೈವಿಧ್ಯರಹಿತವಾದ ನೈಜ ಸನ್ನಿವೇಶ, ಶಾಲೆಗಳಾಗಲಿ, ಇತ್ತೀಚೆಗೆ ಉದ್ಭವಿಸಿದ "ಕೇಂದ್ರ"ಗಳಾಗಲಿ ಇಲ್ಲದೆಯೇ ಕರಾವಳಿಯ ಸಮೃದ್ಧ ಯಕ್ಷಗಾನ ರಂಗಸ್ಥಳ ನಿರ್ಮಾಣಗೊಂಡಿದೆ. 3–4 ಶತಮಾನ ಕಳೆದರೂ ಪ್ರೇಕ್ಷಕ ರಸಿಕರ ಮನಸ್ಸಿನ ಅಂತರಾಳದಲ್ಲಿ ಬೇರುಬಿಟ್ಟಿದೆ. ಆದ್ಯತನ ಕಾಲದಲ್ಲಿ–ಈಚಿಗಿನ 30 ವರ್ಷಗಳಲ್ಲಿ–ಹಳೆಯ ಹರಕೆ ಮೇಳ ಸಂಘಟನೆಯನ್ನು ಬದಿಗೊತ್ತಿ ವ್ಯಾಪಾರೀನ (ಟಿಕೆಟ್ ಸಹಿತ) ಮೇಳಗಳು ಪ್ರಾಬಲ್ಯಕ್ಕೆ ಬಂದಿರುವ ಸಂಧಿ ಕಾಲದಲ್ಲಿ ತೆಂಕು, ಬಡಗು ರಂಗಸ್ಥಳಕ್ಕೆ ಕಳೆಕಟ್ಟಿದ 20 ಮಂದಿ ಮಹನೀಯರ ಕಲಾಜೀವನ, ಅವರ ಅನಸಿಕೆಗಳು, ಬದಲಾಗುತ್ತಿರುವ ಕಲಾ ಸನ್ನಿವೇಶದಲ್ಲಿ ಅವರು ಮಾಡುತ್ತಿರುವ ಹೊಂದಾಣಿಕೆಗಳು

ಎಲ್ಲವನ್ನೂ ರೇಖಾಚಿತ್ರ ರೂಪದಲ್ಲಿ ಕಂಡಿರಿಸಿ ಕೊಡುವ ಈ ಸಂದರ್ಶನಗಳಲ್ಲಿ ಡಾ. ಉಪಾಧ್ಯರು ಕಲಾವಿದರ ಜೀವನವನ್ನು ತನ್ನ ವಿನಯವಂತ ಅಧ್ಯಯನಕ್ಕೂ, ಹೃದಯವಂತಿಕೆಗೂ ಈಡುಗೊಳಿಸಿದ್ದಾರೆ. ತಾವು ಮರೆಯಲ್ಲೇ ಇದ್ದು ಕಲಾವಿದನು ರಂಗಮಧ್ಯಮದಲ್ಲಿರುವಂತೆ ನೋಡಿಕೊಂಡಿದ್ದಾರೆ.

ಯಕ್ಷಗಾನ ಲೋಕದ ಅಭೂತಪೂರ್ವ ಶ್ರೇಯಸ್ಸಿಗೆ ಕಾರಣಪುರುಷರಾದ ಹಿನ್ನೆಲೆ ವ್ಯಕ್ತಿಗಳ ಕಿರುಪರಿಚಯವು ಓದುಗರಿಗೆ ಈ ಲೇಖನ ಮಾಲೆಯಿಂದ ಲಭ್ಯವಾಗುತ್ತದೆಂದು ನಾನು ನಂಬಿದ್ದೇನೆ. ಡಾ. ಉಪಾಧ್ಯರು ತಮ್ಮ ಅನ್ವೇಷಣೆಯನ್ನು ನಿರಂತವಾಗಿ ಸಾಗಿಸಲೆಂದು ಹಾರೈಸುತ್ತೇನೆ.

– ಕು.ಶಿ. ಹರಿದಾಸ ಭಟ್ಟ

ಪರಿವಿಡಿ

ಪ್ರಸ್ತಾವನೆ

ಯಕ್ಷಗಾನ ಒಂದು ಸಮಷ್ಟಿ ಕಲೆ. ಸಾಹಿತ್ಯ, ಸಂಗೀತ, ಬಣ್ಣಗಾರಿಕೆ, ಅಭಿನಯ, ನರ್ತನಗಳು ಇಲ್ಲಿ ಏಕತ್ರ ಸಂಧಿಸುತ್ತವೆ. ಈ ಕಲೆಗಳೆಲ್ಲಾ ಸಮ್ಮಿಳಿತವಾಗಿ ಅಭಿವ್ಯಕ್ತಿಯಾಗುವಲ್ಲೇ ಯಕ್ಷಗಾನದ ಸಾಕ್ಷಾತ್ಕಾರವಿದೆ. ಯಕ್ಷಗಾನ ಪ್ರದರ್ಶನ ರಸಪೂರ್ಣವಾಗುವುದು ಇವುಗಳ ಹದವರಿತ ಸಮ್ಮಿಶ್ರಣದಲ್ಲಿ, ಹೀಗಾಗಿಯೇ ಯಕ್ಷಗಾನ ಮೇಳಗಳಲ್ಲಿ ಬೇರೆ ಬೇರೆ ಅಂಗಗಳಲ್ಲಿ ಪರಿಣತರಾದ ಕಲಾವಿದರಿರುತ್ತಾರೆ. ಅವರೆಲ್ಲರಿಗೂ ಒಂದು ಸಾಮೂಹಿಕ ಜವಾಬ್ದಾರಿ ಇದೆ. ಕಲೆಯ ಒಟ್ಟಂದದ ಚಂದಕ್ಕೆ ಇವರೆಲ್ಲರ ಪ್ರತಿಭೆ ಮಿಳಿತವಾಗಬೇಕು.

ಯಕ್ಷಗಾನ ಪ್ರದರ್ಶನಕ್ಕೆಂದು ರಚಿತವಾದ ಕಿರುಕಾವ್ಯಗಳಂತಿರುವ ಪ್ರಸಂಗಗಳ ಪದ್ಯವನ್ನು ಹಾಡುವ ಭಾಗವತ, ಅವನನ್ನು ಆಶ್ರಯಿಸಿ ಕುಣಿತಕ್ಕೆ ಒದಗುವ ಬಡ್ತಿಗೆಗಳನ್ನು ನುಡಿಸುವ ಮದ್ದಲೆಗಾರ, ಆತನೊಂದಿಗೆ ಚಂಡೆಯವ, ಇವರ ಹಿಮ್ಮೇಳಕ್ಕೆ ಕುಣಿಯುವ ಬಣ್ಣಹಾಕಿದ, ವೇಷ ಧರಿಸಿದ ವೇಷಧಾರಿ ಇವರೆಲ್ಲ ಈ ರಂಗದಲ್ಲಿದ್ದಾರೆ. ಭಾಗವತ ಹಾಡಿದ ಪದ್ಯಭಾಗದ ಸಾರಸರ್ವಸ್ವವನ್ನು ವೇಷಧಾರಿ ತನ್ನ ಮಾತುಗಾರಿಕೆಯ ಮೂಲಕ ಕಟ್ಟಿಕೊಡುತ್ತಾನೆ. ಹೀಗೆ ಪ್ರಸಂಗ ಕೃತಿ ಪ್ರದರ್ಶನವಾಗಿ ಮೈದೋರಿ ಕಲಾಭಿವ್ಯಕ್ತಿಯನ್ನು ಪಡೆಯುತ್ತದೆ. ಇಲ್ಲಿ ಪ್ರಸಂಗಕಾರನಿಂದ ಹಿಡಿದು ವೇಷಧಾರಿಯವರೆಗೆ ಎಲ್ಲರಿಗೂ

ಅವರದೇ ಆದ ಜವಾಬ್ದಾರಿ ಇರುವಷ್ಟೇ ಪ್ರತಿಭೆಯ ಪ್ರದರ್ಶನಕ್ಕೆ ಅವಕಾಶವೂ ಇರುತ್ತದೆ. ಈ ವೈವಿಧ್ಯಮಯ ಪ್ರತಿಭೆಗಳ ಸ್ವಾತಂತ್ರ್ಯವೇ ಈ ಕಲಾಪ್ರಕಾರದ ವೈಶಿಷ್ಟ್ಯ. ಯಕ್ಷಗಾನ ಕಲೆಯನ್ನು ಉಳಿಸುವಲ್ಲಿ ಹಾಗೂ ಬೆಳಸುವಲ್ಲಿ ಇಲ್ಲಿನ ಕಲಾವಿದರ ಕಲಾನಿಷ್ಠೆ ಹಾಗು ಚಿಂತನ ಮಂಥನಗಳು ಸಹಾಯಕವಾಗಿವೆ. ಈ ಕಾರಣ ಯಕ್ಷಗಾನದ ಭಾಗವತ, ಮದ್ದಲೆಗಾರ, ಎರಡನೇ ವೇಷದವ, ಉಳಿದ ವೇಷಧಾರಿಗಳು, ಸ್ತ್ರೀವೇಷ, ಹಾಸ್ಯಗಾರ, ತಾಳಮದ್ದಲೆಯ ಅರ್ಥಧಾರಿ ಇವರೆಲ್ಲರೂ ಮುಖ್ಯರಾಗುತ್ತಾರೆ, ಈ ಕಲಾವಿದರ ಜೀವನಾನುಭವ, ಪರಂಪರೆಯ ಬಗ್ಗಿನ ಗೌರವ, ಹೊಸ ವಿಚಾರದ ಕುರಿತಿರುವ ಆಸಕ್ತಿ, ಕಲಾಭಿವ್ಯಕ್ತಿಯ ಕುರಿತಿರುವ ವಿಚಾರಧಾರೆ ಇವುಗಳೆಲ್ಲಾ ಸಾಂಸ್ಕೃತಿಕವಾಗಿ ಮುಖ್ಯವಾಗುತ್ತವೆ.

ಕರ್ನಾಟಕದ ಪಾರಂಪರಿಕ ಕಲೆಯಾದ ಯಕ್ಷಗಾನ ಇಂದು ಶ್ರೀಮಂತ, ಸುಂದರ ಕಲೆಯೆಂದೇ ಪರಿಣಿತವಾಗಿದೆ. ಇದರ ಹಿನ್ನೆಲೆಯಲ್ಲಿ ಕನಿಷ್ಠ 400–500 ವರ್ಷಗಳ ಕಸುಬುಗಾರಿಕೆ ಇದೆ ಎಂಬುದನ್ನು ಮರೆಯಲಾಗದು. ಕಾಲದಿಂದ ಕಾಲಕ್ಕೆ ಶ್ರೇಷ್ಠ ಮಟ್ಟದ ಕಲಾವಿದರು ಉದಿಸಿ, ತಮ್ಮ ಕಾಣ್ಕೆಯನ್ನು, ಪ್ರಬುದ್ಧತೆಯನ್ನು, ಛಾಪನ್ನು ಪರಂಪರೆಗೆ ಸೇರಿಸಿ ಹೋಗಿದ್ದಾರೆ. ಆರು ಶತಕಗಳ ಇತಿಹಾಸವಿರುವ ಪ್ರಸಂಗ ಸಾಹಿತ್ಯದ ಅಧ್ಯಯನದಿಂದ ಯಕ್ಷಗಾನ ರಂಗಭೂಮಿಯ ಬೆಳವಣಿಗೆಯನ್ನು ಗುರುತಿಸಲು ಸಾಧ್ಯ. ಈ ಬೆಳವಣಿಗೆ ಎಂದರೆ ಆಯಾಯಾ ಕಾಲದ ಶ್ರೇಷ್ಠ ಕಲಾವಿದರ ನೂತನ ಅವಿಷ್ಕಾರಗಳೇ. ಇದೊಂದು ಪರಂಪರೆಯ ಕಲೆಯಾದ್ದರಿಂದ ಅನೇಕ ಹೊಸ ಅವಿಷ್ಕಾರಗಳು ಸೇರ್ಪಡೆಯಾಗಿ, ಅನಗತ್ಯವಾದವುಗಳು ಲುಪ್ತವಾಗಿ ಇಂದಿನ ಈ ಸ್ಥಿತಿ ನಿರ್ಮಾಣವಾಗಿರಬೇಕು. ಈ ದೃಷ್ಟಿಯಿಂದ ಯೋಚಿಸಿದಾಗ ಈಚಿನ ಮೂವತ್ತು ವರ್ಷಗಳನ್ನು ಯಕ್ಷಗಾನ ರಂಗಭೂಮಿಯು ಸಂಕ್ರಮಣ ಕಾಲವೆಂದೇ ಗುರುತಿಸಬೇಕಾಗುತ್ತದೆ. ಸ್ವಾತಂತ್ರ್ಯೋತ್ತರ ಭಾರತದ ಬದಲಾದ ಸಾಮಾಜಿಕ ದೃಷ್ಟಿಕೋನ, ಜೀವನ ವ್ಯವಸ್ಥೆ, ಆರ್ಥಿಕ ಧೋರಣೆಗಳು ಈ ರಂಗ ಪ್ರಕಾರದ ಮೇಲೂ ಪ್ರಭಾವ ಬೀರಿದ್ದು ಸ್ಪಷ್ಟವಾಗುತ್ತದೆ. ಜನತೆಗೆ ತೀರಾ ಹತ್ತಿರವಾದ ಈ ಕಲಾಮಾಧ್ಯಮ ಈ ಕಾಲದಲ್ಲೇ ಬಾಹ್ಯ ಹಾಗೂ ಆಂತರಿಕ ಬದಲಾವಣೆಗೆ ತನ್ನನ್ನು ತೆರೆದುಕೊಂಡು ಮತ್ತೆ ಹೊಸ ಬಗೆಯಲ್ಲಿ ಮೈ ತಳೆಯಿತು.

ಮೊದಲಿಗೆ ಹೆಚ್ಚಾಗಿ ದೇವಸ್ಥಾನಗಳನ್ನು ಆಶ್ರಯಿಸಿದ್ದ ಮೇಳಗಳು ಭಕ್ತರ ಹರಕೆಯ ಆಟಗಳನ್ನು ಇಲ್ಲವೇ ಸಾರ್ವಜನಿಕರ ಸಂಘಟನೆಗೆ ಪೂರಕವಾದ ಆಟಗಳನ್ನು ಆಡುತ್ತಿದ್ದರು. ಯಕ್ಷಗಾನ ಈ ರೂಪವನ್ನು ಕಳೆದುಕೊಂಡು ಒಂದು ವ್ಯಾಪಾರಿ ಸಂಸ್ಥೆಯಂತೆ ತನ್ನದೇ ಆದ ಪರಿಕರಗಳನ್ನು ಹೊಂದಿ ಊರಿಂದೂರಿಗೆ ಅಲೆಯುತ್ತಾ ಜನರಿಂದ ಟಿಕೇಟ್ ಮೂಲಕ ಹಣ ವಸೂಲಿ ಮಾಡಿ ಯಕ್ಷಗಾನವನ್ನು ಪ್ರದರ್ಶಿಸುವ ಪರಿಪಾಠವನ್ನು

ತಲುಪಿದ್ದು ಈಚಿನ ದಶಕಗಳಲ್ಲಿ, ಝಗಮಗಿಸುವ ವಿದ್ಯುತ್ ದೀಪಗಳ ಬಳಕೆ, ನವೀನ ರಂಗಸ್ಥಳ ನಿರ್ಮಾಣ, ಹಿನ್ನೆಲೆಗೆ ತೆರೆ, ಕಡಿಮೆಯಾದ ವೇಷಭೂಷಣಗಳು, ಮೊಟಕಾದ ಸಭಾಲಕ್ಷಣ ಇವೆಲ್ಲಾ ಬಾಹ್ಯ ಬದಲಾವಣೆಗಳು, ಅದೇ ರೀತಿ ಆರಾಮ ಕುರ್ಚಿಯಲ್ಲಿ ಕೂತ ಪ್ರೇಕ್ಷಕ, ತನಗೆ ಬೇಕಾದದ್ದು ಬಂದಾಗ ಸಿಳ್ಳೆ ಹಾಕುವ ವರ್ಗ, ರಂಗದ ಹೊರಗೂ ಕಲಾವಿದರನ್ನು ಸುತ್ತುಗಟ್ಟುವ ಅಭಿಮಾನಿ ವೃಂದ ಇದೆಲ್ಲಾ ಇಂದಿನ ಸಂಭ್ರಮಗಳು. ಹಾಗೆಂದು ಬಯಲಾಟದ ಮೇಳಗಳು ನಿರ್ನಾಮವಾಗಲಿಲ್ಲ. ಕನ್ನಡ ಜಿಲ್ಲೆಗಳೆರಡರಲ್ಲೂ ಅಲ್ಲಲ್ಲಿ ಇರುವ ಕಾರಣಿಕ ಸ್ಥಳಗಳಾದ ಮಂದರ್ತಿ, ಕಟೀಲು, ಮಾರಣಕಟ್ಟೆ, ಗುಂಡಬಾಳ ಮುಂತಾದ ದೇವಸ್ಥಾನಗಳ ಮೇಳಗಳು ಇಂದಿಗೂ ಹರಕೆಯಾಟ ಆಡುತ್ತವೆ. ಆದರೆ ಇವುಗಳ ಪ್ರಾಬಲ್ಯ ನಶಿಸಿ ಟೆಂಟ್ ಮೇಳಗಳೇ ಮೇಲುಗೈ ಪಡೆದಿರುವುದಂತು ಸತ್ಯ.

ಈ ಎಲ್ಲಾ ಬಾಹ್ಯ ಬದಲಾವಣೆಗಳೊಂದಿಗೆ ಆಂತರ್ಯದಲ್ಲೂ ಹಲವು ಬೆಳವಣಿಗೆಗಳಾಗಿರುವುದನ್ನು ಗುರುತಿಸಬಹುದು. ಈ ಶತಮಾನದ ಪೂರ್ವಾರ್ಧದಲ್ಲಿ ಕರ್ನಾಟಕದ ಉದ್ದಗಲಕ್ಕೂ ಖ್ಯಾತವಾಗಿದ್ದ ವೃತ್ತಿನಾಟಕ ರಂಗಭೂಮಿ ಯಕ್ಷಗಾನ ವೇಷಗಾರಿಕೆಯ ಮೇಲೆ ಪ್ರಭಾವ ಬೀರಿದೆ. ಹೊಸ ಚಿಂತನೆಗಳು, ಜೀವನ ದೃಷ್ಟಿಕೋನಗಳು, ವಿಚಾರಧಾರೆಗಳು, ಅರ್ಥಗಾರಿಕೆಯನ್ನು ಶ್ರೀಮಂತಗೊಳಿಸಿವೆ. ಈ ಶತಕದ ಬಹು ಪ್ರಭಾವಿ ಮಾಧ್ಯಮವಾದ ಚಲನಚಿತ್ರ ಕಲಾವಿದರಲ್ಲಿ ಮುಖದ ಅಭಿನಯಕ್ಕೆ ಪ್ರಾಧಾನ್ಯವನ್ನು ತಂದಿದೆ, ಬೇರೆ ಬೇರೆ ಪ್ರಾದೇಶಿಕ ಕಲೆಗಳ ನಿಕಟ ಪರಿಚಯದಿಂದ ಕಲಾವಿದರ ಹಾವ ಭಾವ, ಕುಣಿತಗಳಲ್ಲಿ ಬದಲಾವಣೆ ಬಂದಿದೆ. ಅದೇ ರೀತಿ ಬೇರೆ ಬೇರೆ ಸಂಗೀತ ವಿಧಾನಗಳನ್ನು ಅಭ್ಯಾಸ ಮಾಡಿದ ಭಾಗವತರುಗಳು ಹಾಡುಗಾರಿಕೆಯಲ್ಲಿ ವೈವಿಧ್ಯ ತಂದಿದ್ದಾರೆ. ಹೀಗೆ ಒಟ್ಟಿನಲ್ಲಿ ಈ ಕಲೆಯ ಎಲ್ಲಾ ಅಂಗಗಳು ಒಂದಿಲ್ಲೊಂದು ರೀತಿಯಿಂದ ಬದಲಾವಣೆಯಾಗುತ್ತಿರುವುದು ಕಂಡುಬರುತ್ತಿದೆ.

ಕಲೆಯ ಒಳಹೊರಗೆಲ್ಲಾ ಬದಲಾವಣೆಯಾದಂತೆ ಯಕ್ಷಗಾನವನ್ನು ನೋಡುವ ದೃಷ್ಟಿ ಧೋರಣೆಗಳಲ್ಲೂ ವ್ಯತ್ಯಾಸವಾಗುತ್ತಿದೆ. ಹಿಂದೆಲ್ಲಾ ಯಕ್ಷಗಾನ ಪ್ರದರ್ಶನಗಳನ್ನು ಧಾರ್ಮಿಕ ನಂಬಿಕೆ ವಿಶ್ವಾಸದಿಂದಲೇ ನೋಡುತ್ತಿದ್ದರು. ಜನಮನದ ಮೇಲೆ ಅವು ಮಾಡುತ್ತಿದ್ದ ಪ್ರಭಾವಗಳಲ್ಲಿ ಧಾರ್ಮಿಕತೆಗೆ ಪ್ರಧಾನ ಪಟ್ಟವಿತ್ತು, ಆದರೆ ಇಂದು ಅದು ಹೋಗಿ ಪ್ರದರ್ಶನಗಳು ಗಲ್ಲಾಪೆಟ್ಟಿಗೆಯನ್ನು ಅವಲಂಬಿಸಿ ನಡೆಯುತ್ತಿವೆ. ಇದರ ಫಲವಾಗಿ ಅಗ್ಗದ ಪ್ರಚಾರ, ಸ್ಪರ್ಧಾತ್ಮಕ ತಂತ್ರಗಳು ಬಂದವು. ಕಲಾವಿದರ ನಿಜ ಜೀವನದಲ್ಲೂ ಬದಲಾವಣೆಗಳಾದವು. ಆರ್ಥಿಕವಾಗಿ ಅಷ್ಟೇನೂ ಫಲವನ್ನು ಪಡೆಯದ ಕಲಾವಿದರು ನೂತನ ವ್ಯವಸ್ಥೆಯಿಂದ ಚೇತರಿಸಿಕೊಂಡರು. ದೂರದೂರದ ನಗರಗಳಿಗೆ ಹೋಗಿ ಕಲಾಪ್ರದರ್ಶನವೀಯುವುದು ಸರ್ವೇ ಸಾಮಾನ್ಯವಾದದ್ದು. ಈಚಿನ ವರ್ಷಗಳಲ್ಲೇ ಕಲಾವಿದರುಗಳಲ್ಲಿ ತಾರಾ ಮೌಲ್ಯಗಳು ಹೆಚ್ಚಿ, ಅವರವರಲ್ಲೇ ಅಂತರಗಳು

ನಿರ್ಮಾಣವಾದವು. ಹಿಂದಿನ ವ್ಯವಸ್ಥೆಗಳಲ್ಲಿ ಕಾಣುತ್ತಿದ್ದ ಪಾರಂಪರಿಕ ಶಿಕ್ಷಣ ಕ್ರಮ ಮಾಯವಾಯಿತು. ಸಂಪ್ರದಾಯ ಪರಂಪರೆಗಳ ಬಗ್ಗೆ ಕಲಾವಿದರಲ್ಲಿ ನಿಷ್ಠೆ ಇಲ್ಲ ಎಂಬ ಕೂಗು ಎದ್ದಿರುವುದು ಈಗಲೇ. ಹೀಗೆ ಯಕ್ಷಗಾನ ಅತ್ಯಂತ ಸಂಕೀರ್ಣ ಸ್ಥಿತಿಯನ್ನು ತಲುಪಿರುವ ಈ ಸಂದರ್ಭದಲ್ಲಿ ಕಲಾವಿದರಾಡುವ ಮಾತುಗಳೀಗೆ, ಅನಿಸಿಕೆಗಳಿಗೆ ವಿಶೇಷ ಬೆಲೆ ಬರುತ್ತದೆ.

ಇಂದು ಕಲಾವಿದರಲ್ಲಿ ಮುಖ್ಯರೆನಿಸಿಕೊಂಡವರಲ್ಲಿ ಹೆಚ್ಚಿನವರು ಮೊದಲಿಗೆ ಬಯಲಾಟದ ಮೇಳಗಳಲ್ಲಿದ್ದು, ಈಗ ಟೆಂಟ್ ಮೇಳಗಳಲ್ಲಿ ದುಡಿಯುತ್ತಿರುವವರು. ಅವರ ಕಲಾಭಿವ್ಯಕ್ತಿಯಲ್ಲಿ ಈ ಬಾಹ್ಯ ಬದಲಾವಣೆ ಅಷ್ಟಿಷ್ಟು ಪ್ರಭಾವವನ್ನು ಬೀರಿದೆ. ಹಿಂದೆ ಕೇವಲ ಆರಾಧನೆಯ ಒಂದು ಅಂಗದಂತಿದ್ದ ಯಕ್ಷಗಾನವನ್ನು ಇಂದು ಕಲಾದೃಷ್ಟಿಯಿಂದ ಪರಿಭಾವಿಸುತ್ತಿರುವುದರಿಂದ ಕಲಾವಿದರಿಗೆ ಹೊಸ ಜವಾಬ್ದಾರಿಗಳು ಬಂದಿವೆ. ಸರಕಾರ, ಅಕಾಡೆಮಿ ಹಾಗೂ ಅನೇಕ ಸಂಘ ಸಂಸ್ಥೆಗಳು ಕಲಾವಿದರನ್ನು ಗುರುತಿಸಿ ಗೌರವಿಸುತ್ತಿವೆ. ಇದರಿಂದಾಗಿ ವನಸುಮದಂತಿದ್ದ ಯಕ್ಷಗಾನ ಕಲಾವಿದರು ಸಮಾಜದ ಎಲ್ಲಾ ಸ್ತರದ ಜನರ ಗೌರವಾದರಕ್ಕೆ ಪಾತ್ರರಾಗುತ್ತಿದ್ದಾರೆ ಮಾತ್ರವಲ್ಲ. ಸನ್ಮಾನ, ಪ್ರಶಸ್ತಿ, ಗೌರವಧನ, ಮಾಸಾಶನ ಮುಂತಾದವು ಕಲಾವಿದರನ್ನು ಯೋಚನೆಗೆ ಹಚ್ಚಿವೆ. ರೇಡಿಯೋ, ವಿಶ್ವವಿದ್ಯಾಲಯ, ಅಕಾಡೆಮಿಗಳು, ಹವ್ಯಾಸಿ ಸಂಸ್ಥೆಗಳು ಯಕ್ಷಗಾನ ಕಲೆಯ ಬಗ್ಗೆ ಆಸಕ್ತಿ ತಳೆದಿವೆ. ಕಲಾವಿದರು ಹಿಂದೆ ಕಂಡರಿಯದ ಅನೇಕ ಬಗೆಯ ಗೋಷ್ಠಿಗಳು, ಕಮ್ಮಟ, ಶಿಬಿರಗಳು ಯಕ್ಷಗಾನ ಕುರಿತಾಗಿ ನಡೆಯುತ್ತಿವೆ. ಬದಲಾಗುತ್ತಿರುವ ಈ ಕ್ಷಿತಿಜಗಳು ಯಕ್ಷಗಾನ ಕಲಾವಿದನ ಮೇಲೆ ಒಂದಿಲ್ಲೊಂದು ರೀತಿಯಿಂದ ಪ್ರಭಾವ ಬೀರುತ್ತಿವೆ. ಇವುಗಳಲ್ಲಿ ಭಾಗವಹಿಸುವ ಮೂಲಕ ಯಕ್ಷಗಾನ ಕಲಾವಿದ ತನ್ನ ಅನುಭವಗಳನ್ನು ಹಂಚುವ, ಹೊಸ ಅನುಭವಗಳನ್ನು ಪಡೆಯುವ ಸಾಧ್ಯತೆ ಲಭಿಸಿದೆ, ಹಿಂದೆಲ್ಲಾ ರಾತ್ರಿ ಕಾಲಕ್ಷೇಪಕ್ಕೆ ಬೇಕಾಗಿದ್ದ. ಯಕ್ಷಗಾನ ಕಲಾವಿದರು ಇಂದು ಹಗಲಿನಲ್ಲೂ ನಮಗೆ ಬೇಕಾಗಿದ್ದಾರೆ. ವಿದ್ಯಾವಂತ ಪ್ರೇಕ್ಷಕರ ಹೆಚ್ಚಳ, ಪರಂಪರೆ ಉಳಿಯಬೇಕೆಂಬ ಕೂಗು ಇವೆಲ್ಲಾ ಕೆಲವು ಕಲಾವಿದರನ್ನಾದರು ತಟ್ಟಿವೆ. ಕಲಾವಿದರ ಚಿಂತನೆಗೆ ಕಾರಣವಾಗಿವೆ.

ನಾಲ್ಕು ದಶಕಗಳ ಕೆಳಗೆ ಯಕ್ಷಗಾನ ರಂಗಕ್ಕೆ ಹೊರಗಿನವರಾಗಿ ಪ್ರವೇಶಿಸಿದ ಕೋಟ ಶಿವರಾಮ ಕಾರಂತರು ಜಾಗತಿಕ ರಂಗ ಕಲೆಗಳಲ್ಲಿ ಯಕ್ಷಗಾನಕ್ಕೊಂದು ಭದ್ರ ಸ್ಥಾನ ದೊರಕಿಸಿ ಕೊಟ್ಟವರು. ಅವರ ಪ್ರವೇಶ, ಪ್ರಯೋಗಗಳಿಂದ ಯಕ್ಷಗಾನಕ್ಕೆ ಅದುವರೆಗೆ ಇರದ ಪ್ರಾಧಾನ್ಯ ಲಭಿಸಿತು. ಅವರು 1957ರಲ್ಲಿ ಬರೆದ "ಯಕ್ಷಗಾನ ಬಯಲಾಟ" ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಗಳಿಸಿದ್ದು ಮಾತ್ರವಲ್ಲದೆ ಕನ್ನಡಿಗರಿಗೆ "ಯಕ್ಷಗಾನ" ನಮ್ಮ ಸಂಸ್ಕೃತಿಯ ಅಂಗವೆಂಬುದನ್ನು ನೆನಪು ಮಾಡಿ ಕೊಟ್ಟಿತು. ಕಾರಂತರು ಹೊರಗಿನಿಂದ ಬಂದರೂ ಹೊರಗಿನವರಾಗಿ ಉಳಿಯಲಿಲ್ಲ. ಪುಸ್ತಕ

ಬರೆಯುವಷ್ಟಕ್ಕೇ ಸೀಮಿತರಾಗದೆ ರಂಗಕ್ಕೆ ತಾವೇ ಧುಮುಕಿದರು. ಅವರು ಪ್ರಯೋಗ ನಡೆಸಿದ ಕಾಲವನ್ನು ಬಡಗುತಿಟ್ಟಿನ ಸುವರ್ಣಯುಗವೆಂದೇ ಕರೆಯಬಹುದು. ಶ್ರೇಷ್ಠ ದರ್ಜೆಯ ಕಲಾವಿದರೆಲ್ಲಾ ಆಗ ಮಂದರ್ತಿ ಮೇಳದಲ್ಲಿದ್ದಿದ್ದರು. ಕಾರಂತರು ಸ್ವತಃ ಕುಣಿದು ತೋರಿಸಿದರು. ಪದ್ಯದ ಭಾಗವನ್ನು ಹಾಡುಗಾರಿಕೆಗೆ ಒಗ್ಗಿಸುವ, ಕುಣಿತದಲ್ಲಿ ಭಾವವನ್ನು ಹೊರತರುವ ಬಗೆಗೆ ಎಚ್ಚರ ಮೂಡಿಸಿದರು. ಅವರಿಂದ ತರಬೇತಿ ಪಡೆದ ಕೆಲವು ಕಲಾವಿದರು ವೃತ್ತಿ ರಂಗದಲ್ಲಿ ಕಾಣಿಸುತ್ತಾರೆ. ಕಾರಂತರ ಪ್ರಯೋಗ ತಕ್ಷಣ ಪರಿಣಾಮ ಮೂಡಿಸದಿದ್ದರೂ ಕ್ರಮ ಕ್ರಮವಾಗಿ ಹಾಗೂ ಪರೋಕ್ಷವಾಗಿ ಫಲವನ್ನು ನೀಡಿದವು. ಇದರೊಂದಿಗೆ ಅವರ ತರಬೇತಿಯಲ್ಲಿ ಪಳಗಿದ ಯಕ್ಷರಂಗವು ಹಲವೆಡೆ ಪ್ರದರ್ಶನ ನೀಡುತ್ತಿದೆ. ಪರಂಪರೆಯ ಬಗ್ಗೆ ಗೌರವ, ಭಾವಕ್ಕೆ ಪ್ರಾಧಾನ್ಯ, ರಂಗದ ಶಿಸ್ತುಗಳೆಲ್ಲಾ ಪ್ರಾಧಾನ್ಯವಾಗಿವೆ. ಒಟ್ಟು ಹೊಸ ದೃಷ್ಟಿಕೋನವೊಂದು ಯಕ್ಷಗಾನ ಪ್ರಪಂಚಕ್ಕೆ ಲಭಿಸಲು ಡಾ॥ ಕಾರಂತರು ಕಾರಣರಾದರು.

ಯಕ್ಷಗಾನ ಕಲೆಯನ್ನು ಕಲಿಯುವಲ್ಲಿ ಹಿಂದೆ ಇದ್ದ ಕ್ರಮ ಇಂದು ನಶಿಸಿದೆ. ಉಡುಪಿ, ತಾಳಗುಪ್ಪ, ಧರ್ಮಸ್ಥಳ, ಹಂಗಾರಕಟ್ಟೆ ಮುಂತಾದ ಕಡೆಯಲ್ಲಿ ಯಕ್ಷಗಾನದ ಕುರಿತಾದ ತರಬೇತಿಯನ್ನು ಶಿಕ್ಷಣವಾಗಿ ನೀಡಲಾಗುತ್ತಿದೆ. ಉಡುಪಿಯ ಯಕ್ಷಗಾನ ಕೇಂದ್ರವಂತು ಪೂರ್ಣ ಪ್ರಮಾಣದ ತರಬೇತಿ ಕೇಂದ್ರವಾಗಿದೆ. ಇದರೊಂದಿಗೆ ಅನೇಕ ಸಂಸ್ಥೆಗಳು , ಅಕಾಡೆಮಿಗಳ ಸಹಕಾರದೊಂದಿಗೆ ಅಲ್ಲಲ್ಲಿ ಶಿಬಿರಗಳನ್ನು ಕಮ್ಮಟಗಳನ್ನು ನಡೆಸುತ್ತಿವೆ. ಗೋಷ್ಠಿ, ಉಪನ್ಯಾಸ, ವಿಚಾರ ವಿನಿಮಯಗಳು ಹೆಚ್ಚಿವೆ. ಇವೆಲ್ಲವೂ ಅಷ್ಟಿಷ್ಟಾದರೂ ಇಂದಿನ ಕಲಾವಿದರ ಮೇಲೆ ಪ್ರಭಾವ ಉಂಟು ಮಾಡಿವೆ.

ಈ ಎಲ್ಲಾ ಹಿನ್ನೆಲೆಯಲ್ಲಿ ಇಂದಿನ ಯಕ್ಷಗಾನ ಕಲಾವಿದರ ವಿಚಾರಗಳಿಗೆ ಯೋಚನೆಗಳಿಗೆ, ಅನುಭವಗಳಿಗೆ ಮಹತ್ವವಿದೆ. ನಮ್ಮ ಹೆಚ್ಚಿನ ಯಕ್ಷಗಾನ ಕಲಾವಿದರು ದಾಖಲಿಸುವ ಸ್ವಭಾವದವರಲ್ಲ. ಕಲೆಯ ಬಗ್ಗಿರಲಿ, ವಿಚಾರಗಳ ಬಗ್ಗಿರಲಿ ಎಲ್ಲವೂ ಮೌಖಿಕವೇ. ರಂಗದಲ್ಲಿ ತಮ್ಮ ಒಳಗನೆಲ್ಲಾ ತೆರೆದುಕೊಳ್ಳುವ ಅವರ ವಿಚಾರಗಳು ನೋಡಿದ ಪ್ರೇಕ್ಷಕರಲ್ಲಿ ಗಪ್ಪಾಗಿ ಉಳಿದು ಬಿಡುವಂತಹವು. ಈ ಕಾರಣ ಪ್ರತ್ಯೇಕವಾಗಿ ವ್ಯಕ್ತವಾಗುವ ಅವರ ಅನಿಸಿಕೆಗಳೆಲ್ಲ ಸಾಂಸ್ಕೃತಿಕವಾಗಿ ಮಹತ್ವದ ದಾಖಲೆಗಳಾಗುತ್ತವೆ.

ಇಲ್ಲಿ ಯಕ್ಷಗಾನ ಕಲಾವಿದರ 20 ಸಂದರ್ಶನ ಲೇಖನಗಳಿವೆ. ಈ ಎಲ್ಲಾ ಕಲಾವಿದರು ದಕ್ಷಿಣಕನ್ನಡ, ಉತ್ತರಕನ್ನಡ ಜಿಲ್ಲೆಗಳಿಗೆ ಸೇರಿದವರಾಗಿದ್ದಾರೆ. ಇಂದಿನ ಯಕ್ಷಗಾನ ವೃತ್ತಿ ರಂಗಭೂಮಿಯ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲಲಿ ಎಂಬ ಕಾರಣಕ್ಕಾಗಿ ವೃತ್ತಿಯಲ್ಲಿದ್ದ, ವೃತ್ತಿಯಲ್ಲಿರುವ ಹಾಗೇ ವೃತ್ತಿರಂಗಭೂಮಿಗೆ ಪರೋಕ್ಷವಾಗಿ ಕಾರಣರಾದ ಕಲಾವಿದರ ಸಂದರ್ಶನಗಳನ್ನು ಮಾತ್ರ ಸಂಕಲಿಸಲಾಗಿದೆ. ಈ ಎರಡು ಜಿಲ್ಲೆಗಳ

ಹೊರಗಿನ ಕರ್ನಾಟಕದಲ್ಲೂ ಯಕ್ಷಗಾನ ಕಲೆ ಇದ್ದು ಅದರ ಪುನರುಜ್ಜೀವನ ಕಾರ್ಯ ಬಿರುಸಿನಿಂದ ನಡೆಯುತ್ತಿದೆ. ಆದರೆ ಈ ಸಂಗ್ರಹದಲ್ಲಿ ನಿರ್ದಿಷ್ಟ ಅಭಿಪ್ರಾಯಗಳನ್ನು ರೂಪಿಸಲೋಸುಗ ಕಲಾವಿದರ ಸಂದರ್ಶನಗಳನ್ನು ಸಂಕಲನಕ್ಕೆ ಆಯ್ಕೆ ಮಾಡುವಲ್ಲಿ ಭೌಗೋಳಿಕ ಮಿತಿಯನ್ನು ಹಾಕಿಕೊಳ್ಳಲಾಗಿದೆ.

ಕನ್ನಡ ಜಿಲ್ಲೆಗಳ ಯಕ್ಷಗಾನವೆಂದೊಡನೆ ಮುಖ್ಯವಾಗಿ ಕಾಣುವುದು ಮೂರು ತಿಟ್ಟುಗಳು–ತೆಂಕುತಿಟ್ಟು, ಬಡುಗುತಿಟ್ಟು, ಬಡಾಬಡಗುತಿಟ್ಟು(ಉತ್ತರ ಕನ್ನಡ), ಇಲ್ಲೂ ಮುಖ್ಯ ಪ್ರಭೇದಗಳು ಇರುವುದು ತೆಂಕು ಹಾಗು ಬಡಗಿನಲ್ಲಿ. ಕಲಾವಿದರ ದೃಷ್ಟಿಯಿಂದ ಬಡಗು ಹಾಗು ಬಡಾ ಬಡಗಿನಲ್ಲಿ ಅಂತಹ ವ್ಯತ್ಯಾಸಗಳೇನೂ ಇಲ್ಲ. ಇಲ್ಲಿ ಬಂದಿರುವ ಸಂದರ್ಶನಗಳಲ್ಲಿ ಹೆಚ್ಚಿನವು ಪಿಎಚ್.ಡಿ. ವ್ಯಾಸಂಗ ಸಮಯದಲ್ಲಿ ಆನುಷಂಗಿಕವಾಗಿ ನಡೆಸಿದವುಗಳಾಗಿದ್ದು ಸಮಗ್ರತೆಯನ್ನು ತರಲು ಪ್ರಯತ್ನಿಸಲಾಗಿದೆ. ಮೂರು ತಿಟ್ಟಿನಲ್ಲಿ ಜನತೆ ಕಲಾವಿದರೆಂದು ಗುರುತಿಸಿರುವವರ ಸಂದರ್ಶನಗಳು ಇಲ್ಲಿವೆ. ಹಾಗೆಂದು ಇಷ್ಟೇ ಕಲಾವಿದರು ಮಾತ್ರ ಮುಖ್ಯರೆಂದು ಅರ್ಥವಲ್ಲ. ವೈಯಕ್ತಿಕ ಸಂಪರ್ಕ ಅಸಾಧ್ಯತೆಯಿಂದ ಈ ಸಂಕಲನದ ಹೊರಗುಳಿದ ಮುಖ್ಯ ಕಲಾವಿದರು ಇನ್ನೂ ಇದ್ದಾರೆ. ಇಲ್ಲಿ ಪ್ರಸ್ತುತವಾಗುವ ಅಭಿಪ್ರಾಯಗಳು ಮುಖ್ಯವೇ ಹೊರತು ವ್ಯಕ್ತಿಗಳಲ್ಲ ಎಂಬುದನ್ನು ಸಮಸ್ತ ಯಕ್ಷಗಾನ ಕಲಾವಿದರಲ್ಲಿ ಬಿನ್ನವಿಸಿಕೊಳ್ಳುತ್ತೇನೆ.

ಈ ಸಂಕಲನದಲ್ಲಿ ಮುಖ್ಯರಾಗಿ ಭಾಗವತರ, ವೇಷಧಾರಿಗಳ, ಮದ್ದಲೆಯವರ, ಅರ್ಥದಾರಿಗಳ ಸಂದರ್ಶನಗಳಿವೆ. ಯಕ್ಷಗಾನ ಕಲಾಪ್ರದರ್ಶನದಲ್ಲಿ ಭಾಗವತನಿಗೆ ಹಿರಿಯ ಪಟ್ಟವಿದೆ. ಆತ ಒಂದರ್ಥದಲ್ಲಿ ಇಡೀ ಪ್ರದರ್ಶನದ ನಿರ್ದೇಶಕನಿದ್ದಂತೆ. ಬಡಗು ತಿಟ್ಟಿನಲ್ಲಿ ಆತನೇ 'ಮೊದಲ ವೇಷ' ಎಂಬ ಭಾವನೆ ಪ್ರಚಲಿತವಾಗಿದೆ. ಈ ಮೂವತ್ತು ವರ್ಷಗಳಲ್ಲಿ ಮುಖ್ಯರೆಂದು ಕಂಡು ಬಂದ ಭಾಗವತರುಗಳು ಹಲವರಿದ್ದಾರೆ. ಬಡಗು ತಿಟ್ಟಿನಲ್ಲಿ ಪ್ರಾಚಾರ್ಯರೆಂದೇ ಕರೆಸಿಕೊಂಡ ದಿ. ನಾರಾಣಪ್ಪ ಉಪ್ಪೂರ, ನಾದ ಮಾಧುರ್ಯದಿಂದ ಖ್ಯಾತರಾಗಿದ್ದ ಶ್ರೀ ರಾಮಚಂದ್ರ ನಾವಡ, ತೆಂಕಿನಲ್ಲಿ ಖ್ಯಾತಿಯ ತುದಿಯನ್ನೇರಿದ ದಿ. ದಾಮೋದರ ಮಂಡೆಚ್ಚ, ಹಾಗೂ ಶ್ರೀ ಕಡತೋಕ ಮಂಜುನಾಥ ಭಾಗವತರ ಸಂದರ್ಶನಗಳೊಂದಿಗೆ ಉದಯೋನ್ಮುಖ ಭಾಗವತರಾಗಿ ಕನ್ನಡ ಜಿಲ್ಲೆಗಳಲ್ಲಿ ಮಾತ್ರವಲ್ಲದೆ ದೂರದ ಮುಂಬಯಿ, ಬೆಂಗಳೂರುಗಳಲ್ಲೂ ಜನಪ್ರಿಯರಾಗಿರುವ ಶ್ರೀ ಕಾಳಿಂಗ ನಾವಡರ ಕಿರು ಸಂದರ್ಶನ ಲೇಖನವನ್ನು ಸೇರಿಸಲಾಗಿದೆ. ಮೃದಂಗ ವಾದಕರಾಗಿ ಸಾಕಷ್ಟು ಜನ ಶ್ರೇಷ್ಠ ಕಲಾವಿದರನ್ನು ಕುಣಿಸಿರುವ ಹಿರಿಯ ಮದ್ದಲೆಗಾರ ಶ್ರೀ ಹಿರಿಯಡ್ಕ ಗೋಪಾಲ ರಾವ್, ಇಂದಿನ ಜನಪ್ರಿಯ ಮದ್ದಲೆಗಾರ ಶ್ರೀ ದುರ್ಗಪ್ಪ ಗುಡಿಗಾರರ ಸಂದರ್ಶನಗಳೂ ಇಲ್ಲಿವೆ. ಹಿಮ್ಮೇಳದ

ಹಿನ್ನೆಲೆಯಲ್ಲಿರುವ ಈ 7 ಕಲಾವಿದರ ಸಂದರ್ಶನ ಲೇಖನಗಳಿಂದ ಒಟ್ಟು ರಂಗಸ್ಥಳದ ಹಿಮ್ಮೇಳದ ಪರಿಚಯ ಸಾಧ್ಯ ಎಂದುಕೊಂಡಿದ್ದೇನೆ.

ಈಚಿನ ವರ್ಷಗಳಲ್ಲಿ ಅರ್ಥಗಾರಿಕೆಗೆ ಹೊಸ ಆಯಾಮಗಳನ್ನು ನೀಡಿದವರು ಹರಿದಾಸರು. ಹರಿಕತೆ ತಾಳಮದ್ದಲೆಗಳ ಮೂಲಕ ಜನರ ಹೃದಯಗಳನ್ನು ಗೆದ್ದ ಇವರು ಯಕ್ಷಗಾನ ಬಯಲಾಟ ಮೇಳಗಳಲ್ಲಿ ಕಾಣಿಸಿಕೊಂಡು ಅಲ್ಲೂ ತಮ್ಮ ಪ್ರಭುತ್ವವನ್ನು ತೋರಿದರು. ಇವರಿಂದಾಗಿ ಬಯಲಾಟಗಳಲ್ಲೂ ಜನರು ಉತ್ತಮ ಅರ್ಥಗಳನ್ನು ಬಯಸಿದರು. ಅರ್ಥಗಾರಿಕೆಯ ಮೂಲಕ ಪುರಾಣದ ಪಾತ್ರಗಳಿಗೆ ಹೊಸ ದೃಷ್ಟಿ ಕೋನಗಳನ್ನು ಹರಿದಾಸರು ನೀಡಿದರು. ಮೊದಲಿಗೆ ಹೊಸತನವಾಗಿ ಕಂಡ ಈ ಬಗೆಯ ಅರ್ಥಗಾರಿಕೆ ಸ್ವಲ್ಪ ಕಾಲದಲ್ಲೇ ಸ್ವಲ್ಪಮಟ್ಟಿಗೆ ಅನಿವಾರ್ಯವಾಗಲು ಪ್ರಾರಂಭಿಸಿತು. ಶ್ರೀ ಮಲ್ಪೆ ಶಂಕರನಾರಾಯಣ ಸಾಮಗ, ಶ್ರೀ ಶೇಣಿ ಗೋಪಾಲಕೃಷ್ಣ ಭಟ್, ಶ್ರೀ ಮಲ್ಪೆ ರಾಮದಾಸ ಸಾಮಗ ಈ ಮೂವರು ಈ ರೀತಿ ತೆಂಕು ತಿಟ್ಟಿನಲ್ಲಿ ವಿಶಿಷ್ಟತೆಯನ್ನು ಸಾಧಿಸಿದವರು. ಮಾತ್ರವಲ್ಲ ಆ ತಿಟ್ಟಿಗೆ ಒಂದು ವಿಶಿಷ್ಟತೆಯನ್ನು ಸಾಧಿಸಿ ಕೊಟ್ಟವರು. ತಾಳಮದ್ದಲೆಯ ಹಿರಿಯ ಅರ್ಥಧಾರಿಗಳಾಗಿದ್ದ ದಿ. ಕೀರಿಕ್ಕಾಡು ಮಾಸ್ತರ ವಿಷ್ಣುಭಟ್‌ರು ಹವ್ಯಾಸಿಗಳಾಗಿದ್ದು ಯಕ್ಷಗಾನ ಬಯಲಾಟಗಳನ್ನು ನಡೆಸಿದವರು. ಇಂದಿನ ಅನೇಕ ವೇಷಧಾರಿಗಳಿಗೆ, ಅರ್ಥಧಾರಿಗಳಿಗೆ, 'ಮಾಸ್ತರ'ರಾಗಿ ಕಾಣೀಸಿಕೊಂಡ ಇವರು ಈ ನಿಟ್ಟಿನಿಂದ ಮುಖ್ಯರಾಗಿದ್ದಾರೆ. ಇವರೆಲ್ಲರ ಸಂದರ್ಶನಗಳಿಂದ ತೆಂಕುತಿಟ್ಟಿನ ವೈಶಿಷ್ಟ್ಯಮಯವಾದ ಮಾತುಗಾರಿಕೆಯನ್ನು ಕುರಿತು ಹೆಚ್ಚು ಅರಿಯಲು ಸಾಧ್ಯ.

ಈ ಶತಮಾನದ ಅಗ್ರಮಾನ್ಯ ವೇಷಧಾರಿಗಳಲ್ಲಿ ಒಬ್ಬರೆಂದರೆ ದಿ. ಗುರು ವೀರಭದ್ರ ನಾಯಕರು. ಬಡಗುತಿಟ್ಟಿನ ಅತಿರಥ ಮಹಾರಥರಿದ್ದ ಕಾಲದಲ್ಲಿ ಬಾಳಿ ಬದುಕಿದ ಅವರು 'ದಶಾವತಾರಿ'ಗಳಿಂದೇ ಖ್ಯಾತರಾದವರು. ಆ ಹಳೆಯ ತಲೆಮಾರಿನ ಕೊನೆಯ ಕೊಂಡಿಯಂತಿದ್ದ ದಿವಂಗತರ ಪರಿಚಯ ಲೇಖನದ ಮೂಲಕ ಆ ಕಾಲದ ಕೆಲವು ವೈಶಿಷ್ಟ್ಯಗಳನ್ನು ತಿಳಿಯಬಹುದಾಗಿದೆ. ತೀರಾ ಬಡಗು ತಿಟ್ಟಿನ ಕಲಾವಿದರಾಗಿದ್ದು ಬಡಗಿನ ಸಾಲಿಗ್ರಾಮ ಮೇಳದಲ್ಲಿ 15 ವರ್ಷಗಳ ಕೆಳಗೆ ಕಾಣಿಸಿಕೊಂಡು ಕುಣಿತದ ವಿಲಾಸ ವಿಭ್ರಮೆಗಳನ್ನೆಲ್ಲಾ ತೋರಿ ಒಮ್ಮಿಂದೊಮ್ಮಿಗೆ ಜನರನ್ನು ಮಂತ್ರ ಮುಗ್ಧರನ್ನಾಗಿ ಮಾಡಿದವರು ಕೆರೆಮನೆ ಮಹಾಬಲ ಹೆಗಡೆ ಹಾಗು ಕೆರೆಮನೆ ಶಂಭು ಹೆಗಡೆಯವರು. ಇವರ ಸಂದರ್ಶನ ಲೇಖನದೊಂದಿಗೆ ಇಂದು ಬಡಗಿನ ಅತ್ಯಂತ ಜನಾದರಣೀಯ ಕಲಾವಿದರಾಗಿರುವ ಶ್ರೀ ಚಿಟ್ಟಾಣಿ ರಾಮಚಂದ್ರ ಹೆಗಡೆಯವರ ಸಂದರ್ಶನ ಲೇಖನವನ್ನು ಸೇರಿಸಲಾಗಿದೆ. ತೆಂಕಿನಲ್ಲಿ ಖ್ಯಾತ ವೇಷಧಾರಿಯಾಗಿ ಹೆಸರು ಪಡೆದವರಲ್ಲಿ ಶ್ರೀ ಕುಂಬಳೆ ಸುಂದರರಾವ್ ಒಬ್ಬರು. ಇವರೆಲ್ಲರ ಸಂದರ್ಶನಗಳಿಂದ ಮುಖ್ಯ ವೇಷಧಾರಿಗಳ ಮನದಿಂಗಿತವನ್ನು ತಿಳಿಯಬಹುದು.

ಹಾಸ್ಯಗಾರರಾಗಿ ಕುಂಜಾಲು ರಾಮಕೃಷ್ಣ, ಪಿ. ನಾರಾಯಣ ಭಟ್, ಸ್ತ್ರೀ ಪಾತ್ರಧಾರಿಯಾಗಿ ಕೊಳ್ಳೂರು ರಾಮಚಂದ್ರ ರಾವ್, ಶ್ರೀ ಕೋಟ ವೈಕುಂಠರು ಬಹಳ ಮುಖ್ಯರಾದವರು. ಇವರೆಲ್ಲರ ಸಂದರ್ಶನಗಳನ್ನು ಒಂದೆಡೆ ತರಲಾಗಿದೆ. ಈಚೆಗೆ ನಡೆಸಿದ ಮೂರು ಸಂದರ್ಶನಗಳನ್ನು ಹೊಸದಾಗಿ ಸೇರಿಸಲಾಗಿದೆ. ಮಂಟಪ ಪ್ರಭಾಕರ ಉಪಾಧ್ಯ, ಬಳ್ಕೂರು ಕೃಷ್ಣ ಯಾಜಿ, ತಾರಾನಾಥ ವರ್ಕಾಡಿಯವರನ್ನು ಸಂದರ್ಶಿಸಿದ ಆಯ್ದ ಭಾಗಗಳನ್ನು ಪರಿಷ್ಕೃತ ಮುದ್ರಣಕ್ಕೆ ಸೇರಿಸಲಾಗಿದೆ.

ಪ್ರತಿಯೊಂದು ಸಂದರ್ಶನಗಳಲ್ಲಿ ಮುಖ್ಯವಾಗಿ ಎರಡು ಭಾಗಗಳಿವೆ. ಸಂದರ್ಶನ ಲೇಖನದ ಮೊದಲ ಭಾಗದಲ್ಲಿ ಆಯಾಯಾ ಕಲಾವಿದರ ಬದುಕಿನ ಚಿತ್ರಗಳನ್ನು, ಮಾಡಿದ ಸಾಧನೆಗಳನ್ನು, ನೀಡಿದ ಕೊಡುಗೆಗಳನ್ನು ಚಿತ್ರಿಸಲಾಗಿದೆ. ಈ ಮೂಲಕ ಹಿರಿಯ ಕಲಾವಿದರ ಕಿರು ಪರಿಚಯವಾದರೂ ಆಸಕ್ತರಿಗೆ ಲಭಿಸಬೇಕೆಂಬುದೇ ಉದ್ದೇಶ. ಈ ಕಲಾವಿದರ ವೈಯಕ್ತಿಕ ಆಸೆ ಒಲವುಗಳನ್ನು ಕಾಣಿಸುವ, ದಾಖಲಿಸುವ ಮೂಲಕ ಅವರ ಅಭಿರುಚಿ, ಸಂಸ್ಕಾರಗಳ ಪರಿಚಯವು ಆಗುತ್ತದೆ. ಸಂದರ್ಶನದ ಉತ್ತರಾರ್ಧದಲ್ಲಿ ಪ್ರತಿ ಕಲಾವಿದರ ಕಲಾಭಿವ್ಯಕ್ತಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಎತ್ತಲಾಗಿದೆ. ಒಟ್ಟು ರಂಗದ ಸಮನ್ವಯ ದೃಷ್ಟಿಯಿಂದಲೂ ರೂಪುಗೊಂಡ ಪ್ರಶ್ನೆಗಳ ಮೂಲಕ ಇಂದಿನ ರಂಗಭೂಮಿಯ ಸ್ವರೂಪ ನಿಷ್ಕರ್ಷೆಗೆ ಸಹಾಯಕವಾಗುವಂತೆ ಮಾಡಲಾಗಿದೆ. ಅವರ ಕಲಾ ಸೇವೆಯ ಹಿನ್ನೆಲೆಯಲ್ಲಿ ಮೂಡಿ ಬಂದ ಈ ಪ್ರಶ್ನೆಗಳ ಮೂಲಕ ಈ ರಂಗಪ್ರಕಾರದ ಇಂದಿನ ಸ್ಥಿತಿಯ ಮೇಲೂ ಹೆಚ್ಚು ಅಥೆಂಟಿಕ್ಕಾಗಿ ಚರ್ಚಿಸಲು ಸಾಧ್ಯವಾದೀತೇ ಎಂದು ನೋಡುವುದೇ ಮುಖ್ಯವಾಗಿದೆ. ಈ ಕಲಾವಿದರೆಲ್ಲಾ ಒಟ್ಟಿಗೆ ಬಾಳಿದ ಈ ಕಾಲ ಖಂಡದಲ್ಲಿ ಯಕ್ಷಗಾನ ತೆರೆದುಕೊಂಡು ಬಗೆಗಳ ಮೇಲೆ ಬೆಳಕು ಚೆಲ್ಲುವುದೇ ಈ ಪ್ರಶ್ನೆಗಳಿಗೆ ಕಾರಣವಾಗಿವೆ.

ಕೊನೆಯಲ್ಲಿ ಸಮೀಕ್ಷೆಯೊಂದನ್ನು ನಡೆಸುವ ಮೂಲಕ ಒಟ್ಟು ಸಮಗ್ರತೆ ತರಲು ಪ್ರಯತ್ನಿಸಲಾಗಿದೆ. ಇವತ್ತಿನ ಯಕ್ಷಗಾನ ರಂಗಭೂಮಿಯ ತೊಡಕುಗಳನ್ನು ಸಂಕ್ರಮಣಾವಸ್ಥೆಯ ಫಲಗಳನ್ನು ಮುಂದಿನ ಬೆಳವಣಿಗೆಯ ದಿಕ್ಸೂಚಿಯನ್ನು ಕಂಡುಕೊಳ್ಳುವ ಪ್ರಯತ್ನವನ್ನು ಈ ಸಮೀಕ್ಷೆಯಲ್ಲಿ ನಡೆಸಲಾಗಿದೆ. ಈ ಎಲ್ಲಾ ಸಂದರ್ಶನ ಲೇಖನಗಳ ಸಾಂಸ್ಕೃತಿಕ ಮಹತ್ವವನ್ನು ಅರಿಯುವುದು ಸಮೀಕ್ಷೆಯ ಉದ್ದೇಶಗಳಲ್ಲಿ ಒಂದು. ಈ ನಮ್ಮ ಸಾಂಪ್ರದಾಯಿಕ ರಂಗಭೂಮಿಯನ್ನು ಉಳಿಸುವಲ್ಲಿ ಹಾಗು ಬೆಳೆಸುವಲ್ಲಿ ಪ್ರಧಾನರಾಗುವ ಈ ಕಲಾವಿದರ ಒಟ್ಟು ನೋಟಗಳನ್ನು ಅರಿಯುವುದು ಯಕ್ಷಗಾನ ಹಿತೈಷಿಗಳಿಗೆಲ್ಲಾ ಅಗತ್ಯ ಎಂದುಕೊಂಡಿದ್ದೇನೆ. ವ್ಯಾಪಾರೀ ಧೋರಣೆಯ ಹಿಡಿತದಿಂದ ಕಲೆಯ ಉಳಿವಿನ ಪ್ರಶ್ನೆ ಎದ್ದಿರುವ ಈ ದಿನಗಳಲ್ಲಿ ರಂಗದ ಒಳಗೇ

ಇರುವವರ ಅನಿಸಿಕೆಗಳಿಗೆ ಹೆಚ್ಚಿನ ಬೆಲೆ ಇರುತ್ತದೆ. ಅವರ ಯೋಚನೆಗಳು ತೀರ್ಮಾನಗಳು ಒಂದಿಲ್ಲೊಂದು ರೀತಿಯಿಂದ ನಿರ್ಣಾಯಕವಾಗುವುದರಿಂದ ಸಮೀಕ್ಷೆಯಲ್ಲಿ ಕಲಾವಿದರ ಅಭಿಪ್ರಾಯಗಳನ್ನು ಪ್ರಾಸಂಗಿಕವಾಗಿ ಚರ್ಚಿಸಲಾಗಿದೆ. ಹೀಗೆ ಈಚಿನ ಯಕ್ಷಗಾನ ರಂಗಭೂಮಿಯ ಎಲ್ಲಾ ಸಾಧ್ಯತೆಗಳ ಕುರಿತು ಅರಿಯುವ ಪ್ರಯತ್ನ ಇದಾಗಿದೆ.

ಯಕ್ಷಗಾನದ ಪ್ರಾಚಾರ್ಯ

ಎಂ. ನಾರ್ಣಪ್ಪ ಉಪ್ಪೂರ

ಒಂದು ಕಾಲದಲ್ಲಿ ಕನ್ನಡ ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿದ್ದ ಯಕ್ಷಗಾನ ಕಲೆ ಇಂದು ಅಂತರ್‍ರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದೆ. ಹಳ್ಳಿಯ ಮುಗ್ಧ ಜನತೆಯ ರಂಜನೆಯಷ್ಟನ್ನೇ ಗುರಿಯಾಗಿ ಹೊಂದಿದ ಈ ಕಲೆ ಈಗ ಎಲ್ಲಾ ವಲಯಗಳ ಆಸಕ್ತಿಯನ್ನು ಕೆರಳಿಸಿದೆ. ಇಂತಹ ಒಂದು ಪವಾಡ ಸದೃಶ ಬದಲಾವಣೆಗೆ ಮುಖ್ಯ ಕಾರಣರು ಯಕ್ಷಗಾನ ಕಲಾವಿದರೆ. ಅದರಲ್ಲೂ ಹಿನ್ನೆಲೆಯಲ್ಲಿ ರಂಗಸ್ಥಳವನ್ನು ಸಮರ್ಪಕವಾಗಿ ನಡೆಸಿಕೊಂಡು ಹೋಗುವ ಭಾಗವತರ ಪಾತ್ರವಂತು ಹಿರಿದು. ಆದರೆ ಬೇರೆಲ್ಲರೂ ಪ್ರಶಸ್ತಿಗೋ, ಜನಾದರಣೆಗೋ ಪಾತ್ರರಾಗಿ ಮೆರೆದರೆ ಈ ಹಿನ್ನೆಲೆಯ ಮಂದಿ ಹಾಗೇ ಹಿನ್ನೆಲೆಗೆ ಸರಿದಿರುವುದು ಶೋಚನೀಯ. ಈ ರೀತಿಯ ಕೀರ್ತಿಗೆ ಹಂಬಲಿಸದೆ ತಮ್ಮ ಪಾಲಿನ ಕರ್ತವ್ಯ ನಿರ್ವಹಣೆಯಲ್ಲಿ ಸದಾ ಮುಳುಗಿ ಆ ಮೂಲಕ ಕಲಾಸೇವೆಗೆ ತಮ್ಮನ್ನು ತೇದುಕೊಂಡ ಕೆಲವೇ ಹಿರಿಯ ಭಾಗವತರಲ್ಲಿ ಶ್ರೀ ಎಂ. ನಾರ್ಣಪ್ಪ ಉಪ್ಪೂರರು ಒಬ್ಬರು.

ವಂಶಪಾರಂಪರ್ಯವಾಗಿ ಭಾಗವತಿಕೆ ಉಪ್ಪೂರರಿಗೆ ಮೈಗೂಡಿದೆ. ಕ್ರಿ.ಶ. 1918ರಲ್ಲಿ ಜನ್ಮ ತಳೆದ ಇವರು ತಮ್ಮ ಇಪ್ಪತ್ತನೆಯ ವಯಸ್ಸಿನಿಂದಲೇ ಭಾಗವತರಾಗಿದ್ದಾರೆ.

ಖಚಿತವಾದ ರಾಗಜ್ಞಾನ, ಸ್ಪಷ್ಟವಾಗಿ ಪದ ಬಿಡಿಸಿ ಹಾಡುವ ಚಾತುರ್ಯ, ಕುಣಿತಕ್ಕೆ ತಕ್ಕ ತಾಳವನ್ನು ನಡೆಸುವುದು ಇವರ ಹಿರಿಮೆ. ಅಮೃತೇಶ್ವರಿ, ಮಾರಣಕಟ್ಟೆ, ಕೊಲ್ಲೂರು, ಇಡಗುಂಜಿ, ಪೆರ್ಡೂರು, ಸೌಕೂರು, ಸಾಲಿಗ್ರಾಮ ಹೀಗೆ ಹತ್ತು ಹಲವು ಮೇಳಗಳ ಹೊಕ್ಕು ಬಳಕೆಯಿದ್ದು ಎಲ್ಲೆಡೆಯೂ ಸೈ ಎನಿಸಿಕೊಂಡವರು. ತಂದೆ ದಿ. ಶ್ರೀನಿವಾಸ ಉಪ್ಪೂರರೇ ಇವರ ಗುರುಗಳು. ಅವರ ಕೈಕೆಳಗೆ ಸಂಗೀತಗಾರನಾಗಿ ಅನುಭವ ಪಡೆದು ಭಾಗವತ ಪಟ್ಟ ಪಡೆದದ್ದು. ಡಾ॥ ಶಿವರಾಮ ಕಾರಂತರ ನೃತ್ಯ ನಾಟಕ ತರಬೇತಿಯ ಕಾಲದಲ್ಲಿ ಭಾಗವತರಾಗಿ ಪದ್ಯವನ್ನು ಅಭಿನಯಕ್ಕೆ ರೂಢಿಸುವ ಅನುಭವ ಗಳಿಸಿದರು. ಕಾರಂತರ ನಿರ್ದೇಶನದ ಕೃಷ್ಣಾರ್ಜುನ ಕಾಳಗದ ಪ್ರದರ್ಶನ ಮುಂಬಯಿಯಲ್ಲಿ 1968ರಲ್ಲಿ ಜರುಗಿದಾಗ ಇವರೇ ಭಾಗವತರಾಗಿದ್ದರು. ಅಂದಿನ ಪ್ರದರ್ಶನದ ಯಶಸ್ಸನ್ನು 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆ ಮುಕ್ತ ಕಂಠದಿಂದ ಶ್ಲಾಘಿಸಿದೆ,

ಶ್ರೀ ಉಪ್ಪೂರರು ಸಂಪ್ರದಾಯವಾದಿಗಳಂತೆ ಹಳೆಯದರಲ್ಲೇ ಉಳಿಯದವರು. ಹಾಗೇ ಪ್ರಗತಿಪರರಂತೆ ಹಳೆಯ ರಾಗ ಸಂಪತ್ತಿಗೆ ಕಿವುಡಾಗದವರು. ಎಲ್ಲಾ ಅರ್ಥಪೂರ್ಣ ಬದಲಾವಣೆಗಳನ್ನು ತಮ್ಮ ಕಲಾ ಜೀವನದಲ್ಲಿ ಒಗ್ಗಿಸಿಕೊಂಡು ಭಾಗವತಿಗೆ ಮಾಡುತ್ತಲೇ ತಾವು ಬೆಳೆದವರು. ಇದರಿಂದ ಉಪ್ಪೂರರು ಎಲ್ಲರಿಗೂ ಬೇಕಾದವರು. ತಮ್ಮ ಬದುಕಿನ ಹೆಚ್ಚು ಕಾಲವನ್ನು ರಂಗ ನಿರ್ದೇಶನಕ್ಕೆ ಮುಡಿಪಾಗಿಟ್ಟ ಶ್ರೀಯುತರ ಭಾಗವತಿಕೆಯನ್ನು ತೆಂಕು ತಿಟ್ಟು, ಬಡಗು ತಿಟ್ಟಿನವರೆಲ್ಲರೂ ಬಯಸುತ್ತಾರೆ. ಯಕ್ಷಗಾನ ಅಭ್ಯಾಸಕ್ಕೆ ಅನುಕೂಲವಾಗುವಂತಹ 'ಯಕ್ಷಗಾನ ಶಿಕ್ಷಕ' ಹಾಗೂ 'ಯಕ್ಷಗಾನ ಅಧ್ಯಯನ' ಎಂಬೆರಡು ಗ್ರಂಥಗಳನ್ನು 'ಸತ್ಯಂ ವದ ಧರ್ಮಂ ಚರ' ಎಂಬ ಪ್ರಸಂಗವನ್ನು ರಚಿಸಿದ್ದಾರೆ, ಮೊದಲೆರಡು ಕೃತಿಗಳಲ್ಲಿ ಯಕ್ಷಗಾನದ ರಾಗ, ತಾಳ, ಕುಣಿತಗಳ ಕುರಿತು ದೀರ್ಘ ವಿವರಗಳು, ಕಲಿಯುವವರಿಗೆ ಮಾರ್ಗದರ್ಶನವಾಗಬಲ್ಲ ಸೂತ್ರಗಳು ಇವೆ. ಯಕ್ಷಗಾನ ಕಲೆಯಲ್ಲಿ ಇಂದು ನಶಿಸುತ್ತಿರುವ ಅನೇಕ ಸಾಂಪ್ರದಾಯಿಕ ಸಂಗತಿಗಳು ಇಲ್ಲಿ ಇವೆ. ಪಾತ್ರ ಪ್ರವೇಶ, ಒಡ್ಡೋಲಗ, ಸ್ತ್ರೀವೇಷ ಹಾಗೂ ಬಾಲಗೋಪಾಲರ ಪ್ರವೇಶಗಳ ವಿವರವನ್ನು ಕಾಣಬಹುದು.

ಹಾಡಿನ ಪದ ಪದಗಳನ್ನೂ ಹಿಂಜಿ ಅದರ ಭಾವವನ್ನು ಹೊರಹಾಕುವ ಶೈಲಿಯಲ್ಲಿ ಪಾರಂಗತವಾಗಿರುವ ಇವರು ಹಿನ್ನೆಲೆಯ ಎಲ್ಲಾ ಅಂಗಗಳಲ್ಲೂ ಪರಿಣತರು. ಉಪ್ಪೂರರು ಭಾಗವತರಾಗಿ ಮಾತ್ರ ಖ್ಯಾತರಾದವರಲ್ಲ. ಉತ್ತಮ ಯಕ್ಷಗಾನ ಬೋಧಕರೂ ಆಗಿದ್ದವರು. ಇವರು ಹಂಗಾರಕಟ್ಟೆ ಯಕ್ಷಗಾನ ಕಲಾ ಕೇಂದ್ರದ ಪ್ರಾಚಾರ್ಯರಾಗಿ 13 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ತಮ್ಮ ಗರಡಿಯಲ್ಲಿ ಸುಮಾರು 50ಕ್ಕೂ ಹೆಚ್ಚಿನ ಕಲಾವಿದರನ್ನು ತರಬೇತಿಗೊಳಿಸಿದ್ದು ಇವರ ವೈಶಿಷ್ಟ್ಯ. ಇವರ ಶಿಷ್ಯ ಸಂಪತ್ತು ಕಮಲ ಶಿಲೆ, ಮಂದರ್ತಿ, ಅಮೃತೇಶ್ವರಿ, ಇಡಗುಂಜಿ, ಸಾಲಿಗ್ರಾಮ ಮೇಳಗಳ ಉತ್ತಮ ಆಸ್ತಿಗಳಾಗಿದೆ.

ಉಪ್ಪೂರರಂತಹ ಆಶಾವಾದಿ ಕಲಾವಿದರೊಂದಿಗೆ ನಡೆಸುವ ಸಂದರ್ಶನದಿಂದ ಈ ರಂಗಭೂಮಿಯ ಕುರಿತು ಹೆಚ್ಚಿನ ವಿಚಾರಗಳನ್ನು ತಿಳಿಯಲು ಸಾಧ್ಯ. ಅವರ ಮಾತುಗಳಲ್ಲೇ ಸದಾ ಬೆಳೆಯುತ್ತಲೇ ಇರುವ ಕಲಾವಿದನೊಬ್ಬನ ಜೀವನದ ಪರಿಚಯವಾಗುತ್ತದೆ.

ಸುಮಾರು ಮೂವತ್ತು ವರ್ಷಗಳ ಕಾಲ ಬಯಲಾಟ ಮೇಳದ ಭಾಗವತರಾಗಿ ತೂಕಡಿಸುತ್ತಲೋ, ತಲೆದೂಗುತ್ತಲೋ ನೆಲದಲ್ಲಿ ಕುಳಿತ ಹೆಂಗಸರು ಗಂಡಸರು ಚಿಳ್ಳೆ ಪಿಳ್ಳೆಗಳಿಗೆಲ್ಲಾ ಹಾಡನ್ನು ಹಾಡುತ್ತಾ ವೇಷಗಳನ್ನು ಕುಣಿಸುತ್ತಾ ರಾತ್ರಿ ಬೆಳಗು ಮಾಡುತ್ತಿದ್ದರು. ಆದರೆ ಈಚಿನ ಹತ್ತು ಹನ್ನೆರಡು ವರ್ಷಗಳಲ್ಲ ಆರಾಮ ಕುರ್ಚಿಯಲ್ಲಿ ಕುಳಿತು, ದುಡ್ಡು ಕೊಟ್ಟು ಆಟ ನೋಡಬೇಕೆಂಬ, ಹಾಡನ್ನು ಕೇಳಬೇಕೆಂಬ ಬಯಕೆಯಿಂದಲೇ ಬಂದ ಪ್ರೇಕ್ಷಕ ವೃಂದಕ್ಕೆ ಭವ್ಯ ವೇದಿಕೆಯಲ್ಲಿ ಕುಳಿತು ಹಲವು ಮಿತಿಗಳೊಂದಿಗೆ ಹಾಡುತ್ತಾ ಆಡಿಸುತ್ತಾ ಇರುವ ಇವರಿಗೆ ಈ ಎರಡು ಪ್ರದರ್ಶನ ವ್ಯವಸ್ಥೆಯ ಕಡೆಗೆ ಗಮನ ಸೆಳೆದಾಗ ಎರಡನೆಯದೇ ಉತ್ತಮ ಎಂಬ ಅಭಿಪ್ರಾಯವಿದೆ. ಇದಕ್ಕೆ ಕಾರಣ, ಹಿಂದೆ ಮೇಳದ ವ್ಯವಸ್ಥಾಪಕನಾದವನು ಊರೂರು ಅಲೆಯುತ್ತಾ ಮುಂದಾಳುಗಳ ಕಾಲನ್ನೋ ಕೈಯನ್ನೋ ಕಟ್ಟಿ ಅವರ ಮೂಲಕ ವರಡಾ ಎತ್ತಿಸಿ ಇಲ್ಲವೇ ಹರಕೆ ಆಟವಾದರೆ ಚೌಕಾಶಿಗೆ ತಲೆಬಾಗಿ ಆಟ ಆಡಿಸಬೇಕಾಗುತ್ತಿತ್ತು. ಆಗ ಕಲಾವಿದರಿಗೆ ಕೊಡುವ ಹಣದಲ್ಲಿ ಕೊರತೆಯೇ ಗಟ್ಟಿ. ಆತನೇ ಪರದಾಡುವಾಗ ಕಲಾವಿದನ ಗೋಳನ್ನು ಯಾರು ಕೇಳಬೇಕು? ಇದರಿಂದ ಕಲಾರಾಧನೆಯೇನೋ ಎಲ್ಲರ ಪಾಳಿನ ಸಮಾರಾಧನೆಯಾದರು ಕಲಾವಿದನ ತುತ್ತಿಗೆ ಮಾತ್ರ ಕಷ್ಟವಾಗುತ್ತಿತ್ತು. ಈಗ ಆ ಪರಿಸ್ಥಿತಿ ಬದಲಾಗಿದೆ. ಜನ ಹಣ ಕೊಟ್ಟು ಬರುತ್ತಾರೆ. ಉತ್ತಮ ಕಲಾವಿದರಿದ್ದಲ್ಲಿ ನೂಕು ನುಗ್ಗಲಿದೆ. ಇದರಿಂದ ವ್ಯವಸ್ಥಾಪಕ, ಕಲಾವಿದ ಇಬ್ಬರಿಗೂ ಆರ್ಥಿಕವಾಗಿ ತೊಂದರೆ ಇಲ್ಲ. ಉತ್ತಮ ಕಲಾವಿದರನ್ನು ಪಡೆಯಲು ಮೇಳಗಳಲ್ಲೇ ಪೈಪೋಟಿ ಇದೆ. ಇದರಿಂದ ಕಲಾವಿದರಲ್ಲೂ ಉತ್ಸಾಹದ ವಾತಾವರಣ ಮೂಡಿದೆ.

ಇದಲ್ಲದೆ ಇಂದು ವಿದ್ಯಾವಂತರು ಕಲಾವಿದರಾಗಿ ಹಾಗೂ ಪ್ರೇಕ್ಷಕರಾಗಿ ಯಕ್ಷಗಾನ ಪ್ರಪಂಚಕ್ಕೆ ಬರುತ್ತಿರುವುದರಿಂದ ಯಕ್ಷಗಾನ ಪ್ರದರ್ಶನಗಳು ತುಂಬಾ ಸುಧಾರಿಸಿವೆ. ಈಗ ಜನ ಸಮೂಹದಲ್ಲೂ ಕಲಾವಿದರನ್ನು ಗೌರವಿಸುವುದನ್ನು ಕಾಣಬಹುದು. ಇವೆಲ್ಲದರಿಂದ ಆತನ ನೈಜ ಕಲಾಶಕ್ತಿಯ ಪ್ರದರ್ಶನಕ್ಕೆ ಈಗ ಅವಕಾಶ ಹೆಚ್ಚಿದೆ.

ಟೆಂಟ್ ಆಟಗಳಿಂದ ಉಂಟಾದ ಬದಲಾವಣೆಯನ್ನು ಉಪ್ಪೂರರು ಸಮರ್ಥಿಸುತ್ತಾರೆ. ಬದಲಾವಣೆಯೇ ಜೀವನ ಎಂಬುದು ಅವರ ಮಾತಿನ ಇಂಗಿತ. ಹಿಂದಿನಿಂದಲೂ ಬದಲಾವಣೆಗೊಳ್ಳುತ್ತಾ ಬಂದಿದೆ. ಇಂದೂ ಬದಲಾವಣೆ ಇದೆ.

ಸಭಾ ಲಕ್ಷಣದ ಪ್ರದರ್ಶನದಲ್ಲಿ ಹಿಂದೆ 3 ಗಂಟೆಗಳ ಕಾಲವ್ಯಯ ಈಗ ಒಂದೂವರೆ ಗಂಟೆಗೆ ಇಳಿದಿರುವುದು ಸ್ವಾಗತಾರ್ಹ. ಇದರಿಂದ ಕಲಾ ಬೆಳವಣಿಗೆಗೆ ಕೊರತೆ ಆಗಿಲ್ಲ. ಆದರೆ ಅದನ್ನು ಸಂಪೂರ್ಣವಾಗಿ ಬಿಡಬಾರದು ಎನ್ನುತ್ತಾರೆ. ಇಂದಿನ ಕಾಲಕ್ಕೆ ಸರಿ ಹೊಂದುವಂತೆ ಪ್ರದರ್ಶನ ಕಾಲದಲ್ಲೂ ಮಿತಿ ತಂದರೆ ಒಳಿತಾದೀತು ಎಂಬ ಆಶಯವಿದೆ. ಹಿಂದೆ ಕಲಾವಿದರಿಗೆ ಸಮರ್ಪಕ ಅಭ್ಯಾಸ ಕ್ರಮ ಇರಲಿಲ್ಲ. ಈಗ ಹಂಗಾರ ಕಟ್ಟೆ, ಉಡುಪಿ, ಧರ್ಮಸ್ಥಳ ಮುಂತಾದ ಕಡೆಯಲ್ಲಿ ಯಕ್ಷಗಾನ ಕಲಾಕೇಂದ್ರಗಳು ಹುಟ್ಟಿಕೊಂಡಿದ್ದು ಕಲಾವಿದನ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಿವೆ. ಕಲಾಕೇಂದ್ರಗಳಲ್ಲಿ ವೃತ್ತಿಪರರಿಗೆ ಆದ್ಯತೆ ಇರುವುದರಿಂದ ಸುಧಾರಿತ ಹೊಸ ಪೀಳಿಗೆಯೊಂದರ ನಿರ್ಮಾಣವಾದೀತೆಂಬ ನಂಬಿಕೆ ಇವರಿಗೆ ಇದೆ. ಅಭಿನಯಕ್ಕೆ ಹೆಚ್ಚಿನ ಪ್ರಾಧಾನ್ಯ ಕೊಡುವ ಉತ್ತರ ಕನ್ನಡ ಯಕ್ಷಗಾನ ಕಲಾವಿದರ ನೃತ್ಯ, ಮತ್ತು ವೇಷಗಾರಿಕೆಗೆ ಹೆಚ್ಚಿನ ಬೆಲೆಕೊಡುವ ದಕ್ಷಿಣಕನ್ನಡದ ಬಡಗು ತಿಟ್ಟಿನ ಕಲಾವಿದರ ಹಾಗೂ ಅರ್ಥಪೂರ್ಣ ಸಂಭಾಷಣೆಗೆ ಮಹತ್ವ ಕೊಡುವ ತೆಂಕುತಿಟ್ಟಿನ ಕಲಾವಿದರ ತ್ರಿವೇಣಿ ಸಂಗಮವಾದ ಇತ್ತೀಚಿನ ಯಕ್ಷಗಾನ ಪ್ರದರ್ಶನಗಳು ಉತ್ತಮಗೊಳ್ಳುತ್ತಿವೆ - ಎಂಬ ಅಭಿಪ್ರಾಯವಿದೆ - ಇವರ ದೃಷ್ಟಿಯಲ್ಲಿ ಯಕ್ಷಗಾನ ಪ್ರದರ್ಶನ ಉತ್ತಮಗೊಳ್ಳಬೇಕಾದರೆ ಉತ್ತಮ ಅಭಿನಯ, ನೃತ್ಯ, ಹಾಗೂ ಔಚಿತ್ಯಪೂರ್ಣ ಮಾತುಗಾರಿಕೆ ಅಗತ್ಯ. ಪದ್ಯಕ್ಕೆ ಅರ್ಥ ಹಚ್ಚಬೇಕೇ ಹೊರತು ಆಡಿದ ಶಬ್ದಕ್ಕೆ ಅರ್ಥ ಹಚ್ಚುವ ಗೊಡವೆಗೆ ಕಲಾವಿದರು ಇಳಿಯಬಾರದು. ಪ್ರದರ್ಶನ ಉತ್ತಮಗೊಂಡರೆ ಮಾತ್ರ ಭಾಗವತನಿಗೆ ಆನಂದ ದೊರೆಯುತ್ತದೆ. ಇಲ್ಲವಾದರೆ ವ್ಯಥೆಯಾಗುತ್ತದೆ ಎಂಬುದು ಇವರ ಅನಿಸಿಕೆ.

ಮೇಳದಲ್ಲಿ ಭಾಗವತರ ಸ್ಥಾನಮಾನದ ಬಗ್ಗೆ ಶ್ರೀ ಉಪ್ಪೂರರಿಗೆ ಖಚಿತ ಅಭಿಪ್ರಾಯವಿದೆ. ಆತನಿಗೆ ಸ್ವರ ಸಂಪತ್ತು ಒಂದೇ ಇದ್ದರೆ ಸಾಲದು. ಆತನಲ್ಲಿ ವಿದ್ವತ್ತು, ಸಹೃದಯತೆ ಮತ್ತು ಉಳಿದೆಲ್ಲಾ ಕಲಾವಿದರಿಗೆ ಮಾದರಿಯಾಗಿ ನಿಲ್ಲಬಲ್ಲ ವ್ಯಕ್ತಿತ್ವ ಇರಬೇಕು. ಇಂದುಕೂಡ ಉತ್ತಮ ವರ್ಚಸ್ಸು ಉಳ್ಳ ಭಾಗವತರಿಗೆ ಮೇಳಗಳಲ್ಲಿ ಮೊದಲ ಸ್ಥಾನವೇ ಇದೆ. ಆತನೇ ಪ್ರದರ್ಶನದ ನಿರೂಪಕ ಹಾಗೂ ದಿಗ್ದರ್ಶಕ. ಯಕ್ಷಗಾನಕ್ಕೆ ನಾಟಕಗಳಲ್ಲಿರುವಂತೆ ನಿರ್ದೇಶಕನ ಅಗತ್ಯವನ್ನು ಎತ್ತಿ ಹಿಡಿಯುವ ಉಪ್ಪೂರರು 'ಹಿಂದೆಲ್ಲಾ ಇದನ್ನು ಭಾಗವತ ನಿರ್ವಹಿಸುತ್ತಿದ್ದ, ಆದರೆ ಮುಂದಿನ ಪೀಳಿಗೆಗೆ ಮುಂದುವರಿಯುವ ಸಾಧ್ಯತೆ ಕಡಿಮೆ' ಎನ್ನುತ್ತಾರೆ.

ಹಳೆಯ ಪ್ರಸಂಗಗಳ ಬಗ್ಗೆ ಅಧಿಕ ಒಲವಿರುವ ಇವರು ಅಲ್ಲಿನ ಕವಿತೆಗಳ ಉತ್ತಮ ಅಂಶವನ್ನು ಮೆಚ್ಚುತ್ತಾರೆ. ಅನುಕರಣೆಯಿಂದಲೇ ಹುಟ್ಟಿ ಕ್ಷಣಿಕ ಬದುಕನ್ನೇ ಪಡೆದ ಹೊಸ ಪ್ರಸಂಗಗಳಲ್ಲಿ ರಾಗ ವೈವಿಧ್ಯವಾಗಲೀ, ಸಾಹಿತ್ಯಿಕ ಮೌಲ್ಯಗಳಾಗಲೀ

ಇಲ್ಲದ ಬಗ್ಗೆ ವ್ಯಸನವಿದೆ. ಹಳೆಯ ಪ್ರಸಂಗಗಳನ್ನು ನೋಡಿ ಬೇಸರಗೊಂಡ ಜನತೆಗೆ ಈ ಸಿನಿಮೀಯ ಶೈಲಿ ಒಮ್ಮೆ ರೋಚಕವಾಗಬಹುದು, ಆದರೆ ಇವು ಶಾಶ್ವತವಾಗಿ ಉಳಿಯಲಾರವು ಎನ್ನುತ್ತಾರೆ.

"ಹಾಗಾದರೆ ಹಳೆಯ ಪ್ರಸಂಗಗಳು ಮತ್ತೆ ಬರಲು ಸಾಧ್ಯವೇ, ಮತ್ತೆ ಬರಬೇಕಾದಲ್ಲಿ ಏನು ಮಾಡಬೇಕು?" ಎಂದಾಗ

'ಹಳೆಯ ಪ್ರಸಂಗಗಳ ತಾಂತ್ರಿಕ ವ್ಯವಸ್ಥೆಯನ್ನು ಸುಧಾರಿಸಿ, ಕಲಾವಿದರನ್ನು ತರಬೇತಿಗೊಳಿಸಿ, ಉತ್ತಮ ಸಾಹಿತಿಗಳ ಹಾಗೂ ಅನುಭವಿ ಕಲಾವಿದರ ಮಾರ್ಗದರ್ಶನ ನೀಡಿ ಪ್ರದರ್ಶಿಸಿದ್ದೇ ಆದಲ್ಲಿ ಅವು ಹೊಸದನ್ನು ಮೆಟ್ಟಿ ನಿಂತಾವು' ಎನ್ನುತ್ತಾರೆ ಉಪ್ಪೂರರು.

ವಸ್ತು ವಿಚಾರದಲ್ಲಿ ರಾಮಾಯಣ, ಭಾರತ, ಭಾಗವತಾದಿ ಪ್ರಸಂಗಗಳನ್ನು ಬಯಸುವ ಇವರಿಗೆ ಶೃಂಗಾರ ಹಾಗೂ ವೀರರಸದೆಡೆಗೆ ಹೆಚ್ಚು ಒಲವು. ಹಾಸ್ಯ ಮತ್ತು ಶೋಕ ಪೂರಕವಾಗಿ ಬರಬೇಕು ಎನ್ನುತ್ತಾರೆ, ರುಕ್ಮಾಂಗದ ಚರಿತ್ರೆ, ಸುಭದ್ರಾ ಕಲ್ಯಾಣ, ದ್ರೌಪದೀ ಸ್ವಯಂವರ, ಪಟ್ಟಾಭಿಷೇಕ, ವಾಲಿಸುಗ್ರೀವ ಕಾಳಗ, ವಿಶ್ವಾಮಿತ್ರ ಪ್ರತಾಪ ಮುಂತಾದ ಪ್ರಸಂಗಗಳು ಹೆಚ್ಚು ಪ್ರಿಯವಾದ ಪ್ರಸಂಗಗಳಾದರೆ – ಹಲಸಿನ ಹಳ್ಳಿ ನರಸಿಂಹ ಶಾಸ್ತ್ರಿ, ಚರ್ಚೆಗೆ ಕಾರಣನಾದ ರಾಮಾಯಣ ಪ್ರಸಂಗಗಳ ಕವಿ, ಹಟ್ಟಿಯಂಗಡಿ ರಾಮ ಭಟ್ಟ ಮುಂತಾದವರು ಪ್ರಿಯರಾದ ಕವಿಗಳಾಗಿದ್ದಾರೆ.

ನಲವತ್ತು ವರ್ಷಗಳಿಂದ ನಾನಾ ಬಗೆಯ, ನಾನಾ ಸ್ತರದ ವೇಷಧಾರಿಗಳನ್ನು ನೋಡುತ್ತಾ ಬಂದಿರುವ ಉಪ್ಪೂರರಿಗೆ ಕೆಲವರ ಪಾತ್ರವಂತೂ ಮರೆಯಲಾಗದ್ದು. ಕೆಲವು ಪಾತ್ರಧಾರಿಗಳು ಹೊರಟು ಹೋದ ಮೇಲೆ ಆ ಪಾತ್ರಗಳು ಯಕ್ಷಗಾನದಿಂದ ಕಣ್ಮರೆಯಾದಂತಿವೆ.' ಎಂಬ ಕೊರಗಿದೆ. 'ಚೂಡಾಮಣಿ' 'ರಾಮಾಂಜನೇಯ' ಪ್ರಸಂಗಗಳಲ್ಲಿ ಬರುವ ಹನುಮಂತನ ಪಾತ್ರವನ್ನು ಮಾಡುತ್ತಿದ್ದ ಮಾರ್ವಿಹೆಬ್ಬಾರರು ಕರ್ಣಾರ್ಜುನ ಕಾಳಗದಲ್ಲಿ ಕರ್ಣಪಾತ್ರಧಾರಿಯಾದ ಹಾರಾಡಿ ರಾಮ ಗಾಣಿಗ, ರುಕ್ಮಾಂಗದನ ಚರಿತ್ರೆಯಲ್ಲಿ ರುಕ್ಮಾಂಗದ ವೇಷಧಾರಿ ಗಣಪತಿ ಪ್ರಭುಗಳು ಮುಂತಾದವರು ಪಾತ್ರಗಳೊಂದಿಗೆ ತಾದಾತ್ಮ್ಯವನ್ನು ಸಾಧಿಸಿದ ಮಹಾನ್ ಕಲಾವಿದರು ಎನ್ನುತ್ತಾರೆ.

ಡಾ॥ ಶಿವರಾಮ ಕಾರಂತರಿಂದಲೂ ಇಂದು ಯಕ್ಷಗಾನ ಕಲೆ ಎಲ್ಲರ ಗಮನ ಸೆಳೆದಿದೆ ಎಂಬುದು ಇವರ ದೃಢ ವಿಶ್ವಾಸ, ಈಚಿನ ಯಕ್ಷಗಾನ ಪ್ರಪಂಚಕ್ಕೆ ವಿದ್ಯಾವಂತರ ಪ್ರವೇಶವಾಗಲೀ ಇಲ್ಲವೇ ಕನ್ನಡ ಜಿಲ್ಲೆಗಳ ಹೊರಗಿನವರಿಗೆ ಯಕ್ಷಗಾನದ ಬಗ್ಗೆ ಆಸಕ್ತಿ ಕೆರಳುವಿಕೆಯಾಗಲಿ ಉಂಟಾದದ್ದು ಕಾರಂತರ ಪ್ರಯತ್ನದಿಂದಲೇ. ಡಾ॥ ಕಾರಂತರ ಪರಿಶ್ರಮದಿಂದ ಯಕ್ಷಗಾನಕ್ಕೊಂದು ಹೊಸ ಆಯಾಮ ದೊರೆತಿದೆ. ಕಾರಂತರ ಪ್ರಯೋಗಗಳಿಂದ ತಾವು ಪಡೆದ ಅನುಭವ ವಿಸ್ತಾರವನ್ನು ಹೇಳುತ್ತಾ, ಭಾವವನ್ನು

ಹೊಮ್ಮಿಸುವ ಕುಣಿತದ ಅಭ್ಯಾಸ, ಹೊಸ ಬಗೆಯ ವೇಷಭೂಷಣಗಳ ಅಗತ್ಯ, ಹಿನ್ನೆಲೆಗೆ ಬೇಕಾದ ಬದಲಾವಣೆ ಮುಂತಾದವುಗಳನ್ನು ಎತ್ತಿ ಹಿಡಿಯುತ್ತಾರೆ. ಯಕ್ಷಗಾನವನ್ನು ಶಾಸ್ತ್ರೀಯಕಲೆ ಎನ್ನಲು ಯಾವ ಪುರಾವೆಯು ಇಲ್ಲ ಎನ್ನುವ ಉಪ್ಪೂರರು ಅದು ಹುಟ್ಟಿನಿಂದ ಜಾನಪದ ಕಲೆ ಎಂಬ ಅಭಿಪ್ರಾಯಕ್ಕೆ ಬರುತ್ತಾರೆ. ಮುಂದೆ ಶಾಸ್ತ್ರೀಯ ಚೌಕಟ್ಟು ಅದಕ್ಕೆ ಬಂದಿರಬೇಕು. ಇಂತಹ ಕಲೆಯನ್ನು ಉಳಿಸುವಲ್ಲಿ ಅಕಾಡೆಮಿಗಳ ಪಾತ್ರ ಹಿರಿದು ಎನ್ನುತ್ತಾರೆ. ಯಕ್ಷಗಾನಕ್ಕೆ ಪ್ರತ್ಯೇಕ ಅಕಾಡೆಮಿಯನ್ನು ಸ್ಥಾಪಿಸಬೇಕೆಂಬ ಇಂದಿನ ದಿನಗಳಲ್ಲಿ, ಈ ಬಗೆಯ ಕಲಾವಿದರ ಆಶಯಕ್ಕೆ ಹೆಚ್ಚಿನ ಬೆಲೆ ಇದೆ. ಕಲಾವಿದರನ್ನು ತಯಾರು ಮಾಡುವಂತಹ ಕಷ್ಟದ ಕೆಲಸಕ್ಕೆ ಅಕಾಡೆಮಿ ಸಿದ್ಧವಾಗಬೇಕು. 'ಸುಪ್ತವಾಗಿರುವ ಕಲೆಯನ್ನು ಗುರು ಮುಖದಿಂದ ಹೊರಗೆ ಕಾಣಿಸುವಲ್ಲೂ ಪ್ರೋತ್ಸಾಹ ದೊರೆಯಬೇಕು.' ಬೇರೆ ಕಲಾವಿದರೊಂದಿಗೆ ಬೆರೆಯಲು ಶಿಬಿರಗಳು, ತರಬೇತಿಗಾಗಿ ವರ್ಕ್ ಶಾಪ್‌ಗಳ ವ್ಯವಸ್ಥೆ ಮಾಡಬೇಕು. ಸರಕಾರ ಇವೆಲ್ಲಕ್ಕೂ ನೇರ ಕಲಾವಿದರೊಂದಿಗೆ ಸಂಪರ್ಕ ಬೆಳೆಸಬೇಕು ಎನ್ನುತ್ತಾರೆ.

ಯಕ್ಷಗಾನ ಕಲೆ ಇನ್ನೂ ಸಾಕಷ್ಟು ಕಾಲ ಉಳಿಯಬೇಕಾದರೆ ಕಲೆಯ ಬಗ್ಗೆ ಸಂಪೂರ್ಣ ಅರಿತ ನಿಜ ಗೌರವ ಅಗತ್ಯ. ಕಲೆ ಉತ್ತಮಗೊಳ್ಳುವಲ್ಲಿ ಕಲಾವಿದನಷ್ಟೇ ಪ್ರೇಕ್ಷಕನ ಜವಾಬ್ದಾರಿಯು ಇದೆ. ಬದಲಾವಣೆ ಹೊಂದುತ್ತಾ ಬೆಳೆಯುತ್ತಿರಬೇಕು. ಆಸಕ್ತರು, ಅಧ್ಯಯನಶೀಲರು ಈ ದಿಸೆಯಲ್ಲಿ ಪ್ರಯತ್ನಿಸಿ, ಉತ್ತಮದೆಡೆಗೆ ಪುಷ್ಟಿಯೆಡೆಗೆ ಸುಧಾರಿಸಬೇಕು. ಹಿಂದಿಗಿಂತ ಇಂದು ಎಷ್ಟೋ ಸುಧಾರಿಸಿದೆ ಎಂಬ ಸಂತೃಪ್ತಿ ಭಾವ ಭಾಗವತ ಉಪ್ಪೂರರಿಗೆ ಇದೆ. ಹರೆಯ ಕಳೆಯುತ್ತಿದ್ದರೂ ಲೆಕ್ಕಿಸದೆ ಉಪ್ಪೂರರು ಉತ್ಸಾಹದಿಂದ ಪ್ರದರ್ಶನಗಳಲ್ಲಿ ಭಾಗವಹಿಸುತ್ತಿದ್ದರು. ವೃದ್ಧಾಪ್ಯ ಎಂದೂ ಉಪ್ಪೂರರಿಗೆ ಸವಾಲಾಗಿರಲಿಲ್ಲ. ಬಯಲಾಟವಿರಲಿ, ಜೋಡಾಟವಿರಲಿ, ಹವ್ಯಾಸಿಗಳ ಚಿಕ್ಕ ಪ್ರದರ್ಶನವಿರಲಿ ಅಥವಾ ರಾತ್ರಿ ಇಡೀ ಒಬ್ಬರೇ ಬೆಳಗು ಮಾಡಬೇಕಾದ ಪರಿಸ್ಥಿತಿಯೇ ಬಂದಿರಲಿ ಎದೆಗುಂದದೆ ತಮ್ಮ ಕಾರ್ಯವನ್ನು ಚೊಕ್ಕವಾಗಿ ಮುಗಿಸುತ್ತಿದ್ದರು. ಅರವತ್ತಾರರ ವಯಸ್ಸಿನಲ್ಲೂ ಉಪ್ಪೂರರ ಕಂಠಶ್ರೀ ಅಸಾಧಾರಣವಾಗಿದ್ದು ಅತ್ಯಂತ ಇನಿದನಿಯಿಂದ ಕೂಡಿಕೊಂಡಿತ್ತು. ಶುಭ್ರ ಬಿಳಿಯ ಜುಬ್ಬ, ಬಿಳಿಯ ಕಚ್ಚೆ ಹಾಕಿದ ಪಂಚೆ, ತಲೆಗೆ ಕೆಂಪು ರುಮಾಲು, ಹಣೆಗೊಂದು ಕುಂಕುಮದ ಬೊಟ್ಟು ತೊಟ್ಟು ಕುಳಿತು ಹಾಡತೊಡಗಿದರೆ ಎಂತಹವರಲ್ಲೂ ಗೌರವ ಹೊಮ್ಮುತ್ತಿತ್ತು. ಹಿಂದೆ ದಿ॥ ತಿಮ್ಮಪ್ಪ ನಾಯಕರ ಮದ್ದಲೆ ಹಾಗೂ ಇವರ ಹಾಡುವಿಕೆಯ ಜೋಡಿ ಮನೆ ಮಾತಾಗಿತ್ತು. ಮುಂದೆ ಇವರೊಂದಿಗೆ ಮದ್ದಲೆ ನುಡಿಸುವುದರಲ್ಲಿ ಪಳಗಿದವರೆಂದರೆ ಶ್ರೀ ದುರ್ಗಪ್ಪ ಗುಡಿಗಾರರು.

ಭಾಗವತನಾದವನಲ್ಲಿ ವಿದ್ವತ್ತು ಸಹೃದಯತೆ ಉಳಿದೆಲ್ಲಾ ಕಲಾವಿದರಿಗೆ ಮಾದರಿಯಾಗಬಲ್ಲ ವ್ಯಕ್ತಿತ್ವ ಇರಬೇಕೆಂದೇ ಉಪ್ಪೂರರು ನಂಬಿಕೊಂಡವರು. ಅಂತೆಯೇ ಬಾಳಿನುದ್ದಕ್ಕೂ ನಡೆದುಕೊಂಡವರು. ಈ ವರ್ಚಸ್ಸಿನಿಂದಾಗಿಯೇ ಎಲ್ಲಾ ಮೇಳಗಳ ಕಲಾವಿದರ ಗೌರವಕ್ಕೆ ಪಾತ್ರರಾಗಿದ್ದಾರೆ. ಈಚಿನ ಹನ್ನೆರಡು ವರ್ಷಗಳಲ್ಲಂತೂ ಅಮೃತೇಶ್ವರಿ ಮೇಳದ ಆಧಾರ ಸ್ತಂಭದಂತಿದ್ದು ಕರಾವಳಿ ಹಾಗು ಮಲೆನಾಡಿನಲ್ಲಿ ಆ ಮೇಳಕ್ಕೆ ಅಪಾರ ಅಭಿಮಾನಿಗಳನ್ನು ದೊರಕಿಸಿ ಕೊಟ್ಟಿದ್ದಾರೆ. 1984ರ ಏಪ್ರಿಲ್ 11 ರಂದು ರಾತ್ರಿ ಆ ಮೇಳದಲ್ಲಿ ಭಾಗವತಿಕೆಗೆಂದು ರಂಗಕ್ಕೆ ಹೊರಟವರು ಹೃದಯಾಘಾತಕ್ಕೆ ಗುರಿಯಾದರು. ಇದರಿಂದಾಗಿ ಮರುದಿನ ಅಪಾರ ಅಭಿಮಾನಿಗಳನ್ನು ಅಗಲಿದರು.

ದಕ್ಷಿಣೋತ್ತರ ಕನ್ನಡ ಜಿಲ್ಲೆಯ ಅನೇಕ ಸಂಘ ಸಂಸ್ಥೆಗಳು ಇವರ ಕಲಾ ಸೇವೆಯನ್ನು ಹಾಡಿ ಹೊಗಳಿವೆ. ಈಚೆಗಷ್ಟೇ ರಾಜ್ಯ ಸರಕಾರ ಇವರಿಗೆ ಪ್ರಶಸ್ತಿಯನ್ನು ಇತ್ತು ಗೌರವಿಸಿದೆ. ದೂರದ ಮುಂಬಯಿ, ಮದ್ರಾಸ್, ದೆಹಲಿಗಳಲ್ಲೂ ಅಪಾರ ಅಭಿಮಾನಿಗಳನ್ನು ಇವರು ಹೊಂದಿದ್ದಾರೆ. ನಾರಣಪ್ಪ ಉಪ್ಪೂರರ ಅಗಲಿಕೆ ಬಡಗು ತಿಟ್ಟು ಯಕ್ಷಗಾನದ ಪೂರ್ವೀ ಶೈಲಿಯ ಹಾಡುಗಾರಿಕೆಯ ಪರಂಪರೆಗೆ ಕೊನೆ ತರುವಂತದ್ದಾಗಿದೆ. ಅವರ ಶಿಷ್ಯ ಸಮೂಹದಲ್ಲಿ ಈಗಾಗಲೇ ಬಹು ಜನಪ್ರಿಯರಾಗಿರುವ ಗುಂಡ್ಮಿ ಕಾಳಿಂಗ ನಾವಡ, ಗುಂಡ್ಮಿ ಸದಾನಂದ ಐತಾಳ್, ಧಾರೇಶ್ವರ ಸುಬ್ರಹ್ಮಣ್ಯ ಮುಂತಾದವರು ಉಪ್ಪೂರರ ಪರಂಪರಾಗತ ಹಾಡುಗಾರಿಕೆಯ ಶೈಲಿಯನ್ನು ಮುಂದುವರಿಸಿ ಯಕ್ಷಗಾನ ಗಾನ ಸಂಪ್ರದಾಯವನ್ನು ಉಳಿಸಿ ಬೆಳೆಸುವಲ್ಲಿ ವಹಿಸುವ ಪಾತ್ರ ಎಂತಹದು ಎಂಬುದನ್ನು ಕಾದು ನೋಡಬೇಕಾಗಿದೆ.

■

ಯಕ್ಷಗಾನದ ಹಿರಿಯ ಭಾಗವತ

ಗುಂಡ್ಮಿ ರಾಮಚಂದ್ರ ನಾವಡ

ಸಂಪ್ರದಾಯ ಶೈಲಿಯ ಹಾಡುಗಾರಿಕೆಗೆ ಬದ್ಧರಾಗಿರುವ ಕೆಲವೇ ಹಿರಿಯ ಭಾಗವತರಲ್ಲಿ ಶ್ರೀ ಗುಂಡ್ಮಿ ರಾಮಚಂದ್ರ ನಾವಡರು ಮುಖ್ಯರು. ಇಂಪಾದ ಕಂಠ ಉಳ್ಳ ನಾವಡರ ಹಾಡುಗಾರಿಕೆ ವೃತ್ತಿ ರಂಗಭೂಮಿಯಲ್ಲಿ ಜನಮನ್ನಣೆ ಗಳಿಸಿತ್ತು. ಅವರೀಗ ವೃತ್ತಿಕ್ಷೇತ್ರವನ್ನು ತೊರೆದು 15 ವರ್ಷಗಳು ಸಂದರೂ ಕಲಾರಸಿಕರ ಕಿವಿಯಲ್ಲಿ ಅವರ ಧ್ವನಿ ಇಂದಿಗೂ ನಿನದಿಸುತ್ತಿದೆ. ತಾಳಕ್ಕೆ ಬದ್ಧವಾದ ಪದ್ಯಗಳ ಅನುಸರಣೆ, ಕಾಲಕ್ಕೆ ಅನುಸರಿಸಿ ಭಾವಪೂರ್ಣವಾಗಿ ಹಾಡುವ ವಿಧಾನ, ಪದ್ಯಗಳನ್ನು ಎತ್ತುಗಡೆ ಮಾಡುವ ರೀತಿ ಅವರಿಗೇ ವಿಶಿಷ್ಟವಾದುದು. ಅಸ್ತಮ ವ್ಯಾಧಿಯಿಂದ ನರಳುತ್ತಿದ್ದರೂ ಆಕಾಶವಾಣಿಯ ಮೂಲಕವೋ ಅಕ್ಕಪಕ್ಕದ ಊರಿನ ಆಟಗಳಲ್ಲಿನ ಗೌರವ ಭಾಗವತಿಕೆಯ ಮೂಲಕವೋ ಒಂದೆರಡು ಗಂಟೆಗಳ ಕಾಲ ಅಭಿಮಾನಿಗಳನ್ನು ತಣಿಸುವ ಶಕ್ತಿಯನ್ನು ಶ್ರೀ ರಾಮಚಂದ್ರ ನಾವಡರು ಈಗಲೂ ಹೊಂದಿದ್ದಾರೆ.

67 ವರ್ಷ ವಯಸ್ಸಿನ ಶ್ರೀ ನಾವಡರು ಹುಟ್ಟಿ ಬೆಳೆದದ್ದು ಯಕ್ಷಗಾನ ಕಲಾವಿದರ ಪರಿಸರದಲ್ಲಿ. ಯಕ್ಷಗಾನ ಕಲಾವಿದರಾದ ಇವರ ಮಾವಂದಿರ ಹಾಗೂ ಚಿಕ್ಕತಂದೆಯವರ ಒಡನಾಟದಿಂದಾಗಿ, ತಂದೆಗೆ ಇಷ್ಟವಿಲ್ಲದಿದ್ದರೂ ಮೇಳವನ್ನು ಸೇರಿದರು. ಸಾಲಿಗ್ರಾಮದ

ಶ್ರೀ ಮಂಜುನಾಥ ನಾಯಕರಿಂದಾಗಿ ಭಾಗವತಿಕೆಯ ಅಭ್ಯಾಸ ಪರಿಚಯಿಸಿಕೊಂಡಿದ್ದರು. ಮೊದಲಿಗೆ ಮಾರಣಕಟ್ಟೆ ಮೇಳದ ಶ್ರೀ ಹೆರಂಜೆ ಶಿವರಾಮ ಭಾಗವತರಿಗೆ ಸಂಗೀತಗಾರರಾಗಿ ಮೇಳ ಜೀವನವನ್ನು ಪ್ರಾರಂಭಿಸಿದರು. ಮುಂದೆ ಸೌಕೂರು, ಪೆರ್ಡೂರು, ಅಮೃತೇಶ್ವರಿ, ಮಂದರ್ತಿ, ಇಡಗುಂಜಿ ಮೇಳಗಳೊಂದಿಗೆ ಸಂಚರಿಸಿದರು. 31 ವರುಷಗಳ ಕಾಲ ಅವಿರತವಾಗಿ ಭಾಗವತಿಕೆಯನ್ನು ನಡೆಸಿದ ಶ್ರೀಯುತರು ಎಲ್ಲೆಡೆಯಲ್ಲೂ ಎಲ್ಲರ ಮೆಚ್ಚುಗೆ ಗೌರವಕ್ಕೆ ಪಾತ್ರರಾದರು. ಭೀಷ್ಮ ವಿಜಯ, ಕರ್ಣಾರ್ಜುನ ಕಾಳಗ, ಸೈಂಧವ ವಧೆ, ಮೈರಾವಣ ಕಾಳಗ, ಸುಬಾಹು ಕಾಳಗ, ಪಂಚವಟಿ ಮುಂತಾದ ಪ್ರಸಂಗಗಳ ಹಾಡುಗಳಂತೂ ಇವರಿಂದ ನವೀನತೆಯನ್ನು ಪಡೆದು ಕಲಾಪ್ರೇಮಿಗಳಿಗೆ ತುಂಬ ಪ್ರಿಯವಾದವು. ಹಿರಿಯ ವೇಷಧಾರಿಗಳಾದ ಮಾರ್ವಿ ಹೆಬ್ಬಾರ, ಹಾರಾಡಿ ರಾಮ ಗಾಣಿಗ, ಹಾರಾಡಿ ಕೃಷ್ಣ ಗಾಣಿಗ, ಬಣ್ಣದ ಕುಪ್ಪ, ಉಳ್ಳೂರು ಮಹಾಲಿಂಗ, ನಾರಾಯಣ ಗಾಣಿಗ, ವೀರಭದ್ರ ನಾಯಕ, ಕೊಳ್ಕೆಬೈಲು ಸಂಜೀವ ಮುಂತಾದವರೆಲ್ಲ ಇವರ ಜತೆಗಾರರಾಗಿದ್ದವರು. ಡಾ॥ ಕಾರಂತರೊಂದಿಗಿನ ಸಂಚಾರದಲ್ಲಿ ಕರ್ನಾಟಕದ ಹೊರಗೆಲ್ಲ ಸಂಚರಿಸಿ ಅಲ್ಲಿನವರಿಂದಲೂ ನಾವಡರು ಮೆಚ್ಚುಗೆಯನ್ನು ಪಡೆದವರು. ಮುಂಬಯಿಯಲ್ಲಿ ನಡೆದ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿ ತಮ್ಮ ನಾದ ಮಾಧುರ್ಯವನ್ನು ಮುಂಬಯಿ ಕನ್ನಡಿಗರಿಗೂ ಪರಿಚಯಿಸಿದವರು.

ಇಂತಹ ಹಿರಿಯ ಭಾಗವತರು ವೃತ್ತಿ ರಂಗಭೂಮಿಯಲ್ಲಿ ಇಲ್ಲದಿದ್ದರು ಅವರ ಅನುಭವಪೂರ್ಣವಾದ ಮಾತಿಗೆ ಹೆಚ್ಚು ಬೆಲೆ ಇದೆ. ದೈಹಿಕವಾಗಿ ಸಾಕಷ್ಟು ಸೋತಿರುವ ಶ್ರೀ ನಾವಡರು ಯಕ್ಷಗಾನ ಕುರಿತಾದ ಮಾತಿಗೆ ಕುಳಿತರೆ ತಮ್ಮ ಅನಾರೋಗ್ಯವನ್ನು ಮರೆಯುತ್ತಾರೆ.

ತಮ್ಮ ಹಳೆಯ ದಿನಗಳನ್ನು ಮೆಲುಕು ಹಾಕುವಾಗ 'ಸಾಮಾನ್ಯ'ರಲ್ಲಿ ಮೇಳದವರು ಎಂಬ ತಾತ್ಸಾರ ಭಾವನೆ ಇತ್ತು. ಆದರೆ ದೊಡ್ಡತನ ಉಳ್ಳವರಲ್ಲಿ ಹಾಗೆ ಇರಲಿಲ್ಲ. ಈಗ ಪರಿಸ್ಥಿತಿ ಬದಲಾಗಿದೆ. ಎಲ್ಲೆಡೆಯಲ್ಲೂ ಕಲಾವಿದರನ್ನು ಗುರುತಿಸುತ್ತಾರೆ ಎಂಬ ಸಂತೋಷವಿದೆ. ಹಿಂದಿನ ಕಲಾವಿದರು ತಮ್ಮ ದೈನಿಕವನ್ನು ಮರೆತವರಲ್ಲ. ಕಲಾಬದುಕಿನಷ್ಟೆ ಪ್ರಾಪಂಚಿಕ ಬದುಕಿಗೂ ಗಮನ ಕೊಡುತ್ತಿದ್ದರು. ಧನು ಸಂಕ್ರಮಣದ ನಂತರ ಮೇಳಕ್ಕೆ ಹೊರಟರೆ ಬೇಸಿಗೆಗೆ ಊರಿಗೆ ಬರುವುದು. ಮೇಳದಲ್ಲಿ ಇದ್ದಾಗೆಲ್ಲ ಕಲೆಯಲ್ಲಿಯೇ ಸಂಪೂರ್ಣ ತೊಡಗಿಕೊಳ್ಳುವುದು. ರಾತ್ರಿಯ ಪ್ರದರ್ಶನವಾದರೆ, ಬೆಳಗ್ಗೆ ಎಳೆಯರ ತರಬೇತಿಯೋ ಹೊಸತಾಗಿ ಆಡುವ ಪ್ರಸಂಗಗಳ ಅಭ್ಯಾಸವೋ ಒಂದಲ್ಲ ಒಂದರಲ್ಲಿ ನಿರತರಾಗಿರುವುದು. ಅಂದಿನ ಕಾಲದ ಪಾತ್ರಧಾರಿಗಳನ್ನು ಮೆಚ್ಚುವ ನಾವಡರು ಅದನ್ನು ಸಕಾರಣವಾಗಿ ವಿಮರ್ಶಿಸುತ್ತಾರೆ. ಕೆಲವು ಪ್ರಸಂಗಗಳು ಕೆಲವರಿಗೇ ಮೀಸಲಿಟ್ಟಿದ್ದೋ ಎನ್ನುವ ರೀತಿಯಲ್ಲಿನ ಪ್ರದರ್ಶನಗಳವು. ಶೃಂಗಾರಭರಿತ ಪ್ರಸಂಗಗಳಾದರೆ ಗಣಪತಿ

ಪ್ರಭುಗಳಿದ್ದರೇ ಅದಕ್ಕೊಂದು ಬೆಡಗು. ಕರುಣ ವೀರ ರಸಗಳು ರಾಮ ಗಾಣಿಗರಿಗೆ ಹೇಳಿ ಮಾಡಿಸಿದವೋ ಎನ್ನುವಂತಿದ್ದವು. ಅಂತಹ ಪಾತ್ರಧಾರಿಗಳಿಲ್ಲದೆ ರುಕ್ಮಾಂಗದ ಚರಿತೆ, ಅತಿಕಾಯ ಕಾಳಗ, ಇಂದ್ರಕೀಲಕ, ಭೀಷ್ಮ ವಿಜಯ, ಕರ್ಣಾರ್ಜುನ ಕಾಳಗ ಇಂಥವುಗಳೆಲ್ಲ ಮೂಲೆಗೆ ಸರಿದಿವೆ ಎನ್ನುತ್ತಾರೆ.

ಕಾಲಗತಿಗೆ ಅನುಸರಿಸಿ ಬರುವ ರಾಗಗಳ ಬಳಕೆಯಲ್ಲಿರುವ ಪ್ರಸಂಗಗಳು ನಾವಡರಿಗೆ ಬಲು ಮೆಚ್ಚು. ಕಾಂಬೋಧಿ, ತೋಡಿ, ಮಧ್ಯಮಾವತಿ, ರೇಗುಪ್ತಿ, ಸಾವೇರಿಮೋಹನ ಈ ರಾಗಗಳನ್ನು ಇಷ್ಟಪಡುವ ರಾಮಚಂದ್ರ ನಾವಡರು ಅವುಗಳ ಸ್ವರದ ಸ್ಥಿರತೆಯನ್ನು ಮೆಚ್ಚುತ್ತಾರೆ, ಹಳೆಯ ಪ್ರಸಂಗಗಳಾದ ಪಂಚವಟಿ, ರತ್ನಾವತಿ ಕಲ್ಯಾಣ, ಕರ್ಣಾರ್ಜುನ ಕಾಳಗ ಮುಂತಾದವುಗಳನ್ನು ಹಾಡುವಾಗ ಹಾಡುವವನಿಗೂ ಕುಣಿಯುವವನಿಗೂ, ಕೇಳಿದವನಿಗೂ ಅಮಿತವಾದ ಆನಂದ ಉಂಟಾಗಬಲ್ಲದು ಎನ್ನುತ್ತಾರೆ. ರಾಮಾಯಣದ ಪ್ರಸಂಗಗಳನ್ನು ಜನರು ಪಕ್ಕನೆ ಅರ್ಥಮಾಡಿಕೊಳ್ಳುತ್ತಾರೆ ಎನ್ನುವ ನಾವಡರಿಗೆ ಭಕ್ತಿರಸ ಭರಿತವಾದ ಪ್ರಸಂಗಗಳು ಮನಸ್ಸಿಗೆ ಒಂದು ನೆಮ್ಮದಿಯನ್ನು ತರುತ್ತವೆ ಎಂಬ ಭಾವನೆ. ಇದರಿಂದಲೇ 'ಕಲೆಗಾಗಿ ಕಲೆ ಅಲ್ಲ' ಎಂಬುದೇ ನಾವಡರ ನಂಬಿಕೆ.

ಪ್ರಶ್ನೆಯನ್ನು ಇನ್ನೊಂದೆಡೆಗೆ ಹರಿಯಿಸಿ, ಇವರ ಮಗ ಕಾಳಿಂಗ ನಾವಡರ ಯಶಸ್ಸಿನ ಹಿನ್ನೆಲೆಯಲ್ಲಿ ಇವರ ಪಾತ್ರವೇನು ಎಂದು ಕೇಳಿದರೆ, 'ಭಾಗವತನಾಗುವ ಚೇತನ ಅವನಲ್ಲಿರುವ ಕಾರಣ ಯಶಸ್ವಿ ಆದ' ಇಂತ ಪ್ರತಿಭೆ ಅವನಿಗೆ ಇದೆ ಎಂಬುದು ಅವನ ಚಿಕ್ಕಂದಿನಿಂದಲೇ ನಾನು ಗಮನಿಸಿದವನು. ಆಸಕ್ತಿಯನ್ನು ಬೆಳೆಸಿಕೊಳ್ಳಲು ಅನುವು ಮಾಡಿಕೊಟ್ಟು, ಪ್ರೋತ್ಸಾಹಿಸಿ ತಿದ್ದುತ್ತಲಿದ್ದೇನೆ. ಎಲ್ಲಕ್ಕಿಂತ ಅವನಿಗೆ ಶ್ರದ್ಧೆ, ನಿಷ್ಠೆ, ಕಲೆಯ ಬಗೆಗೆ ಪ್ರೀತಿ ಇದೆ. ಆತ ಬರೆದ ಪ್ರಸಂಗಗಳ ಬಗೆಗೆ ಪೂರ್ಣ ಮಾಹಿತಿ ನನಗಿಲ್ಲವಾದರೂ ಮಾನವೀಯ ಮೌಲ್ಯಗಳಿಗೆ ಹೆಚ್ಚು ಒತ್ತು ಇರುವುದರಿಂದ ಕಲಾರಸಿಕರನ್ನು ನೇರವಾಗಿ ತಾಕುವ ಶಕ್ತಿ ಇದೆ, ಎಂದು ಕೇಳಿದ್ದೇನೆ. ಹಾಗಾಗಿ ಯಶಸ್ಸು ಲಭಿಸುತ್ತಿದೆ ಎನಿಸುತ್ತದೆ. ಈ ದಿಶೆಯಲ್ಲಿ ಆತ ಇನ್ನಷ್ಟು ಸಾಗಬೇಕು. ಸಾರ್ಥಕ ಕಾರ್ಯ ಮಾಡಬೇಕು ಎಂದರು.

ಮಲೆನಾಡಿನಲ್ಲಿ ಹಾಗೂ ಕರಾವಳಿಯಲ್ಲಿ ಹಿಂದೆ ಐಗಳ ಮಠದ ವಿದ್ಯಾಭ್ಯಾಸದ ದಿನಗಳಲ್ಲಿ ನವರಾತ್ರಿ ಸಮಯದ 'ಹೂವಿನ ಕೋಲು' ಕೊಂಡುಹೋಗುತ್ತಿರುವುದರ ಸ್ಫೂರ್ತಿಯ ಹಿನ್ನೆಲೆಯಲ್ಲಿ ಯಕ್ಷಗಾನ ರೂಪುಗೊಂಡಿರಬೇಕೆಂಬ ಅನುಮಾನವಿರುವ ನಾವಡರು ಬಾಯಿಂದ ಬಾಯಿಗೆ ಬಂದ ಈ ಕಲೆಯ ಉಗಮದ ಬಗ್ಗೆ ಇಂತಹದೇ ನಿರ್ದಿಷ್ಟ ಪುರಾವೆಗಳನ್ನು ಒದಗಿಸುವುದು ಕಷ್ಟ ಎನ್ನುತ್ತಾರೆ. ಆದರೆ ಜ್ಞಾನಶಕ್ತಿ ಹೆಚ್ಚಿಸಲು,

ವಿವೇಕ ಪೂರ್ಣ ಮಾರ್ಗದರ್ಶನ ಮಾಡಲು ಭಾರತ ರಾಮಾಯಣ, ಭಾಗವತಗಳ ಸದಸದ್ ವಿವೇಕಗಳನ್ನು ಸಾಮಾನ್ಯರಿಗೆ ಉಣಬಡಿಸುವಲ್ಲಿ ಈ ಕಲೆಯ ಸಾಫಲ್ಯ ಇದೆ ಎಂಬ ನಂಬಿಕೆ ಇಟ್ಟುಕೊಂಡಿದ್ದಾರೆ. ಈ ಸಾರ್ಥಕ ಕಲಾ ಪರಂಪರೆಯ ಉದ್ದೇಶ ಕೇವಲ ಮನರಂಜನೆಗಷ್ಟೇ ಸೀಮಿತವಲ್ಲ, ಜೀವನ ಮೌಲ್ಯದ ನಿರೂಪಣೆ ಇದರಿಂದ ನಿರ್ಧಾರವಾಗುತ್ತದೆ ಎಂಬುದು ನಾವಡರ ಅನಿಸಿಕೆ.

ಡಾ॥ ಶಿವರಾಮ ಕಾರಂತರ ಬಗ್ಗೆ ಅಪಾರ ಗೌರವ ಉಳ್ಳ ಶ್ರೀ ನಾವಡರು "ಅವರ ಪ್ರತಿಭಾಪೂರ್ಣ ಶ್ರಮದಾಯಕ ಕಾರ್ಯದಿಂದ ಮೂಲೆಗುಂಪಾಗಬೇಕಾಗಿದ್ದ ಈ ಯಕ್ಷಗಾನ ಕಲೆ ಇಂದು ಅಂತರರಾಷ್ಟ್ರೀಯ ಮಟ್ಟಕ್ಕೆ ಏರಿದೆ. ಈ ಕಲಾಪ್ರಕಾರಕ್ಕೊಂದು ಹೊಸ ಆಯಾಮ ದೊರಕಿಸಿಕೊಟ್ಟ ಕಾರಂತರು ಅದರ ನಾನಾ ಸಾಧ್ಯತೆಗಳ ಬಗ್ಗೆ ಪ್ರಯೋಗಿಸಿದ್ದಾರೆ. ಅವರ ಸಂಶೋಧನಾ ಗೋಷ್ಠಿಗಳಿಂದಾಗಿ ರಾಗನಿರ್ದಿಷ್ಟತೆಯ ಬಗ್ಗೆ, ಪದ್ಯಗಳ ಹಾಡುವಿಕೆಯಲ್ಲಿ ಭಾವಾರ್ಥಗಳ ಸ್ಫುರಿಸುವಿಕೆಯ ಬಗ್ಗೆ ತನಗೆ ಹೆಚ್ಚಿನ ವಿಚಾರ ಹೊಳೆಯಲು ಸಾಧ್ಯವಾಯಿತು" ಎಂದು ತುಂಬು ಹೃದಯದಿಂದ ನುಡಿಯುತ್ತಾರೆ.

ಯಕ್ಷಗಾನ ರಂಗಭೂಮಿಯ ಭವಿಷ್ಯದ ಬಗ್ಗೆ ಅವರ ಗಮನ ಸೆಳೆದಾಗ ಅವರ ಉತ್ತರ – ನಾನು ಭವಿಷ್ಯಕಾರನಲ್ಲ ನೋಡಿ, ಎಲ್ಲವೂ ಕಲಾವಿದರನ್ನು ಕಲಾಸಕ್ತರನ್ನು ಹೊಂದಿಕೊಂಡಿದೆ. ರೂಪ ಕಾಪಾಡಿಕೊಂಡು ಹೋಗುವುದು ವಿರೂಪಗೊಳಿಸುವುದು ಎರಡೂ ಅವರ ಕೈಯಲ್ಲಿದೆ. ಮುಖ್ಯ ವಿಚಾರವೆಂದರೆ – ಕಲೆಯ ಕುರಿತು ವಿನೀತಭಾವ, ಶ್ರದ್ಧೆ, ಅರಿವು ಅಗತ್ಯ, ರಂಗಪ್ರಜ್ಞೆ, ನಿರಂತರ ಅಭ್ಯಾಸ, ಯೋಗ್ಯ ಸಂಘಟನೆ ಇವೆಲ್ಲದರಿಂದ ಕಲೆಯ ಅಭಿವೃದ್ಧಿಯಾಗುತ್ತದೆ. ಈ ಕಾರ್ಯದಲ್ಲಿ ತೊಡಗುವವರ ಸಾಮರ್ಥ್ಯ ಜಾಣ್ಮೆ, ಯೋಗ್ಯತೆಗಳನ್ನೇ ಆಧರಿಸಿದೆ ಎಲ್ಲ ವಿಚಾರ.

ಎಳೆಯ ಕಲಾವಿದರಿಗೆ ಅವರು ಹೇಳುವ ಕಿವಿಮಾತು ಕಲೆಯ ಬಗೆಗೆ ಮಮತೆ, ಗೌರವ ಬೆಳೆಸಿಕೊಳ್ಳಿ, ಬರೇ ಉತ್ಸಾಹವೇ ಬಂಡವಾಳವಾಗಿದ್ದರೆ ಸಾಲದು. ಪರಿಶ್ರಮ, ವಿನೀತಭಾವ, ನಿರಂತರ ಸಾಧನೆ ಇದನ್ನು ರೂಢಿಸಿಕೊಳ್ಳಬೇಕು.

ತಮ್ಮ ನಾದ ಮಾಧುರ್ಯದಿಂದ, ಅನುಭವ ಶ್ರೀಮಂತಿಕೆಯಿಂದ ಶುದ್ಧ ಯಕ್ಷಗಾನ ಶೈಲಿಯ ಹಾಡುವಿಕೆಯಿಂದ ಕನ್ನಡ ಜಿಲ್ಲೆಗಳ ಕಲಾಪ್ರೇಮಿಗಳ ಗಮನ ಸೆಳೆದ ಶ್ರೀ ನಾವಡರಂಥವರನ್ನು ರಾಜ್ಯ ಸಂಗೀತ ನಾಟಕ ಅಕಾಡೆಮಿ ಮಾಸಾಶನವಿತ್ತು ಗೌರವಿಸಿರುವುದು, ಆಕಾಶವಾಣಿಯವರು ಅವರಿಂದ ಅಪೂರ್ವ ರಾಗಗಳನ್ನು ಹಾಡಿಸಿ ಪ್ರಸಾರ ಮಾಡುತ್ತಿರುವುದು ಸಮಾಧಾನದ ಸಂಗತಿ.

■

ಯಕ್ಷಗಾನ ಗಾನಗಂಧರ್ವ

ದಾಮೋದರ ಮಂಡೆಚ್ಚ

ಯಕ್ಷಗಾನದಲ್ಲಿ ಭಾಗವತನ ಪಾತ್ರ ಬಹಳ ಹಿರಿದು. ಆತ ರಂಗ ತಂತ್ರಜ್ಞಾನವುಳ್ಳವನು. ಹಾಡುವಿಕೆಯ ಮರ್ಮಗಳ ಅರಿವುಳ್ಳವನು. ಭಾವ ಪ್ರಕಾಶಕ್ಕೆ ಅಗತ್ಯವಾಗುವ ಸನ್ನಿವೇಶ ನಿರ್ಮಾಣದ ಶಕ್ತಿ ಉಳ್ಳವನೂ ಆಗಿರುತ್ತಾನೆ. ಈ ಅಂಶಗಳೆಲ್ಲ ಏಕತ್ರ ಸಂಧಿಸಿದ್ದರೆ ಮಾತ್ರ ಯಶಸ್ಸು ಸಾಧ್ಯ. ಇದೀಗ ನಮ್ಮಿಂದ ದೂರವಾಗಿರುವ ಶ್ರೀ ದಾಮೋದರ ಮಂಡೆಚ್ಚರು ಈ ಮೂರು ಅಂಶಗಳಲ್ಲೂ ಸಿದ್ಧಿಯನ್ನು ಪಡೆದ ಪ್ರತಿಭಾವಂತ ಕಲಾವಿದರಾಗಿದ್ದರು. ಮಂಡೆಚ್ಚರ ಗಾನಸುಧೆಗೆ ಮರುಳಾಗದವರೇ ಅಪೂರ್ವ ಎನ್ನಬಹುದು. ಕರ್ನಾಟಕ ಶಾಸ್ತ್ರೀಯ ಸಂಗೀತದ ಗಾನಸುಧೆಗೆ ಮರುಳಾಗದವರೇ ಅಪೂರ್ವ ಎನ್ನಬಹುದು. ಕರ್ನಾಟಕ ಶಾಸ್ತ್ರೀಯ ಸಂಗೀತದ ವಿದ್ವಾಂಸರಾದ ಅವರು ಯಕ್ಷಗಾನ ಸಂಗೀತಕ್ಕೆ ತಮ್ಮದೇ ಆದ ಗಾನ ಶೈಲಿಯೊಂದನ್ನು ಕೊಡುಗೆಯಾಗಿ ನೀಡಿದ್ದಾರೆ.

ಐವತ್ತೆಂಟು ವರ್ಷ ವಯಸ್ಸಿನ ಮಂಡೆಚ್ಚರಿಗೆ ಯಕ್ಷಗಾನ ರಂಗದಲ್ಲಿ ಮೂವತ್ತು ವರ್ಷಗಳಿಗೂ ಹೆಚ್ಚು ಕಾಲದ ಅನುಭವವಿತ್ತು. ಮಂಗಳೂರಿನ 'ಕರ್ನಾಟಕ ಯಕ್ಷಗಾನ ಸಭಾ'ದಲ್ಲಿ ಅವರು ಅವಿರತವಾಗಿ ಸೇವೆ ಸಲ್ಲಿಸುತ್ತಿದ್ದರು. ಜಾನಪದ ಹಾಗೂ ಯಕ್ಷಗಾನ

ಅಕಾಡೆಮಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. ಸಹಕಲಾವಿದರಿಗೆ ಅತ್ಯಂತ ಆತ್ಮೀಯ ಹಿರಿಯಣ್ಣನಂತೆ ನಡೆದುಕೊಳ್ಳುತ್ತಿದ್ದ ಅವರು ಎಲ್ಲರಿಗೂ ಬೇಕಾದವರಾಗಿದ್ದರು. ವಿಶೇಷತಃ ಪ್ರೀತಿಯಿಂದ ಕೂಡಿದ ಸತ್ಕಾರ ಮನೋಭಾವ, ಇನ್ನೊಬ್ಬನ ಕಲಾವಂತಿಕೆಯ ಬಗ್ಗೆ ಗೌರವ, ಹೊಸತನ್ನು ತಿಳಿದುಕೊಳ್ಳಬೇಕೆಂಬ ಹಂಬಲ, ಮೆತ್ತಗಿನ ನಡೆನುಡಿ ಇವರಿಗೊಂದು ಗೌರವದ ಸ್ಥಾನವನ್ನು ತಂದು ಕೊಟ್ಟಿದ್ದವು. ಅಸಂಖ್ಯ ತಾಳ ಮದ್ದಳೆಗಳಲ್ಲಿ ಬಯಲಾಟಗಳಲ್ಲಿ ಹಾಡಿರುವ ಅವರು ತಮ್ಮ ಆಕರ್ಷಕ ಕಂಠದಿಂದ ಸಹಸ್ರಾರು ಅಭಿಮಾನಿಗಳನ್ನು ಗಳಿಸಿಕೊಂಡಿದ್ದರು.

ಬೆಳ್ಳಾರೆ ಸಮೀಪದ ನಿಡ್ಮಾರಿನವರಾದ ಇವರು ಬಾಲ್ಯದಿಂದಲೂ ಸಂಗೀತದ ಗುಂಗನ್ನು ಹೊಂದಿದ್ದರು. ಉಪ್ಪಿನಂಗಡಿಯಲ್ಲಿದ್ದ ಕಾಂಚನ ವೆಂಕಟ ಸುಬ್ರಹ್ಮಣ್ಯ ಅಯ್ಯರ್ ಅವರಲ್ಲಿ ಆರು ವರ್ಷಗಳ ಕಾಲ ಶಿಷ್ಯ ವೃತ್ತಿಯನ್ನು ಮಾಡಿ ಸಂಗೀತದಲ್ಲಿ ವಿದ್ವಾಂಸರಾದರು. ಹವ್ಯಾಸಿಯಾಗಿ ಒಂದೆರಡು ತಂಡಗಳಲ್ಲಿ ಭಾಗವತಿಕೆಯನ್ನು ಮಾಡುತ್ತಿದ್ದ ಇವರು 1954 ರಲ್ಲಿ ಕಲ್ಲಾಡಿ ಶೆಟ್ಟರು ಪ್ರಾರಂಭಿಸಿದ ಕುಂಡಾವು ಮೇಳದ ಭಾಗವತರಾದರು. ಮೊದಲ ವರ್ಷಗಳಲ್ಲಿ ಮಠದಡ್ಕ ರಾಮಕೃಷ್ಣ ಭಟ್ಟರು ಇವರಿಗೆ ಯಕ್ಷಗಾನ ಭಾಗವತಿಕೆಯಲ್ಲಿ ಗುರುವಿನಂತೆ ಮಾರ್ಗದರ್ಶನ ಮಾಡಿದರು. ದಕ್ಷಿಣ ಕನ್ನಡ ಜಿಲ್ಲೆಯ ಜನಾದರಣೀಯ ಭಾಗವತ ದಿವಂಗತ ಬೆಳಿಂಜೆ ಮೈಂದಪ್ಪ ರೈಗಳ ಸ್ಥಾನವನ್ನು ಅತ್ಯಲ್ಪ ಕಾಲದಲ್ಲೇ ಶ್ರೀ ಮಂಡೆಚ್ಚರು ತಮ್ಮ ಗಾನ ಸುಧೆಯಿಂದ ತುಂಬಿ ಕೊಟ್ಟರು. ಮುಂದೆ ಸಂಗೀತದ ಹಿನ್ನೆಲೆ ಉಳ್ಳ ಸ್ವಂತ ಶೈಲಿಯೊಂದನ್ನು ಕಂಡುಕೊಂಡ ಶ್ರೀಯುತರು ಆ ಛಾಪನ್ನು ಸ್ಥಿರಪಡಿಸಿದರು. ಪೌರಾಣಿಕ ಪ್ರಸಂಗಗಳನ್ನು ಸನ್ನಿವೇಶಗಳಿಗೆ ಸರಿಹೊಂದಿಸಿ ಸೊಗಸಾಗಿ ಹಾಡಬಲ್ಲ ಕಲೆಗಾರಿಕೆ ಮಂಡೆಚ್ಚರಿಗೆ ಕರಗತವಾಗಿತ್ತು.

ಶಾಸ್ತ್ರೀಯ ಪರಂಪರೆಯ ಬಗ್ಗೆ ಮಂಡೆಚ್ಚರಿಗೆ ಅಪಾರ ಅಭಿಮಾನ. ಭಾಗವತಿಕೆಗೆ ಶಾಸ್ತ್ರೀಯ ಸಂಗೀತದ ಹಿನ್ನೆಲೆ ತೀರಾ ಅನಿವಾರ್ಯವೇಂದೇ ಭಾವಿಸಿದ ಮಂಡೆಚ್ಚರು ದೇಶಕಾಲಗಳ ಸಂಗೀತ ಆವಿಷ್ಕಾರವನ್ನು ಪ್ರದರ್ಶನದಲ್ಲಿ ಅಳವಡಿಸಿಕೊಳ್ಳುವುದು ಅಗತ್ಯ ಎಂಬ ಅಭಿಪ್ರಾಯ ಉಳ್ಳವರಾಗಿದ್ದರು. ತಮ್ಮ ನಾದ ಮಾಧುರ್ಯದ ಜೊತೆಗೆ ಭಾವ ಪ್ರಕಾಶಕ್ಕೆ ಪ್ರಾಶಸ್ತ್ಯ ಕೊಡುತ್ತಿದ್ದರು. ಪಂಚವಟಿ, ವಾಲಿಸುಗ್ರೀವರ ಕಾಳಗ, ಪಟ್ಟಾಭಿಷೇಕ, ಶ್ರೀಕೃಷ್ಣ ಬಾಲಲೀಲೆ, ಚೂಡಾಮಣಿ, ಅಂಗದ ಸಂಧಾನ, ನಳ ದಮಯಂತಿ, ದ್ರೌಪದಿ ವಸ್ತ್ರಾಪಹರಣ ಮುಂತಾದ ಪೌರಾಣಿಕ ಪ್ರಸಂಗಗಳು ಇವರಿಂದ ಕಳೆಕಟ್ಟಿದವು. ರಂಗಸ್ಥಳದ ಬಗ್ಗೂ ಶ್ರೀ ಮಂಡೆಚ್ಚರಿಗೆ ಅಪಾರ ಕಾಳಜಿ ಇರುತ್ತಿತ್ತು. ವೇಷಧಾರಿಯನ್ನು ಕುಣಿಸುವಲ್ಲಿ ಸಮಯೋಚಿತ ಪ್ರಜ್ಞೆಯನ್ನು ವ್ಯಕ್ತಪಡಿಸುತ್ತಿದ್ದರು. ಈಚಿನ ದಿನಗಳಲ್ಲಿ ಇವರ ಕಂಠದಿಂದ ಮೊಳಗಿ ಬಂದ ತುಳು ಪ್ರಸಂಗಗಳಾದ ಕೋಟಿಚೆನ್ನಯ್ಯ, ತುಳನಾಡಸಿರಿ, ಸೊರ್ಕುದ

ಸಿರಿಗೆಂಡೆ, ದಳವಾಯಿ ದುಗ್ಗಣ ಮುಂತಾದವುಗಳು ಅಪಾರ ಜನಪ್ರಿಯತೆಯನ್ನು ಗಳಿಸಿದ್ದವು.

ಯಕ್ಷಗಾನದ ಭಾಗವತರಾಗಿದ್ದ ದಾಮೋದರ ಮಂಡೆಚ್ಚರು ಹರಿದಾಸರಾಗಿಯೂ, ಸಂಗೀತಗಾರರಾಗಿಯೂ ಖ್ಯಾತಿ ಪಡೆದವರು. ತಮ್ಮ ತುಂಬು ಕಂಠದಿಂದ ಮನದುಂಬುವಂತೆ ಹಾಡಿ ಹರಿನಾಮ ಸಂಕೀರ್ತನೆಗೆ ವಿಶಿಷ್ಟ ಅರ್ಥ ಬರುವಂತೆ ಮಾಡುತ್ತಿದ್ದರು. ಸಂಗೀತ ಕಛೇರಿಯನ್ನೂ ನಡೆಸಿರುವ ಮಂಡೆಚ್ಚರು ಕರ್ನಾಟಕ ಸಂಗೀತದ ಒಳ ಹೊರಗನ್ನು ಬಲ್ಲವರಾಗಿದ್ದರು.

ಮುಂಬಯಿಯಲ್ಲಿ ನಡೆದ ದ್ವಿತೀಯ ಯಕ್ಷಗಾನ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಲು ಅತ್ಯುತ್ಸಾಹಕರಾಗಿಯೇ ತೆರಳಿದ ದಾಮೋದರ ಮಂಡೆಚ್ಚರು ಮತ್ತೆ ಮರಳಿ ಬರಲಿಲ್ಲ. ದಿನಾಂಕ 10-11-1985 ರಂದು ನಡೆದ ವಿಚಾರಗೋಷ್ಠಿಯಲ್ಲಿ ಹಾಡುಗಾರಿಕೆಯ ಮನೋಧರ್ಮದ ಬಗ್ಗೆ ತಮ್ಮ ನಿಜ ಅನುಭವಗಳನ್ನು ಪ್ರಾಮಾಣಿಕವಾಗಿ ಮಂಡಿಸಿದ ಅವರು ಅಂದು ರಾತ್ರಿ ಯಕ್ಷಗಾನದಲ್ಲಿ ಆಸಕ್ತಿಯಿಂದಲೇ ಭಾಗವಹಿಸಿದ್ದರು. ಪ್ರದರ್ಶನ ಮಧ್ಯದಲ್ಲಿ ಹಾಡುವುದು ಅಸಾಧ್ಯವಾಗಿ ರಂಗದ ಬದಿಗೆ ಸರಿದರು. ತುರ್ತು ಚಿಕಿತ್ಸೆಗೆಂದು ಆಸ್ಪತ್ರೆಗೆ ತೆರಳುತ್ತಿರುವಷ್ಟರಲ್ಲೇ ಹೃದಯ ಸ್ತಂಭನದಿಂದ ನಿಧನರಾದರು. ಅವಿವಾಹಿತರಾಗಿದ್ದ ಮಂಡೆಚ್ಚರು ಏಕಾಂತವಾಸಿಯಾಗಿದ್ದರು. ಅಪಾರ ಅಭಿಮಾನಿಗಳನ್ನು, ಆತ್ಮೀಯ ಸಹಕಲಾವಿದರನ್ನು, ಅನೇಕ ಉತ್ತಮ ಸ್ನೇಹಿತರನ್ನು ಅಗಲಿ ದೂರವಾಗಿದ್ದಾರೆ. ಮುಂಬಯಿಯಲ್ಲಂತೂ ಅವರಿಗೆ ಅಭಿಮಾನಿಗಳು ಅಸಂಖ್ಯ.

ಮಂಡೆಚ್ಚರು ಯಕ್ಷಗಾನ ಮೇಳವನ್ನು ಪ್ರವೇಶಿಸಿದ ದಿನಗಳಲ್ಲಿ ಇಂದು ಕಾಣುವಂತೆ ಜನಾಕರ್ಷಣೆ ಇದ್ದಿರಲಿಲ್ಲ, ಮಂಡೆಚ್ಚರಿಗೂ ಈ ರಂಗವೇನು ಸೆಳೆದಿರಲಿಲ್ಲ. ಆದರೆ ದಿ. ಕೆ.ಪಿ. ವೆಂಕಪ್ಪ ಶೆಟ್ಟರ ಸೂಚನೆ, ಒತ್ತಾಸೆಗೆ ಗುರಿಯಾಗಿ ಮೇಳ ಸೇರಿದರು. ಕಲಾಭಿಮಾನಿಗಳ ಆದರ ಹಾಗೂ ಉತ್ತಮ ಪ್ರತಿಕ್ರಿಯೆ ಈ ರಂಗದಲ್ಲಿ ಮುಂದುವರಿಯಲು ಕಾರಣವಾಯಿತು.

ಒಂದೇ ಮೇಳದಲ್ಲಿ ಮುಂದುವರಿದಿದ್ದರಿಂದ ಮೇಳದ ಯಜಮಾನರೊಂದಿಗೆ ಉತ್ತಮ ಸಂಬಂಧ ಉಳಿದ ತೃಪ್ತಿ ಮಂಡೆಚ್ಚರಿಗಿತ್ತು. "ಉತ್ತಮ ಕಲಾವಿದರು ತಾವೇ ತಾಳವನ್ನು ಮುಂದುವರೆಸಿಕೊಂಡು ಹೋಗುತ್ತಾರೆ, ಉಳಿದವರನ್ನು ತಾಳವೇ ಸೆಳೆಯಬೇಕಾಗುತ್ತದೆ", ಎನ್ನುತ್ತಿದ್ದ ಈ ಭಾಗವತರು ಬೇರೆ ಬೇರೆ ಸ್ತರದ ಕಲಾವಿದರನ್ನು ಕುಣಿಸಿ ರಂಜಿಸಿದ್ದಾರೆ. ಕೋಳ್ಯೂರು, ಸಾಮಗ, ಅಳಿಕೆ ರಾಮಯ್ಯೆ, ವೀರಭದ್ರ ನಾಯಕ ಮುಂತಾದವರ ಕುಣಿತ ಇವರಿಗೆ ಸಂತೋಷ ನೀಡಿದೆ. ಇವರುಗಳ ಲಯಗಳು, ಪುರಾಣಗಳ ಸನ್ನಿವೇಶಗಳ ಬಗ್ಗೆ ಅವರಿಗೆ ಪ್ರತಿಭಾ ಪೂರ್ಣವಾದ ಒಳ ನೋಟಗಳಿದ್ದವು. ಇವರು ಸಾಹಿತ್ಯ, ಸಂಗೀತಗಳ ಆಳವಾದ ಅಧ್ಯಯನ, ವಿಮರ್ಶೆಯ ಜ್ಞಾನ, ಖಚಿತ

ಮನೋಧರ್ಮ ಸಂಸ್ಕಾರ ಶ್ರಮಪೂರ್ಣ ಅಭ್ಯಾಸಗಳನ್ನು ಬಹುವಾಗಿ ಶ್ಲಾಘಿಸುತ್ತಾರೆ. ಗೋವಿಂದ ಭಟ್, ವಿಶ್ವನಾಥ ರೈ, ಶಿವರಾಮ ಜೋಗಿ, ಮುಂತಾದ ಪಾತ್ರಧಾರಿಗಳ ಸ್ವಂತಿಕೆ, ಖಚಿತತೆ ಬಗ್ಗೆ ಇವರಲ್ಲಿ ಮೆಚ್ಚುಗೆ ಇತ್ತು.

ಮೂವತ್ತು ವರ್ಷಗಳ ಕಾಲ ಭಾಗವತರಾಗಿದ್ದರೂ ಉಳಿದ ಕೆಲವು ಭಾಗವತರಂತೆ ಮಂಡೆಚ್ಚರು ಪ್ರಸಂಗ ಸೃಷ್ಟಿಗೆ ಇಳಿದಿಲ್ಲ. 'ತಾನು ಕವಿ ಅಲ್ಲ ಭಾಗವತ ಮಾತ್ರ' ಎನ್ನುತ್ತಿದ್ದ ಇವರು ಈಚಿನ ಹಿಮ್ಮೇಳ ವಾದಕರಲ್ಲಿ ಪದ್ಯಾಣ ಶಂಕರನಾರಾಯಣ ಭಟ್, ಕೃಷ್ಣಯ್ಯ ಬಲ್ಲಾಳ್, ರಾಮ ಭಟ್ ಮುಂತಾದವರ ಬಗ್ಗೆ ಬಹು ನಂಬಿಕೆ ಇರಿಸಿಕೊಂಡಿದ್ದರು. ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿ ಯಕ್ಷಗಾನ ರಂಗದ ಬಗ್ಗೆ ಅಕಾಡೆಮಿಯಲ್ಲೂ ಪ್ರತಿನಿಧಿಸುವವರಾಗಿದ್ದು ಜವಾಬ್ದಾರಿ ಉಳ್ಳವರಾಗಿದ್ದು ಈ ಕಾರಣ ಇಂದಿನ ಯಕ್ಷಗಾನ ರಂಗಭೂಮಿಯ ಕುರಿತಿರುವ ಈ ಅವರ ಅಭಿಪ್ರಾಯಕ್ಕೆ ಹೆಚ್ಚಿನ ಬೆಲೆ ಇದೆ. ಅವರು ನೀಡಿದ ಕೊನೆಯ ಸಂದರ್ಶನದಲ್ಲಿನ ಸಂಭಾಷಣೆಗಳ ಕೆಲವು ತುಣುಕು ಈ ಕೆಳಗಿನಂತಿವೆ.

ಪ್ರಶ್ನೆ : ಮೂಲತಃ ಸಂಗೀತ ವಿದ್ವಾಂಸರಾದ ನೀವು ಯಕ್ಷಗಾನ ಸಂಗೀತದ ಬಗ್ಗೆ ಯಾವ ಅಭಿಪ್ರಾಯ ಉಳ್ಳವರಾಗಿದ್ದೀರಿ?

ಉತ್ತರ : ಯಕ್ಷಗಾನ ಸಂಗೀತ ಎಂದರೆ ತಾರಸ್ಥಾಯಿ ಸಂಚಾರವನ್ನು ಒಳಗೊಂಡ ಪೂರ್ಣಸ್ವರಗಳಿಲ್ಲದೆ ರಾಗದ ನಿರ್ಮಾಣಮಾಡಿ ಹಾಡತಕ್ಕ ಒಂದು ಶೈಲಿ, ಈ ಕಾರಣ ಸಂಗೀತವನ್ನು ಹೊಂದಿಕೊಂಡು ಅನುಸರಿಸಿಕೊಂಡಿರುವ ಈ ಯಕ್ಷಗಾನ ಸಂಗೀತ, ಶಾಸ್ತ್ರೀಯ ಚೌಕಟ್ಟನ್ನು ಹೊಂದಿದ ದೇಶೀಯ ಸಂಗೀತವೆಂದೇ ನನ್ನ ಅಭಿಮತ, ನಮ್ಮ ಪ್ರಸಂಗಕಾರರು ಅನೇಕ ರಾಗಗಳ ಹೆಸರುಗಳನ್ನು ಪದ್ಯಗಳ ಯಶಸ್ಸಿಗಾಗಿಯೇ ಬಳಸಿದ್ದಾರೆಯೇ ಹೊರತು ಹೆಚ್ಚಿನವರಿಗೆ ರಾಗದ ಅನುಭವ ಇದ್ದು ಬರೆದಂತಿಲ್ಲ. ಈ ಕಾರಣ ದೇಶ ಕಾಲಗಳ ಸಂಗೀತದ ಆವಿಷ್ಕಾರವನ್ನು ಹೊಂದಿಕೊಳ್ಳುವುದು ಪ್ರದರ್ಶನದಲ್ಲಿ ಅಗತ್ಯ ಎನಿಸುತ್ತದೆ. ಇದರಿಂದ ಭಾಗವತಿಕೆಗೆ ಶಾಸ್ತ್ರೀಯ ಸಂಗೀತದ ಹಿನ್ನೆಲೆ ತೀರಾ ಅನಿವಾರ್ಯ. ಶುದ್ಧ ಕಲ್ಪನೆಯಿಂದ ರಾಗದ ಸ್ಪಷ್ಟತೆಯಿಂದ ಹಾಡುವುದು ಯುಕ್ತವೇ ಹೊರತು ಜನರಿಗೆ ಭ್ರಮೆಯನ್ನು ಉಂಟು ಮಾಡುವುದಕ್ಕೆ ಏನನ್ನೋ ಹಾಡಿದರೆ ಅದು ಯಕ್ಷಗಾನ ಅನ್ನಿಸುವುದಿಲ್ಲ.

ಪ್ರ : ನಿಮ್ಮ ಭಾಗವತಿಕೆ ತೀರಾ ಸಂಗೀತಮಯ ಎಂಬ ಆಪಾದನೆಗೆ ನಿಮ್ಮ ಉತ್ತರ ಏನು?

ಉ : ಇದೆಲ್ಲಾ ಹೆಚ್ಚಾಗಿ ಕೇಳುಗರ ಕಿವಿಯನ್ನು ಹೊಂದಿಕೊಂಡಿರುತ್ತದೆ. ನಾನು ಸಂಗೀತವನ್ನು ಅಭ್ಯಾಸ ಮಾಡಿದವನಾದ್ದರಿಂದ ಸಂಗೀತದ ಛಾಯೆ ಬರುವುದು ಅನಿವಾರ್ಯ. ಆದರೂ ಖಚಿತ ರಾಗ ಜ್ಞಾನ ನನ್ನ ಭಾಗವತಿಕೆಯಲ್ಲಿ ಇದೆ ಎಂಬುದು ಅನೇಕರ ಅಭಿಪ್ರಾಯ. ದಿ॥ ಚೌಡಯ್ಯನವರಂತಹ ಘನ ವಿದ್ವಾಂಸರು ಮೆಚ್ಚಿ ಕೊಂಡಿರುವುದಂತು ನನಗೆ ಸಮಾಧಾನ ತಂದಿದೆ. ನನ್ನ ಭಾಗವತಿಕೆಯನ್ನು ಟೀಕಿಸುವ ಒಂದು ಪಂಗಡವೇ ಇದೆ. ಪ್ರತಿಯೊಬ್ಬ ಕಲಾವಿದನಿಗೂ ಅವನದೇ ಆದ ಸ್ವಂತಿಕೆ ಇರಬೇಕು. ಆ ವಿಚಾರದಲ್ಲಿ ನನಗೆ ತೃಪ್ತಿ ಇದೆ.

ಪ್ರ : ಇಂದಿನ ಯಕ್ಷಗಾನ ರಂಗದ ಬಗ್ಗೆ ನಿಮ್ಮ ಅನಿಸಿಕೆ ಏನು?

ಉ : ಈಚಿನ ದಿನಗಳಲ್ಲಿ ಯಕ್ಷಗಾನ ಅನೇಕ ಬಗೆಯ ಸಂಕೀರ್ಣತೆಗಳನ್ನು ಒಳಗೊಂಡಿದೆ. ತುಳು ಯಕ್ಷಗಾನ, ಪೌರಾಣಿಕ-ಸಾಮಾಜಿಕ ಕನ್ನಡ ಯಕ್ಷಗಾನ, ಹವ್ಯಾಸಿಗಳಿಂದ ನಿರೂಪಿಸಲ್ಪಡುವ ಕಿರು ಪ್ರದರ್ಶನಗಳು ಹೀಗೆ ನಾನಾ ರೂಪಗಳು ಗೋಚರಿಸುತ್ತವೆ. ತುಳು ಯಕ್ಷಗಾನದ ಬಗ್ಗೆ ನನ್ನಲ್ಲಂತೂ ಸ್ವಾಗತವಿದೆ. ಆದರೆ ಕನ್ನಡ ಸಂಸ್ಕೃತ ಶಬ್ದಗಳ ಗುಂಗಿನಲ್ಲಿ ಮೈಮರೆತ ಮನಸ್ಸಿಗೆ ದೊರೆಯುವ ಸಂತೋಷ ತುಳು ಪ್ರಸಂಗದ ಹಾಡುಗಳನ್ನು ಹಾಡುವಾಗ ಬರುವುದು ಅಪೂರ್ವ.

ಪ್ರ : ತೆಂಕು ಹಾಗು ಬಡಗುತಿಟ್ಟಿನ ಹಾಡುಗಾರಿಕೆಯ ಸಮನ್ವಯ ಸಾಧ್ಯವೆ?

ಉ : ಅನೇಕ ಪ್ರದರ್ಶನಗಳಲ್ಲಿ ತೆಂಕು ಹಾಗು ಬಡಗಿನ ಕಲಾವಿದರು. ಸಮ್ಮಿಶ್ರವಾಗುತ್ತಿರುವ ಇಂದಿನ ದಿನಗಳಲ್ಲಿ ಈ ಬಗೆಯ ಪ್ರಶ್ನೆ ಉದ್ಭವವಾಗುವುವು ಸಹಜ. ಮೂಲತಃ ತೆಂಕು ಹಾಗು ಬಡಗಿನ ಹಾಡುಗಾರಿಕೆಯಲ್ಲಿ ಅಂತಹ ವ್ಯತ್ಯಾಸ ಏನೂ ಇಲ್ಲ. ತೆಂಕಿನಲ್ಲಿ ಬಡ್ತಿಗೆ ಎಂಬ ಒಂದು ನಾಟ್ಯ ಪ್ರಭೇದಕ್ಕೆ ಹೊಂದಿದ ಒಂದು ತಾಳದ ವಿನ್ಯಾಸವಿದೆ. ಬಡಗಿನಲ್ಲಿ ಪದ ಪೂರ್ಣವಾಗುವ ಮೊದಲೇ ಮುಕ್ತಾಯದ ಒಂದು ವಿನ್ಯಾಸ ಬರುತ್ತದೆ. ಇವೆರಡನ್ನೂ ಸಮನ್ವಯ ಮಾಡಿಕೊಳ್ಳಲು ಹೆಚ್ಚಿನ ಶ್ರಮ ಬೇಕಾಗಿಲ್ಲ. ಆದರೆ ಪ್ರತ್ಯೇಕವಾಗಿರಬೇಕೆಂಬ ಒಂದು ಪೂರ್ವ ನಿಶ್ಚಿತ ಧೋರಣೆ ಇರುವುದರಿಂದ ಸಮನ್ವಯ ಅಸಾಧ್ಯ. ಇದನ್ನು ರಂಗದ ಒಳಗೆ ಇರುವವರಿಂದ ಮಾಡಲಾಗುವುದಿಲ್ಲ. ಹೊರಗಿನಿಂದ ಪ್ರೋತ್ಸಾಹ ದೊರೆತರೆ ಬದಲಾವಣೆ ಬರಬಹುದು.

ಪ್ರ : ಯಕ್ಷಗಾನ ರಂಗದಲ್ಲಿ ಸುಧಾರಣೆಯ ಬಗ್ಗೆ ಹಾಗು ಅದರಲ್ಲಿ ಹವ್ಯಾಸಿಗಳ

ಪಾತ್ರದ ಬಗ್ಗೆ ನಿಮ್ಮ ಅನಿಸಿಕೆ ಏನು?

ಉ : ಇಂದು ಯಕ್ಷಗಾನ ಬಹಳಷ್ಟು ಸುಧಾರಣೆಯಾಗಬೇಕಾಗಿದೆ. ಆರೋಗ್ಯಕರ ಸುಧಾರಣೆ ಎಲ್ಲಾ ಕಲೆಗೂ ಆಗಾಗ ಆಗಬೇಕಾದ್ದು ಅನಿವಾರ್ಯ. ಆದರೆ ಹವ್ಯಾಸಿಗಳಿಂದಲೇ ಸುಧಾರಣೆ ನಿರೀಕ್ಷಿಸುವಂತಿಲ್ಲ. ಯಕ್ಷಗಾನ ರಂಗವು ಕೆಟ್ಟು ಹೋಗುವಲ್ಲಿ ಹವ್ಯಾಸಿಗಳ ಪಾತ್ರವೂ ಇದೆ. ಇದಕ್ಕೆ ಕಾರಣ ಆಟ ಕೂಟಗಳಲ್ಲಿ ತಿಳಿಯದೇ ಭಾಗವಹಿಸುವುದೇ ಆಗಿದೆ.

ಪ್ರ : ಜನಪದ ಯಕ್ಷಗಾನ ಅಕಾಡೆಮಿ ಸದಸ್ಯರಾಗಿ ಅಕಾಡೆಮಿಯ ಕಾರ್ಯ ನಿರ್ವಹಣೆಯ ಬಗ್ಗೆ ನಿಮ್ಮ ಅನಿಸಿಕೆ ಏನು?

ಉ : ಅಕಾಡೆಮಿಯಿಂದ ಯಕ್ಷಗಾನಕ್ಕೆ ಆಗಬೇಕಾದ್ದು ಬಹಳವಿದೆ. ಆದರೆ ಆ ಅಕಾಡೆಮಿಯಲ್ಲಿ ಹೆಚ್ಚಿನ ಹಣ, ಗಮನಗಳು ಜಾನಪದರಂಗಕ್ಕೆ ಹೋಗುವುದರಿಂದ ನಿರೀಕ್ಷಿಸಿದ ಫಲಿತಾಂಶ ಬರುತ್ತಿಲ್ಲ. ಇದಕ್ಕೆ ಯಕ್ಷಗಾನಕ್ಕೇ ಸ್ವಾಯತ್ತವಾದ ಅಕಾಡೆಮಿಯೊಂದರ ಅಗತ್ಯವಿದೆ. ಈಗಾಗಲೇ ಮಾಸಾಶನ, ಪ್ರಶಸ್ತಿ ಪ್ರದಾನ, ಕಾರ್ಯಶಿಬಿರ ಮುಂತಾದವುಗಳನ್ನು ಅಕಾಡೆಮಿಯ ಆಶ್ರಯದಲ್ಲಿ ನಡೆಸಲಾಗಿದೆ. ಒಂದು ಯಕ್ಷಗಾನಕ್ಕೆ ಸಂಬಂಧಿಸಿದ ವಸ್ತು ಸಂಗ್ರಹಾಲಯ, ಪುಸ್ತಕ ಭಂಡಾರ ಇತ್ಯಾದಿಗಳನ್ನು ಪ್ರಾರಂಭಿಸಬೇಕೆಂದಿದ್ದೇವೆ. ಅಶಕ್ತ ಕಲಾವಿದರಿಗೆ ಹೆಚ್ಚು ಆರ್ಥಿಕ ಸಹಾಯ, ಕಲಾವಿದರ ಸಂಘಟನೆ ಇವೆಲ್ಲಾ ಆಗಬೇಕಾದ ಕಾರ್ಯಗಳು ಆಗಿರುವ ಕೆಲಸಗಳ ಬಗ್ಗೆ ನನಗೇನೂ ತೃಪ್ತಿ ಇಲ್ಲ. ಇನ್ನೂ ಹೆಚ್ಚಿನ ಕಾರ್ಯ ಅಕಾಡೆಮಿಯಿಂದ ಆಗಬೇಕಾಗಿತ್ತು. ಆದರೆ ಎಲ್ಲಕ್ಕೂ ಸರಕಾರವನ್ನೇ ಆಶ್ರಯಿಸಬೇಕಾದ ಅಕಾಡೆಮಿಗೆ ಸಕಾಲಿಕ ಆರ್ಥಿಕ ನೆರವೇ ಬಹು ದೊಡ್ಡ ತೊಂದರೆಯಾಗಿದೆ.

ಹೀಗೆ ಯಕ್ಷಗಾನ ರಂಗದ ಬಗ್ಗೆ ತಮ್ಮದೇ ಆದ ಕೆಲವು ಅಭಿಪ್ರಾಯಗಳನ್ನು ಇರಿಸಿಕೊಂಡಿದ್ದ ಮಂಡೆಚ್ಚರು ತರುಣ ಕಲಾವಿದರ ಬಗ್ಗೆ ಹೆಚ್ಚಿನ ಆಸೆಯನ್ನು ಹೊಂದಿದ್ದರು. ತರುಣ ಕಲಾವಿದರಲ್ಲಿ ಅವರ ಮನವಿ ಎಂದರೆ "ಪುರಾಣದ ಅಭ್ಯಾಸ, ಸಂಗೀತದ ಹಿನ್ನೆಲೆ, ತಾಳ ಲಯಗಳ ಪರಿಜ್ಞಾನವುಳ್ಳ ರಂಗತಂತ್ರಜ್ಞಾನ – ಇವುಗಳೆಲ್ಲದರ ಬಗ್ಗೆ ಆಸಕ್ತರಾಗಬೇಕೆಂಬುದು" ಆಗಿತ್ತು.

■

ಕಂಚಿನ ಕಂಠದ

ಕಡತೋಕ ಮಂಜುನಾಥ ಭಾಗವತ

ಯಾವೊಂದು ಕಲೆಯನ್ನಾದರೂ ಪ್ರತ್ಯೇಕಿಸಿ ಒಂದನ್ನು ಇನ್ನೊಂದರಿಂದ ದೂರ ಇಟ್ಟು, ಒಂದರ ಮಾಪನದಿಂದ ಇನ್ನೊಂದನ್ನು ಅಳೆಯ ಹೊರಡುವುದಾಗಲಿ ವಿಮರ್ಶಿಸುವುದಾಗಲಿ ಸರಿಯಲ್ಲ. ಮೂಲತಃ ಒಂದೇ ಕಲೆಯಾದ ಯಕ್ಷಗಾನ ತನ್ನ ಭೌಗೋಳಿಕ ಕಾರಣದಿಂದಾಗಿ, ನೆರೆನಾಡ ಕಲಾ ಪ್ರಕಾರದ ಪ್ರಭಾವದಿಂದಾಗಿ ತೆಂಕುತಿಟ್ಟು, ಬಡಗುತಿಟ್ಟೆಂಬ ವಿಭಜನೆಗೆ ಕಾರಣವಾಯಿತು. ಈ ವಿಭಜನೆ ಕೇವಲ ವಿಭಜನೆಯ ಮಟ್ಟದಲ್ಲೇ ಉಳಿಯದೇ ಕಲಾಪ್ರಿಯರ ಅತ್ಯಭಿಮಾನದಿಂದಾಗಿ ಪರಸ್ಪರ ದೋಷಾರೋಪಣೆಗೂ ಕಾರಣವಾದದ್ದುಂಟು, ಆದರೆ ಕಾಲ ಸಂದಂತೆ ಎರಡು ತಿಟ್ಟಿನವರೂ ಹತ್ತಿರ ಬಂದು ಪರಸ್ಪರ ಒಳ್ಳೆಯ ಅಂಶಗಳನ್ನು ಹೀರಿಕೊಂಡು ಕಲೆಯನ್ನು ಮುನ್ನಡೆಸುತ್ತಿರುವುದನ್ನು ಇಂದು ಕಾಣಬಹುದು. ಈ ಬೆಳವಣಿಗೆಯಲ್ಲಿ ಕೆಲವು ಕಲಾವಿದರ ಪಾತ್ರ ಹಿರಿದಾದುದು. ಇಂತಹವರಲ್ಲಿ ಉತ್ತರ ಕನ್ನಡದ ಭಾಗವತ ಮನೆತನದಲ್ಲಿ ಜನಿಸಿ ತೆಂಕು ಭಾಗವತರಾಗಿ ಪ್ರಖ್ಯಾತಿಗೆ ಬಂದ ಕಡತೋಕ ಮಂಜುನಾಥ ಭಾಗವತರು ಮುಖ್ಯರು.

ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲೂಕಿನ ಕಡತೋಕದ ಶ್ರೀ ಶಂಭು ಭಾಗವತರು 40–50 ವರ್ಷಗಳ ಕೆಳಗೆ ತಮ್ಮ ಭಾಗವತಿಕೆಯಿಂದ ಜನಮನವನ್ನು ಸೂರೆಗೊಂಡಂಥ ಪ್ರಖ್ಯಾತ ಭಾಗವತರು. ಇವರ ಪುತ್ರರಾದ ಶ್ರೀ ಮಂಜುನಾಥ ಭಾಗವತರು ಮೊದಲು ಆ ಕಾಲದ ಆಕರ್ಷಕ ವೃತ್ತಿಯಾದ ಅಧ್ಯಾಪಕ ವೃತ್ತಿಯನ್ನು ಕೈಗೊಂಡರು. ಯಕ್ಷಗಾನ ಭಾಗವತಿಕೆಯನ್ನು ಹವ್ಯಾಸವಾಗಿ ಮಾತ್ರ ಇಟ್ಟುಕೊಂಡಿದ್ದರು. ಈ ಸಮಯದಲ್ಲೇ ಯಕ್ಷಗಾನ ರಂಗಕ್ಕೆ ಮೀಸಲಾದ 'ಯಕ್ಷಗಾನ' ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ಮೊದಲಿಗೆ ಈ ಪತ್ರಿಕೆ ದ್ವೈಮಾಸಿಕವಾಗಿದ್ದು ಆನಂತರ ಮಾಸಪತ್ರಿಕೆಯಾಗಿ ನಾಲ್ಕು ವರ್ಷಗಳವರೆಗೆ ನಡೆಯಿತು.

ಯಕ್ಷಗಾನದ ಬಗ್ಗೆ ಇವರಲ್ಲಿದ್ದ ಅಭಿರುಚಿಯನ್ನು ಗುರುತಿಸಿದ ಕರ್ಕಿ ಪರಮಯ್ಯ ಹಾಸ್ಯಗಾರರು ತಮ್ಮ ಮೇಳಕ್ಕೆ ಭಾಗವತರಾಗಿರಲು ಒಪ್ಪಿಸಿದರು. ಒಂದು ವರ್ಷ ಆ ಮೇಳದಲ್ಲಿದ್ದು ಆನಂತರ ಮೂರೂರು ದೇವರ ಹೆಗಡೆಯವರ ಮೇಳದಲ್ಲಿ ಎರಡು ವರ್ಷ ಕಾಲ ಇದ್ದರು. ಈ ಸಂದರ್ಭದಲ್ಲೇ 'ಭೋಜ ಕಾಳಿದಾಸ' ಎಂಬ ಯಕ್ಷಗಾನ ಪ್ರಸಂಗವನ್ನು ರಚಿಸಿದರು. ಈ ಉತ್ತರ ಕನ್ನಡದ ಹೊಸ ಪ್ರತಿಭೆಯನ್ನು ಗಮನಿಸಿದ ಮೂಲ್ಕಿ ಮೇಳದ ವ್ಯವಸ್ಥಾಪಕರಾದ ಹಾಸ್ಯಗಾರ ನಾರಾಯಣ ಭಟ್ಟರು ಮೂಲ್ಕಿ ಮೇಳಕ್ಕೆ ಕರೆಸಿಕೊಂಡರು. ಐದು ವರ್ಷಗಳ ಕಾಲ ಮೂಲ್ಕಿ ಮೇಳದ ಭಾಗವತರಾಗಿದ್ದು ದಕ್ಷಿಣ ಕನ್ನಡದಲ್ಲೂ ಜನಪ್ರಿಯರಾದರು.

1961 ರಲ್ಲಿ ಕುರಿಯ ವಿಠಲ ಶಾಸ್ತ್ರಿಯವರು ಧರ್ಮಸ್ಥಳ ಮೇಳಕ್ಕೆ ಆಮಂತ್ರಿಸಿದರು. ಅಂದಿನಿಂದ ಇಂದಿನವರೆಗೂ ಧರ್ಮಸ್ಥಳ ಮೇಳದಲ್ಲಿದ್ದು ಯಕ್ಷಗಾನ ಭಾಗವತಿಕೆಯನ್ನು ನಡೆಸುತ್ತಿದ್ದಾರೆ. ಇವರು ಹಲವು ಪ್ರಸಂಗಗಳನ್ನು ರಚಿಸಿದ್ದು, ಅವುಗಳಲ್ಲಿ ಅಚ್ಚಾದವುಗಳೆಂದರೆ 'ಭೋಜ ಕಾಳಿದಾಸ', 'ವಿಕ್ರಮೋರ್ವಶಿಯ', 'ರಂಭಾ ರೂಪರೇಖ' ಮತ್ತು 'ಇಡಗುಂಜಿ ಕ್ಷೇತ್ರ ಮಹಾತ್ಮೆ'. ಆದರೆ 'ಅಶೋಕ ಸುಂದರಿ'. 'ರಾಜಾ ಹೃದಯ', 'ಚಂದ್ರಪ್ರಭಾ', 'ಸತಿ ಸೀಮಂತಿನಿ' ಮುಂತಾದುವುಗಳು ಪ್ರಕಟವಾಗದೇ ಇದ್ದರೂ ಕಲಾರಸಿಕರ ಮನಸ್ಸನ್ನು ತಣಿಸಿದ ಪ್ರಸಂಗಗಳಾಗಿವೆ.

ಇವರು ಮೂಲತಃ ಉತ್ತರ ಕನ್ನಡದವರಾದರೂ ಬಡಗುತಿಟ್ಟಿನ ಮತ್ತು ತೆಂಕು ತಿಟ್ಟಿನ ಭಾಗವತಿಕೆಗಳಲ್ಲಿ ಸಿದ್ಧಿಯನ್ನು ಪಡೆದವರು. ತಮ್ಮ ನಾದ ಮಾಧುರ್ಯದಿಂದ ಸಂಗೀತದ ಮೇಲಿನ ಪ್ರಭುತ್ವದಿಂದ, ಮತ್ತೆ ಮತ್ತೆ ಹಾಡುವುದರೊಂದಿಗೆ ಪದ್ಯದೊಳಗೆ ಹುದುಗಿದ್ದ ಎಲ್ಲಾ ಭಾವನೆಗಳನ್ನು ಹೊರ ಹೊಮ್ಮಿಸುವುದರಿಂದ ಇವರು ಕಲಾಪ್ರೇಮಿಗಳ ಹೃದಯವನ್ನು ಗೆದ್ದಿದ್ದಾರೆ. ದಕ್ಷಿಣೋತ್ತರ ಕನ್ನಡ ಜಿಲ್ಲೆಯಲ್ಲಿ ಇವರನ್ನು 'ಕಂಚಿನ ಕಂಠದ' ಕಡತೋಕರೆಂದೇ ಗುರುತಿಸುತ್ತಾರೆ.

ತಮ್ಮ ಬಾಲ್ಯದ ದಿನಗಳನ್ನು ನೆನೆಸಿಕೊಳ್ಳುತ್ತ ಕಡತೋಕರು ಆ ಕಾಲದಲ್ಲಿ ತಮಗೆ 'ರುಕ್ಮಾಂಗದ ಚರಿತ್ರೆ', 'ಲಂಕಾದಹನ', 'ಗದಾ ಪರ್ವ', 'ಕೃಷ್ಣ ಲೀಲೆ', 'ಪಂಚವಟಿ', 'ಮಹಾ ರಥಿ ಕರ್ಣ' ಮುಂತಾದುವುಗಳು ಇಷ್ಟವಾದ ಪ್ರಸಂಗಗಳು ಎನ್ನುತ್ತಾರೆ. ಅದರಲ್ಲೂ ಮೂಡಕಣಿ ನಾರಾಯಣ ಹೆಗಡೆಯವರ ಕೌರವ, ಬಲರಾಮ ಮುಂತಾದ ಪಾತ್ರಗಳು ಮರೆಯಲಾಗದ್ದು ಅನ್ನುತ್ತಾರೆ. ಮೂಡಕಣಿ ನಾರಾಯಣ ಹೆಗಡೆಯವರ ಅರ್ಜುನ ಹಾಗೂ ಶಿವರಾಮ ಹೆಗಡೆಯವರ ಕಿರಾತ ಪಾತ್ರಗಳಿರುವ 'ಕಿರಾತಾರ್ಜುನೀಯ' ಪ್ರಸಂಗವಂತು ಮನಸ್ಸಿನಲ್ಲಿ ಅಚ್ಚೊತ್ತಿದೆ. ಇಡಗುಂಜಿಮೇಳದ ಯಾಜಿ ಭಾಗವತರು, ಮೃದಂಗ ವಾದಕರಾದ ಗುಣವಂತೆಯ ಕನ್ನಯ್ಯ ಭಂಡಾರಿಯವರು ಅಂದಿನ ಇವರ ಮೆಚ್ಚಿನ ಹಿಮ್ಮೇಳದವರು. ಈಚಿನ ದಿನಗಳಲ್ಲಿ ಇವರ ಮೆಚ್ಚುಗೆಗೆ ಪಾತ್ರರಾದವರೆಂದರೆ ಕುರಿಯ ವಿಠಲ ಶಾಸ್ತ್ರಿ, ಕೋಳ್ಯೂರು ರಾಮಚಂದ್ರ ರಾವ್, ಪುತ್ತೂರು ನಾರಾಯಣ ಹೆಗಡೆ, ಚಿಟ್ಟಾಣಿ ರಾಮಚಂದ್ರ ಹೆಗಡೆ ಮುಂತಾದವರು. ಇವರೆಲ್ಲರ ಕಲಾ ಬೆಳವಣಿಗೆಯ ಅಪೂರ್ವ ಪ್ರಗತಿಯನ್ನು ಮನಸಾರೆ ಹೊಗಳುತ್ತಾರೆ. ಯಕ್ಷಗಾನ ಭಾಗವತಿಕೆಯಲ್ಲಿ ದ್ವಂದ್ವ ಹಾಡುಗಾರಿಕೆಯ ಪ್ರಯೋಗವನ್ನು ಯಶಸ್ವಿಯಾಗಿ ಸಾಧಿಸಿದ ಇವರಿಗೆ ಕಲ್ಯಾಣಿ, ಮೋಹನ, ಅರಭಿ, ಮಧ್ಯಮಾವತಿ, ಷಣ್ಮುಖಪ್ರಿಯ ಮುಂತಾದುವುಗಳು ಬಹು ಮುದವನ್ನು ಕೊಟ್ಟ ರಾಗಗಳು.

ತಮ್ಮ ಬಾಲ್ಯ ದಿನಗಳಲ್ಲಿ ಉತ್ತರ ಕನ್ನಡಕ್ಕೆ ಬರುತ್ತಿದ್ದ ಧರ್ಮಸ್ಥಳ ಮೇಳದ ಬಗ್ಗೆ ಮೊದಲಿನಿಂದಲೂ ಅಭಿಮಾನ. ಈಗಂತೂ ಈ ಮೇಳದ ಭಾಗವತರಾಗಿದ್ದಾರೆ. ಸಂಬಳ ಸಾರಿಗೆ ಮಾತ್ರವಲ್ಲದೆ ಊಟ, ಉಪಚಾರ, ರಜಾ, ಭವಿಷ್ಯನಿಧಿ ಮುಂತಾದ ಸವಲತ್ತುಗಳಲ್ಲಿ ಈ ಮೇಳ ಉಳಿದೆಲ್ಲ ಮೇಳಗಳಿಗೆ ಮೇಲ್ಪಂಕ್ತಿಯಾಗಿದೆ.

1953ರಲ್ಲಿ ಪ್ರೊ॥ ಕೆ.ಜಿ. ಶಾಸ್ತ್ರಿಯವರ ನೇತೃತ್ವದ ಯಕ್ಷಗಾನ ತಂಡವೊಂದರ ಭಾಗವತರಾಗಿ ದೆಹಲಿಗೆ ತೆರಳಿ ಅಂದಿನ ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದ್ ಹಾಗೂ ಪ್ರಧಾನಿ ನೆಹರೂ ಅವರ ಮುಂದೆ ಯಕ್ಷಗಾನ ಪ್ರದರ್ಶಿಸಿ, ಮೆಚ್ಚುಗೆ ಗಳಿಸಿದ ಕೀರ್ತಿ ಇವರದಾಗಿದೆ. ಐದು ವರ್ಷಗಳ ಹಿಂದೆ ಬೊಂಬಾಯಿಯ ಕ್ರೀಡಾಂಗಣದಲ್ಲಿ ನಡೆದ 'ವಿದ್ಯುನ್ಮತಿ ಕಲ್ಯಾಣ' ಎಂಬ ಯಕ್ಷಗಾನ ಪ್ರದರ್ಶನದಲ್ಲಿ ಇವರ ಭಾಗವತಿಕೆ ಇಂಡಿಯನ್ ಎಕ್ಸ್‌ಪ್ರೆಸ್, ಹಿಂದೂಸ್ಥಾನ್ ಟೈಮ್ಸ್ ಮುಂತಾದ ಪತ್ರಿಕೆಗಳಲ್ಲಿ ಮುಕ್ತಕಂಠದ ಶ್ಲಾಘನೆಯನ್ನು ಪಡೆಯಿತು.

ಅವರ ಜೊತೆ ನಡೆಸಿದ ಸಂಭಾಷಣೆಯಲ್ಲಿ ಅವರು ತಮ್ಮ ಅನುಭವಗಳನ್ನು ಹೀಗೆ ತೆರೆದಿಟ್ಟರು.

ಪ್ರ : ಯಕ್ಷಗಾನ ಪತ್ರಿಕಾ ವ್ಯವಸಾಯಗಾರರಾಗಿ ನಿಮ್ಮ ಅನುಭವ ಏನು? ಇಂದು ಯಕ್ಷಗಾನಕ್ಕೊಂದು ಪತ್ರಿಕೆ ಅಗತ್ಯವೆ? ಅದು ಯಾವ ರೀತಿಯಲ್ಲಿರಬೇಕು?

ಉತ್ತರ : ನಾನು 'ಯಕ್ಷಗಾನ' ಪತ್ರಿಕೆಯನ್ನು ಹೊರಡಿಸುತ್ತಿದ್ದ ಕಾಲದಲ್ಲಿ ಪತ್ರಿಕೆಯೆಂದರೆ ಸುದ್ದಿಗೆ ಮಾತ್ರ ಎಂಬ ಭಾವನೆ ಇತ್ತು. ಯಕ್ಷಗಾನದ ಬಗ್ಗೆ ಇಂದಿರುವ ಆಸಕ್ತಿ ಆಗ ಇದ್ದಿರಲಿಲ್ಲ. ಈ ರೀತಿ ಕಾಲ ಅಪಕ್ವವಾಗಿದ್ದಾಗಲೇ ಪತ್ರಿಕೆ ಪ್ರಾರಂಭಿಸಿ ಆರ್ಥಿಕವಾಗಿ ಕೈ ಸುಟ್ಟುಕೊಂಡೆ. ನಾನು ತೆಂಕುತಿಟ್ಟಿನ ಭಾಗವತನಾಗಿ ಬಂದಮೇಲೆ ಈ ಪತ್ರಿಕಾ ವ್ಯವಸಾಯದ ಸಂಪರ್ಕವನ್ನೇ ಕಡಿದುಕೊಂಡೆ. ಇಂದಿನ ಪರಿಸ್ಥಿತಿ ಇದ್ದಿದ್ದರೆ ಬಹುಕಾಲ ನಡೆಸಬಹುದಿತ್ತು. ಇಂದು ಮಾತ್ರ ಯಕ್ಷಗಾನಕ್ಕೆಂದೇ ಮೀಸಲಾದ ಪತ್ರಿಕೆಯ ಅಗತ್ಯ ಬಹಳಷ್ಟಿದೆ. ಯಾವುದಾದರು ಮೇಳದ ಆಶ್ರಯದಲ್ಲಿಯೆ ನಡೆಸಬಹುದು. ಈ ಬಗೆಯ ಪತ್ರಿಕೆಯಲ್ಲಿ ಪ್ರದರ್ಶನಗಳ, ಕೃತಿಗಳ ವಿಮರ್ಶೆ ಇರಬೇಕು. ಕವಿಗಳ ಕೃತಿಗಳ ಪರಿಚಯ ಲೇಖನವಿರಬೇಕು. ಕಲಾವಿದರಿಗೆ ಆಗುವ ಅನ್ಯಾಯಗಳ ಬಗ್ಗೆ ಸರ್ಕಾರದ, ಸಾರ್ವಜನಿಕರ ಗಮನ ಸೆಳೆಯುವ ಬರಹಗಳಿರಬೇಕು. ಒಟ್ಟಿನಲ್ಲಿ ಇಂತಹ ಪತ್ರಿಕೆ ಯಕ್ಷಗಾನದ ಬಗ್ಗೆ ಜನರ ಆಸಕ್ತಿಯನ್ನು ಹೆಚ್ಚಿಸುವ ಪ್ರಯತ್ನ ಮಾಡಬೇಕು.

ಪ್ರ : ನಿಮ್ಮನ್ನು 'ಕಂಚಿನ ಕಂಠದ ಕಡತೋಕ'ರೆಂದೇ ಕರೆಯುತ್ತಾರೆ. ಭಾಗವತನಾದವನಿಗೆ ಕೇವಲ ಕಂಠ ಒಂದೇ ಸಾಕೇ? ಅವನಿಗಿರಬೇಕಾದ ಅರ್ಹತೆಗಳಾವುವು?

ಉ : ಭಾಗವತನಿಗೆ ಸ್ವರ ಸಂಪತ್ತೊಂದೇ ಖಂಡಿತ ಸಾಲದು. ಉತ್ತಮ ಭಾಗವತನಾಗಬೇಕಾದರೆ ಆತನಲ್ಲಿ ಪುರಾಣ ಜ್ಞಾನ, ಅರ್ಥಜ್ಞಾನ, ರಂಗಸ್ಥಳ ತಂತ್ರದ ಪರಿಚಯ, ಆಶುಕವಿತ್ವ, ಕಾಲ ಮತ್ತು ಕಥೆಗಳನ್ನು ಮೇಳವಿಸುವ ಜಾಣ್ಮೆ, ನಟನ ಯೋಗ್ಯತೆಯನ್ನು ಅರಿತು ರಂಗಸ್ಥಳದಲ್ಲಿ ಕುಣಿಸುವ ರೀತಿ, ಪ್ರಸಂಗವನ್ನು ಪರಿಣಾಮಕಾರಿಯಾಗಿಸುವ ಕಲೆ, ಇವೆಲ್ಲಾ ಇರಬೇಕು. ಇಷ್ಟು ಮಾತ್ರವಲ್ಲದೇ ಉಳಿದ ಕಲಾವಿದರಿಗೆ ನಡೆನುಡಿಯಲ್ಲಿ ಮಾದರಿಯಾಗಬಲ್ಲ ಚಾರಿತ್ರ್ಯವೂ ಅಗತ್ಯ.

ಪ್ರ : ಹುಟ್ಟಿನಿಂದ ಉತ್ತರ ಕನ್ನಡದವರಾದ ನೀವು ತೆಂಕು ತಿಟ್ಟಿನ ಭಾಗವತರಾಗಿದ್ದೀರಿ. ಇವೆರಡು ತಿಟ್ಟಿನ ಬಗ್ಗೆ ನಿಮ್ಮ ಅಭಿಪ್ರಾಯ ಏನು?

ಉ : ನಾನು ಬಡಗು ಹಾಗೂ ತೆಂಕು ತಿಟ್ಟಿನ ಎರಡು ಮೇಳಗಳಲ್ಲೂ ಭಾಗವತಿಕೆ ಮಾಡಿದವನು. ಆಯಾಯಾ ತಿಟ್ಟಿನ ಅಭಿಮಾನಿಗಳಿಗೆ ಅವರದ್ದೇ ಶ್ರೇಷ್ಠ. ಒಂದೇ ಮಾಪನವನ್ನು ಇಟ್ಟುಕೊಂಡು ಎರಡು ತಿಟ್ಟಿನ ಪ್ರದರ್ಶನಗಳನ್ನು ಅಳೆಯ ಹೊರಡುವುದು ತಪ್ಪು. ಇವೆರಡೂ ಭಿನ್ನ ಶೈಲಿಯವುಗಳು ಅಷ್ಟೆ. ಅತಿ ಅಭಿಮಾನ ಅನಾವಶ್ಯಕ. ಕಲಹಕ್ಕೆ ಕಾರಣವಾಗುತ್ತದೆ ನಾನು ಬಡಗು ಹಾಗೂ ತೆಂಕು ತಿಟ್ಟುಗಳೆರಡನ್ನೂ ಮೆಚ್ಚುತ್ತೇನೆ.

ಪ್ರ : ಪ್ರಸಂಗಕಾರರಾಗಿ ಪ್ರಸಂಗಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು? ಪ್ರಸಂಗಗಳ ಪ್ರಕಟಣೆ ಬಗ್ಗೆ ನಿಮ್ಮಲ್ಲೇನಾದರೂ ಯೋಜನೆ ಇದೆಯೇ?

ಉ : ವಸ್ತುದೃಷ್ಟಿಯಿಂದ ಪುರಾಣಾಂತರ್ಗತ ಪ್ರಸಂಗಗಳು ತಮ್ಮ ಅಂತಹಸತ್ವದಿಂದಾಗಿ ಹೆಚ್ಚು ಪ್ರಭಾವ ಬೀರಬಲ್ಲವು. ಹಳೇ ಪ್ರಸಂಗಗಳು ನಿತ್ಯನೂತನವಾಗಲು ಈ ಅನನ್ಯವಾದ ಪುರಾಣ ವಾತಾವರಣವೇ ಕಾರಣ. ಇಂದಿನ ಯಕ್ಷಗಾನ ಕವಿಗಳು ಇದನ್ನು ಗಮನದಲ್ಲಿರಿಸಿಕೊಳ್ಳಬೇಕು. ಇನ್ನು ಪ್ರಸಂಗ ಪುಸ್ತಕಗಳ ಪ್ರಕಟಣೆಗೆ ಅಕಾಡೆಮಿಗಳು, ಕಲಾ ಕೇಂದ್ರಗಳು ಮುಂದೆ ಬಂದರೆ ಉತ್ತಮ. ಸ್ವತಃ ಕವಿಯೇ ಪ್ರಕಟಿಸುವುದು ಬಹು ಕಷ್ಟದ ಕೆಲಸ.

ಪ್ರಶ್ನೆ : ಯಕ್ಷಗಾನ ಶಾಸ್ತ್ರೀಯವೇ? ಜಾನಪದವೇ? ಇಂದು ಯಕ್ಷಗಾನ ರಂಗದಲ್ಲಿ ಆಗುತ್ತಿರುವ ಬದಲಾವಣೆಯ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಉತ್ತರ : ಯಕ್ಷಗಾನ ಶಾಸ್ತ್ರೀಯವೆಂದು ನಾನು ಒಪ್ಪುವುದಿಲ್ಲ. ಈ ಕಲೆ ಜಾನಪದ ಮೂಲದಿಂದ ಬಂದದ್ದು. ಇದನ್ನು ಶಾಸ್ತ್ರೀಯವೆಂದು ಕರೆದರೆ ಇದರ ಸ್ವಂತಿಕೆಯೇ ಹೊರಟು ಹೋಗುತ್ತದೆ. ಇಂದು ಕಲಾ ಪ್ರಪಂಚದಲ್ಲಿ ಯಕ್ಷಗಾನಕ್ಕೊಂದು ಉತ್ತಮ ಸ್ಥಾನ ಲಭಿಸಿದ್ದರೆ ಅದಕ್ಕೆ ಡಾ|| ಶಿವರಾಮ ಕಾರಂತರೇ ಕಾರಣ. ಅವರು ತೆಗೆದುಕೊಂಡಿರುವ ವೈಯಕ್ತಿಕ ಶ್ರಮದಿಂದ 'ಯಕ್ಷಗಾನ' ಎಲ್ಲರ ಗಮನವನ್ನು ಸೆಳೆದಿದೆ. ಯಕ್ಷಗಾನದಲ್ಲಿ ಬದಲಾವಣೆಯಾಗುತ್ತಿರುವುದು ತಪ್ಪಲ್ಲ ಎಂದು ನನ್ನ ಅಭಿಪ್ರಾಯ. ಜನತೆಯನ್ನು ಆಕರ್ಷಿಸಲಿಕ್ಕೆ, ಕಾಲಕ್ಕೆ ಅನುಸಾರವಾಗಿ ಅಲ್ಪಸ್ವಲ್ಪ ಬದಲಿಸುವುದು ಅನಿವಾರ್ಯ.

ಪ್ರ : ಯಕ್ಷಗಾನ ಕೇಂದ್ರಗಳಿಂದ ಯಕ್ಷಗಾನ ರಂಗಭೂಮಿಯ ಮೇಲೆ ಪ್ರಭಾವ ಏನು? ಹವ್ಯಾಸಿ ಕಲಾವಿದರ ಭವಿಷ್ಯವೇನು?

ಉ : ಯಾವೊಂದು ರಂಗಚಳವಳಿಯಲ್ಲಿ ಹವ್ಯಾಸಿ ಕಲಾವಿದರಿಂದ ಅಂತಹ ಮಹತ್ತರ ಪರಿಣಾಮವಾಗುವುದಿಲ್ಲ. ವೃತ್ತಿ ರಂಗಭೂಮಿಯ ಕಲಾವಿದರಿಂದ ಮಾತ್ರ ಸ್ಥಾಯಿಯಾದ ಬದಲಾವಣೆಯನ್ನು ಗುರುತಿಸಬಹುದು. ಕೇಂದ್ರದಿಂದ ತರಬೇತಾಗಿ ಬಂದ ಭಾಗವತರಿಂದ ಪೂರ್ವಪೀಠಿಕೆ ಅಚ್ಚುಕಟ್ಟಾಗಿ ಬರುತ್ತದೆ. ಆದರೆ ಪ್ರಸಂಗ ಪ್ರಾರಂಭವಾದೊಡನೆ ಅವರು ಸೋಲುತ್ತಾರೆ. ಅಭಿಜಾತ ಪ್ರತಿಭಾಶಕ್ತಿ ಹಾಗೂ ಅನುಭವದಿಂದ ಕಲೆ ಕೈಗತವಾಗುತ್ತದೆ. ಹಾಗೆಂದು ಕಲಾ ಕೇಂದ್ರಗಳಿಂದ ಹಾಗೂ ಹವ್ಯಾಸಿ ಕಲಾವಿದರಿಂದ ಉಪಯೋಗ ಇಲ್ಲವೆಂದು ಅರ್ಥವಲ್ಲ. ಕಲೆಯ ಬಗ್ಗೆ ಜನತೆಯಲ್ಲಿ ಆಸಕ್ತಿಯನ್ನು ಉಳಿಸುವಲ್ಲಿ ಇದೆಲ್ಲ ಅಗತ್ಯ. ಯಕ್ಷಗಾನ ಕಲಾಕೇಂದ್ರಗಳ ಮೂಲಕ ವೃತ್ತಿ ರಂಗಭೂಮಿಗೆ ಕೊನೆಯ ಪಕ್ಷ ಹತ್ತಕ್ಕೆ ಒಬ್ಬ ಉತ್ತಮ ಪ್ರತಿಭಾವಂತ ಕಲಾವಿದ ದೊರೆತರೆ ಅದಕ್ಕಿಂತ ಮಹತ್ತರ ಸೇವೆ ಇನ್ನೊಂದಿಲ್ಲ. ■

ಯಕ್ಷಗಾನದ ಜನಪ್ರಿಯ ಭಾಗವತ

ಜಿ. ಕಾಳಿಂಗ ನಾವಡ

ಸಮಷ್ಟಿ ಕಲೆಯಾದ ಯಕ್ಷಗಾನದಲ್ಲಿ ಇಂದು ಸಂಗೀತದ ಕಡೆಗೆ ಜನರ ಒಲವು ಹೆಚ್ಚುತ್ತಿದೆ. ಇದಕ್ಕೆ ಇಂದಿನ ಭಾಗವತರ ಕೊಡುಗೆಯೂ ಸಾಕಷ್ಟಿದೆ. ಅಂತಹವರಲ್ಲಿ ಹೆಚ್ಚಿನ ಯಕ್ಷಗಾನ ಕಲಾಪ್ರೇಮಿಗಳಿಗೆ ಚಿರಪರಿಚಿತರಾದ ಶ್ರೀ ಕಾಳಿಂಗ ನಾವಡರ ಕೊಡುಗೆಯು ಅಪೂರ್ವವಾದುದೇ. ನಾದ ಮಾಧುರ್ಯದಿಂದ, ಭಾವನಾತ್ಮಕವಾಗಿ ಹಾಡುವ ವಿಧಾನದಿಂದ, ಪದಗಳನ್ನು ಬಿಡಿಸಿ ಹೇಳುವ ಶಕ್ತಿಯಿಂದ ಅವರ ಭಾಗವತಿಕೆಯು ಎಲ್ಲರ ಗಮನವನ್ನು ಸೆಳೆದಿದೆ. ಇಂತಹ ಒಂದು ವೈಶಿಷ್ಟ್ಯವನ್ನು ಸಾಧಿಸುವಲ್ಲಿ ನಾವಡರ ಸಾಧನೆಯೇನೂ ಕಡಿಮೆ ಇಲ್ಲ. ಇಷ್ಟಿದ್ದರೂ ಸೌಜನ್ಯ ಪರರಾಗಿದ್ದು ಎಲ್ಲರೊಂದಿಗೆ ನಗುತ್ತಾ, ಕಲಿಯಬೇಕೆಂಬ ಹಂಬಲದಿಂದ ಇರುವ ನಾವಡರು ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

1957ರ ಜೂನ್ 6 ರಂದು ಖ್ಯಾತ ಭಾಗವತ ಗುಂಡುಮಿ ಶ್ರೀ ರಾಮಚಂದ್ರ ನಾವಡರ ಮಗನಾಗಿ ಜನಿಸಿದ ಶ್ರೀ ಕಾಳಿಂಗ ನಾವಡರು ತಮ್ಮ 15ನೇ ವಯಸ್ಸಿನಲ್ಲೇ ಅಮೃತೇಶ್ವರಿ ಮೇಳದ ಸಂಗೀತಗಾರರಾದರು. ಇದಕ್ಕೆ ಮುನ್ನವೇ ತಂದೆಯೊಂದಿಗೆ ಸಾಕಷ್ಟು ಆಟಗಳಿಗೆ ಆಸ್ಥೆಯಿಂದ ತೆರಳಿ ಮಧ್ಯೆ ಮಧ್ಯೆ ತಾಳ ನುಡಿಸುವುದನ್ನು ಅಭ್ಯಾಸ

ಮಾಡಿಕೊಂಡಿದ್ದರು. 1972ರಲ್ಲಿ ಹಂಗಾರಕಟ್ಟೆಯ ಯಕ್ಷಗಾನ ಕಲಾಕೇಂದ್ರ ಪ್ರಾರಂಭವಾಯಿತು. ಈ ವೇಳೆಯಲ್ಲಿ ಶ್ರೀಯುತ ಸದಾನಂದ ಹೆಬ್ಬಾರರು ಕಲಾ ಕೇಂದ್ರಕ್ಕೆ ಇವರನ್ನು ಕರೆಸಿಕೊಳ್ಳದೇ ಇದ್ದರೆ ಈ ಪ್ರತಿಭೆ ಅರಣ್ಯ ಸುಮದಂತೆ ಎಲ್ಲಿಯೋ ನಿರರ್ಥವಾಗುತ್ತಿತ್ತು. ಅಂದಿನಿಂದಲೇ ಈ ವಜ್ರಕ್ಕೆ ಸಾಣೆ ಹಿಡಿಯುವ ಕಾರ್ಯ ನಡೆಯುತ್ತಾ ಬಂತು. ಒಂದೆಡೆ ಅಮೃತೇಶ್ವರಿ ಮೇಳದಲ್ಲಿ ಹಿರಿಯ ಭಾಗವತ ಶ್ರೀ ಉಪ್ಪೂರರಿಂದ ಭಾಗವತಿಕೆಯಲ್ಲಿ ಶುದ್ಧ ಶಾಸ್ತ್ರೀಯ ದೃಷ್ಟಿಯ ಅಭ್ಯಾಸ. ಇನ್ನೊಂದೆಡೆ ಡಾ॥ ಶಿವರಾಮ ಕಾರಂತರಿಂದ ಹಾಡುಗಾರಿಕೆಯಲ್ಲಿ ಹೊಸ ಬಗೆಯ ದೃಷ್ಟಿ ಕೋನದ ಮಾರ್ಗದರ್ಶನ; ಮಗದೊಂದೆಡೆ ತಂದೆ ಶ್ರೀ ರಾಮಚಂದ್ರ ನಾವಡ, ಹಿರಿಯಡ್ಕ ಗೋಪಾಲರಾವ್, ದಿವಂಗತ ತಿಮ್ಮಪ್ಪ ನಾಯಕ, ಮಹಾಬಲ ಕಾರಂತ, ಸದಾನಂದ ಹೆಬ್ಬಾರ ಮುಂತಾದವರೆಲ್ಲರಿಂದ ಸಲಹೆ ಸಹಕಾರ ಪ್ರೋತ್ಸಾಹಗಳು ಅವಿರತವಾಗಿ ಇವರಿಗೆ ದೊರೆತವು. ಹೀಗಾಗಿ ನಾಲ್ಕೈದು ವರ್ಷಗಳಲ್ಲೇ ಯಕ್ಷಗಾನ ಪ್ರಪಂಚಕ್ಕೆ ಒಬ್ಬ ಉತ್ತಮ ಭರವಸೆಯ ಭಾಗವತರು ದೊರೆತರು. ಮೀಸೆ ಮೊಳೆಯುತ್ತಿರುವಾಗಲೇ ಉತ್ತಮ ಭಾಗವತರೆಂದು ಖ್ಯಾತನಾಮರಾದುದಕ್ಕೆ ಇವರ ಶ್ರಮ ದುಡಿಮೆಯೇ ಕಾರಣ. ಉಪ್ಪೂರರ ಶಿಷ್ಯವೃತ್ತಿಯನ್ನು ಪಡೆಯಬೇಕೆಂಬ ಉದ್ದೇಶದಿಂದಲೇ ಯಕ್ಷಗಾನದ ಅಭ್ಯಾಸಕ್ಕಿದ್ದ ಸ್ಕಾಲರ್‌ಷಿಪ್ ಲಭ್ಯವಾಗಿದ್ದರೂ ಕೈ ಬಿಟ್ಟರು. 1972ರಿಂದ 1977 ರ ವರೆಗೆ ಅಮೃತೇಶ್ವರಿ ಮೇಳ, ನಂತರ ಒಂದು ವರ್ಷ ಪೆರಡೂರು ಮೇಳ, ಆನಂತರವೆಲ್ಲಾ ಸಾಲಿಗ್ರಾಮ ಮೇಳದ ಭಾಗವತರಾಗಿ ಇವರು ಹೋದಲ್ಲೆಲ್ಲಾ ಕೀರ್ತಿ ಪತಾಕೆ ಹಾರಿಸಿದ್ದಾರೆ.

ನಾವಡರ ಭಾಗವತಿಕೆ ಎಂದೊಡನೆ ಟಿಕೇಟಿಗಾಗಿ ಪರದಾಟ, ನೂಕು ನುಗ್ಗುಲು ಸರ್ವೇ ಸಾಮಾನ್ಯ. ಬೆಂಗಳೂರು, ಮುಂಬಯಿ ಮುಂತಾದ ನಗರಗಳಲ್ಲಿ ಇವರ ಭಾಗವತಿಕೆಯಲ್ಲಿ ಯಕ್ಷಗಾನ ಪ್ರದರ್ಶನವಿದೆ ಎಂದಾದರೆ ಕಾಳಸಂತೆಯಲ್ಲಿ ಟಿಕೇಟು ಕೊಳ್ಳಬೇಕಾದಂತಹ ಪರಿಸ್ಥಿತಿಯು ಬಂದಿದ್ದು ಇದೆ. ಇದು ಇವರ ಉತ್ತುಂಗ ಖ್ಯಾತಿಗೆ ಎತ್ತಿದ ಕೈಗನ್ನಡಿ.

ಸ್ವತಃ ಯಕ್ಷಗಾನ ಪ್ರಸಂಗ ಕರ್ತರಾಗಿಯೂ ನಾವಡರು ವಿಜೃಂಭಿಸಿದ್ದಾರೆ. ಯಕ್ಷಗಾನ ಕ್ಷೇತ್ರದಲ್ಲಿ ಸುಪರಿಚಿತವಾದ "ರೂಪಶ್ರೀ" "ನಾಗಶ್ರೀ" "ಭಾಗ್ಯಶ್ರೀ" ಇವುಗಳೆಲ್ಲಾ ಮನೆ ಮಾತಾಗಿದೆ. 'ನಾಗಶ್ರೀ' ಯಂತೂ ಸಾಕಷ್ಟು ಪ್ರದರ್ಶನಗಳನ್ನು ಕಂಡಿದೆ. ನಾವಡರು ಎಳವೆಯಲ್ಲೇ ಈ ಬಗೆಯ ಜನಪ್ರಿಯ ಪ್ರಸಂಗಗಳನ್ನು ಸೃಷ್ಟಿಸಿದ್ದು ಅವರ ಕಲಾ ಪ್ರತಿಭೆಯ ದ್ಯೋತಕ. ಇಷ್ಟಿದ್ದರೂ ಎಲ್ಲರೊಂದಿಗೆ ಹೊಂದಿಕೊಂಡು ಹೋಗುವುದು ನಾವಡರ ಸ್ವಭಾವ. ಆದುದರಿಂದಲೇ ಪ್ರದರ್ಶನ ಮಾಡುವ ಮೊದಲೇ ಕಲಾವಿದರೊಂದಿಗೆ ಚರ್ಚಿಸಿ, ಸಮಾಲೋಚಿಸಿ ಪ್ರಸಂಗ ರಂಗಸ್ಥಳದಲ್ಲಿ ರಂಜನೆಯಾಗುವಂತಹ

ಏರ್ಪಾಡುಗಳನ್ನು ಮಾಡಿಕೊಳ್ಳುತ್ತಾರೆ. ಅಷ್ಟೇ ಅಲ್ಲ ಭಾವುಕರಾದ ಈ ತರುಣ ಕಲಾವಿದ ಪ್ರಸಂಗದೊಂದಿಗೆ ತಾದತ್ಮ್ಯವನ್ನು ಹೊಂದಬಲ್ಲರು. ಈ ಎಲ್ಲಾ ಕಾರಣಗಳಿಂದ ಅವರ ನೇತೃತ್ವದ ಯಕ್ಷಗಾನ ಪ್ರದರ್ಶನ ಬಹು ಯಶಸ್ವಿ.

"ಹಿಂದೆಲ್ಲಾ ಯಕ್ಷಗಾನ ಸಂಗೀತಕ್ಕೆ ಜನತೆಯಲ್ಲಿ ಅಂತಹ ಉತ್ತಮ ಪ್ರತಿಕ್ರಿಯೆ ಬರುತ್ತಿರಲಿಲ್ಲ. ಆದರೆ ಈಗ ಈ ದೃಷ್ಟಿ ಬದಲಾಗಿದೆ. ಜನ ಇಲ್ಲೂ ಉತ್ತಮಿಕೆಯನ್ನು ಬಯಸುತ್ತಾರೆ. ಆ ಕಾರಣದಿಂದಲೇ ಇಂದು ಹಿಮ್ಮೇಳವೂ ಪ್ರಧಾನ ಪಾತ್ರ ವಹಿಸುತ್ತದೆ" – ಇದು ನಾವಡರ ಅಭಿಪ್ರಾಯ. ಇದರಿಂದ ನಾವಡರಿಗೂ ತೃಪ್ತಿಭಾವ ಮೂಡಿದೆ. ತಮ್ಮ ಪ್ರಸಂಗಗಳ ಬಗ್ಗೆಯಂತೂ ಕಾಳಿಂಗ ನಾವಡರಿಗೆ ತುಂಬ ಭರವಸೆ ಇದೆ. ಅವು ಮುಂದಿನ ಕಾಲದಲ್ಲೂ ಬಳಕೆಯಾಗಬಹುದೆಂಬ ವಿಶ್ವಾಸವನ್ನು ಹೊಂದಿದ್ದಾರೆ. ಭಾರತ ಭಾಗವತಾದಿ ಪ್ರಸಂಗಗಳ ಬಗ್ಗೆ ವೈಯಕ್ತಿಕ ಮೆಚ್ಚುಗೆ ಇರುವ ನಾವಡರು ಜನ ರಂಜನೆಗೋಸುಗ ಕಾಲ್ಪನಿಕ ಪ್ರಸಂಗಗಳ ಸೃಷ್ಟಿಗೆ ಕೈ ಹಚ್ಚಿದ್ದಾರೆ. ಆದರೂ ಅವುಗಳಲ್ಲಿ ನೀತಿ ಪ್ರತಿಪಾದನೆಯನ್ನು ಜೀವನ ಮೌಲ್ಯದ ನಿರೂಪಣೆಯನ್ನು ಮಾಡಿದ್ದಾರೆ. ಭಾಗವತನಾಗಿ ಒಳ್ಳೆಯ ಪ್ರಸಂಗಗಳನ್ನು ಸೃಷ್ಟಿಸಬೇಕೆಂಬ, ಅವುಗಳಲ್ಲಿ ನಾನಾ ಹೊಸ ರಾಗಗಳನ್ನು ಬಳಸಬೇಕೆಂಬ ಉತ್ಸಾಹ ಹೊಂದಿದ್ದಾರೆ. ಮೇಳಗಳಲ್ಲಿ ಹಿರಿಯ ವೇಷಧಾರಿಗಳಿಂದ ಅನುಭವಗಳನ್ನು ಪಡೆಯುತ್ತ ಭಾಗವತನ ಸ್ಥಾನಕ್ಕೆ ಯೋಗ್ಯವಾಗುವಂತಹ ಗಾಂಭೀರ್ಯ ಹಾಗೂ ಸೌಜನ್ಯವನ್ನು ತೋರಬೇಕೆಂಬುದೇ ಇವರ ನಿಲುವು.

ಶ್ರೀ ಕಾಳಿಂಗ ನಾವಡರೊಂದಿಗೆ ನಡೆಸಿದ ಸಂವಾದಗಳಲ್ಲೆಲ್ಲಾ ಅವರ ಮನೋಧರ್ಮದ ಪರಿಚಯವಾಗುತ್ತದೆ. ಸದಾ ಬೆಳೆಯಬೇಕೆಂಬ ಹಂಬಲದ ಲವಲವಿಕೆಯ ಚೇತನ ಒಂದರ ದರ್ಶನವಾಗುತ್ತದೆ. ಅವರೊಂದಿಗಿನ ಸಂದರ್ಶನದ ಕೆಲವು ಮುಖ್ಯ ಅಂಶಗಳು ಸ್ವಾರಸ್ಯಕರ.

ಪ್ರ : ಯಕ್ಷಗಾನ ಬದುಕಿನ ಬಗ್ಗೆ ನಿಮ್ಮ ಅನಿಸಿಕೆ ಏನು?

ಉ : ನನಗೆ ಯಕ್ಷಗಾನದ ಬದುಕು ಸಂತೋಷ ಸಮಾಧಾನಗಳನ್ನು ಕೊಡುತ್ತಿದೆ. ಮೊದಲಿನಿಂದಲೂ ಸಂಗೀತದ ಸೆಳೆತ ನನಗೆ ಅವರ್ಣನೀಯ ಆನಂದವೊಂದನ್ನು ನೀಡುತ್ತಿತ್ತು. ಇದರಿಂದ ಪೂರ್ಣ ತೃಪ್ತನೆಂದು ಅರ್ಥವಲ್ಲ. ಆದರೆ ಈ ಕ್ಷೇತ್ರದಲ್ಲಿ ನನ್ನ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬಲ್ಲೆ ಎಂಬ ಭಾವನೆ ಇದೆ.

ಪ್ರ : ನಿಮ್ಮ ಪ್ರಸಂಗಗಳಲ್ಲಿ ಸ್ತ್ರೀಪಾತ್ರವೇ ಮುಖ್ಯವಾಗುವುದರ ಕಾರಣವೇನು?

ಉ : ಸ್ತ್ರೀ ನಮ್ಮ ಬದುಕಿನಲ್ಲಿ ವಹಿಸುವ ಪಾತ್ರ ಬಹು ಮುಖ್ಯವಾದುದೆಂಬುದು ನನ್ನ ಭಾವನೆ. ಆದುದರಿಂದ ನನ್ನ ಪ್ರಸಂಗಗಳಲ್ಲಿ ಸ್ತ್ರೀ ಪಾತ್ರ ಪ್ರಧಾನವಾಗಿರಲು ಕಾರಣ. ಈ ರೀತಿಯ ಪ್ರಾಧಾನ್ಯದಿಂದ ಮನುಷ್ಯನ ಭಾವನೆಗಳ ಏರಿಳಿತ ಹಾಗು ಕೊರತೆಗಳನ್ನು ಚಿತ್ರಿಸಲು ಯತ್ನಿಸಿರುವೆ. ಮನವನ್ನು ಸ್ಪರ್ಶಿಸುವ ಭಾವನಾ ಲಹರಿಗಳನ್ನು ತರಲು ಲಕ್ಷ್ಯ ಹರಿಸಿರುವೆ. ಹೃದಯಕ್ಕೆ ಸಂಬಂಧಿಸಿದ ವಿಚಾರಗಳನ್ನು ಮೂರ್ತ ಸ್ವರೂಪದಲ್ಲಿ ಕಾಣಲು ಪ್ರಯತ್ನಿಸಿರುವೆ.

ಪ್ರ : ಇದುವರೆಗಿನ ನಿಮ್ಮ ಸಾಧನೆಯ ಬಗ್ಗೆ ನಿಮ್ಮ ಅಭಿಪ್ರಾಯ ಏನು?

ಉ : ಯಕ್ಷಗಾನ ಪ್ರಪಂಚದಲ್ಲಿ ನಾನೀಗ ಒಂದೆರಡು ಹೆಜ್ಜೆಗಳನ್ನು ಇಟ್ಟಿದ್ದೇನೆ ಮಾತ್ರ. ಮಾಡಿದ ಕೆಲಸದ ಬಗ್ಗೆ ತೃಪ್ತಿ ಇದೆ. ಚಿಕ್ಕಂದಿನಿಂದಲೂ ಯಕ್ಷಗಾನದತ್ತ ಒಲವಿತ್ತು. ತಂದೆಯ ಪ್ರೇರಣೆಯೂ ಇತ್ತು. ಆನಂತರದ ದಿನಗಳಲ್ಲಿ ನಿಶ್ಚಿತ ರೂಪ ಪಡೆಯುವುದಕ್ಕೆ ಹೆಬ್ಬಾರರ ಮೂಲಕ ಹಂಗಾರಕಟ್ಟೆಯ ಯಕ್ಷಗಾನ ಕಲಾಕೇಂದ್ರದ ಮೂಲಕ ಅನುವು ದೊರೆಯಿತು. ಶ್ರೇಷ್ಠ ಗುರುವರ್ಯರು ದೊರೆತರು. ಅಭಿಮಾನಿಗಳೂ ಲಭ್ಯರಾದರು. ಇದೆಲ್ಲಾ ನನ್ನ ಭಾಗ್ಯವೆಂದೇ ಎಣಿಸುತ್ತೇನೆ. ಹೀಗೆ ಕಾಲಕಾಲಕ್ಕೆ ಯೋಗ್ಯ ಮಾರ್ಗದರ್ಶನವು ಸಿಕ್ಕಿದ ಫಲದಿಂದಲೇ ಇಂದು ಸ್ವತಂತ್ರವಾಗಿ ರಂಗಸ್ಥಳ ನಿರ್ವಹಣೆ ಸಾಧ್ಯವಾಗಿದೆ. ಈ ಯಶಸ್ಸಿಗೆ ಸಹೃದಯ ಪ್ರೇಕ್ಷಕರು ತಳೆದ ಹಿರಿಯ ಭಾವನೆಯು ಕಾರಣ ಎನಿಸುತ್ತದೆ.

ಪ್ರ : ನೀವು ಬಳಸುತ್ತಿರುವ ರಾಗಗಳ ಬಗ್ಗೆ ನಿಮ್ಮ ನಿಲುವೇನು?

ಉ : ಹೊಸ ಪ್ರಸಂಗಗಳ ಸೃಷ್ಟಿಯೊಂದಿಗೆ ಅನೇಕ ಬಗೆಯ ರಾಗಗಳ ಬಳಕೆಯನ್ನು ಪ್ರದರ್ಶನಗಳಲ್ಲಿ ಬಳಕೆಗೆ ತರಬೇಕೆಂಬ ಅಪೇಕ್ಷೆ ಇದೆ. ಅದನ್ನು ನನ್ನ ಪ್ರಸಂಗಗಳಲ್ಲಿ ಕೂಡಾ ಬಳಸಬೇಕೆಂಬ ಕಲ್ಪನೆ ಇದೆ. ಆದರೆ ಇಂದು ನಾನು ಬಳಸುವ ರಾಗಗಳ ಮೂಲವೆಲ್ಲಾ ನನ್ನ ತೀರ್ಥರೂಪರ ಹಾಗೂ ನನ್ನ ಗುರುಗಳಾದ ಶ್ರೀ ಉಪ್ಪೂರರ ಪರಂಪರೆಗೆ ಬದ್ಧವಾಗಿಯೇ ಇದೆ.

ಪ್ರ : ಡಾ॥ ಶಿವರಾಮ ಕಾರಂತರ ಪ್ರಯೋಗಗಳ ಬಗ್ಗೆ ಹಾಗೂಅವರು ನಿಮಗೆ ನೀಡಿದ ಮಾರ್ಗದರ್ಶನದ ಬಗ್ಗೆ ತಿಳಿಸುತ್ತೀರಾ?

ಉ : ನನ್ನ ಈ ಯಶಸ್ಸಿನ ಬದುಕಿಗೆ ಡಾ॥ ಕಾರಂತರ ಯೋಗ್ಯ ಮಾರ್ಗದರ್ಶನವು ಒಂದು ಕಾರಣ. ನಿಜವಾಗಿಯೂ ಯಕ್ಷಗಾನ

ಕಲೆಗೆ ಕಾರಂತರಿಂದಾಗಿ ವಿಶಿಷ್ಟ ಮನ್ನಣೆ ದೊರೆಯುವಂತಾಯಿತು. ಕಲೆಯ ಜೀವಂತಿಕೆಯನ್ನು ಉಳಿಸಿಕೊಂಡು ಬರುವಲ್ಲಿ ಅವರ ಪ್ರಯೋಗಶೀಲ ಮನೋಭಾವ ಅಭಿನಂದನೀಯ.

ಹೀಗೆ ಮೇಲಿನ ಎಲ್ಲಾ ಉತ್ತರಗಳಲ್ಲಿ ಆತ್ಮವಿಶ್ವಾಸವುಳ್ಳ ಭಾಗವತರೊಬ್ಬರ ಮನಸ್ಸಿನ ಒಳತೋಟಿಯ ಪರಿಚಯವಾಗುತ್ತದೆ. ನಾವಡರ ಈ ಮಾತುಗಳಲ್ಲಿ ಬೆಳೆಯಬೇಕೆಂಬ ಬಯಕೆಯ ಚೇತನವೊಂದನ್ನು ಕಾಣಬಹುದು. ಉಪ್ಪೂರರಿಲ್ಲದೆ ಬಡಗುತಿಟ್ಟು ಭಾಗವತಿಕೆಯ ಈ ದಿನಗಳಲ್ಲಿ ನಾವುಡರ ಮೇಲಿನ ಜವಾಬ್ದಾರಿ ಬಹು ಹೆಚ್ಚಿದೆ. ತಮ್ಮ ಪ್ರತಿಭೆಯಿಂದ ಇವರು ತಮ್ಮ ತೀರ್ಥರೂಪರಾದ ಶ್ರೀ ರಾಮಚಂದ್ರ ನಾವಡರ ಹಾಗೂ ಗುರುಗಳಾದ ದಿ॥ ನಾರಣಪ್ಪ ಉಪ್ಪೂರರ ಶೈಲಿಯ ಸಮನ್ವಯವನ್ನು ಬೆಳೆಸಿ ತನ್ಮೂಲಕ ಯಕ್ಷಗಾನ ಕಲೆಯನ್ನು ಬೆಳಗಬೇಕಾಗಿದೆ.

■

ಯಕ್ಷಗಾನದ ದಶಾವತಾರಿ

ಗುರು ವೀರಭದ್ರ ನಾಯಕ

ಕರ್ನಾಟಕದ ಹೆಮ್ಮೆಯ ಕಲೆಯಾಗಿರುವ ಯಕ್ಷಗಾನವನ್ನು ತೆಂಕು ತಿಟ್ಟು, ಬಡುಗು ತಿಟ್ಟು, ತೀರಾ ಬಡಗು ತಿಟ್ಟುಗಳೆಂದು ಗುರುತಿಸಲಾಗುತ್ತಿದೆ. ಇದರಲ್ಲಿ ಉಡುಪಿಯಿಂದ ಉತ್ತರಕ್ಕೆ ಕುಂದಾಪುರದವರೆಗೆ ಚಾಚಿರುವ ಬಡಗುತಿಟ್ಟಿಗೆ ಡಾ॥ ಶಿವರಾಮ ಕಾರಂತರ ಮಾರ್ಗದರ್ಶನ ದೊರೆತಿದೆ. ಯಕ್ಷಗಾನ ಕವಿಯೊಬ್ಬನ ಸಂಶೋಧನೆಗೆಂದು ಹೊರಟ ಕಾರಂತರು ಯಕ್ಷಗಾನ ಕಲೆಯ ಪ್ರಭಾವಕ್ಕೆ ಒಳಗಾಗಿ ಇಲ್ಲೂ ತಮ್ಮ ಕೃಷಿಯನ್ನು ನಡೆಸಿದರು. ಅಂದು ಈ ಸಾಹಸಿ ಹಾಗೂ ಪ್ರಯೋಗ ಪ್ರಿಯ ಅನ್ವೇಷಕನ ಹಿಂದೆ ಒಂದು ಪ್ರತಿಭಾಪೂರ್ಣ ಕಲಾವಿದರ ಸಮಾವೇಶವಿತ್ತು, ದಿ॥ ಶೇಷಗಿರಿ ಭಾಗವತರು, ದಿ॥ ಗಣಪತಿ ಪ್ರಭುಗಳು, ದಿ॥ ಹಾರಾಡಿ ರಾಮಗಾಣಿಗ, ದಿ॥ ಹಾರಾಡಿ ಕೃಷ್ಣಗಾಣಿಗ, ದಿ॥ ಗುರು ವೀರಭದ್ರ ನಾಯಕ ಮುಂತಾದವರಿಂದಾಗಿ ಬಡಗುತಿಟ್ಟು ಉನ್ನತಸ್ಥಾನವನ್ನು ಪಡೆದಿತ್ತು. ವೇಗದಕುಣಿತ, ರಸಪೂರ್ಣ ಅಭಿನಯ, ಭಾವಪೂರಿತ ಭಾಗವತಿಕೆ, ಹಿತ-ಮಿತ ಮಾತುಗಾರಿಕೆ, ಈ ತಿಟ್ಟಿನ ಮೂಲ ಸತ್ವವಾಗಿತ್ತು. ಇದರ ಫಲವಾಗಿಯೇ ಕಾರಂತರಂತಹ ಪ್ರತಿಭಾವಂತರನ್ನು ತನ್ನ ತೆಕ್ಕೆಗೆ ತಂದುಕೊಂಡಿತು. ಇಂತಹ ಕಲೆಯ ಶ್ರೀಮಂತಿಕೆಯನ್ನು ಕಂಡ ಶಿವರಾಮ ಕಾರಂತರು ಇದಕ್ಕೊಂದು

ಭದ್ರ ಚೌಕಟ್ಟು ಹಾಕಿದರು. ಕಾಡಿನ ಮೊಗ್ಗುಗಳಂತಿದ್ದ ಕಲಾವಿದರನ್ನು ಸೇರಿಸಿ ಅವರ ಕಲಾ ಸೌರಭವನ್ನು ದೇಶ ವಿದೇಶಗಳಲ್ಲಿ ಹಬ್ಬುವಂತೆ ಮಾಡಿದರು. ಈ ಕಲೆಗೆ ಅಂತರರಾಷ್ಟ್ರೀಯ ಮನ್ನಣೆ ಗಳಿಸಿಕೊಟ್ಟರು. ಇದಕ್ಕೆಲ್ಲ ಡಾ॥ ಕಾರಂತರೇ ಕಾರಣರಾದರೂ ಅದರ ಹಿನ್ನೆಲೆಯಲ್ಲಿದ್ದ ಮಂದಿಯನ್ನು ಮರೆಯುವಂತಿಲ್ಲ.

ಬಡಗು ತಿಟ್ಟಿನ ಉಚ್ಛ್ರಾಯ ಕಾಲದಲ್ಲಿ ಕಂಡು ಬಂದ ಆ ಹಿರಿಯ ಕಲಾವಿದರೆಲ್ಲಾ ಇಂದು ಇಲ್ಲವಾಗಿದ್ದಾರೆ. ಈ ಹಳೆಯ ಕಲಾ ಸಂಪ್ರದಾಯದ ಕೊನೆಯ ಕೊಂಡಿಯಂತಿದ್ದ ರಾಜ್ಯ ಹಾಗೂ ರಾಷ್ಟ್ರ ಪ್ರಶಸ್ತಿ ವಿಜೇತ ಹಿರಿಯ ಕಲಾವಿದ ಗುರು ವೀರಭದ್ರ ನಾಯಕರು ಈಗ ಇಲ್ಲವಾದದ್ದು ಬಡಗು ತಿಟ್ಟಿನ ಯಕ್ಷಗಾನ ಕಲಾ ಪರಂಪರೆಗೆ ತುಂಬಲಾರದ ನಷ್ಟವಾಗಿದೆ.

ವೀರಭದ್ರನಾಯಕರು ಬ್ರಹ್ಮಾವರದ ಮಟ್ಪಾಡಿಯಲ್ಲಿ ಕ್ರಿ.ಶ. 1906ರಲ್ಲಿ ಜನಿಸಿದರು. ತಂದೆ ನಾರಾಯಣ ನಾಯಕರು ಯಕ್ಷಗಾನ ಕಲಾವಿದರೇ ಆದುದರಿಂದ ಬಾಲ್ಯದಿಂದಲೂ ಇವರಿಗೆ ಯಕ್ಷಗಾನದ ಗೀಳು, ನಾಲ್ಕನೆಯ ತರಗತಿಯವರೆಗೆ ಮಾತ್ರ ವಿದ್ಯಾಭ್ಯಾಸ ಮಾಡಿದ ಇವರು ಮಾರಣಕಟ್ಟೆಯ ಮೇಳದಲ್ಲಿ ತಮ್ಮ 15ನೇ ವಯಸ್ಸಿನಲ್ಲೇ ಸೇರಿಕೊಂಡರು. ಎಳೆತನದಲ್ಲೇ ಈ ಅಭಿಜಾತ ಕಲಾವಿದನನ್ನು ತಿದ್ದುವುದರಲ್ಲಿ ಹಲವು ಹಿರಿಯರ ಪಾತ್ರವಿದೆ. ರಂಗಸ್ಥಳದ ಮಾಹಿತಿಯನ್ನು ದಿ॥ ಗಣಪತಿ ಪ್ರಭುಗಳು ಕಲಿಸಿದರು. ಅಂದು ಕುಣಿತದಲ್ಲಿ ಹಾರಾಡಿ ಮತ್ತು ಮುಟ್ಪಾಡಿ ಶೈಲಿಗಳು ಪ್ರಖ್ಯಾತವಾಗಿದ್ದವು. ಇವರ ಕುಣಿತ ಮಟ್ಪಾಡಿ ಶೈಲಿಯದ್ದಾಗಿತ್ತು. ತಾಳ ಲಯ ವಿಚಾರಗಳನ್ನು ಭಾಗವತರಾದ ದಿ॥ ಶೇಷಗಿರಿ ಕಿಣಿಯವರಿಂದ ಕಲಿತರು. ಮಾಟ್ಪಾಡಿಯ ಕೃಷ್ಣಯ್ಯ ಸೆಟ್ಟರು ಮಾತುಗಾರಿಕೆಗೆ ಇವರ ಗುರುಗಳಾಗಿದ್ದರು. ಮಾತಿನ ಗತ್ತು ಹಾಗೂ ಅಪಾರ ವಿದ್ವತ್ತನ್ನು ಸ್ವಯಂ ಶ್ರಮದಿಂದ ಸಾಧಿಸಿಕೊಂಡರು. ಈ ಹಿರಿಯರ ಮಾರ್ಗದರ್ಶನ ಹಾಗೂ ತಮ್ಮ ಬತ್ತದ ಅಧ್ಯಯನಶೀಲತೆಯಿಂದ ವೀರಭದ್ರ ನಾಯಕರು ಮೊದಲ ದರ್ಜೆಯ ಕಲಾವಿದರಾದರು.

ಅಂದು ಪ್ರಖ್ಯಾತ ಮೇಳವಾಗಿದ್ದ ಮಂದರ್ತಿ ಮೇಳದಲ್ಲಿ ಹದಿಮೂರು ವರ್ಷಗಳ ಕಾಲ ವೀರಭದ್ರ ನಾಯಕರು ದುಡಿದರು. ಅಲ್ಲಿದ್ದಾಗಲೇ ಯಕ್ಷಗಾನದ ಬೇರೆ ಬೇರೆ ಅಂಗಗಳಲ್ಲಿ ಪರಿಣತಿ ಪಡೆದರು. ನಿಜವಾದ ಅರ್ಥದಲ್ಲಿ ಇವರು ಯಕ್ಷಗಾನ ರಂಗದ "ಸವ್ಯ ಸಾಚಿಗಳು". ಮದ್ದಲೆ, ಚಂಡೆ, ಪುರುಷವೇಷ, ಮೂರನೇ ವೇಷ, ಬಣ್ಣದ ವೇಷ ಹಾಸ್ಯಗಾರಿಕೆ ಹೀಗೆ ಎಲ್ಲಾ ಅಂಗಗಳಲ್ಲೂ ಅವರು ಸಮರ್ಥರು. ಆದರೆ ಪ್ರಾರಂಭದಲ್ಲಿ ಇವರನ್ನು ಜನ ಗುರುತಿಸುತ್ತಿದ್ದದು "ಪುರುಷ ವೇಷಧಾರಿ" ಎಂದೇ.

ಮೇಳಕ್ಕೆ ಸೇರಿದ 12–13 ವರ್ಷಗಳ ಆನಂತರ ಹಿರಿಯಡ್ಕ ಮೇಳದಲ್ಲಿ ನಾಯಕರು

ಎರಡನೆ ವೇಷ ನಿರ್ವಹಿಸಲು ಪ್ರಾರಂಭಿಸಿದರು. ಆಗ ಇವರೊಂದಿಗೆ ಇದ್ದ ಪ್ರಸಿದ್ಧ ಅರ್ಥಧಾರಿ ಹರಿದಾಸ ಶ್ರೀಮಲ್ಪೆ ಶಂಕರನಾರಾಯಣಸಾಮಗರ ಜೊತೆಯೊಂದಿಗೆ ಅಂದಿನ ಪ್ರದರ್ಶನಗಳು ಜಯಭೇರಿ ಭಾರಿಸುತ್ತಿದ್ದವು. ಸತತವಾಗಿ 18 ದಿನ "ಮಹಾಭಾರತ" ಹಾಗೂ 10 ದಿನ "ಭಾಗವತ"ವನ್ನು ಆಡಿ ಎಲ್ಲರ ಗಮನ ಸೆಳೆದರು. ನಾಯಕರು ಬಡಗುತಿಟ್ಟಿನ ಮಂದರ್ತಿ, ಅಮೃತೇಶ್ವರಿ, ಮಾರಣಕಟ್ಟೆ, ಕೊಲ್ಲೂರು, ಹಿರಿಯಡ್ಕ ಪೆರ್ಡೂರು ಹಾಗೂ ತೆಂಕುತಿಟ್ಟಿನ ಪೊಳಲಿ ಸುರತ್ಕಲ್ ಇರಾ ಸೋಮನಾಥೇಶ್ವರ ಮೇಳಗಳಲ್ಲಿದ್ದು ಖ್ಯಾತಿ ಗಳಿಸಿದರು. ಘಟ್ಟದ ಮೇಲಿನ ಮೇಳಗಳಲ್ಲೂ ಭಾಗವಹಿಸಿ ಅಲ್ಲಿ ಯಕ್ಷಗಾನವನ್ನು ಪ್ರಚುರ ಪಡಿಸುವುದರಲ್ಲಿ ವೀರಭದ್ರನಾಯಕರ ಹೆಗ್ಗಳಿಕೆ ಇದೆ.

ಕೇಂದ್ರ ಸಂಗೀತ ನಾಟಕ ಅಕಾಡೆಮಿಯವರ ಸಂಯೋಜನೆಯೊಂದಿಗೆ ಉಡುಪಿಯ ಎಂ.ಜಿ.ಎಂ. ಕಾಲೇಜಿನಲ್ಲಿ 1971ರಲ್ಲಿ ಸ್ಥಾಪಿತವಾದ "ಉಡುಪಿ ಯಕ್ಷಗಾನ ಕೇಂದ್ರ"ದಲ್ಲಿ "ಗುರು"ವಾಗಿ ಶ್ರೀ ನಾಯಕರು ನೇಮಕಗೊಂಡರು. ಬಡಗು ತಿಟ್ಟು ಕಲಾಪರಂಪರೆಯ ಸಮರ್ಥ ಪ್ರತಿನಿಧಿಯೆಂಬ ಕಾರಣದಿಂದಲೇ ಇವರ ಆಯ್ಕೆ ನಡೆಯಿತು. ಅಲ್ಲಿ 1974ರವರೆಗೆ ಯಕ್ಷಗಾನದ ಒಳಹೊರಗುಗಳನು ಅಲ್ಲಿನ ಶಿಕ್ಷಣಾರ್ಥಿಗಳಿಗೆ ಮಾತ್ರವಲ್ಲದೆ, ಹೊರಗಿನ ಕಿರಿಯ ಕಲಾವಿದರಿಗೂ ಬೋಧಿಸಿ "ಗುರು ವೀರಭದ್ರ ನಾಯಕ"ರಾದರು. ಮುಂದೆ ಅನಾರೋಗ್ಯದ ಕಾರಣದಿಂದ ಯಕ್ಷಗಾನ ಕೇಂದ್ರದ ಸಂಪರ್ಕ ತಪ್ಪಿದರೂ ಇವರ ಅಪಾರ ಅನುಭವದ ಮಾರ್ಗದರ್ಶನ ಯಕ್ಷಗಾನಾಸಕ್ತರಿಗೆ ಲಭಿಸುತ್ತಿತ್ತು.

ಶ್ರೀ ವೀರಭದ್ರನಾಯಕರು ಖ್ಯಾತಿಗೊಂಡಿದ್ದು ತಮ್ಮ ತೂಕ ತಪ್ಪದ ಮಾತುಗಾರಿಕೆಯಿಂದ. ಅಭಿನಯಿಸುತ್ತಿದ್ದ ಪಾತ್ರಗಳಿಗೆ ರಂಗಸ್ಥಳದಲ್ಲಿ ಜೀವ ತುಂಬುತ್ತಿದ್ದರು. ವಿಶ್ರಾಂತಿ ಸಮಯದಲ್ಲೆಲ್ಲಾ ಈ ಕಲೆಗೆ ಅಗತ್ಯವಿದ್ದ ಪುಸ್ತಕಗಳನ್ನು ಓದುತ್ತಿದ್ದರು. ಭಾರತ, ರಾಮಾಯಣ, ಪುರಾಣ ಪುಣ್ಯ ಕಥೆಗಳನ್ನು ಓದುವುದರೊಂದಿಗೆ ಅಲ್ಲಿನ ಪಾತ್ರಗಳ "ಒಳಗ"ನ್ನು ಅರಿತುಕೊಳ್ಳುತ್ತಿದ್ದರು. ಅದರಿಂದಾಗಿ ತಾವು ಪಾತ್ರ ನಿರ್ವಹಿಸುವಾಗ ಆ ಪಾತ್ರದ ಆಂತರ್ಯವನ್ನು ಸಾಕ್ಷಾತ್ಕರಿಸುತ್ತಿದ್ದರು. ಇವರು ಭಕ್ತಿರಸದ ನಿರೂಪಣೆಯಲ್ಲಿ ಅದ್ವಿತೀಯರು.

ವೀರಭದ್ರನಾಯಕರ ಅತಿಕಾಯ, ಆಂಜನೇಯ, ಸುಧನ್ವ ಮುಂತಾದ ಪಾತ್ರಗಳನ್ನು ಜನ ಇಂದಿಗೂ ನೆನೆಸಿಕೊಳ್ಳುತ್ತಾರೆ. ವಾದಕ್ಕೊ, ಚರ್ಚೆಗೋ ಪುಸ್ತಕವನ್ನು ಓದದೆ ಯಕ್ಷಗಾನ ಪಾತ್ರ ನಿರೂಪಣೆ ಹಾಗೂ ಜ್ಞಾನದಾಹಕ್ಕೆ ಪುಸ್ತಕಗಳನ್ನು ಕೊಂಡು ಓದುವುದನ್ನು ಅಭ್ಯಾಸ ಮಾಡಿಕೊಂಡಂತಹ ಯಕ್ಷಗಾನ ಕಲಾವಿದರು ಬಹಳ ಕಮ್ಮಿ, ಅಂತಹವರಲ್ಲಿ ನಾಯಕರು ಮುಖ್ಯರು. ನಾಯಕರ ಪುಸ್ತಕ ಪ್ರೀತಿ ಎಷ್ಟಿತ್ತೆಂದರೆ ತಮಗೆ ಕೊಡುಗೆಯಾಗಿ

ಬಂದ ಚಿನ್ನದ ಬಳೆಯನ್ನು ಮಾರಿ ಅವರು ಪುಸ್ತಕಗಳನ್ನು ಕೊಂಡಿದ್ದರಂತೆ. "ಅಂಗದ ಸಂಧಾನ"ದಲ್ಲಿ ಇವರ ಪ್ರಹಸ್ತ, ಸಾಮಗರ ಅಂಗದ ಬಹು ಖ್ಯಾತಿ ಪಡೆದಿದ್ದವು. ಮಾತುಗಾರಿಕೆಯಿಂದ ಮತ್ತು ಅಷ್ಟೇ ಆಕರ್ಷಕ ನಿರೂಪಣೆಯಿಂದ ಜನರನ್ನು ಮಂತ್ರ ಮುಗ್ಧರನ್ನಾಗಿ ಮಾಡಬಲ್ಲ ಶಕ್ತಿ ನಾಯಕರಿಗೆ ಇತ್ತು.

ಮೊದ ಮೊದಲಿಗೆ ಪುರುಷ ವೇಷಗಳಲ್ಲಿ "ಎತ್ತಿದ ಕೈ" ಎನಿಸಿಕೊಂಡ ವೀಭದ್ರನಾಯಕರು ಮುಂದೆ ಎರಡನೇ ವೇಷದಲ್ಲೂ ಎಲ್ಲರಿಂದ "ಸೈ" ಎನಿಸಿಕೊಂಡರು. ಇಂದಿಗೂ ಕನ್ನಡ ಜಿಲ್ಲೆಯ ಜನತೆ ಇವರ ವೃದ್ಧಭೀಷ್ಮ, ಸುಧನ್ವ, ದಶರಥ, ಕರ್ಣ, ರುಕ್ಮಾಂಗದ, ಅರ್ಜುನ, ತಾಮ್ರಧ್ವಜ, ಮೊದಲಾದ ಪಾತ್ರಗಳನ್ನು ಸ್ಮರಿಸಿಕೊಳ್ಳುತ್ತಾರೆ. ಬಣ್ಣದ ವೇಷವಾದ ಮೈರಾವಣನ ಪಾತ್ರವನ್ನು ಬಹು ಒಪ್ಪವಾಗಿ ಶ್ರೀಯುತರು ನಿರ್ವಹಿಸುತ್ತಿದ್ದರು. ಹಾಸ್ಯಗಾರನ ಪಾತ್ರವನ್ನು ಕೆಲವೊಮ್ಮೆ ನಿರ್ವಹಿಸುತ್ತಿದ್ದರು. ಯಾವ ಪಾತ್ರವನ್ನಾದರೂ ಯೋಗ್ಯವಾಗಿ ನಿರೂಪಿಸಬಲ್ಲ ಸಮರ್ಥರಾಗಿದ್ದರು. ಆದುದರಿಂದಲೇ "ದಶವತಾರಿ" ಎಂಬ ಖ್ಯಾತಿ ಇವರದ್ದು.

ವೀರಭದ್ರ ನಾಯಕರು ಯಕ್ಷಗಾನ ಕಲಾವಿದರು ಮಾತ್ರವಲ್ಲ ಯಕ್ಷಗಾನ ಕೃತಿಕಾರರೂ ಹೌದು. ಅವರ "ಸತ್ಯವಾನ ಸಾವಿತ್ರಿ" ಹಾಗೂ "ಬೇಡರ ಕಣ್ಣಪ್ಪ" ಎಂಬ ಯಕ್ಷಗಾನ ಪ್ರಸಂಗಗಳು ಸಾಕಷ್ಟು ಖ್ಯಾತಿಗಳಿಸಿವೆ. ನಾಯಕರು ಯಕ್ಷಗಾನ ಸುಧಾರಣೆಯ ಬಗ್ಗೆ ಖಚಿತ ಅಭಿಪ್ರಾಯ ಉಳ್ಳವರಾಗಿದ್ದರು. ವೇಷಭೂಷಣದಲ್ಲಿ ಬದಲಾವಣೆ ತರುವುದನ್ನು ವಿರೋಧಿಸುತ್ತಿದ್ದ ಇವರು ಕಲಾವಿದನಿಗೆ ಸಾಹಿತ್ಯ ಜ್ಞಾನದ ಅಗತ್ಯವನ್ನು ಪ್ರತಿಪಾದಿಸುತ್ತಿದ್ದರು.

ವೀರಭದ್ರ ನಾಯಕರು ಇಪ್ಪತ್ತು ವರ್ಷಗಳ ಹಿಂದೆಯೇ ಕಲಾಭ್ಯಾಸಿಗಳಿಗೆ ಉಚಿತವಾಗಿ ತರಬೇತಿ ಶಾಲೆಯನ್ನು ಮಾರಣಕಟ್ಟೆಯಲ್ಲಿ ಸ್ಥಾಪಿಸಿದರು. ಅಂದಿನಿಂದಲೇ ಅವರ "ಗುರುತ್ವ" ಪ್ರಾರಂಭವಾಯಿತು. ಆಗ ಇವರ ಮಾರ್ಗದರ್ಶನ ಪಡೆದ ಹಲವಾರು ಜನ ಕಲಾವಿದರು ಇಂದು ಯಕ್ಷಗಾನ ರಂಗದಲ್ಲಿ ಪ್ರಸಿದ್ಧರಾಗಿದ್ದಾರೆ. ಹೆರಂಜಾಲು ವೆಂಕಟರಮಣ, ಬಣ್ಣದ ರಾಮ, ವಂಡಸೆ ಕೊರಗ, ಹಾಸ್ಯಗಾರ ಕೊರಗ ಮುಂತಾದವರು ಅವರಲ್ಲಿ ಮುಖ್ಯರು. ಘಟ್ಟದ ಮೇಲೆ ಕೂಡ ಅನೇಕ ಶಿಷ್ಯರನ್ನು, ಕಲಾವಿದರನ್ನು ಮಾರ್ಗದರ್ಶನ ದ ಮೂಲಕ ತಿದ್ದಿ ತೀಡಿದ್ದಾರೆ. ಅಲ್ಲಿ ಯಕ್ಷಗಾನ ಬೆಳೆಯುವಂತೆ ಮಾಡಿದ್ದಾರೆ.

ದಿ॥ ರಾಮ ಗಾಣಿಗ, ದಿ॥ ಗಣಪತಿ ಮತ್ತು ಗುರು ವೀರಭದ್ರ ನಾಯಕರು ಯಕ್ಷಗಾನ ಲೋಕದ ತ್ರಿಮೂರ್ತಿಗಳೆಂದೇ ಖ್ಯಾತಿ ಗಳಿಸಿದರು. ಹಳೆಯ ತಲೆಮಾರಿನ ಕಲಾಭಿಮಾನಿಗಳಿಂದ ವಿಶೇಷವಾಗಿ ಮೆಚ್ಚಿಗೆ ಗಳಿಸಿದವರು. ದೂರದ ಮುಂಬೈ, ಬೆಂಗಳೂರು, ಮದರಾಸುಗಳಲ್ಲೂ ನಾಯಕರ ಅಸಂಖ್ಯ ಅಭಿಮಾನಿಗಳಿದ್ದಾರೆ.

ಬಡಗುತಿಟ್ಟು ಹಾಗೂ ತೆಂಕುತಿಟ್ಟುಗಳೆರಡರಲ್ಲೂ, ಖ್ಯಾತಿವೆತ್ತ ಶ್ರೀ ವೀರಭದ್ರ ನಾಯಕರನ್ನು ಕೋಣಿಯ ವಿಜಯ ಮಿತ್ರ ಮಂಡಲಿಯವರು, ಉಡುಪಿಯ ಶಿರಿಬೀಡು ಕಲಾ ಸಂಘ, ಶಿರಸಿಯ ಮಾರಿಕಾಂಬ ದೇವಸ್ಥಾನ, ಮಣಿಪಾಲದ ಯಕ್ಷಮಂಡಲ ಮುಂತಾದ ಹಲವು ಸಂಘ ಸಂಸ್ಥೆಗಳು ಸನ್ಮಾನಿಸಿ ಗೌರವ ಸಲ್ಲಿಸಿವೆ.

ಬಡಗುತಿಟ್ಟು ಕಲಾ ಸಂಪ್ರದಾಯ ಇಂತಹ ಅಸಾಮಾನ್ಯ ಪ್ರತಿಭೆಯ ಕಲಾವಿದನನ್ನು ಇಂದು ಕಳೆದುಕೊಂಡಿದೆ.

ಬಡಗುತಿಟ್ಟಿನ ಮೂಲ ಸೆಲೆಯಾದ ವೇಗದ ಕುಣಿತವಾಗಲಿ. ರಸಭರಿತ ಪಾತ್ರ ನಿರೂಪಣೆಯಾಗಲಿ ಇಂತಹ ಹಿರಿಯ ಕಲಾವಿದನ ಅಗಲಿಕೆಯಿಂದ ಸದ್ಯಕ್ಕೆ ಒಂದು ಕೊನೆಯ ಬಿಂದುವನ್ನು ತಲುಪಿದೆ. 76 ವರ್ಷಗಳ ತುಂಬು ಜೀವನ ನಡೆಸಿದ ಶ್ರೀ ಗುರು ವೀರಭದ್ರನಾಯಕರು ಐದು ದಶಕಗಳಿಗೂ ಹೆಚ್ಚು ಕಾಲ ಯಕ್ಷಗಾನ ಕಲೆಗಾಗಿ ತಮ್ಮ ಜೀವನವನ್ನು ಸವೆಸಿದರು. ಅವರ ಅವಸಾನದಿಂದ ಯಕ್ಷರಂಗದ ನೀಲಾಕಾಶದಿಂದ ಉಜ್ವಲ ವರ್ಣ ವಿನ್ಯಾಸದ ಒಂದು ಬಣ್ಣದ ಮೋಡ ಇದೀಗಷ್ಟೇ ಕತ್ತಲೆಯ ಕಾಳಿಮೆಯಲ್ಲಿ ಲೀನವಾದಂತಾಯಿತು.

■

ಪಾಂಡಿತ್ಯ ಪ್ರತಿಭೆಗಳ ಸಮನ್ವಯಕಾರ

ಮಲ್ಪೆ ಶಂಕರನಾರಾಯಣ ಸಾಮಗ

ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಯಕ್ಷಗಾನ ಹೆಚ್ಚಾಗಿ ಗ್ರಾಮಸ್ಥರ ಸ್ವತ್ತಾಗಿತ್ತು. ಇಲ್ಲಿನ ಪ್ರೇಕ್ಷಕರು, ಕಲಾವಿದರು ಪಾರಂಪರಿಕ ತಿಳಿವಳಿಕೆವುಳ್ಳವರಾದ್ದರಿಂದ ರಂಗಭೂಮಿಯಲ್ಲಿ ಅಂತಹ ತ್ವರಿತ ಬದಲಾವಣೆ ಗೋಚರಿಸುವುದಿಲ್ಲ. ಆದರೆ ಈ ಸಾಂಪ್ರದಾಯಿಕ ಚೌಕಟ್ಟು ಹಾಗೇ ಉಳಿಯಲಿಲ್ಲ. ಕ್ರಮ ಕ್ರಮವಾಗಿ ವಿಸ್ತರಿಸುತ್ತಾ ಬಂದು ವಿದ್ಯಾಪ್ರಸಾರ, ಜನಸಾಮಾನ್ಯರಲ್ಲಿ ಹೆಚ್ಚಿದ ವ್ಯಾವಹಾರಿಕ ಅನುಭವ, ಉಳಿದ ಕಲಾಮಾಧ್ಯಮಗಳು ಮಾಡಿದ ಪ್ರಭಾವ ಇವುಗಳಿಂದ ಯಕ್ಷಗಾನದ ಬೇರುಗಳೂ ಅಲ್ಲಾಡಿದವು. ಪ್ರೇಕ್ಷಕರಲ್ಲಿ ಹೊಸತನ್ನು ಬಯಸುವ ಮನೋಭಾವ ಅಂತೆಯೇ ಕಲಾವಿದರಲ್ಲೂ ಹೊಸ ಅಂಶಗಳನ್ನು ಪ್ರಸ್ತುತ ಪಡಿಸುವ ಹುಮಸ್ಸು ಕಾಣಿಸಿಕೊಂಡವು. ಈ ಬಗೆಯ ವಾತಾವರಣದಲ್ಲಿ ಮೊದಲಿಗೆ ಮೂಡಿ ಬಂದವರೆಂದರೆ ಹರಿದಾಸ ಶ್ರೀ ಮಲ್ಪೆ ಶಂಕರನಾರಾಯಣ ಸಾಮಗರು. ಯಕ್ಷಗಾನ ತಾಳಮದ್ದಲೆ ಹಾಗೂ ಬಯಲಾಟಗಳಲ್ಲಿ ಮಾತುಗಾರಿಕೆ ಪ್ರಧಾನ ಪಟ್ಟ ಬರಲು ಕಾರಣರಾದವರಲ್ಲಿ ಸಾಮಗರು ಪ್ರಧಾನರು. ಹರಿದಾಸರಾಗಿ, ತಾಳಮದ್ದಲೆ ಅರ್ಥಧಾರಿಯಾಗಿ, ಯಕ್ಷಗಾನ ಕಲಾವಿದರಾಗಿ ಶ್ರೀಯುತರು ಗಳಿಸಿದ ಯಶಸ್ಸು ಬೆರಗುಗೊಳಿಸುವಂತಹುದು. ಒಂದು ದೃಷ್ಟಿಯಿಂದ

ಮಾತುಗಾರಿಕೆಯ ಶಕೆಯನ್ನೇ ಇವರು ಪ್ರಾರಂಭಿಸಿದರೆನ್ನಬಹುದು. ಬದುಕಿನಲ್ಲೂ ಬೇರೆ ಬೇರೆ ರಂಗಗಳಲ್ಲಿ ದುಡಿದು, ಅನುಭವವನ್ನು ಗಳಿಸಿರುವ ಇವರ ವಿಚಾರ ಕುತೂಹಲಕಾರಿಯಾಗಿದೆ. ಅರ್ಚಕರಾಗಿ, ಸತ್ಯಾಗ್ರಹಿಯಾಗಿ, ನಟರಾಗಿ, ಅಧ್ಯಾಪಕರಾಗಿ, ಹರಿದಾಸರಾಗಿ, ಕಲಾವಿದರಾಗಿ ಇವರು ಜಿಲ್ಲೆಯಾದ್ಯಂತ ಖ್ಯಾತರಾಗಿದ್ದಾರೆ. ಅಪ್ಪಟ ಗಾಂಧಿವಾದಿಯಾಗಿ ಸ್ವಾತಂತ್ರ್ಯದ ಸವಿ ಉಣ್ಣಲು ತುರಂಗ ವಾಸದ ಶಿಕ್ಷೆಯನ್ನು ಅನುಭವಿಸಿದ್ದರು.

75 ವರ್ಷ ವಯಸ್ಸಿನ ಶ್ರೀ ಸಾಮಗರು ಮೂಲತಃ ವೈದಿಕ ಮನೆತನದವರು. ತಂದೆ ಶ್ರೀ ಲಕ್ಷ್ಮೀನಾರಾಯಣ ಸಾಮಗರು ವೃತ್ತಿಯಲ್ಲಿ ಪುರೋಹಿತರು, ಹಾಗೂ ಹವ್ಯಾಸಿ ಪುರಾಣಿಕರಾಗಿದ್ದರು. ಯಕ್ಷಗಾನ ಪ್ರಪಂಚಕ್ಕೆ ಹೆಸರುವಾಸಿಯಾದ ಹಾರಾಡಿ ಇವರ ಅಜ್ಜನ ಮನೆ. ಅಲ್ಲೇ ಹುಟ್ಟಿದ ಇವರು ಬಾಲ್ಯವನ್ನು ಕಳೆದದ್ದು ಅಲ್ಲೇ. ಇವರ ತಾಯಿ ಲಕ್ಷ್ಮೀ ಅಮ್ಮ ಆ ಕಾಲಕ್ಕೆ ಹಳ್ಳಿಯ ಹಾಡುಗಳನ್ನು, ದೇವರನಾಮಗಳನ್ನು, ಬೀಸುವ ಹಾಡುಗಳನ್ನು, ಶೋಭಾನೆ ಹಾಡುಗಳನ್ನು 300–400 ರಷ್ಟು ಕಂಠ ಪಾಠ ಮಾಡಿದವರಾಗಿದ್ದರು. ಆಸುಪಾಸಿನ ಮದುವೆ ಮುಂಜಿಗಳಲ್ಲಿ ಇದಕ್ಕಾಗಿಯೇ ಇವರಿಗೆ ಗೌರವ ಸಲ್ಲುತ್ತಿತ್ತು. ಬಾಲಕರಾದ ಇವರ ಹಾಗೂ ಇವರ ತಮ್ಮ ಶ್ರೀ ರಾಮದಾಸ ಸಾಮಗರಲ್ಲಿ ತಾಯಿ ಪ್ರಭಾವ ಬೀರಿದ್ದರಲ್ಲಿ ಸಂದೇಹವಿಲ್ಲ. ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಮೆಟ್ರಿಕ್ಯುಲೇಷನ್ ವರೆಗೆ ಓದಿದ ಇವರು ವಿದ್ಯಾಭ್ಯಾಸದ ಕಾಲದಲ್ಲೇ ಅರ್ಚಕರೂ ಆಗಿದ್ದರು. ಸಂಸ್ಕೃತ ಕಲಿಕೆಯಲ್ಲಿ ಇಡೀ ಜಿಲ್ಲೆಗೆ ಪ್ರಥಮರಾದರು. ಲೆಕ್ಕ ತಲೆಗೆ ಹತ್ತಲಿಲ್ಲ. ಇದರಿಂದಾಗಿ ಅನುತ್ತೀರ್ಣರಾದ ಇವರು ನಾಚಿಕೆ ಹಾಗೂ ಭಯದಿಂದಾಗಿ ಮನೆಯಿಂದ ಹೇಳದೆ ಕೇಳದೆ ಓಡಿಹೋದರು. ಕಡೂರಿನಲ್ಲಿನ ನಾಟಕ ಕಂಪೆನಿಯೊಂದರಲ್ಲಿ ಸ್ವಲ್ಪ ಕಾಲ ಮಾಣಿ ಆಗಿದ್ದು ಬೆರಳಚ್ಚಿನ ಅಭ್ಯಾಸ ನಡೆಸಿದರು. ಆ ಕಾಲವೆಂದರೆ ಸ್ವಾತಂತ್ರ್ಯ ಚಳುವಳಿಯ ಬಿರುಸಿನ ಕಾಲ. ಬಳ್ಳಾರಿಯಲ್ಲಿ ಇವರಿಗೆ ಅನೇಕ ಹೋರಾಟಗಾರರ ಸಂಪರ್ಕ ಲಭಿಸಿತು. ಅಲ್ಲೇ ಗಾಂಧಿಯವರ ಪರಮ ಭಕ್ತರಾದರು. ಕಾಂಗ್ರೆಸ್ ಸಂಸ್ಥೆಯ ಸದಸ್ಯರಾಗಿ ಸಕ್ರಿಯವಾಗಿ ದುಡಿದರು, ಹುಬ್ಬಳ್ಳಿಯಲ್ಲಿ ಡಾ॥ ಹರ್ಡೇಕರ್ ನಡೆಸುತ್ತಿದ್ದ ಸ್ವಯಂ ಸೇವಾ ಸಂಘದಲ್ಲಿ ಭಾಗವಹಿಸಿದರು. ಇದರ ಫಲವಾಗಿ ಇವರಿಗೆ ಆರು ತಿಂಗಳ ಕಠಿಣ ಶಿಕ್ಷೆ ಲಭಿಸಿತು. ಜೈಲಿನಿಂದ ಬಿಡುಗಡೆಯಾಗಿ ಊರಿಗೆ ಬಂದ ನಂತರ ಶ್ರೀ ಸಾಮಗರು ಅಮವಾಸೆ ಬೈಲಿನಲ್ಲಿ ಅಧ್ಯಾಪಕರಾದರು. ಮತ್ತೆ ಕಾಂಗ್ರೆಸ್ ಚಳುವಳಿ ಬಿರುಸಾದಾಗ ಅಧ್ಯಾಪಕ ವೃತ್ತಿಯನ್ನು ತ್ಯಜಿಸಿ ಚಳುವಳಿಗೆ ಧುಮುಕಿದರು. ಇದರ ಫಲವಾಗಿ ಪುನಃ ತುರಂಗ ವಾಸ ಲಭಿಸಿತು.

ಈ ಬಾರಿಯ ಜೈಲು ಶಿಕ್ಷೆ ಸಾಮಗರ ಪಾಲಿಗೆ ವರವಾಗಿ ಪರಿಣಮಿಸಿತು. ಯಕ್ಷಗಾನದ ಪ್ರಸಿದ್ಧ ಅರ್ಥಧಾರಿಗಳಾದ ನಾರಾಯಣ ಕಿಲ್ಲೆ, ಅಣ್ಣಪ್ಪ ಕಾರಂತ

ಮುಂತಾದವರು ಸಹವರ್ತಿಗಳಾಗಿ ಸಿಕ್ಕಿದ್ದರಿಂದ ತಾಳ ಮದ್ದಲೆ ರಂಗಕ್ಕೆ ಬರಲು ಸಾಧ್ಯವಾಯಿತು. ಯಕ್ಷಗಾನದಲ್ಲಿ ವ್ಯಕ್ತವಾಗುವ ಧರ್ಮಬೋಧೆಯನ್ನು ಕುರಿತು ಪುಸ್ತಕವೊಂದನ್ನು ಬರೆದು ಸಾಹಿತ್ಯಾಸಕ್ತರಿಗೆ ಪರಿಚಿತರಾಗಿದ್ದಾರೆ.

ಶ್ರೀ ಸಾಮಗರು ಹರಿದಾಸರಾಗಿ ಮಾರ್ಪಟ್ಟಿದ್ದು ವಿಶೇಷ ಸಂದರ್ಭ ಒಂದರಲ್ಲಿ ಸ್ವಾತಂತ್ರ್ಯ ಪೂರ್ವ ಕಾಲದಲ್ಲಿ ಕ್ರೈಸ್ತ ಮಿಷನರಿಗಳು ಮತಪ್ರಚಾರಕ್ಕೆ ನಡೆಸುತ್ತಿದ್ದ ಕಾರ್ಯಗಳಿಗೆ ತದ್ವಿರುದ್ಧವಾಗಿ ಏನಾದರು ಮಾಡಬೇಕೆಂಬ ಸ್ನೇಹಿತರ ಒತ್ತಾಸೆಯ ಫಲವಾಗಿ ಹರಿಕತೆಯನ್ನು ಆಶ್ರಯಿಸಿದರು. ಇದಕ್ಕೆ ಪೂರಕವಾಗಿ ಸಂಸ್ಕೃತ ಪಂಡಿತರಾಗಿದ್ದ ಚಿಕ್ಕಪ್ಪ. ಶ್ರೀ ಪುಟ್ಟಣ್ಣ ಸಾಮಗರು ಸಂಸ್ಕೃತದ ಸುಭಾಷಿತ ಉಕ್ತಿಗಳನ್ನು ಉಪಕತೆಗಳ ಸಂಗ್ರಹಗಳನ್ನು ನೀಡಿದರು. ಧರ್ಮಸ್ಥಳದ ಶ್ರೀಮಂಜಯ್ಯ ಹೆಗಡೆಯವರೂ ಪ್ರೋತ್ಸಾಹಿಸಿದರು. ಹೀಗೆ ಹರಿದಾಸರಾಗಿ ಕರ್ನಾಟಕಾದ್ಯಂತ ಖ್ಯಾತರಾಗಿದ್ದ ಇವರನ್ನು ಸತ್ಯಾಗ್ರಹಿ ಸ್ನೇಹಿತರು ತಾಳಮದ್ದಲೆಗೆ ಆಹ್ವಾನಿಸಿದರು. ಶ್ರೀ ನಾರಾಯಣ ಕಿಲ್ಲೆ, ಶ್ರೀ ವೆಂಕಪ್ಪ ಶೆಟ್ಟಿ, ಶ್ರೀ ಶಂಕರನಾರಾಯಣ ಶಾಸ್ತ್ರಿ, ಶ್ರೀ ಸುಬ್ಬರಾಯ ಆಚಾರ್, ಮುಂತಾದವರೊಂದಿಗೆ ಶ್ರೀ ಸಾಮಗರು ಅರ್ಥಗಾರಿಕೆಯಲ್ಲಿ ಮಿಂಚಿದರು.

ತಾಳಮದ್ದಲೆಯ ಅರ್ಥಗಾರಿಕೆಯ ಖ್ಯಾತಿಯು ಇವರನ್ನು ವೇಷಗಾರಿಕೆಗೂ ಸೆಳೆಯಿತು. ಶಾಸ್ತ್ರೀಯವಾದ ಕುಣಿತದ ಅನುಭವ ಇಲ್ಲವಾದರು ಮಾತಿನ ಶಕ್ತಿಯಿಂದಾಗಿ ಈ ಕ್ಷೇತ್ರದಲ್ಲೂ ಜನಮನವನ್ನು ರಂಜಿಸಿದರು. ಶ್ರೀ ಸಾಮಗರು ಬಡಗುತಿಟ್ಟಿನಲ್ಲಿ ಗುರು ಶ್ರೀ ವೀರಭದ್ರ ನಾಯಕರು, ತೆಂಕುತಿಟ್ಟಿನಲ್ಲಿ ಶ್ರೀ ಅಗರಿ ಶ್ರೀನಿವಾಸ ಭಾಗವತರು ನೀಡಿದ ಮಾರ್ಗದರ್ಶವನ್ನು ಆತ್ಮೀಯವಾಗಿ ನೆನೆಯುತ್ತಾರೆ. ಬಡಗುತಿಟ್ಟಿನ ಸೌಕೂರು, ಅಮೃತೇಶ್ವರಿ. ಸಾಲಿಗ್ರಾಮ, ಹಿರಿಯಡ್ಕ ಮೇಳಗಳಲ್ಲಿಯೂ ತೆಂಕುತಿಟ್ಟಿನ ಧರ್ಮಸ್ಥಳ, ಇರಾಸೋಮನಾಥೇಶ್ವರ, (ಕುಂಡಾವು) ಕುತ್ಯಾಳ (ಕಾಸರಗೋಡು) ಸುರತ್ಕಲ್ ಮೇಳಗಳಲ್ಲಿಯೂ ವೇಷಧಾರಿಯಾಗಿ ಹೆಸರು ಗಳಿಸಿದವರು. ಶ್ರೀ ಶಂಕರನಾರಾಯಣ ಸಾಮಗರು ಅನೇಕಬಾರಿ ಅತಿಥಿ ಕಲಾವಿದರಾಗಿ ಇಡಗುಂಜಿ, ಕೊಲ್ಲೂರು, ಕದ್ರಿ ಮೇಳಗಳಲ್ಲೂ ಪ್ರದರ್ಶನವಿತ್ತಿದ್ದಾರೆ. ಶೃಂಗಾರ, ಭಕ್ತಿ, ಹಾಸ್ಯ ರಸಗಳಲ್ಲಿ ಬಹು ಆಕರ್ಷಕವಾಗಿ ಪಾತ್ರಾಭಿವ್ಯಕ್ತಿಯನ್ನು ಮಾಡಬಲ್ಲ ಶ್ರೀಯುತರ ಹಲವು ಪಾತ್ರಗಳು ಜನಮನದಲ್ಲಿ ಚಿರಸ್ಥಾಯಿಯಾಗಿವೆ. ಶ್ರೀ ಕೃಷ್ಣ ಸಂಧಾನ, ಭೀಷ್ಮಾರ್ಜುನ, ಅಂಗದ ಸಂಧಾನ, ಕರ್ಣಾರ್ಜುನ ಕಾಳಗ, ಕೃಷ್ಣಾರ್ಜುನ ಕಾಳಗ, ಗದಾ ಪರ್ವ, ಸತ್ಯ ಹರಿಶ್ಚಂದ್ರ ಮುಂತಾದ ಪ್ರಸಂಗಗಳನ್ನು ಹೆಚ್ಚು ಮೆಚ್ಚುವ ಶ್ರೀಯುತರು ಪಾರ್ತಿಸುಬ್ಬ, ಹಲಸಿನಹಳ್ಳಿ ನರಸಿಂಹ ಶಾಸ್ತ್ರಿ, ಮುದ್ದಣ, ದೇವಿದಾಸ ಮುಂತಾದವರ ಪ್ರಸಂಗ ರಚನಾ ಸಾಮರ್ಥ್ಯವನ್ನು ಹೊಗಳುತ್ತಾರೆ. ಶ್ರೀ ಶೇಷಗಿರಿ ಕಿಣಿ, ಶ್ರೀನಿವಾಸ ಉಪ್ಪೂರ, ಶ್ರೀ ಅಗರಿ ಶ್ರೀನಿವಾಸ ಭಾಗವತ, ಶ್ರೀ ನಾರಾಯಣಪ್ಪ ಉಪ್ಪೂರ, ಮುಂತಾದವರ ಭಾಗವತಿಕೆಯಲ್ಲಿನ ಉತ್ತಮ

ಅಂಶಗಳನ್ನು ಹೊಗಳುವ ಸಾಮಗರು ಶ್ರೀ ರಾಮಚಂದ್ರ ನಾವಡ, ನೀಲಾವರ ಶ್ರೀ ರಾಮಕೃಷ್ಣಯ್ಯ. ಶ್ರೀ ಕಾಳಿಂಗ ನಾವಡ, ಶ್ರೀ ಬಲಿಪ ನಾರಾಯಣ ಭಾಗವತ, ಶ್ರೀ ಕಡತೋಕ ಮಂಜುನಾಥ ಭಾಗವತ ಮುಂತಾದವರ ಭಾಗವತಿಕೆಯನ್ನು ಮೆಚ್ಚುತ್ತಾರೆ. ಹಳೆಯ ಕಲಾವಿದರ ಅನೇಕರ ಸಹಚರ್ಯವುಳ್ಳ ಇವರಿಗೆ ಅಂದಿನ ಪಾತ್ರಧಾರಿಗಳ ಪ್ರೌಢಿಮೆಯ ಬಗ್ಗೆ ಅಪಾರ ಗೌರವ. ಕೊಕ್ಕರ್ಣೆ ಶ್ರೀ ನರಸಿಂಹ, ಕೊಳ್ಕೆಬೈಲು ಶ್ರೀ ಶೀನ, ಶ್ರೀ ಕೋಳ್ಯೂರು ರಾಮಚಂದ್ರರಾವ್ ಮುಂತಾದವರ ಸ್ತ್ರೀ ಪಾತ್ರ, ಪೆರ್ಡೂರು ಶ್ರೀ ವೆಂಕಟೇಶ, ಸಾಲಿಗ್ರಾಮ ಶ್ರೀ ಮಂಜುನಾಥಯ್ಯ, ಪೆರುವೊಡಿ ಶ್ರೀ ನಾರಾಯಣ ಭಟ್, ವಿಟ್ಲ ಶ್ರೀ ಜೋಶಿ ಮುಂತಾದವರ ಹಾಸ್ಯವನ್ನು, ಹಿರಿಯಡ್ಕ ಶ್ರೀ ಗೋಪಾಲರಾವ್ ಶ್ರೀ ಗುಂಡುನಾಯಕ, ಶ್ರೀ ತಿಮ್ಮಪ್ಪ ನಾಯಕ, ಶ್ರೀ ದುರ್ಗಪ್ಪ ಗುಡಿಗಾರ, ಶ್ರೀ ಕದ್ರಿ ಕಿಟ್ಟು, ಶ್ರೀ ಕುದ್ರಿಕೋಡು ರಾಮಣ್ಣ, ನಿಡ್ಲೆ ಶ್ರೀ ನರಸಿಂಹ ಭಟ್ಟ, ಚಿಪ್ಪಾರು ಶ್ರೀ ಕೃಷ್ಣಯ್ಯ ಬಲ್ಲಾಳ್, ಮುಂತಾದ ಮೃದಂಗ ವಾದಕರನ್ನು ಬಹುವಾಗಿ ಮೆಚ್ಚಿಕೊಂಡಿದ್ದಾರೆ. ಈ ಎಲ್ಲಾ ಕಲಾವಿದರ ಸಹಕಾರದಿಂದ ಪಾತ್ರಾಭಿವ್ಯಕ್ತಿಗೆ ಸಹಾಯಕವಾಗಿದೆ ಎಂಬುದು ಇವರ ಅಭಿಮತ.

75ರ ಗಡಿದಾಟಿರುವ ಶ್ರೀ ಶಂಕರನಾರಾಯಣ ಸಾಮಗರಿಗೆ ಐವತ್ತು ವರ್ಷಕ್ಕೂ ಹೆಚ್ಚಿನ ಅನುಭವ ಇದೆ. ಅನೇಕ ಕಲಾವಿದರಿಗೆ, ಅರ್ಥಧಾರಿಗಳಿಗೆ ಆದರ್ಶರಾಗಿ ಯುಗ ಒಂದನ್ನೇ ನಿರ್ಮಿಸಿದವರಾಗಿದ್ದಾರೆ. ಇವರ ಪಾಂಡಿತ್ಯ ಪ್ರತಿಭೆ ಪ್ರತ್ಯುತ್ಪನ್ನ ಮತಿತ್ವಕ್ಕೆ ಸರಿಸಾಟಿ ಇಲ್ಲವೋ ಎನ್ನುವಂತಹ ಸ್ಥಿತಿ ಇದೆ. ಶ್ರೀ ಶೇಣಿ ಸಾಮಗರ ಜೋಡಿ ಎಂದರೆ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬರೇ ಮಾತು ಕೇಳಲು ಜನ ಆಗಮಿಸುತ್ತಾರೆ. ವರ್ಷದ ಆರು ತಿಂಗಳು ಮೇಳದೊಂದಿಗೆ ಊರಿಂದೂರಿಗೆ ಸಂಚರಿಸಬೇಕಾದ ಜೀವನ ವ್ಯವಸ್ಥೆಯ ಬಗ್ಗೆ ಬೇಸರವೇನೂ ಇಲ್ಲ. ಸಮರ್ಥವಾಗಿ ಮನೆವಾರ್ತೆಯನ್ನು ತೂಗಿಸಿಕೊಂಡು ಹೋಗಬಲ್ಲ ಶ್ರೀಮತಿ ಇದ್ದರೆ, ಸಾಕಷ್ಟು ದೇಹಬಲ, ಆರೋಗ್ಯವಿದ್ದರೆ ಈ ವೃತ್ತಿಯಿಂದ ಏನೂ ತೊಂದರೆ ಇಲ್ಲ ಎನ್ನುತ್ತಾರೆ. ಹೀಗೆ ವೈವಿಧ್ಯಮಯ ಅನುಭವವುಳ್ಳ ಈ ಅರ್ಥಧಾರಿಯ ಚಿಂತನೆಗಳಿಗೆ ಯಕ್ಷಗಾನ ರಂಗದಲ್ಲಿ ವಿಶೇಷ ಬೆಲೆ ಇದೆ. ಒಬ್ಬ ಪ್ರಾಜ್ಞ ಕಲಾವಿದರಾದ ಇವರು ನೀಡುವ ಸಲಹೆ ಸೂಚನೆಗಳು ಆಸಕ್ತರೆಲ್ಲರ ಸ್ವಾಗತಕ್ಕೆ ಕಾರಣವಾಗಿದೆ.

ಪ್ರ : ಹರಿಕಥೆ, ತಾಳ ಮದ್ದಲೆ ಹಾಗೂ ಆಟಗಳ ಮಾತುಗಾರಿಕೆಯಲ್ಲಿ ನೀವು ಕಂಡುಕೊಂಡ ವ್ಯತ್ಯಾಸಗಳ ಸ್ವರೂಪ ಏನು?

ಉ : ಹರಿಕಥೆಯ ವೃತ್ತಿಯಲ್ಲಿ ಸಾಂಘಿಕವಾದ ಅಂದರೆ ಮೇಳದಲ್ಲಿರುವಂತೆ ಇದಿರು ಕಲಾವಿದನೊಂದಿಗೆ ಕೂಡಿ ಅರ್ಥ ಬೆಳೆಸುವ ಅವಶ್ಯಕತೆ

ಇಲ್ಲ. ಅಲ್ಲಿ ಸಾಹಿತ್ಯ, ಸಂಗೀತಗಳ ಜ್ಞಾನವಿದ್ದು ತಕ್ಕಷ್ಟು ಸ್ವರ ಭಾರವಿದ್ದು, ಶಾಸ್ತ್ರ ಪುರಾಣಗಳ ಕಥೆಯನ್ನು ಸಂದರ್ಭಕ್ಕೆ ಸರಿಯಾಗಿ ಉಪಯೋಗಿಸುವ, ಶ್ರೋತೃಗಳ ಮನೋನಾಡಿಯನ್ನು ಅರಿಯುವ ಶಕ್ತಿಯಿದ್ದು ಸುಲಲಿತವಾಗಿ ಬೋಧಿಸಲು ಸಮರ್ಥರಾದರೆ ಸರಿ. ತಾಳ ಮದ್ದಲೆಯಲ್ಲಾದರೋ ಈ ಎಲ್ಲಾ ಯೋಗ್ಯತೆಗಳೊಂದಿಗೆ ಪ್ರಸಂಗಾನುಸಾರವಾಗಿ ಬರುವ ವಾದ ಪ್ರತಿವಾದಗಳನ್ನು ಮೊದಲೇ ಅರಿತುಕೊಳ್ಳುವ ಬುದ್ಧಿ ಚಾತುರ್ಯವು, ಪಾಂಡಿತ್ಯವು, ಯುಕ್ತ ವಿಚಾರವು ಇರಬೇಕಾಗುತ್ತದೆ. ಆಟದಲ್ಲಾದರೆ ವೇಷ ಹಾಕಿಕೊಂಡಿರುವುದರಿಂದ ಆಹಾರ್ಯ ಅಭಿನಯಗಳಿಂದ ಪಾತ್ರದ ಸ್ವಭಾವಕ್ಕೆ ತಕ್ಕ ಮಾತನಾಡಬೇಕಾಗುತ್ತದೆ. ಇವೆಲ್ಲವೂ ಏಕತ್ರ ಸಂಧಿಸುವುದು ಕಷ್ಟ. ಉದಾಹರಣೆಗೆ ಬಡಗಿನಲ್ಲಿ ಮಾತುಗಾರಿಕೆಯಲ್ಲಿ ಕ್ಷೀಣಬಲರಾಗಿದ್ದ ಗಣಪತಿ ಪ್ರಭು, ಹಾರಾಡಿ ರಾಮ ಮುಂತಾದವರು ಅಭಿನಯ ಕುಣಿತ, ವೇಷಗಾರಿಕೆಯ ಸಾಮರ್ಥ್ಯದಿಂದ ಆಟದಲ್ಲಿ ಖ್ಯಾತರಾಗಿದ್ದಾರೆ. ಅದೇ ರೀತಿ ತೆಂಕಿನಲ್ಲಿ ಇತರ ಯೋಗ್ಯತಾ ಸಂಪನ್ನತೆಯಲ್ಲಿ ಸಾಮಾನ್ಯರೇ ಆದರೂ ಶ್ರೀ ಶೇಣಿ ಗೋಪಾಲ ಕೃಷ್ಣ ಭಟ್ಟರು ಪಾಂಡಿತ್ಯಪೂರ್ವಕ ಮಾತಿನ ಚಾತುರ್ಯದಿಂದ ಖ್ಯಾತರಾಗಿದ್ದಾರೆ.

ಪ್ರ : ನಿಮ್ಮ ಬಾಲ್ಯದ ದಿನಗಳ ಆಟಕ್ಕೂ ಇಂದಿನ ಆಟಗಳಿಗೂ ವ್ಯತ್ಯಾಸ ಕಾಣಿಸುತ್ತಿದೆಯೇ? ವಿವರಿಸಬಹುದೇ?

ಉ : ಸುಮಾರು 60 ವರ್ಷಗಳ ಮೊದಲು ಯಕ್ಷಗಾನ ಬಯಲಾಟಗಳಲ್ಲಿ ಮಾತುಗಾರಿಕೆಗೆ ವಿಶೇಷ ಆಕರ್ಷಣೆ ಇದ್ದಿರಲಿಲ್ಲ. ಅಂದಿನ ಜನಕ್ಕೆ ಆಟದಲ್ಲಿನ ಸಾಹಿತ್ಯಿಕ ಅಭಿರುಚಿ ಅಷ್ಟಾಗಿ ಇರಲಿಲ್ಲ. ವಿಚಾರ ಸಂಗ್ರಹ, ಬೌದ್ಧಿಕ ವಿಷಯ ಸಂಗ್ರಹ ಬೇಕಾಗಿರಲಿಲ್ಲ. ಬದಲು ವೇಷ, ನರ್ತನ, ಗೀತ ಇಂತಹವುಗಳಿಂದ ಸಾಕಷ್ಟು ತೃಪ್ತಿ ಹೊಂದುತ್ತಿದ್ದರು. ಆದರೆ ಈಗ ಕಾಲ ಬದಲಾಗಿದೆ ತಾನೇ? ಶಿಕ್ಷಣದಿಂದ, ಪತ್ರಿಕೆ, ಪುಸ್ತಕಗಳಿಂದ, ಭಾಷಣ ಪ್ರವಚನಗಳಿಂದ ಸಂಗ್ರಹಣಾಶಕ್ತಿ ಹೆಚ್ಚಿದೆ. ಇವತ್ತಿನ ಪ್ರೇಕ್ಷಕರಲ್ಲಿ ರಸಾಸ್ವಾದನೆ ಅಂತಃ ಸಂಸ್ಕಾರವು ಬದಲಾಗಿದೆ. ಹಿಂದೆ ಕೇವಲ ಆರ್ಭಟ ಅಬ್ಬರಗಳಿಂದಲೇ ದುಷ್ಟನ ಕ್ರೌರ್ಯವನ್ನು ಅರಿತುಕೊಳ್ಳುತ್ತಿದ್ದರು. ಇಂದು ಅಷ್ಟೇ ಸಾಕಾಗುವುದಿಲ್ಲ. ಆ ಪಾತ್ರ ಸಂಬಂಧವಾದ ಭಾವ ಪ್ರಕಾಶನಕ್ಕೆ ಮಾತೂ ಅವಶ್ಯಕ. ಈ ಕಾರಣದಿಂದಾಗಿಯೇ ಮಾತುಗಾರಿಕೆಗೆ ಹೆಚ್ಚು ಬಲ ಬಂದಿದೆ.

ಪ್ರ : ಯಕ್ಷಗಾನ ರಂಗಕ್ಕೆ ಹರಿದಾಸರ ಕೊಡುಗೆ ಏನು?

ಉ : ಯಕ್ಷಗಾನ ಆಟಕ್ಕೆ ಹರಿದಾಸರ ಕೊಡುಗೆ ಎಂದರೆ ಮಾತುಗಾರಿಕೆ ಒಂದೇ. ಇದರಿಂದ ಇಂದಿನ ಆಟಕ್ಕೆ ಅವಶ್ಯವಿರುವ ಉಪಕಾರವೇ ಆಗಿದೆ.

ಪ್ರ : ಹರಿಕಥಾ ಸಂಪ್ರದಾಯದ ಬಗ್ಗೆ ನಿಮ್ಮ ಅನಿಸಿಕೆಗಳೇನು?

ಉ : ಅಭ್ಯುದಯ, ಶ್ರೇಯಸ್ಸುಗಳನ್ನು ಸಾಧಿಸುವ ಧರ್ಮಬೋಧೆಯನ್ನು ಜನಗಳಿಗೆ ತಿಳಿಸಲು ಇರುವ ಉತ್ತಮ ವರ್ಚಸ್ವಿ ಕಲೆಯೇ ಹರಿಕಥೆ, ಸಾಹಿತ್ಯ ಸಂಗತಿಗಳ ಸಂಯುಕ್ತಿಕ ಮಿಶ್ರಣವುಳ್ಳ ವ್ಯಕ್ತಿತ್ವವನ್ನೇ ಪ್ರಧಾನವಾಗಿ ಇಟ್ಟುಕೊಂಡಿರುವ ಈ ಹರಿಕಥೆಯು ಸಂಸ್ಕೃತಿ ಪ್ರಸರಣದಲ್ಲಿ, ಜನಕಲ್ಯಾಣ ಸಾಧನೆಯಲ್ಲಿ ಮುಖ್ಯ ಪಾತ್ರವಹಿಸುತ್ತದೆ. ಆದರೆ ಇಂದು ವಿಲಾಸಗಳಿಗೆ ಜನ ಹೆಚ್ಚು ಮಾರುಹೋಗಿರುವಾಗ ಈ ಕಲೆಯ ಉಳಿವಿನ ಬಗ್ಗೆ ಯೋಚಿಸಬೇಕಾಗುತ್ತದೆ. ಹರಿಕಥೆಯನ್ನು ಜೀವನ ವೃತ್ತಿಯನ್ನಾಗಿ ಮಾಡಿಕೊಂಡವನು ಸಾಹಿತ್ಯ ಸಂಗೀತಗಳಲ್ಲಿ ಅಭ್ಯಾಸಮಾಡಿ ಉತ್ತಮ ವಾಗ್ಮಿಯಾಗಿ ದಿನಕ್ಕೆ ಒಂದೊಂದು ಊರನ್ನು ಸಂಚರಿಸುತ್ತಾ ಶ್ರಮ ಸಹಿಷ್ಣುವಾಗಿ, ಚಾರಿತ್ರ್ಯ ಶುದ್ಧಿಯಿಂದ ಜನಗಳ ಮೇಲೆ ಪ್ರಭಾವ ಬೀರಬೇಕಾಗುತ್ತದೆ.

ಪ್ರ : ಟೆಂಟ್ ಮೇಳಗಳು ಬಂದ ನಂತರದ ಯಕ್ಷಗಾನದ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಉ : ಯಕ್ಷಗಾನಕ್ಕೆ ಟೆಂಟ್ ಆಟದ ಪದ್ಧತಿ ಬಂದದ್ದರಿಂದ ಅಪಚಾರವೇನು ಆಗಿಲ್ಲ. ಉಪಕಾರವೇ ಆಗಿದೆ. ಪ್ರೇಕ್ಷಕರಿಗೆ ಶಿಸ್ತಿನಿಂದ ಕುಳಿಕುಕೊಂಡು ವ್ಯವಸ್ಥೆಯಿಂದ ನೋಡುವ ಸೌಕರ್ಯ ಸಿಕ್ಕುವಂತೆ ಆಗಿದೆ. ಇಂದಿನ ಜನ ಮನೋವೃತ್ತಿಗೆ ಇದು ಅಗತ್ಯವೂ ಹೌದು. ಹಣಕೊಟ್ಟು ಆಟಕ್ಕೆ ಬರುವುದರಿಂದ ಆಸಕ್ತಿ ಇರುವವರು ಮಾತ್ರ ಬರುತ್ತಾರೆ. ಅಲ್ಲದೆ ಹಣದ ಪ್ರಮಾಣವೇನೂ ಅಂತಹ ಹೆಚ್ಚಿಗೆ ಏನೂ ಅಲ್ಲ. ಸಭಾಲಕ್ಷಣದಲ್ಲಿನ ಲೋಪ, ನಾಟಕದ ವೇಷಗಳ ಆಗಮನ ಇವೆಲ್ಲಾ ಸ್ವಲ್ಪ ಮಟ್ಟಿಗೆ ಆಟದ ಮೂಲ ಸ್ವರೂಪ ಹ್ರಾಸವಾಗಲು ಕಾರಣವಾಗಿದೆ. ಈ ದೋಷವು ಸಹ್ಯವೇ ಹೊರತು ಯಕ್ಷಗಾನ ದಾರಿ ತಪ್ಪಿದೆ ಎನ್ನುವಂತಿಲ್ಲ.

ಪ್ರ : ಯಕ್ಷಗಾನ ರಂಗದಲ್ಲಿ ಹವ್ಯಾಸಿ ಕಲಾವಿದರ ಭವಿಷ್ಯವೇನು?

ಉ : ಯಕ್ಷಗಾನದಲ್ಲಿ ಹವ್ಯಾಸಿ ಕಲಾವಿದರ ಸಂಘ ಸಂಸ್ಥೆಗಳು ಹೆಚ್ಚುತ್ತಿದ್ದು ಸಂದರ್ಭ ಸಿಕ್ಕಾಗ ಅವರು ಆಟಗಳನ್ನು ಪ್ರದರ್ಶಿಸುತ್ತಿದ್ದಾರೆ. ಇದು ಮೆಚ್ಚತಕ್ಕ ವಿಷಯ. ಶಾಲಾ ಅಧ್ಯಾಪಕರು. ಪ್ರಾಧ್ಯಾಪಕರು, ಡಾಕ್ಟರರು, ವಕೀಲರು ಮುಂತಾದವರೆಲ್ಲಾ ಸೇರಿ ಉನ್ನತ ಮಟ್ಟದಲ್ಲಿ ಅಭ್ಯಾಸ ಮಾಡಿರುತ್ತಾರೆ. ಇವರಿಂದ ವಿಮರ್ಶನಾ ದೃಷ್ಟಿ ಯಕ್ಷಗಾನ ರಂಗಕ್ಕೆ ಬಂದಿದೆ. ಅಭ್ಯಾಸವಾಗುತ್ತದೆ. ಹವ್ಯಾಸಿ ಕಲಾವಿದರ ಭವಿಸ್ಯದ ಬಗ್ಗೆ ಕೆಲವು ಅನುಮಾನಗಳಿವೆ. ಏಕೆಂದರೆ ಮೊದಲಿದ್ದ ಆಸಕ್ತಿಯೇ ಶ್ರದ್ಧೆಯೇ ಕೊನೆಯವರೆಗೂ ಕಂಡು ಬರುತ್ತಿಲ್ಲ.

ಪ್ರ : ಯಕ್ಷಗಾನಕ್ಕೆ ಒಬ್ಬ ನಿರ್ದೇಶಕ ಬೇಕೆ? ಕಾಲಮಿತಿಯ ಪ್ರದರ್ಶನ ಅಗತ್ಯವೆ? ಇವುಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಉ : ಯಕ್ಷಗಾನದ ಕಲಾವಿದರಿಗೆ ಭಾಗವತನೇ ನಿರ್ದೇಶಕನಾದರೆ ಸಾಕು ಎಂದು ನನ್ನ ಅಭಿಪ್ರಾಯ. ಆದರೆ ಭಾಗವತನೆಂದರೆ ಬರೇ ಪ್ರಸಂಗದ ಪದ್ಯಗಳನ್ನು ಹಾಡುವ ಸಂಗೀತಗಾರನಲ್ಲ. ಕವಿ ಹೃದಯ ತಿಳಿದವನು, ಪ್ರಸಂಗದ ಬೋಧನಾಂಶವನ್ನು ಅರಿತವನೂ, ರಂಗತಜ್ಞನೂ ಆಗಿರಬೇಕು. ಯಕ್ಷಗಾನ ಆಟಕ್ಕೆ ಹಾಗು ತಾಳಮದ್ದಲೆಗೆ ಕಾಲಮಿತಿ ಬೇಕು ಎಂದು ಈಚೆಗೆ ಕೆಲವು ವಿಮರ್ಶಕರು ಸೂಚಿಸುತ್ತಿದ್ದಾರೆ. ಇದರ ಔಚಿತ್ಯದ ಬಗ್ಗೆ ನನಗೆ ಸಂದೇಹವಿದೆ. ಪ್ರಸಂಗದ ಕತೆ ಇಡೀ ರಾತ್ರಿಗಾಗುವಷ್ಟು ದೀರ್ಘವಾಗಿಯೇ ಇದೆ. ಅದನ್ನು ಸಂಕ್ಷೇಪಗೊಳಿಸಿದರೆ ರಸಗ್ರಹಣಕ್ಕೆ ತೊಡಕು. ಅಲ್ಲದೆ ರಸಗ್ರಹಣದಲ್ಲಿ ಕಾಲ ಪ್ರಕೃತಿಯ ಪ್ರಭಾವವೂ ಆಂಶಿಕವಾಗಿರುತ್ತದೆ. ಉದಾಹರಣೆಗೆ ರಾತ್ರಿಯ ಅಪರ ಕಾಲದಲ್ಲಿ ಪ್ರೇಕ್ಷಕರ ಮನಸ್ಸು ಕೋಮಲವಾಗಿದ್ದು ರಸಗ್ರಹಣಕ್ಕೆ ಸುಮುಖವಾಗಿರುತ್ತದೆ. ಹೆಚ್ಚಾಗಿ ಪ್ರಸಂಗ ಕರ್ತೃಗಳು ರಸಭಾವದ ಪ್ರಕಾಶವನ್ನು ಕೊನೆಯ ಭಾಗದಲ್ಲೇ ಸಂಯೋಜಿಸಿರುತ್ತಾರೆ. ತಾಂತ್ರಿಕ ಕಾರಣಕ್ಕಾಗಿ ಮೊಟಕುಗೊಳಿಸಿದರೆ ನಿರ್ದಿಷ್ಟ ಉದ್ದೇಶವೇ ಈಡೇರದೆ ಇರುವ ಸಾಧ್ಯತೆ ಇದೆ. ಆದುದರಿಂದ ಕಾಲಮಿತಿಯ ನಿಬಂಧನೆ ನನಗೆ ಹಿತವಲ್ಲ ಎಂದೇ ತೋರುತ್ತದೆ.

ಪ್ರ : ತೆಂಕು ಬಡುಗು ಎರಡರಲ್ಲೂ ಅನುಭವ ಇರುವ ನಿಮಗೆ ತಿಟ್ಟುಗಳ ಕುರಿತಿರುವ ಅನಿಸಿಕೆಗಳೇನು? ಇವುಗಳ ಸಮನ್ವಯ ಸಾಧ್ಯವಾದೀತೆ?

ಉ : ನಮ್ಮ ಜಿಲ್ಲೆಯ ಬಡಗು ಮತ್ತು ತೆಂಕು ತಿಟ್ಟುಗಳೆನಿಸಿಕೊಂಡ ಎರಡು

ಕಡೆಯ ಮೇಳಗಳಲ್ಲಿ ನಾನು ವೃತ್ತಿ ಪರನಾಗಿ ಇದ್ದುದ್ದೇನೋ ನಿಜ. ಆದರೆ ನನ್ನ ಮಟ್ಟಿಗೆ ತೆಂಕು ತಿಟ್ಟೇ ಸುಲಭ ಎನಿಸುತ್ತದೆ. ತೆಂಕಿನಲ್ಲಿ ತಾಳಜ್ಞಾನ ಇದ್ದರೆ ಅದರ ಆಧಾರದಿಂದ ನಾಟ್ಯ, ನೃತ್ಯ, ನೃತ್ತಗಳನ್ನು ಆಭಾಸವಾಗದಂತೆ ಪೂರೈಸಲು ಶಕ್ಯವಾಗಿದೆ. ಆದರೆ ಬಡಗಿನಲ್ಲಿ ಕಷ್ಟ. ಬರೇ ತಾಳ ಜ್ಞಾನದಿಂದ ನರ್ತನ ಮಾಡಲು ಸಾಧ್ಯವಿಲ್ಲ. ಏಕೆಂದರೆ ಒಂದು ತಾಳದ ಪದ್ಯಕ್ಕೆ ಮುಕ್ತಾಯದಲ್ಲಿ ಇನ್ನೊಂದು ತಾಳ ಸೇರಿಕೊಳ್ಳುತ್ತದೆ. ತೆಂಕಿನಲ್ಲಿ ಭಾಗವತ ಅರ್ಥಧಾರಿಯ ಮಾತನ್ನು ಲಕ್ಷಿಸುತ್ತಾ ಅನುಕೂಲಕ್ಕೆ ತಕ್ಕಂತೆ ಬದಲಾಯಿಸಿ ಮುಂದುವರಿಸುತ್ತಾರೆ. ಬಡಗಿನಲ್ಲಿ ನಿರ್ಣಯ ಮಾಡಿಕೊಂಡಷ್ಟನ್ನು ಹಾಡಿಯೇ ತೀರುತ್ತಾರೆ. ವೇಷರಚನೆಯ ವಿಚಾರದಲ್ಲೂ ತೆಂಕು ತಿಟ್ಟು ಬಡುಗು ತಿಟ್ಟಿಗಿಂತ ಸುಲಭ. ತೆಂಕಿನಲ್ಲಿ ವೇಷಧಾರಿ ಸ್ವಾತಂತ್ರ್ಯ ವಹಿಸಿ ಪಾತ್ರದ ಗುಣಸ್ವಭಾವಕ್ಕೆ ತಕ್ಕಂತೆ ಬದಲಾಯಿಸುವ ಸ್ವಾತಂತ್ರ್ಯ ಹೊಂದಿದ್ದಾನೆ. ಬಡಗಿನಲ್ಲಿ ಈ ಸ್ವಾತಂತ್ರ್ಯ ಮನ್ನಿಸಲ್ಪಡುವುದಿಲ್ಲ. ಉದಾಹರಣೆಗೆ ಅಲ್ಲಿ ಶಲ್ಯನ ಪಾತ್ರವೆಂದರೆ ಕೆಂಪು ಮುಂಡಾಸಿನ, ಕಪ್ಪು ಮೀಸೆಯ ವೇಷವೇ ಆಗತಕ್ಕದ್ದು.

ಇವೆರಡೂ ತಿಟ್ಟುಗಳ ಸಮನ್ವಯಗೊಳಿಸುವುದು ಹಿತಕರ ಅಲ್ಲವೆಂದು ನನಗನಿಸುತ್ತದೆ. ಕೆಲವು ಅಂಶಗಳಲ್ಲಿ ಸಾಮ್ಯತೆ ಇದ್ದರು ಹಲವು ಅಂಶಗಳಲ್ಲಿ ಭೇದವಿದೆ. ಪ್ರಾದೇಶಿಕತೆ ಮಾತ್ರವಲ್ಲದೆ ಪ್ರೇಕ್ಷಕರ ಮನಸ್ಥಿತಿಯೂ ಕಾರಣವಾಗಿದೆ. ಇಂದು ತೆಂಕುತಿಟ್ಟಿನಲ್ಲಿ ಕಲಿತವನು ಬಡಗಿನಲ್ಲಿ, ಬಡಗಿನಲ್ಲಿ ಕಲಿತವನು ತೆಂಕಿನಲ್ಲೂ ಭಾಗವಹಿಸುತ್ತಿರುವುದು ನಿಜ. ಮಾತು ಬಲ್ಲವ ಎರಡರ ಸೌಲಭ್ಯವನ್ನು ಪಡೆಯುತ್ತಿದ್ದಾನೆ. ಒಂದರಂಶ ಇನ್ನೊಂದರಲ್ಲಿ ಸೇರಿಕೊಳ್ಳುತ್ತಿದೆ. ಕ್ರಮೇಣ ಮೂಲಭೂತ ಸ್ವರೂಪಕ್ಕೆ ಧಕ್ಕೆಯಾಗದಂತೆ ಸಮನ್ವಯವಾದರೂ ಆಗಬಹುದು. ಈಗಂತೂ ಹಾಗೆ ಮಾಡಹೋದರೆ ಅಭಾಸವೇ ಸರಿ.

ಪ್ರ : ಯಕ್ಷಗಾನ ಕಲೆಯನ್ನು ಉಳಿಸಿ ಬೆಳೆಸುವಲ್ಲಿ ಸರ್ಕಾರ ಹಾಗೂ ಅಕಾಡೆಮಿಗಳ ಪಾತ್ರವೆಂತಹುದು?

ಉ : ಈ ಪ್ರಶ್ನೆಗೆ ಉತ್ತರ ಕೊಡುವಷ್ಟು ವಿಚಾರಬಲ ನನಗಿಲ್ಲ. ಮಾಸಾಶನ ಗೌರವಧನ ಸದುದ್ದೇಶ ಪೂರಿತವೇ. ಪಡೆದವರು ಕೃತಜ್ಞರು ಹೌದು. ಆದರೆ ಪ್ರೋತ್ಸಾಹ ನ್ಯಾಯೋಚಿತವಾಗಿ ಸಿಕ್ಕಿದೆಯೋ ಇಲ್ಲವೋ ಎಂಬುದನ್ನು ಪರಾಮರ್ಶೆ ಮಾಡಲು ನನಗೆ ಸಾಮರ್ಥ್ಯ ಸಾಲದು.

ಪ್ರ : ಯಕ್ಷಗಾನ ಕಲಾವಿದರಿಗೆ ಹವ್ಯಾಸಿಗಳಿಗೆ ನೀವು ನೀಡುವ ಸಂದೇಶವೇನು?

ಉ : ಯಕ್ಷಗಾನವು ಜನಕ್ಕೆ ಧರ್ಮ, ನೀತಿ ದೈವ ಭಕ್ತಿಗಳನ್ನು ಬೋಧಿಸುವ ಕಲೆ. ಕಲಾವಿದರು ಪಾಂಡಿತ್ಯ, ಕೌಶಲ್ಯಗಳನ್ನು ಸಿದ್ಧಿ ಮಾಡಿಕೊಳ್ಳಬೇಕು. ನಡೆದ ಆಟದಿಂದ ಒಳ್ಳೆಯ ಪರಿಣಾಮ ಜನಮನದ ಮೇಲೆ ಮೂಡಬೇಕು. ಯಕ್ಷಗಾನ ಕಲಾ ಸರಸ್ವತಿಯು ತನ್ನನ್ನು ಆರಾಧಿಸುವ. ಕಲಾವಿದರಿಗೆ ಸದ್ಗುಣಗಳನ್ನು ಇರಿಸಿಕೊಂಡು, ಕಾಪಾಡಿಕೊಂಡು ಬರಲಿ ಎಂಬುದೇ ನನ್ನ ಹಾರೈಕೆ.

ಹೀಗೆ ಇಂದಿನ ಯಕ್ಷಗಾನ ರಂಗಭೂಮಿಯ ಬಗ್ಗೆ ವಿಚಾರವಂತಿಕೆಯಿಂದ ಮಾತನಾಡುವ ಶ್ರೀ ಶಂಕರನಾರಾಯಣ ಸಾಮಗರು ಅಂಗದ, ಸುಧನ್ವ, ಹರಿಶ್ಚಂದ್ರ ಕೌರವ, ಕೃಷ್ಣ, ಬೇಡರ ಕಣ್ಣಪ್ಪದ ಶಾಸ್ತ್ರಿ ಮುಂತಾದ ಪಾತ್ರಗಳ ಮೂಲಕ ಯಕ್ಷಗಾನ ಅಭಿಮಾನಿಗಳ ಹೃದಯವನ್ನು ಗೆದ್ದಿದ್ದಾರೆ. ಆಟಗಳಿಗಿಂತ ತಾಳಮದ್ದಲೆಯಲ್ಲಿ ಇನ್ನಷ್ಟೂ ಖ್ಯಾತಿಯನ್ನು ಗಳಿಸಿರುವ ಇವರು ಅದೊಂದು ಸತ್ವಶಾಲಿ ಪ್ರಕಾರ ಎಂದೇ ಬಗೆದಿದ್ದಾರೆ. "ಆಟದಲ್ಲಾದರೆ ಭಾವಾಭಿವ್ಯಕ್ತಿಗೆ ವಾಚಕ, ಆಹಾರ್ಯ, ಆಂಗಿಕ, ಸಾತ್ವಿಕ, ಇವೆಲ್ಲಾ ಪ್ರವೃತ್ತಿಗಳಿವೆ. ಆದರೆ ತಾಳಮದ್ದಲೆಯಲ್ಲಿ ಮಾತುಗಾರಿಕೆಯೊಂದರಿಂದಲೇ ಎಲ್ಲವನೂ ತುಂಬಿಸಬೇಕು. ಈ ಕಾರಣ ಬುದ್ಧಿಯ ಕೌಶಲ, ಚಾತುರ್ಯ, ವಿಷಯ ಸಂಗ್ರಹ ಮುಂತಾದವುಗಳಲ್ಲಿ ಸಿದ್ಧಿಗಳಿಸಬೇಕಾಗಿದೆ" ಎಂಬುದು ಇವರ ಅಭಿಪ್ರಾಯವಾಗಿದೆ.

ಬಹಳಷ್ಟು ವರ್ಷ ಮೇಳದ ಹಿರಿಯ ಕಲಾವಿದರಾಗಿ ಹಿರಿಯಣ್ಣನಂತೆ ನಡೆದುಕೊಂಡಿರುವ ಶ್ರೀಯುತ ಸಾಮಗರು ಸಹಕಲಾವಿದರಿಗೆ ಅನೇಕ ಬಗೆಯಲ್ಲಿ ಮಾರ್ಗದರ್ಶನವಿತ್ತಿದ್ದಾರೆ. ಸಹೃದಯ ಪ್ರೇಕ್ಷಕರು ಪಾತ್ರಾಭಿನಯವನ್ನು ನೋಡಿ ಅರ್ಥಗಾರಿಕೆಯನ್ನು ಕೇಳಿ ಸಂತೋಷಿಸಿ, ಮೆಚ್ಚುಗೆಯ ಮಾತುಗಳನ್ನು ಆಡಿದ್ದನ್ನು ಕೇಳಿದಾಗೆಲ್ಲಾ ತಮ್ಮ ಕಲಾಜೀವನ ಸಾರ್ಥಕ ಎಂದು ಬಗೆದವರು. ಹೀಗೆ ಈ ಕಲೆಯ ಬಗ್ಗೆ ಅಪಾರ ಗೌರವ ಆದರಗಳನ್ನು ಇಟ್ಟುಕೊಂಡಿರುವ ಶ್ರೀಯುತ ಸಾಮಗರಂತಹ ಕಲಾ ಚಿಂತಕರ ವಿಚಾರ ಲಹರಿಗಳು ಈ ರಂಗದಲ್ಲಿ ಆಸಕ್ತರಾಗಿರುವವರೆಲ್ಲರಿಗೂ ಅರಿತುಕೊಳ್ಳಲು ಯೋಗ್ಯವಾಗಿವೆ. ■

ಅಭಿಜಾತ ಪ್ರತಿಭಾವಂತ ಕಲಾವಿದ

ಶೇಣಿ ಗೋಪಾಲಕೃಷ್ಣ ಭಟ್ಟ

ಜನ ಸಾಮಾನ್ಯರ ಕಲೆಯೆಂದೇ ಗುರುತಿಸುತ್ತಿರುವ ಯಕ್ಷಗಾನಕ್ಕೆ ಹರಿದಾಸರುಗಳ ಆಗಮನದಿಂದ ಒಂದು ವಿಶಿಷ್ಟವಾದ ಬದಲಾವಣೆ ಪ್ರಾಪ್ತವಾದದ್ದು ಈಚಿನ 30–35 ವರ್ಷಗಳಲ್ಲಿ. ಶ್ರೀ ಮಲ್ಪೆ ಶಂಕರನಾರಾಯಣ ಸಾಮಗ, ಶ್ರೀ ಶೇಣಿ ಗೋಪಾಲಕೃಷ್ಣ ಭಟ್ಟ, ಶ್ರೀ ಮಲ್ಪೆ ರಾಮದಾಸ ಸಾಮಗ ಮುಂತಾದವರು (ಹರಿಕಥೆ, ತಾಳಮದ್ದಲೆಗಳಲ್ಲಿ ಭಾಗವಹಿಸುತ್ತಿದ್ದವರು) ಈ ರಂಗಕ್ಕೆ ಬಂದದ್ದರಿಂದ. ಅದುವರೆಗೆ ಪ್ರಧಾನವಾಗಿಲ್ಲದ ಮಾತುಗಾರಿಕೆಗೆ ಇವರಿಂದ ಪಟ್ಟ ಲಭಿಸುವಂತಾಯಿತು. ಪಾತ್ರ ಪರಿಪೋಷಣೆ, ಪಾತ್ರಾಭಿವ್ಯಕ್ತಿಗೆ ಸಮರ್ಥ ಮಾತುಗಾರಿಕೆಯೂ ಅಗತ್ಯ ಎಂಬುದನ್ನು ಇವರು ಮನದಟ್ಟು ಮಾಡಿದರು. ಇಂದಿಗೂ ಕರಾವಳಿ ಹಾಗೂ ಮಲೆನಾಡುಗಳಲ್ಲಿ ಯಕ್ಷಗಾನ ಕೂಟ – ಆಟಗಳ ಅರ್ಥಗಾರಿಕೆಯೆಂದೊಡನೆ ಮೊದಲಿಗೆ ನೆನೆಸಿಕೊಳ್ಳುವುದು ಸಾಮಗ ಮತ್ತು ಶೇಣಿಯವರನ್ನು.

ಶೇಣಿ ಗೋಪಾಲಕೃಷ್ಣ ಭಟ್ಟರದು ವಿಶಿಷ್ಟವಾದ ವ್ಯಕ್ತಿತ್ವ. ಅವರು ಕೇವಲ ಯಕ್ಷಗಾನದ ವೇಷಧಾರಿಗಳಾಗಿ ಮಾತ್ರ ಉಳಿದಿಲ್ಲ. ವಿದ್ವಾಂಸರಾಗಿ, ಹರಿದಾಸರಾಗಿ, ಯಕ್ಷಗಾನ

ಕಲಾಚಿಂತಕರಾಗಿ, ಮೇಳದ ಸಂಚಾಲಕರಾಗಿ, ತಾಳಮದ್ದಲೆಯ ಶ್ರೇಷ್ಠ ಅರ್ಥಧಾರಿಯಾಗಿ, ಯಕ್ಷಗಾನ ಕವಿಯಾಗಿ, ಸಾಹಿತಿಯಾಗಿ ಖ್ಯಾತರಾದವರು. ಅವರ ಹೊಕ್ಕುಬಳಕೆಯ ಕ್ಷೇತ್ರಗಳು ಹಲವು. ಆದರೆ ಅಲ್ಲೆಲ್ಲಾ ಹೆಸರು ಮಾಡಿರುವುದೇ ಅವರ ವೈಶಿಷ್ಟ್ಯ. ಈ ಕಾರಣ ಶೇಣಿ ಎಲ್ಲರಿಂದಲೂ ಇಂದು ಸನ್ಮಾನ್ಯರು. ಈ ಎಲ್ಲಾ ಸಾಧನೆಗಳ ಹಿಂದೆ ಅವರ ಅಪಾರ ಓದು, ಅನುಭವಜನ್ಯ ವಿಚಾರಲಹರಿ, ಆಳ ಚಿಂತನೆ, ಹೊಸತನ್ನು ಸದಾ ಸ್ವಾಗತಿಸುವ ಮನೋವೃತ್ತಿ ಇವೆಲ್ಲ ಇವೆ. ಯಾವುದೇ ತತ್ವ ಸಿದ್ಧಾಂತಕ್ಕೆ ಬದ್ಧರಾಗಿ, ಅಲ್ಲೇ ಮಡುಕಟ್ಟಿ ನಿಂತವರಲ್ಲ. ಈ ವಯಸ್ಸಾದ ದಿನಗಳಲ್ಲೂ ಯುವಕರಂತೆ ಉತ್ಸಾಹದಿಂದ ಹೊಸ ವಿಚಾರಗಳಿಗೆ ಸ್ಪಂದಿಸುವವರಾಗಿದ್ದಾರೆ. ಈ ಕಾರಣದಿಂದಲೇ ಅವರಿಂದೂ ಬೆಳೆಯುತ್ತಿದ್ದಾರೆ. ಆ ಮೂಲಕ ಜೀವಂತ ಕಲಾವಿದರಾಗಿದ್ದಾರೆ.

ಮೂಲತಃ ಶೇಣಿ ಗೋಪಾಲಕೃಷ್ಣ ಭಟ್ಟರು ಕುಂಬಳೆ ಸೀಮೆಯ ಎಡನಾಡು ಗ್ರಾಮದ ಅಜ್ಜಕಾನ ಮನೆಗೆ ಸೇರಿದವರು. ಅಲ್ಲಿನ ನಾರಾಯಣ ಭಟ್ಟರ ಏಕ ಸಂತಾನವಾಗಿ 7–4–1918ರಂದು ಇವರ ಜನನವಾಯಿತು. ಸ್ವಂತ ಊರನ್ನು ತೊರೆದು ತಂದೆ, ಹೆಂಡತಿ ಮನೆಯನ್ನು ಸೇರಿ ಇವರು ಮೂರು ವರ್ಷದಲ್ಲಿರುವಾಗಲೇ ಗತಿಸಿದರು. ಇವರ ಹೊಣೆ ಹೊತ್ತ ಅಜ್ಜ ಕೂಡ ಹೆಚ್ಚು ಕಾಲ ಬದುಕಲಿಲ್ಲ. ಹೀಗಾಗಿ ತಾಯಿ ಅಜ್ಜಿಯರ ವಾತ್ಸಲ್ಯದ ಮಗುವಾಗಿ ಬೆಳೆದರು. ಬಾಲ್ಯದಲ್ಲೆ ಇವರ ಚಿಕ್ಕಪ್ಪ ಇಚ್ಲಂಪಾಡಿಯ ಕಾರಿಂಜೆ ವೆಂಕಟೇಶ ಭಟ್ಟರ ಮನೆಗೆ ಸದಾ ಹೋಗುತ್ತಿದ್ದುದರಿಂದ ಅಲ್ಲಿ ಇಚ್ಲಂಪಾಡಿ ಮೇಳದ ಆಟಗಳನ್ನು ಹೆಚ್ಚಾಗಿ ನೋಡುವ ಅವಕಾಶ ಒದಗಿ, ಅದೇ ಯಕ್ಷಗಾನದ ಮೇಲಿನ ಆಸಕ್ತಿಗೆ ಕಾರಣವಾಯಿತು. ಹೈಸ್ಕೂಲು ವಿದ್ಯಾಭ್ಯಾಸದ ಕಾಲದಲ್ಲಿ ಶ್ರೀಭಟ್ಟರು ನಾಟಕಗಳಲ್ಲಿ ಭಾಗವಹಿಸುತ್ತಿದ್ದರು. ಮುಂದೆ ಸಂಸ್ಕೃತ ಕಾಲೇಜಿನ ವ್ಯಾಸಂಗದ ಅವಧಿಯಲ್ಲಿ ಇವರ ನಾಟಕದ ಅಭಿರುಚಿ ಹಾಗೂ ಯಕ್ಷಗಾನದ ಆಸಕ್ತಿಗೆ ಪ್ರೋತ್ಸಾಹ ದೊರೆಯಿತು. ಪೆರಡಾಲದಲ್ಲಿದ್ದ ಮನೆಯನ್ನು ಶೇಣಿಗೆ ಬದಲಾಯಿಸಿದ್ದರಿಂದ ಶೇಣಿ ಗೋಪಾಲ ಕೃಷ್ಣ ಭಟ್ಟರಾದರು.

ಶೇಣಿಯವರಿಗೆ ತಾಳಮದ್ದಲೆಯ ಅರ್ಥಧಾರಿಯಾಗಬೇಕೆಂಬ ಆಸೆ ಮೊಳೆತದ್ದು ಕಾಲೇಜಿನಲ್ಲಿ ನಡೆದ 'ಅಂಗದ ಸಂಧಾನ' ಎಂಬ ತಾಳಮದ್ದಲೆಯ ಪ್ರದರ್ಶನದಿಂದ. ಅಲ್ಲಿ ಅರ್ಥಧಾರಿಗಳಾದ ಕವಿಭೂಷಣ ಕೆ. ವೆಂಕಪ್ಪ ಶೆಟ್ಟಿ ಹಾಗೂ ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣುಭಟ್ಟರ ನಡುವೆ ನಡೆದ ಅರ್ಥಗಾರಿಕೆಯನ್ನು ಕೇಳಿ ಮೆಚ್ಚಿಕೊಂಡ ಅವರು ಅಂದಿನಿಂದಲೇ ಮಾಸ್ತರ ವಿಷ್ಣುಭಟ್ಟರನ್ನು ತಮ್ಮ ಗುರುವಿನಂತೆ ನೋಡಿಕೊಂಡರು. ಶ್ರೀ ಶೇಣಿಯವರು ಭಾಗವಹಿಸಿದ ಮೊದಲ ತಾಳಮದ್ದಲೆ ನಡೆದದ್ದು ಉಕ್ಕಿನಡ್ಕದ ವಸಿಷ್ಠಾಶ್ರಮದಲ್ಲಿ. 'ರತಿಕಲ್ಯಾಣ'ದ ಅರ್ಜುನನ ಮೂಲಕ ಪ್ರಾರಂಭವಾದ ಇವರ

ಅರ್ಥಗಾರಿಕೆಗೆ ಮೊದಮೊದಲು ದೊರೆಯುತ್ತಿದ್ದುದು 'ಪಂಚವಟಿ'ಯ ಲಕ್ಷ್ಮಣ, 'ಅಂಗದ ಸಂಧಾನ'ದ ರಾಮ. 'ಕೃಷ್ಣ ಸಂಧಾನ'ದ ಅರ್ಜುನ ಈ ಬಗೆಯ ಪಾತ್ರಗಳು. ಆ ಕಾಲದಲ್ಲಿನ ಪ್ರಸಿದ್ಧ ಕಲಾವಿದರಾದ ಕೆ.ಪಿ. ವೆಂಕಪ್ಪ ಶೆಟ್ಟಿ, ಪೊಳಲಿ ಶಂಕರನಾರಾಯಣ ಶಾಸ್ತ್ರಿ, ಕಂಡೆತ್ತೊಡಿ ಕೇಕುಣ್ಣಾಯ, ವಿದ್ವಾನ್ ಪುಟ್ಟಣ್ಣ ಗೌಡ, ಮಂಡೂರು ಗೋಪಾಲಕೃಷ್ಣ ಪುಣಿಚಿತ್ತಾಯ, ಕೋಟೆಕುಂಜ ನಾರಾಯಣ ಶೆಟ್ಟಿ, ಪಳತ್ತಡ ನರಸಿಂಹ ಭಟ್ಟ ಮುಂತಾದವರ ಅರ್ಥಗಾರಿಕೆ, ಬಲಿಪ ನಾರಾಯಣ ಭಾಗವತ, ಬೆಳಿಂಜೆ ಮೈಂದಪ್ಪ ರೈ ಮುಂತಾದವರ ಭಾಗವತಿಕೆಯಲ್ಲಿ ಶೇಣಿ ಬೆಳೆದು ಬಂದರು.

ಗೃಹಸ್ಥಾಶ್ರಮಿಯಾದ ಗೋಪಾಲಕೃಷ್ಣ ಭಟ್ಟರು ಹರಿಕಥೆ ಮಾಡುತ್ತ ಕಾಸರಗೋಡು, ಮಂಗಳೂರು, ಪುತ್ತೂರು ಸೀಮೆಗಳಲ್ಲಿ ಮಾತ್ರವಲ್ಲ ಮೈಸೂರು ನಗರದಲ್ಲೂ ಖ್ಯಾತರಾದರು. ಅರ್ಥಧಾರಿಯಾಗಿದ್ದ ಶೇಣಿ ವೇಷಧಾರಿಯಾಗಿ ಮೊದಲು ಕಾಣಿಸಿಕೊಂಡಿದ್ದು ಕಲ್ಲಡ್ಕದಲ್ಲಿ ನಡೆದ 'ಕೃಷ್ಣ ಸಂಧಾನ'ದ ಮೂಲಕ. ಅಲ್ಲಿ ಸಾಮಗರ ಸಂಧಾನದ ಕೌರವನ ಎದುರಿಗೆ ಇವರ ಶ್ರೀಕೃಷ್ಣ. ಹೀಗೆ ಹರಿಕಥೆಯಲ್ಲಾಗಲೀ, ತಾಳ ಮದ್ದಲೆಯಲ್ಲಾಗಲೀ ಒಂದಿಲ್ಲೊಂದು ಬಗೆಯಿಂದ ಸಾಮಗರ ಸಂಬಂಧ. ಇಲ್ಲಿನ ಯಶಸ್ಸೇ ಆಟದ ವೇಷಗಾರಿಕೆಗೆ ನಾಂದಿ. ಕುರಿಯ ವಿಠ್ಠಲ ಶಾಸ್ತ್ರೀಗಳ ಒತ್ತಾಯದ ಮೂಲಕ ಧರ್ಮಸ್ಥಳ ಮೇಳದ ಅತಿಥಿ ಕಲಾವಿದರಾಗಿ ಸಾಕಷ್ಟು ಪ್ರದರ್ಶನಗಳ ಮೂಲಕ ಒಮ್ಮಿಂದೊಮ್ಮಿಗೆ ಖ್ಯಾತಿ ಗಳಿಸಿದರು.

200 ವರ್ಷಗಳ ಇತಿಹಾಸವುಳ್ಳ ಕೂಡ್ಲು ಮೇಳದ ನವೀಕರಣವಾದ 'ಕುತ್ಯಾಳ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಭಾ'ದ ಸಂಘಟನೆ ನಡೆದಾಗ ಇವರಿಗೆ ಸಂಚಾಲಕತ್ವದ ಪಟ್ಟ ಲಭಿಸಿತು. ಆ ಮೇಳದ ಮುಖ್ಯ ವೇಷಧಾರಿಯಾಗಿಯೂ ಕಾಣಿಸಿಕೊಂಡ ಶ್ರೀ ಶೇಣಿ ಇಂದಿನವರೆಗೂ ಯಶಸ್ವಿಯಾಗಿ ಸಾಗಿ ಬಂದಿದ್ದಾರೆ. ಆ ಮೇಳದಲ್ಲಿ ಇದ್ದಾಗ ಸತ್ಯ ಹರಿಶ್ಚಂದ್ರ, ಮಾಗದ ವಧೆ, ಕೃಷ್ಣಾರ್ಜುನ ಕಾಳಗ ಸಂಪೂರ್ಣ ಕುರುಕ್ಷೇತ್ರ, ಕೃಷ್ಣಲೀಲೆ ಮುಂತಾದ ಪೌರಾಣಿಕ ಪ್ರಸಂಗಗಳನ್ನು ಪ್ರದರ್ಶಿಸಿ ತಾವು ಜನಪ್ರಿಯರಾದುದಲ್ಲದೆ ಮೇಳಕ್ಕೂ ಒಳ್ಳೆಯ ಹೆಸರನ್ನು ತಂದುಕೊಟ್ಟರು. ಮೂರು ವರ್ಷದ ಈ ಸಂಚಾಲಕತ್ವ ಸಾಕಾಗಿ ಮುಂದೆ ಸುರತ್ಕಲ್ ಮೇಳ, ಕುಂಡಾವು ಮೇಳ, ಧರ್ಮಸ್ಥಳ ಮೇಳ ಇವುಗಳಲ್ಲೆಲ್ಲ ಮುಖ್ಯ ವೇಷಧಾರಿಯಾಗಿ ಕಾಣಿಸಿಕೊಂಡು ಈಗ ಸುರತ್ಕಲ್ ಮೇಳದಲ್ಲಿ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಹೀಗೆ ನಾನಾ ಮೇಳಗಳ ಹೊಕ್ಕು ಬಳಕೆ, ನಾನಾ ಬಗೆಯ ಅಭಿರುಚಿಯ ಯಜಮಾನರುಗಳ, ಕಲಾವಿದರ ಸಹಚರ್ಯೆ ಇವುಗಳಿಂದ ಈ ಕಲಾರಂಗದ ಬಗ್ಗೆ ಅಧಿಕಾರವಾಣಿಯಿಂದ ಮಾತನಾಡಬಲ್ಲ ಶಕ್ತಿಯನ್ನು ಹೊಂದಿದ್ದಾರೆ. ಇವರ ಮಾಗಧ, ಕೌರವ, ಬಪ್ಪ ಬ್ಯಾರಿ, ಭೀಷ್ಮ, ಕರ್ಣ,

ರಾವಣ ಮುಂತಾದ ಪಾತ್ರಗಳು ಇವರು ನೀಡಿದ ಹೊಸ ವ್ಯಕ್ತಿತ್ವದ ಮೂಸೆಯಲ್ಲಿ ಹೊರಬಂದವುಗಳಾಗಿವೆ.

ಯಕ್ಷಗಾನ ಕವಿಯಾಗಿ ಕೂಡ ಶೇಣಿ ಗೋಪಾಲಕೃಷ್ಣ ಭಟ್ಟರು ಹೆಸರು ಮಾಡಿದ್ದಾರೆ. "ಮೇಘನಾದ ವಿಜಯ" ಎಂಬ ಯಕ್ಷಗಾನ ಪ್ರಸಂಗ ಪ್ರಕಟವಾಗಿವೆ. ಪಾಡ್ದನವನ್ನು ಆಧರಿಸಿ ರಚಿಸಿದ 'ತುಳುನಾಡ ಸಿರಿ' ಎಂಬ 150 ಪದ್ಯಗಳ ತುಳು ಪ್ರಸಂಗ ಒಂದು ವರ್ಷದ ತಿರುಗಾಟದಲ್ಲಿ ಅಲ್ಲಲ್ಲಿ ಪ್ರದರ್ಶನಗೊಂಡಿದೆ.

ಲೇಖಕನಾಗಿ ಶೇಣಿಯವರು ಖ್ಯಾತರಾದದ್ದು ಅವರ 'ಯಕ್ಷಗಾನ ಮತ್ತು ನಾನು' ಕೃತಿ ಪ್ರಕಟವಾದ ನಂತರ. ಇದು ಅವರ ಯಕ್ಷಗಾನ ಜೀವನ ವಿಚಾರವನ್ನು ಮಾತ್ರವಲ್ಲದೆ, ಯಕ್ಷಗಾನ ಕುರಿತಾದ ಅವರ ಎಲ್ಲ ಅಭಿಪ್ರಾಯಗಳನ್ನೂ ಸಾಕಷ್ಟು ಸಮರ್ಥನೆಯೊಂದಿಗೆ ಪ್ರತಿಪಾದಿಸುವ ಅನುಭವ ಕಥನವಾಗಿದೆ. ಈ ಕಾರಣವೇ ಈ ವಿಶಿಷ್ಟ ಕೃತಿ ಹಾ.ಮ.ನಾ ಅವರ ಮೆಚ್ಚುಗೆ ಗಳಿಸಿ ಗ್ರಂಥಲೋಕದ ತಿಂಗಳ ಪುಸ್ತಕದ ಗೌರವಕ್ಕೆ ಪಾತ್ರವಾಗಿದೆ.

ಯಕ್ಷಗಾನ ರಂಗದಲ್ಲಿ ಶೇಣಿ ಬೆಳೆದು ಬಂದ ಬಗೆ ವಿಶಿಷ್ಟವಾದುದು. ಉಳಿದ ಹೆಚ್ಚಿನ ಕಲಾವಿದರಂತೆ ಎಳೆಯ ಪ್ರಾಯದಲ್ಲೇ ಮೇಳವನ್ನು ಸೇರಿದವರಲ್ಲ. ಮೇಳಕ್ಕೊಂದು ಹೊಸ ಧಾರೆಯಾಗಿ ಸೇರಿಕೊಂಡವರು. ಈ ಕಾರಣ ಮೇಳದ ಉಳಿದ ಕಲಾವಿದರಲ್ಲಿ ಇವರ ಬಗ್ಗೆ ಸದಾ ಮಿಶ್ರ ಪ್ರತಿಕ್ರಿಯೆ. ಇವರ ನೂತನ ಪಾತ್ರಾಭಿವ್ಯಕ್ತಿಯನ್ನು ಎದುರಿಗೆ ಹೊಗಳಿದರೂ ಹಿಂದುಗಡೆಯಿಂದ "ಅದೃಷ್ಟ ಚೆನ್ನಾಗಿದೆ". "ಹಳೆಯ ಸಂಪ್ರದಾಯವನ್ನು ಮುರಿಯುತ್ತಿದ್ದಾರೆ" ಎಂದೆಲ್ಲ ಅಸೂಯೆಭರಿತ ಟೀಕೆ. ಇವರು ಬಹುಬೇಗ ಜನಪ್ರಿಯರಾದಾಗಲಂತೂ ಹೊಟ್ಟೆ ಕಿಚ್ಚು ಪಟ್ಟದ್ದುಂಟು. ವಾಲಿ, ಮಾಗಧ, ರಾವಣ ಮುಂತಾದ ಪಾತ್ರಗಳನ್ನು ತಮ್ಮಿಂದ ಕಸಿದುಕೊಂಡರು ಎಂಬ ಭಾವನೆ ಆ ಕಲಾವಿದರುಗಳಲ್ಲಿ. ವೈಯಕ್ತಿಕವಾಗಿ ಶೇಣಿಯವರಿಗೆ ಹಳೆಯ ಪದ್ಧತಿಯ ವೇಷ ಭೂಷಣಗಳು, ಅಲ್ಲಿನ ಕುಣಿತದ ಸಂಪ್ರದಾಯಗಳು, ಇವುಗಳ ಬಗ್ಗೆ ಮೆಚ್ಚುಗೆ. ಕುಣಿತದ ಅಭ್ಯಾಸವಿಲ್ಲದೆ ರಂಗಕ್ಕೆ ಬಂದವರಾದುದರಿಂದ ವೈಯಕ್ತಿಕವಾಗಿ ಕುಣಿಯಲು ಸಾಧ್ಯವಾಗಲೇ ಇಲ್ಲ. ಅಲ್ಲದೆ ಜನರೂ ಕೂಡ ಇವರ ಈ ನೂತನ ಬಗೆಯನ್ನು ಒಪ್ಪಿ ಸ್ವೀಕರಿಸಿದುದರಿಂದ ಕುಣಿಯುವ ಪರಿಶ್ರಮಕ್ಕೆ ದೇಹ ಒಗ್ಗಲೇ ಇಲ್ಲ. ಇಂದು ಭಟ್ಟರಿಗೆ ತಾವು ತಾಳ ಮದ್ದಲೆಯಿಂದ ಹೋದವರಾದರೂ ಯಕ್ಷಗಾನದಲ್ಲಿ ಜನರ ಅಭಿರುಚಿಯನ್ನು ಬದಲಾಯಿಸಿದ್ದೇವೆ ಎಂಬ ಸಮಾಧಾನ ಇದೆ.

ಮೇಳದ ಯಜಮಾನನಾಗಿ ಶ್ರೀ ಶೇಣಿ ಗಳಿಸಿದ ಅನುಭವಗಳು ವಿಪುಲ. ಹಟ ಹಿಡಿಯುವ ಕಲಾವಿದರೊಂದಿಗೆ ತಾವು ಹಟ ಹಿಡಿದೇ ಬೆಳೆದವರಾಗಿದ್ದಾರೆ. ಈ ಸಂದರ್ಭದಲ್ಲಿ ದೊಡ್ಡ ಕಲಾವಿದರೆನಿಸಿಕೊಳ್ಳುವವರ ಸಣ್ಣತನ ನೋಡಿ, ರೋಸಿ ಹೇಸಿದ್ದು

ಉಂಟು. ಕಲಾರಂಗದಲ್ಲಿ ಕರ್ಣ, ದುರ್ಯೋಧನಾದಿ ಪಾತ್ರಗಳಿಂದ ಧೀರೋದಾತ್ತಾದಿ ಭಾವಗಳನ್ನು ಅಭಿವ್ಯಕ್ತಿಗೊಳಿಸುತ್ತಿರುವವರು ವಾಸ್ತವ ಜೀವನದಲ್ಲಿ ಬಾಳುತ್ತಿದ್ದ ರೀತಿ ವಿಚಿತ್ರವಾಗಿರುತ್ತಿತ್ತು. ಕೆಲವೊಮ್ಮೆ ಊಟ ಸರಿಯಾಗಿಲ್ಲ ಎಂದು ಸಂಪು ಹೂಡುವ, ಹಣ ಸರಿಯಾಗಿ ಕೊಟ್ಟಿಲ್ಲವೆಂದು ಬಣ್ಣ ಬಳಿಯಲು ನಿರಾಕರಿಸುವ ಕಲಾವಿದರಲ್ಲಿ ಶ್ರೀ ಶೇಣಿ ಎಂದೂ ರಾಜಿ ಮಾಡಿಕೊಂಡಿದ್ದಿಲ್ಲ. ಹಟಕ್ಕೆ ಹಟವನ್ನೇ ತೋರಿ ಗೆದ್ದು ಬಂದಿದ್ದಾರೆ. ಸಮಯಕ್ಕೆ ಸರಿಯಾಗಿ ಕೈಕೊಡುವ ಪಾತ್ರಧಾರಿಗಳಿಂದ ಮಾತ್ರ ವಿಚಿತ್ರ ಪರಿಸ್ಥಿತಿಗೆ ಈಡಾದದ್ದು ಉಂಟು. ಒಮ್ಮೆ ನರಸಿಂಹರಾಜಪುರದ ಆಟದಲ್ಲಿ ಮುಖ್ಯ ಸ್ತ್ರೀ ಪಾತ್ರಧಾರಿ ಕೈ ಕೊಟ್ಟಾಗ ಸ್ತ್ರೀ ವೇಷಕ್ಕೆ ಜೊತೆಯಾಗದ, ವಯಸ್ಸಾಗಿದ್ದರೂ ಲೆಕ್ಕಿಸದೇ ತಾವೇ ಮಾಯಾ ಶೂರ್ಪನಖಿಯಾಗಿ ರಂಗಕ್ಕೆ ಬಂದು ಮನದ ಒಳಗಿನ ಒಳಗುದಿಯನ್ನು, ಸಿಟ್ಟು, ಅತೃಪ್ತಿಯನ್ನೆಲ್ಲಾ ಪಾತ್ರದ ಭಾವನೆಯಾಗಿಯೇ ಬಿಂಬಿಸಿ ಪ್ರೇಕ್ಷಕರಿಂದ ಚಪ್ಪಾಳೆ ಗಿಟ್ಟಿಸಿಕೊಂಡಿದ್ದಾರೆ. ಹಟ ಹಿಡಿಯುವ ಜನರಿಗೆ ಹಟದಿಂದಲೇ ಉತ್ತರಿಸುವ ಶೈಲಿ ಶ್ರೀ ಶೇಣಿಗೆ ಕರಗತವಾಗಿದೆ. ವ್ಯವಸ್ಥೆಯಲ್ಲಿನ ಲೋಪದಿಂದಾಗಿ ಆಟ ಆಡುವುದು ಅಸಾಧ್ಯವಾದಾಗಲೂ ಆಟ ಆಡಲೇಬೇಕೆಂಬ ಶೇಣಿಯವರ ಅಭಿನಯ ನೋಡಲೇಬೇಕೆಂಬ ರಸಿಕರ ಹಟಕ್ಕೆ ಶ್ರೀ ಶೇಣಿ ಅತಿಕಾಯನಾಗಿ ರಂಗಕ್ಕೆ ಹನ್ನೆರಡು ಗಂಟೆಗೆ ಬಂದವರು ಐದು ಗಂಟೆಯವರೆಗೆ ಒಂದೇ ಸಮನೆ ಪಾತ್ರವನ್ನು ವಿಲಂಬಿಸಿ ಜನರಿಗೆ ತನ್ನ ಪಾತ್ರ ಒಮ್ಮೆ ಮುಗಿದರೆ ಸಾಕೆಂಬ ಪ್ರತಿಕ್ರಿಯೆ ತೋರುವವರೆಗೆ ಮುಗಿಸಬಾರದೆನ್ನುವ ಹಟ ತೋರಿದ್ದು ಉಂಟು.

ಶ್ರೀ ಶೇಣಿ ಹರಿದಾಸರಾದದ್ದು ಒಂದು ವಿಶಿಷ್ಟ ಸಂದರ್ಭದಲ್ಲಿ. ಉಕ್ಕಿನಡ್ಕದ ವಸಿಷ್ಠಾಶ್ರಮದ ಸಂಸ್ಕೃತ ಶಾಲೆಯಲ್ಲಿ ಸಾಮಗರ ಹರಿಕಥಾ ಕಾರ್ಯಕ್ರಮವಿತ್ತು. ಜನ ಸಾಕಷ್ಟು ಸಂಖ್ಯೆಯಲ್ಲಿ ಸೇರಿದ್ದರು. ಆದರೆ ಸಾಮಗರ ಅನಾರೋಗ್ಯದ ವಾರ್ತೆ ಹೊತ್ತ ತಂತಿ ಹಠಾತ್ ಬಂದಾಗ ಅಲ್ಲಿದ್ದ ಹಿರಿಯರು ಶ್ರೀ ಶೇಣಿಯವರನ್ನು ಒತ್ತಾಯಿಸಿ ಜನರೆಲ್ಲ ನಿರಾಶರಾಗಿ ಹಿಂತಿರುಗದಂತೆ ಮಾಡುವಲ್ಲಿ ಸಫಲರಾದರು. ಸಂಗೀತ, ನಾಟಕಗಳಲ್ಲಿ ಅಭ್ಯಾಸ ಮಾಡಿದ್ದ ಧೈರ್ಯದ ಮೇಲೆ ಒಪ್ಪಿಕೊಂಡ ಶೇಣಿ ಸಾಮಗರ ದೆಸೆಯಿಂದ ಅಕಸ್ಮಾತ್ ಹರಿದಾಸರಾದರು. ಮಾತ್ರವಲ್ಲ, ಖ್ಯಾತ ಹರಿದಾಸರಾದರು.

ಚಿತ್ರನಟರಾಗಬೇಕೆಂಬ ಆಸೆಯಿಂದ ಮೈಸೂರಿಗೆ ಬಂದ ಶ್ರೀ ಶೇಣಿಯವರನ್ನು ಜನಪ್ರಿಯಗೊಳಿಸಿದುದು ಈ ಹರಿದಾಸ ವೃತ್ತಿ. ಅವರು ನಟಿಸಿ 'ಕಲಾಕುಮಾರ' ಎಂಬ ಕನ್ನಡ ಸಾಮಾಜಿಕ ಚಿತ್ರ ಅರ್ಧದಲ್ಲಿ ನಿಂತರೂ ಈ ಸಂಬಂಧವಾಗಿ ಮೈಸೂರಿನಲ್ಲಿ ಹೊಸಬಗೆಯ ಹರಿಕಥೆ ದಾಸರೆಂಬ ಹೆಸರಿನಲ್ಲಿ ಮನೆಮಾತಾದರು. ಇವರು ನಡೆಸಿದ "ಭದ್ರಾಯು ಚರಿತ್ರೆ" ಮಹಾರಾಜರ ಮೆಚ್ಚುಗೆಗೆ ಪಾತ್ರವಾಯಿತು. ಕನ್ನಡದಲ್ಲಿ ಮಾತ್ರವಲ್ಲದೆ

ಮಲೆಯಾಳಂನಲ್ಲೂ ಶೇಣಿ ಖ್ಯಾತ ಹರಿಕಥೆ ದಾಸರಾಗಿದ್ದಾರೆ. ಇವರ ಹರಿಕಥೆಯನ್ನು ಖಂಡಿಸಬೇಕೆಂದು ಸಂಚು ನಡೆಸಿದ ಕಲ್ಲಿಕೋಟೆಯ 'ಆತ್ಮ ವಿದ್ಯಾ ಸಂಘ'ದವರು ಇವರ ವಿಚಾರವಂತಿಕೆಗೆ ಸೋಲೊಪ್ಪಬೇಕಾಗುತ್ತದೆ. ವೈಚಾರಿಕ ಒಳನೋಟವನ್ನು ಹೊಂದಿರುವ ಶೇಣಿಯವರ ಹರಿಕಥೆಯಲ್ಲಿ ಪಾಂಡಿತ್ಯ, ತರ್ಕ, ಸಾಹಿತ್ಯ ಶುದ್ಧಿ, ಆಕರ್ಷಕ ಸಂಗೀತ ಹಾಗೂ ಭಾವನಾತ್ಮಕ ಪಾತ್ರ ಚಿತ್ರಣ ತುಂಬಿರುತ್ತದೆ. ಇದರಿಂದಾಗಿಯೇ ಇವರ ಹರಿಕಥೆ ಪ್ರಾದೇಶಿಕವಾದ ಹಾಗೂ ಭಾಷಾ ಸಂಬಂಧವಾದ ಎಲ್ಲೆಯನ್ನು ಮೀರಿದೆ.

ಶೇಣಿಗೆ ಯಕ್ಷಗಾನ ರಂಗದಲ್ಲಿ ಅತ್ಯಂತ ಖ್ಯಾತಿಯನ್ನು ತಂದದ್ದು ಬಪ್ಪ ಬ್ಯಾರಿಯ ಪಾತ್ರ. ಮತ ಯಾವುದಾದರೆ ಏನು? ಮನುಷ್ಯ ಒಳ್ಳೆಯವನಾಗಿರಬೇಕೆಂಬ ಭಾವೈಕ್ಯದ ಮೂರ್ತಿ ಸ್ವರೂಪದ್ದಾಗಿ ತುಳುನಾಡ ಇತಿಹಾಸದಲ್ಲಿ ಉಳಿಯುವ ಸತ್ವವುಳ್ಳ ಕೃತಿ "ಬಪ್ಪನಾಡು ಕ್ಷೇತ್ರ ಮಹಾತ್ಮೆ", ಇಸ್ಲಾಂ ಮತನಿಷ್ಠ, ಹೃದಯ ಶ್ರೀಮಂತಿಕೆಯ, ಐಶ್ವರ್ಯವಂತ ವೃದ್ಧ ಬಪ್ಪನ ಪಾತ್ರ ಅತ್ಯಂತ ಸಂಕೀರ್ಣವಾಗಿದ್ದು ಎಲ್ಲ ಬಗೆಯಿಂದಲೂ ಜೀವ ತುಂಬುವಲ್ಲಿ ಶಕ್ತಿಯನ್ನು ಹೊಂದಿತ್ತು. ಬಪ್ಪ ಮತ್ತು ಉಸ್ಮಾನರ ಸಂಭಾಷಣೆ ಒಂದು ರಸಘಟ್ಟ. ಇದನ್ನು ಚಿತ್ರಿಸುವಲ್ಲಿ ಬಾಲ್ಯದಲ್ಲಿ ಇವರು ನೋಡಿದ 3–4 ಜನ ಮುಸ್ಲಿಂ ಮಹನೀಯರನ್ನು ಮನಸ್ಸಿಗೆ ತಂದುಕೊಂಡಿದ್ದಾರೆ. ಅದರಲ್ಲೂ ಅಂಗಡಿ ಮೊಗರುವಿನ ಗಾಂಧಿವಾದಿ ವಿದ್ಯಾಪ್ರೇಮಿ, ಸಜ್ಜನಿಕೆಯಿಂದ ಕೂಡಿದ ಮಹ್ಮದ್ ಶೇರೂಲ್ ಅವರನ್ನು ಹತ್ತಿರದಿಂದ ಅರಿತದ್ದು ಪಾತ್ರ ಚಿತ್ರಿಸುವಲ್ಲಿ ಸಹಾಯಕವಾಗಿದೆ. ಈ ಪಾತ್ರ ಶ್ರೀ ಶೇಣಿಗೆ ಹೆಸರನ್ನು ತಂದಿರುವುದು ಮಾತ್ರವಲ್ಲ, ಮುಸ್ಲಿಂ ಬಾಂಧವರಿಗೆ ತೃಪ್ತಿಯನ್ನು ತಂದಿದೆ. ಆದರೂ ಒಮ್ಮೆ ಅರ್ಕುಳದಲ್ಲಿ ಯಾರೋ ತಪ್ಪು ಎಣಿಕೆಯನ್ನು ಉಂಟು ಮಾಡಿದ್ದರಿಂದ, ವ್ಯವಸ್ಥಾಪಕರು ರಾಷ್ಟ್ರೀಯ ಸ್ವಯಂಸೇವಕ ಸಂಘದವರಾದ್ದರಿಂದ ಜಾತಿಯ ಪ್ರಶ್ನೆ ದೊಡ್ಡದಾಗಿ ನೂರಾರು ಟಿಕೇಟುಗಳು ಮುಂಗಡವಾಗಿ ಖರೀದಿಯಾಗಿ ಆಟ ಪ್ರಾರಂಭವಾಗುವ ಮೊದಲೇ ಬಿಸಿ ವಾತಾವರಣದ ಸೂಚನೆ ಕಾಣುತ್ತಿತ್ತು. ಇದನ್ನೆಲ್ಲ ತಿಳಿದ ಶ್ರೀ ಶೇಣಿ ರಂಗಕ್ಕೆ ಬಂದೊಡನೆ ಸಭೆಯ ಒಂದು ಪಾರ್ಶ್ವದಲ್ಲಿ ಒಟ್ಟಾಗಿ ಕುಳಿತ ಮುಸ್ಲಿಂ ಬಾಂಧವರ ಮನಸ್ಸನ್ನು ಕೆಲವೇ ನಿಮಿಷದಲ್ಲಿ ಗೆದ್ದುದಲ್ಲದೆ ಆಟ ಮುಗಿದು ಹೋಗುವಾಗ ಅವರೆಲ್ಲರ ಅಭಿನಂದನೆಗೆ ಪಾತ್ರರಾದರು. ಈ 'ಬಪ್ಪನಾಡ ಕ್ಷೇತ್ರ ಮಹಾತ್ಮೆ' ಪ್ರಸಂಗದಿಂದ ಮುಸ್ಲಿಂ ಹೆಂಗಸರು ಮಕ್ಕಳು ಆಟ ನೋಡುವಂತಾಗಿದೆ ಎಂಬ ತೃಪ್ತಿ ಶ್ರೀ ಶೇಣಿಗಿದೆ. ಆರು ತಿಂಗಳ ತಿರುಗಾಟದಲ್ಲೇ ಈ ಪ್ರಸಂಗ ಶತಮಾನೋತ್ಸವವನ್ನು ಆಚರಿಸಿದುದಲ್ಲದೆ ವರ್ಷಂಪ್ರತಿ ತಿರುಗಾಟದಲ್ಲೇ ಸಾಕಷ್ಟು ಪ್ರದರ್ಶನಗಳನ್ನು ಕಂಡಿದೆ. ಶ್ರೀ ಶೇಣಿಯವರ 'ಬಪ್ಪ' ಹಾಗೂ ಜೋಷಿಯವರ 'ಉಸ್ಮಾನ್' ಮಾತ್ರ ಎಲ್ಲ ಯಕ್ಷಗಾನ ಆಸಕ್ತರ ಮನದಾಳದಲ್ಲಿ ಉಳಿದಿದ್ದಾರೆ.

ಇಂದಿನ ಯಕ್ಷಗಾನ ಪ್ರದರ್ಶನಗಳ ಬಗ್ಗೆ ಶೇಣಿಯವರಿಗೆ ತೀವ್ರ ಅತೃಪ್ತಿ ಇದೆ. ಪ್ರದರ್ಶನಗಳು ಕಮರ್ಷಿಯಲ್ ಆಗಿರುವುದರಿಂದ ಪಾತ್ರಧಾರಿಗಳಲ್ಲಿ ಚಿಂತನೆಯಾಗಲೀ, ಕಲೆಯ ಬಗ್ಗೆ ಆಸಕ್ತಿಯಾಗಲೀ ಉಳಿದಿಲ್ಲ. ಕಲಾವಿದರು, ಮೇಳಗಳು, ಅಭಿಮಾನಿ ಸಂಘಸಂಸ್ಥೆಗಳು, ಕಲಾಕೇಂದ್ರಗಳು ಮೊದಲಿಗಿಂತ ಹೆಚ್ಚಿವೆ. ಆದರೆ ಕಲಾತ್ಮಕ ದೃಷ್ಟಿಯಿಂದ ಯಕ್ಷಗಾನ ಕುಸಿಯುತ್ತಿದೆ. ಇದಕ್ಕೆ ಕಾರಣ ಈ ಮೇಲಿನ ಎಲ್ಲ ವರ್ಗದಲ್ಲೂ ವ್ಯಾಪಾರಿ ದೃಷ್ಟಿ ಬಂದದ್ದೇ ಆಗಿದೆ. ಹಿಂದೆಲ್ಲಾ ಪೌರಾಣಿಕ ಪ್ರಸಂಗವನ್ನು ಆಡುತ್ತಿದ್ದಾಗ ಒಂದೇ ಪ್ರಸಂಗದ ಒಂದೊಂದು ಪ್ರದರ್ಶನಕ್ಕೂ ಅಲ್ಲಿನ ಪಾತ್ರಗಳು ಭಿನ್ನ ಭಿನ್ನವಾಗಿ ಕಂಡುಬರುತ್ತಿದ್ದವು. ಅದೇ ಇಂದು ಹೊಸ ಪ್ರಸಂಗಗಳ ಸುಗ್ಗಿ ಬಂದು ಎಲ್ಲ ಪಾತ್ರಗಳೂ ಒಂದೇ ಪಡಿಯಚ್ಚಿನಲ್ಲಿ ತಯಾರಾದವುಗಳಾಗಿವೆ. ಇದರಿಂದ ಪಾತ್ರಾಭಿವ್ಯಕ್ತಿಯಲ್ಲಿ ಏನೂ ವ್ಯತ್ಯಾಸವಿಲ್ಲ. ಇದಕ್ಕೆಲ್ಲ ಪ್ರಸಂಗಗಳಲ್ಲಿ ತಿರುಳು ಇಲ್ಲದೆ ಇರುವುದು, ಪಾತ್ರಧಾರಿಗಳಲ್ಲಿ ಸ್ವತಂತ್ರ ಚಿಂತನೆ ಹಾಗೂ ಪ್ರಯೋಗ ಶೀಲತೆ ಇಲ್ಲದೆ ಇರುವುದು ಕಾರಣವಾಗಿದೆ. ಹಿಂದೆಲ್ಲ ಪ್ರಸಿದ್ಧ ಪಾತ್ರಧಾರಿಗಳು ಪಾತ್ರಕ್ಕೆ 'ಇದಮಿತ್ಥ' ಎಂದು ಒಂದು ಛಾಪು ಬರಲು ಬಿಡುತ್ತಿರಲಿಲ್ಲ. ಪಾತ್ರಗಳು ಹಿಗ್ಗಲು, ಕುಗ್ಗಲು ಅವಕಾಶವಿರುತ್ತಿತ್ತು. ಪಾತ್ರಗಳು ಬೆಳೆಯುತ್ತಲೇ ಕಲಾವಿದರು ಬೆಳೆಯುತ್ತಾ ಹೋಗುತ್ತಿದ್ದರು. ಆದರೆ ಇಂದು ಜನರಿಗೆ ಈ ಬಗೆಯ ವಿಚಾರವಂತಿಕೆ ಬೇಕಾಗಿಲ್ಲ – ಇದು ಶೇಣಿಯವರ ಖಚಿತ ನಿಲುವು.

"ಇದೆಲ್ಲ ಸುಧಾರಿಸಲು ಜನರಲ್ಲಿ ಜಾಗೃತಿಯಾಗಬೇಕು. ಅಗ್ಗದ ಪ್ರಚಾರಕ್ಕೆ ಬಲಿಯಾಗದೆ, ಉತ್ತಮವಾದುದನ್ನು ಸ್ವೀಕರಿಸುವ ಮನೋಭಾವ ಬೆಳೆಯಬೇಕು. ಇದರೊಂದಿಗೆ ಉದಯೋನ್ಮುಖ ಕಲಾವಿದರಲ್ಲಿ ತಾರಾಮೌಲ್ಯದ ಹಂಬಲ ಕಡಿಮೆಯಾಗಿ ಪರಿಶ್ರಮದಿಂದ ಹಿರಿಯ ಕಲಾವಿದರ ಮಾರ್ಗದರ್ಶನದಿಂದ ಸ್ವಯಂ ಪ್ರತಿಭೆಯ ಪ್ರಕಾಶವನ್ನು ರೂಢಿಸಿಕೊಳ್ಳಬೇಕು" ಎಂದು ಮಾರ್ಗದರ್ಶಿಸುತ್ತಾರೆ.

ಶೇಣಿಯವರು ಯಕ್ಷಗಾನ ಅಕಾಡೆಮಿಯ ಕಾರ್ಯ ನಿರ್ವಹಣೆ ಬಗ್ಗೆ ಅತೃಪ್ತಿ ಹೊಂದಿದವರಾಗಿದ್ದಾರೆ. ಅಕಾಡೆಮಿಯ ಸದಸ್ಯರಾಗುವವರು ಈ ಕ್ಷೇತ್ರದಲ್ಲಿ ಅಧಿಕೃತವಾಗಿ ಹೇಳಬಲ್ಲ ಕಲಾವಿದರೋ, ವಿದ್ವಾಂಸರೋ ಆಗಿರಬೇಕು – ಎನ್ನುವ ಶೇಣಿ ಅಂತಹವರಿಂದ ಅಕಾಡೆಮಿಯು ಶಕ್ತವಾಗುತ್ತದೆ. ಅಲ್ಲದೆ ಈ ರಂಗವನ್ನು ಶುದ್ಧೀಕರಿಸುವ ಕಾರ್ಯವು ಸುಗಮವಾಗುತ್ತದೆ ಎನ್ನುತ್ತಾರೆ. ಯಕ್ಷಗಾನಕ್ಕೊಂದು ಶಾಸ್ತ್ರೀಯ ಚೌಕಟ್ಟನ್ನು ನಿರ್ಮಿಸಲು ಶೇಣಿಯವರು ಯೋಚಿಸುತ್ತಿದ್ದಾರೆ. ಅದಕ್ಕಾಗಿ ಪಾಠ ಪಟ್ಟಿಯನ್ನು ನಿರ್ಣಯಿಸುವ ಕಾರ್ಯ ಶಿಬಿರವನ್ನು ಸದ್ಯದಲ್ಲೇ ನಿರ್ದೇಶಿಸಲಿದ್ದಾರೆ.

ಯಕ್ಷಗಾನ ಪ್ರಸಂಗ ರಚನೆಯಲ್ಲಿ ದಾಸ ಸಾಹಿತ್ಯದ ಪ್ರಭಾವ ನಿಚ್ಚಳವಾಗಿದೆ ಎನ್ನುವ ಶ್ರೀ ಭಟ್ಟರು ಇದಕ್ಕೆ ಅನೇಕ ಹಾಡಿನ ಧಾಟಿಗಳನ್ನು ಉದಾಹರಿಸುತ್ತಾರೆ.

ಯಕ್ಷಗಾನ ಕವಿಗಳು ಮೂಲ ಮಾತ್ರಕೆಯಾಗಿಟ್ಟುಕೊಂಡದ್ದು ಕುಮಾರವ್ಯಾಸ, ಲಕ್ಷ್ಮೀಶ, ಚಾಟು ವಿಠಲನಾಥರ ಕೃತಿಗಳನ್ನು. ಈ ಕಾರಣ ಕನ್ನಡದ ಈ ಕೃತಿಗಳ ನಂತರವೇ ಯಕ್ಷಗಾನಕ್ಕೊಂದು ನಿರ್ದಿಷ್ಟ ರೂಪು ಬಂದಿರಬೇಕು. ಎಂಬ ಅಭಿಪ್ರಾಯ ಶೇಣಿಯವರಲ್ಲಿದೆ. ಯಕ್ಷಗಾನ ಎಂಬುದು ಸಂಗೀತದ ಒಂದು ಪ್ರಕಾರ ಎಂಬುದನ್ನು ಅಥವಾ ಒಂದು ಗಾನ ಶೈಲಿ ಎಂಬುದನ್ನು ಒಪ್ಪದ ಶೇಣಿ ಇದೊಂದು ಜಾತಿಯ ಪ್ರಬಂಧ ಅಥವಾ ಕಾವ್ಯ ಪ್ರಕಾರವಾಗಿದೆ ಎನ್ನುವ ನಂಬಿಕೆಯುಳ್ಳವರಾಗಿದ್ದು, 'ಯಕ್ಷಗಾನ ಮೂಲತಃ ಆರಾಧನೆಯ ಒಂದು ಅಂಗವಾದ್ದು ಪ್ರಾದೇಶಿಕವಾದ ಕುಣಿತಗಳನ್ನು ಅಳವಡಿಸಿಕೊಂಡು ಬೆಳೆದು ಬಂದ ಶ್ರೀಮಂತ ಕಲೆಯಾಗಿದೆ ಎನ್ನುತ್ತಾರೆ.

ಯಕ್ಷಗಾನ ರಂಗಕ್ಕೆ ಹರಿದಾಸರ ಆಗಮನವು ವರವೂ ಹೌದು, ಶಾಪವೂ ಹೌದು ಎಂದು ಕಾವ್ಯಾತ್ಮಕವಾಗಿ ಹೇಳುವ ಶ್ರೀ ಶೇಣಿ ಇದಕ್ಕೆ ತಮ್ಮದೇ ಆದ ಸಮರ್ಥನೆ ನೀಡುತ್ತಾರೆ. ಅದೆಂದರೆ "ಹರಿದಾಸರಿಂದ ಯಕ್ಷಗಾನಕ್ಕೆ ಶಾಸ್ತ್ರೀಯತೆ ಮುಂತಾದವೆಲ್ಲ ಲಭಿಸಿವೆ. ಕೌರವ, ರಾವಣ, ವಾಲಿ, ಮಾಗಧ, ಕಂಸ, ಕರ್ಣ ಮುಂತಾದ ಪಾತ್ರಗಳು. ಇವರುಗಳಿಂದ ಹೊಸತನವನ್ನು ಗಳಿಸಿಕೊಂಡವು. ಕಲೆ ಪರಿಪುಷ್ಟಗೊಂಡಿತು. ಆದರೆ ಉಳಿದ ಕಲಾವಿದರು ಇವರನ್ನು ಅನುಕರಿಸ ಹೋಗಿ ತಮಗೆ ಕರಗತವಾದ ಸಾಂಪ್ರದಾಯಿಕ ಕುಣಿತ ಹಾಗೂ ವೇಷ ಭೂಷಣಗಳನ್ನು ಬಿಟ್ಟಿದ್ದು. ನಿಜವಾಗಿ ರಂಗಕ್ಕೆ ಶಾಪವಾಗಿ ಪರಿಣಮಿಸಿದೆ" ಎಂಬುದು.

ಹರಿದಾಸರಾಗಿಯೂ ಖ್ಯಾತರಾದ ಶ್ರೀ ಶೇಣಿ ಗೋಪಾಲಕೃಷ್ಣ ಭಟ್ಟರಿಇಗೆ ಇಲ್ಲೂ ಕೆಲವು ಖಚಿತ ಅಭಿಪ್ರಾಯಗಳಿವೆ. ಇಂದು ಹರಿಕಥೆ ಕೇವಲ ಭಕ್ತಿಯನ್ನು ಬೆಳೆಸುವ ಸಂಪ್ರದಾಯವಾಗಿ ಬೆಳೆದು ಬಂದಿದೆ. ಇದು ತಪ್ಪಬೇಕು. ಪರಿಸರ ಪ್ರಜ್ಞೆಯಿಂದ ಈ ಕಾಲಕ್ಕೆ ಯಾವುದು ಮುಖ್ಯವೋ ಅದನ್ನು ಪ್ರತಿಪಾದಿಸುವ ಜನ ಜಾಗೃತಿಯನ್ನು ಉಂಟು ಮಾಡುವ ವೇದಿಕೆಯಾಗಬೇಕು ಎನ್ನುತ್ತಾರೆ. ಇದಕ್ಕೆ ದಾಸಕೂಟದ ಸಾಧನೆಗಳನ್ನು, ಸಮರ್ಥ ರಾಮದಾಸ, ತುಕಾರಾಂ, ಮುಂತಾದವರ ಮಾದರಿಯನ್ನು ಇವರು ಉದಾಹರಿಸುತ್ತಾರೆ. ಕೆಲವು ಹರಿದಾಸರು ಪ್ರತಿಪಾದಿಸುವ ಪಲಾಯನವಾದವನ್ನು ಖಂಡಿಸುವ ಶೇಣಿ ವಿಚಾರವಂತಿಕೆಯನ್ನು ಉದ್ಬೋಧಿಸುವ ಹರಿಕಥೆಗಳು ನಡೆಯಬೇಕೆಂದು ಆಶಿಸುತ್ತಾರೆ.

ತಾಳಮದ್ದಲೆಯ ಪ್ರಪಂಚದಲ್ಲಿ ಸಾಮಗರು ಹಾಗೂ ಶೇಣಿಗಳೀಬ್ಬರು ಎರಡು ದಿಗ್ಗಜಗಳಿದ್ದಂತೆ. ಯಾರು ಹೆಚ್ಚು, ಯಾರು ಕಡಿಮೆ ಎನ್ನುವಂತಿಲ್ಲ. ಸಾಮಗರ ವಿದ್ವತ್ ಬಗೆಗಂತೂ ಶೇಣಿಗೆ ಅಪಾರ ಗೌರವ ಇದೆ. ಶ್ರೀ ಶ್ಳೇಣಿಯವರು ಸಾಂಪ್ರದಾಯಿಕ ವೇಷಧಾರಿಗಳ ಬಗ್ಗೆ ಹೆಚ್ಚಿನ ಒಲವನ್ನು ಇರಿಸಿಕೊಂಡಿದ್ದಾರೆ. ತೆಂಕುತಿಟ್ಟಿನ ಪುತ್ತೂರು

ನಾರಾಯಣ ಹೆಗಡೆ, ಅಳಿಕೆ ರಾಮಯ್ಯ, ಗೋವಿಂದ ಭಟ್ಟ, ಕೋಳ್ಯೂರು ರಾಮಚಂದ್ರ ರಾವ್, ವಿಟ್ಲ ಗೋಪಾಲ ಕೃಷ್ಣ ಜೋಷಿ, ಮುಂತಾದವರನ್ನು ಬಡಗು ತಿಟ್ಟಿನ ಕೆರೆಮನೆ ಮಹಾಬಲ ಹೆಗಡೆ, ಕೆರೆಮನೆ ಶಂಭು ಹೆಗಡೆ, ಕೋಟ ವೈಕುಂಠ, ಅರಾಟೆ ಮಂಜು, ಕುಂಜಾಲು ರಾಮಕೃಷ್ಣ ಮುಂತಾದವರನ್ನು ಮೆಚ್ಚಿಕೊಂಡಿದ್ದಾರೆ.

ಶ್ರೀ ಶೇಣಿ ಗೋಪಾಲ ಕೃಷ್ಣ ಭಟ್ಟರು ತಾಳಮದ್ದಲೆಗೆ ಸಿದ್ಧರಾಗುತ್ತಿದ್ದ ಬಗೆ ಬಹು ವಿಶಿಷ್ಟವಾದುದು. ಮೊದಮೊದಲ ವರ್ಷಗಳಲ್ಲಿ ಪ್ರಸಂಗವನ್ನು ಮಾತ್ರವಲ್ಲದೆ, ಅದಕ್ಕೆ ಪೂರಕವಾದ ಉಳಿದೆಲ್ಲ ಸಾಹಿತ್ಯಗಳನ್ನು ಅಮೂಲಾಗ್ರವಾಗಿ ಓದುತ್ತಿದ್ದರು. ಪ್ರಸಂಗ ನಿಷ್ಕರ್ಷೆಯಾದೊಡನೆ ತಮಗೆ ಬರಬಹುದಾದ ಪಾತ್ರವನ್ನು ಊಹಿಸಿ ಆ ಪಾತ್ರ ಆಡಬಹುದಾದ ಮಾತುಗಳನ್ನೆಲ್ಲ ಮನಸ್ಸಿನಲ್ಲೇ ಚಿಂತಿಸಿ ಪ್ರಸಂಗದ ಸಂಪೂರ್ಣ ವಿಚಾರಧಾರೆಯನ್ನು ಮನನ ಮಾಡಿಕೊಂಡು ಭಾಗವಹಿಸುತ್ತಿದ್ದರು. ಎದುರಾಳಿ ಆಡಿದ ಮಾತುಗಳಲ್ಲಿ ಟೀಕಿಸಬೇಕಾದುದನ್ನು ಟೀಕಿಸಿ, ಪ್ರಸಂಗದ ಎಳೆ ತುಂಡಾಗದಂತೆ ಪಾತ್ರದ ಸಮಗ್ರ ಚಿತ್ರಣವನ್ನು ಕಟ್ಟಿಕೊಡುತ್ತಿದ್ದರು. ಶೇಣಿಯವರ ಮಾತುಗಾರಿಕೆಯ ವೈಶಿಷ್ಟ್ಯವೆಂದರೆ ಅಲ್ಲಿ ಮಿಂಚುವ ವೈಚಾರಿಕತೆಯ ಹೊಳಪು. ತಮ್ಮದೇ ಆದ 'ಶೇಣಿತನದ' ಛಾಪು. ಅರ್ಥಕ್ಕೆ ಕುಳಿತಾಗ ಅವರ ಗತ್ತೇ ಬೇರೆ. ಭಾವನಾತ್ಮಕವಾಗಿ ಮಾತನಾಡಬಲ್ಲ ಇವರು ಪಾತ್ರಕ್ಕೆ ಎಂದೂ ಅನ್ಯಾಯವಾಗದಂತೆ ನೋಡಿಕೊಳ್ಳುತ್ತಾರೆ. ಜನಸಾಮಾನ್ಯರಲ್ಲಿ ಪ್ರಚಲಿತವಾಗಿರುವುದೆಂದರೆ ಶೇಣಿ ತನ್ನ ಎದುರಿಗೆ ಬಂದ ಕಲಾವಿದರ ತೇಜೋವಧೆ ಮಾಡುತ್ತಾರೆ ಎಂದು. ಈ ಬಗ್ಗಿನ ನೇರ ಪ್ರಶ್ನೆಗೆ ಶೇಣಿಯ ಖಂಡಿತ ಉತ್ತರವೆಂದರೆ ಎಂದೂ ಆ ರೀತಿ ವರ್ತಿಸಿಲ್ಲ ಎಂದು. ಇದು ಕೇವಲ ಪ್ರಚಾರ ಹಾಗೂ ಶ್ರೋತೃಗಳ ದಿಗ್ಭ್ರಮೆ ಅಷ್ಟೆ ಎಂಬುದು. ಮಾತಿನ ಮೂಲಕ ಎದುರಾಳಿಯನ್ನು ಕೆಣಕುವುದು ವಿಚಾರ ಹೊರಬರಲಿ ಎಂಬ ಕಾರಣಕ್ಕಾಗಿ ಮಾತ್ರ. ನನ್ನ ಒಡನಾಟದಲ್ಲಿ ಇರುವ ಕಲಾವಿದರಲ್ಲಿ ನಾನು ಸಾಕಷ್ಟು ಬೆರತು ವಿಚಾರ ವಿನಿಮಯ ನಡೆಸುತ್ತಿರುತ್ತೇನೆ. ಅವರೆಲ್ಲಾ ನನ್ನನ್ನು ಮೆಚ್ಚಿಕೊಂಡಿದ್ದಾರೆ. ನಾನೆಂದೂ ನನ್ನದೇ ಆದ ಕೋಟೆ ಕಟ್ಟಿಕೊಂಡವನಲ್ಲ ಎಂಬುದು ಶೇಣಿಯವರ ಪ್ರತಿಕ್ರಿಯೆ.

ತುಳು ಭಾಷೆಯಲ್ಲಿ ಯಕ್ಷಗಾನ ಪ್ರದರ್ಶಿಸುವ ಬಗ್ಗೆ ಶೇಣಿಗೆ ಕೆಲವೊಂದು ಅನುಮಾನವಿದೆ. ತುಳು ಭಾಷೆ ಸದ್ಯ ಆಡುಭಾಷೆ. ಮೂಲಸ್ವರೂಪದಲ್ಲೇ ಇರುವುದರಿಂದ ಯಕ್ಷಗಾನಕ್ಕೊಂದು ರಂಗ ಪರಂಪರೆ ಇರುವುದನ್ನು ಗಮನದಲ್ಲಿ ಇಟ್ಟುಕೊಂಡಾಗ ಅಲ್ಲಿನ ಪಾತ್ರಗಳು ಪುರಾಣ ಕಾಲಕ್ಕೆ ಸೇರಿದ್ದುದರಿಂದ ಈ ಆಡು ಮಾತಿನ ಬಳಕೆ ಪೂರಕವಾಗಲಾರದು ಎಂಬುದು ಇವರ ಅನಿಸಿಕೆ. ಅದೇ ತುಳು ಜಾನಪದಕ್ಕೆ ಸಂಬಂಧಿಸಿದ ಐತಿಹಾಸಿಕ, ಸಾಮಾಜಿಕ ಪ್ರಸಂಗಗಳನ್ನು ಆಡಲು ಅವರದೇನೂ ಅಭ್ಯಂತರವಿಲ್ಲ.

ಹಳತನ್ನು ಉಳಿಸಿಕೊಂಡೇ ಹೊಸತನ್ನು ಬೆಳೆಸಿಕೊಂಡು ಹೋಗಬೇಕೆನ್ನುವ ಶ್ರೀ ಶೇಣಿ ಗೋಪಾಲಕರಷ್ಣ ಭಟ್ಟರು ಯಕ್ಷಗಾನ ರಂಗದ ಅರ್ಥಪೂರ್ಣ ಬೆಳವಣಿಗೆಯ ಹರಿಕಾರರಾಗಿದ್ದಾರೆ. ಇವರ ಚಿಂತನೆಗಳು ಹಾಗೂ ಸಾಧನೆಗಳು ಇಂದಿನ ಯುವ ಕಲಾವಿದರಿಗೆ ನಿಜವಾಗಿಯೂ ಮಾರ್ಗದರ್ಶಕ ಸೂತ್ರಗಳು. ■

ಯಕ್ಷಗಾನ ಕಲಾವಿದ

ಮಲ್ಪೆ ರಾಮದಾಸ ಸಾಮಗ

ಹರಿಕತೆ, ಆಟ, ಕೂಟಗಳಲ್ಲಿ "ಸಾಮಕ"ರಿದ್ದರೆಂದರೆ ಜನಾಕರ್ಷಣೆ ಗತಿಯೇ ಬದಲಾಗುತ್ತದೆ. ಶ್ರೋತೃಗಳಿಗೆ, ಪ್ರೇಕ್ಷಕರಿಗೆ 'ಚಿಕ್ಕ ಸಾಮಕ' ರೋ 'ದೊಡ್ಡ ಸಾಮಕ' ರೋ ಒಟ್ಟಿನಲ್ಲಿ 'ಸಾಮಕ'ರಿರಬೇಕು. ಹೀಗೆ "ಸಾಮಕ"ರೆಂದೇ ಹೆಸರುಮಾಡಿರುವ "ಸಾಮಗ ಸಹೋದರ" ರೆಂದರೆ ಮಲ್ಪೆಯ ಶ್ರೀ ಶಂಕರ ನಾರಾಯಣ ಸಾಮಗ ಮತ್ತು ಅವರ ಸಹೋದರ ಶ್ರೀ ರಾಮದಾಸ ಸಾಮಗರು. ಹಿರಿಯ ಸಾಮಗರು ಇದೀಗ ವೃದ್ಧಾಪ್ಯದಲ್ಲಿದ್ದು ಅಷ್ಟಾಗಿ ಆಟ, ಕೂಟಗಳಲ್ಲಿ ಭಾಗವಹಿಸುತ್ತಿಲ್ಲ. ಆದರೆ ಕಿರಿಯ ಸಾಮಗರಾದ ಶ್ರೀ ಮಲ್ಪೆರಾಮದಾಸ ಸಾಮಗರು 'ತುಳು ಯಕ್ಷಗಾನಗಳ' ಈ ದಿನಗಳಲ್ಲಿ ಬಹಳ ಖ್ಯಾತರಾಗಿದ್ದಾರೆ. ಮೊದಲಿಗೆ ಹರಿದಾಸರಾಗಿದ್ದು, ನಂತರ ಈ ಕಲಾರಂಗವನ್ನು ಪ್ರವೇಶಿಸಿದ ಈ ಹಿರಿಯ ಕಲಾವಿದರ ವಿಚಾರಧಾರೆಗಳು ಚಿಂತನೆಗಳು ಕಲಾಸಕ್ತರಿಗೆ ಬಹು ಅಮೂಲ್ಯ ಸಂಗತಿಗಳಾಗಿವೆ.

ಮಲ್ಪೆಯವರಾದ ಸಾಮಗರ ತಂದೆ ಲಕ್ಷ್ಮಿನಾರಾಯಣ ಸಾಮಗರು ಅಪ್ಪಟ ವೇದಾಂತಿಗಳು, ಪುರೋಹಿತರು, ವೈದಿಕ ಮನೆತನದ ಅವರಿಗೆ ಸೂಕ್ತ ಕಲಾಶಕ್ತಿಯು ಇತ್ತು. ತಾಯಿ ಲಕ್ಷ್ಮಮ್ಮನವರು ದಾಸರ ಕೀರ್ತನೆಗಳನ್ನು, ಹಾಡುಹಸೆಗಳನ್ನು ಹಾಡುತ್ತಿದ್ದುದು

ಈ ಅಣ್ಣ ತಮ್ಮಂದಿರ ಮೇಲೆ ಅಪಾರ ಪ್ರಭಾವ ಬೀರಿದವು. 1926ರಲ್ಲಿ ಜನಿಸಿದ ಇವರಿಗೂ ಹಾಗೂ ಅಣ್ಣ ಶಂಕರನಾರಾಯಣ ಸಾಮಗರಿಗೂ 16 ವರ್ಷಗಳ ಅಂತರವಿದ್ದು, ಇವರು ಅಣ್ಣನನ್ನು ಗುರುವೆಂದೇ ಭಾವಿಸಲು ಸಾಧ್ಯವಾಯಿತು. ಹಿಂದೆಲ್ಲ ಆಟ ಕೂಟಗಳಲ್ಲಿ ಭಾಗವಹಿಸುವುದು ವೈದಿಕ ಬ್ರಾಹ್ಮಣರಿಗೆ ನಿಷಧ್ಧವಾಗಿತ್ತು. ಆದರೆ ಅಣ್ಣ ಈ ವಿಚಾರದಲ್ಲಿ ಕ್ರಾಂತಿ ಮಾಡಿದರು ಎಂಬ ಹೆಮ್ಮೆ ಇವರಿಗಿದೆ. ಅಣ್ಣನಿಂದಾಗಿ ತನಗೆ ದಾರಿ ಸುಲಭವಾಯಿತು ಎನ್ನುವ ಇವರು ತಮ್ಮ ಆರಂಭದ ವೃತ್ತಿ ಜೀವನವನ್ನು ಬಹು ಆತ್ಮೀಯವಾಗಿ ನೆನೆಯುತ್ತಾರೆ.

ಮೆಟ್ರಿಕ್ಯುಲೇಷನ್ ವರೆಗೆ ಓದಿರುವ ಶ್ರೀ ರಾಮದಾಸ ಸಾಮಗರು ಉಡುಪಿಯ ಸಂಸ್ಕೃತ ಪಾಠಶಾಲೆಯಲ್ಲಿ ಸಂಸ್ಕೃತ ಅಭ್ಯಾಸ ನಡೆಸಿದರು. ದೇವಸ್ಥಾನವೊಂದರ ಪೂಜೆಯನ್ನು ಸ್ವಲ್ಪ ಕಾಲ ಮಾಡುತ್ತಿದ್ದ ಇವರು ಮುಂದೆ "ಹರಿದಾಸ ವೃತ್ತಿ" ಯನ್ನೇ ಆರಿಸಿಕೊಂಡರು. ಆ ಕಾಲಕ್ಕಾಗಲೇ ಅಣ್ಣ ಶಂಕರನಾರಾಯಣ ಸಾಮಗರು ಸತ್ಯಾಗ್ರಹಗಳಲ್ಲಿ ಭಾಗವಹಿಸಲು ಉಪಾಧ್ಯಾಯ ವೃತ್ತಿ ತ್ಯಜಿಸಿ ಆಟ ಕೂಟಗಳಲ್ಲಿ ಭಾಗವಹಿಸಿ ಖ್ಯಾತರಾಗಿದ್ದರು. ಅದೇ ರೀತಿ ರಾಮದಾಸ ಸಾಮಗರೂ ಕೂಡಾ ಹರಿದಾಸರಾಗಿ ಜಿಲ್ಲೆಯ ಉದ್ದಗಲಕ್ಕೆ ಸಂಚರಿಸಿದರು. ಇವರು ಮಾಡಿದ ಮೊದಲ ಹರಿಕತೆ ನಡೆದದ್ದು "ನೀಲಾವರದ ದೇವಸ್ಥಾನ"ದಲ್ಲಿ. ಆಗ ದೊರೆತ ಪ್ರೋತ್ಸಾಹವೇ ಮುಂದೆ ಈ ದಾರಿಯಲ್ಲಿ ಸಾಗಲು ಕಾರಣವಾಯಿತು. ಬೇರೆಡೆಗೆ ಹೋಲಿಸಿದರೆ ಕನ್ನಡ ಜಿಲ್ಲೆಗಳಲ್ಲಿ ಮಾತ್ರ "ಹರಿಕತೆಗಳಿಗೆ ಎಲ್ಲೂ ಮನ್ನಣೆ" ಇದೆ ಎಂಬುದು ಇವರ ಅನುಭವವಾಗಿದೆ.

1955ರ ಸುಮಾರಿಗೆ ಯಕ್ಷಗಾನದಲ್ಲಿ ಬದಲಾವಣೆಯ ಗಾಳಿಬೀಸಲು ಪ್ರಾರಂಭವಾಯಿತು. ಅದುವರೆಗೆ ಅಷ್ಟೊಂದು ಮುಖ್ಯವಾಗಿರದಿದ್ದ ಅರ್ಥಧಾರಿಯ "ಮಾತುಗಾರಿಕೆ"ಗೆ ವಿಶೇಷ ಸ್ಥಾನ ಬಂತು. ಇದರ ಫಲವಾಗಿ ವಾಗ್ಮಿಗಳು ಪುರಾಣ ಶಾಸ್ತ್ರಗಳನ್ನು ಅರಿತಂಥ ಅರ್ಥಧಾರಿಗಳು "ಯಕ್ಷಗಾನ"ಕ್ಕೆ ಅನಿವಾರ್ಯವಾಯಿತು. ಹಾಗೆ ಬಂದ ಆಗ್ರಹವೇ ರಾಮದಾಸ ಸಾಮಗರು ಈ ರಂಗಕ್ಕೆ ಬರಲು ಕಾರಣವಾಯಿತು. ಬಡಗುತಿಟ್ಟಿನ ಯಕ್ಷಗಾನ ಕಲಾಭ್ಯಾಸಿಗಳಿಗೆ ತರಬೇತಿ ನೀಡುತ್ತಿದ್ದ ಇವರಿಗೆ ರಂಗಕ್ಕೆ ಬರುವಲ್ಲಿ ಯಾವ ಅನಾನುಕೂಲವು ಆಗಲಿಲ್ಲ. ಯಕ್ಷಗಾನ ರಂಗಕ್ಕೆ ಅರ್ಥಧಾರಿಗಳು ಅನಿವಾರ್ಯವಾದುದನ್ನು ಶ್ರೀ ಸಾಮಗರು ಹೀಗೆ ವಿವರಿಸುತ್ತಾರೆ, "ಹಿಂದೆಲ್ಲ ಕಾಳಗ ಪ್ರಧಾನ ಪ್ರಸಂಗಗಳೇ ರಂಗದಲ್ಲಿ ಪ್ರದರ್ಶಿತಗೊಳ್ಳುತ್ತಿದ್ದವು. ಮಾತುಗಾರಿಕೆ ಗೌಣವಾಗಿತ್ತು. ಜನತೆ ಆ ಬಗೆಯ ಪ್ರಸಂಗಗಳಿಗೆ ಒಗ್ಗಿ ಹೋಗಿದ್ದರು. ಆದರೆ ಕಂಪೆನಿ ನಾಟಕ, ಸಿನೀಮಾ, ಹರಿಕತೆ ಮುಂತಾದವುಗಳ ಪ್ರಭಾವದಿಂದ ಭಕ್ತಿಪೂರ್ಣ ಕಥಾನಕಗಳು ಯಕ್ಷಗಾನ ರಂಗವನ್ನು ಪ್ರವೇಶಿಸಿದವು. ರುಕ್ಮಾಂಗದ, ಚಂದ್ರಹಾಸ, ನಳ ಚರಿತ್ರೆ,

ಹರಿಶ್ಚಂದ್ರ, ಭಕ್ತಪ್ರಹ್ಲಾದ ಮುಂತಾದ ಪ್ರಸಂಗಗಳ ಬಳಕೆ ಹೆಚ್ಚಿದಾಗ ವಾಗ್ಮಿಗಳಾದವರಿಗೆ ಬೇಡಿಕೆ ಬಂತು. ಕುಣಿತ ಪ್ರಧಾನವಿಲ್ಲದೆ, ಮಾತುಗಾರಿಕೆಯಿಂದ ಪಾತ್ರಾಭಿವ್ಯಕ್ತಿ ಸಾಧ್ಯವೆಂಬುದನ್ನು ಅಣ್ಣ ಶಂಕರನಾರಾಯಣ ಸಾಮಗರು ತೋರಿಸಿಕೊಟ್ಟಿದ್ದರು. ಈ ಬಗೆಯ ರಂಗ ಪ್ರವೇಶದ ಹಿನ್ನೆಲೆಯುಳ್ಳ ಶ್ರೀ ಸಾಮಗರನ್ನು ಮೊದಲಿಗೆ ಕೂಡ್ಲು ಮೇಳಕ್ಕೆ ಒತ್ತಾಯದಿಂದ ಕರೆಸಿಕೊಂಡವರು, ವೆಂಕಟರಾವ್ ಕಾಂಡಿಲಕರ್. 1960ರಲ್ಲಿ ಯಕ್ಷಗಾನ ರಂಗವನ್ನು ಪ್ರವೇಶಿಸಿದ ಶ್ರೀ ಸಾಮಗರು ರಜತೋತ್ಸವ ವರ್ಷವನ್ನು ಮುಗಿಸಿದ್ದಾರೆ. ಹರಿದಾಸರಾಗಿದ್ದು ಬಂದವರಾದ್ದರಿಂದ ಸಂಗೀತ, ಮಾತುಗಾರಿಕೆಯಲ್ಲಿ ವಿಶಿಷ್ಟತೆ ಬಂತು. ನಳ, ರುಕ್ಮಾಂಗದ, ಹರಿಶ್ಚಂದ್ರ ಮುಂತಾದ ಪಾತ್ರಗಳಲ್ಲಿ ವಿಜೃಂಭಿಸಿದರು. ಆಧ್ಯಾತ್ಮಿಕ ವಿಚಾರಗಳಿಂದ ಕೂಡಿರುವ ಪಾತ್ರಗಳು ಇವರ ಮೆಚ್ಚುಗೆಯ ಪಾತ್ರಗಳು ಆಗಿವೆ.

ಹರಿದಾಸರಾಗಿದ್ದು ಯಕ್ಷಗಾನ ಕಲಾವಿದರಾದವರಲ್ಲಿ ಒಂದು ವಿಶಿಷ್ಟತೆ ಇದೆ. ಉಳಿದ ಕಲಾವಿದರು ಆರುತಿಂಗಳ ತಿರುಗಾಟವನ್ನು ಆಧರಿಸಿ ಸಂಬಳ ನಿಷ್ಕರ್ಷೆಗೆ ಒಳಪಟ್ಟರೆ, ಇವರುಗಳು ಅದಕ್ಕೆ ಒಪ್ಪದೇ ತಮ್ಮ ಸ್ವಾತಂತ್ರ್ಯವನ್ನು ಕಾಯ್ದಿಟ್ಟುಕೊಂಡಿದ್ದಾರೆ. ಹೀಗೆ ಆರ್ಥಿಕವಾಗಿ ವ್ಯವಸ್ಥಾಪಕರ ಕಟ್ಟಿಗೆ ಒಳಪಡದ ಇವರಿಗೆ ಮೇಳಗಳಲ್ಲಿ ವಿಶೇಷ ಸ್ಥಾನವಿರುತ್ತಿತ್ತು. ಮೊದಲಿಗೆ ಶ್ರೀ ರಾಮದಾಸ ಸಾಮಗರು ಕೂಡ್ಲುಮೇಳ, ಮೂಲ್ಕಿ ಮೇಳ, ಸುರತ್ಕಲ್ ಮೇಳಗಳಲ್ಲಿ ಭಾಗವಹಿಸಿದ್ದರೂ ಮುಂದೆ ಖಾಯಂ ಆಗಿ ಇರಾಸೋಮನಾಥೇಶ್ವರ ಮೇಳದಲ್ಲೇ ಉಳಿದುಕೊಂಡು ಬಂದಿದ್ದಾರೆ. ಆ ಮೇಳದ ಹಿಂದಿನ ವ್ಯವಸ್ಥಾಪಕರಾದ ಕಲ್ಲಾಡಿ ಕೂರಗಶೆಟ್ಟಿ ಹಾಗೂ ಅವರ ಮಗ ಶ್ರೀ ಕಲ್ಲಾಡಿ ವಿಠಲ ಶೆಟ್ಟಿಯವರ ವ್ಯವಸ್ಥಾಪಕತ್ವದ ಬಗ್ಗೆ ಈ ಸಾಮಗರಿಗೆ ಹೆಮ್ಮೆ ಇದೆ.

ಯಕ್ಷಗಾನ ತಾಳಮದ್ದಲೆಗಳಲ್ಲೂ ಶ್ರೀರಾಮದಾಸ ಸಾಮಗರು ಖ್ಯಾತರಾಗಿದ್ದಾರೆ. "ಹಿಂದೆಲ್ಲ ತಾಳಮದ್ದಲೆ ಕೇವಲ ಕಾಲಕ್ಷೇಪವಾಗಿತ್ತು. ಅದು ಹೋಗಿ ಅದಕ್ಕೊಂದು ಸಾಹಿತ್ಯಿಕ ಮೌಲ್ಯವನ್ನು ದೊರಕಿಸಿಕೊಟ್ಟವರು ಎನ್.ಎಸ್. ಕಿಲ್ಲೆ, ಪೊಳಲಿ ಶಂಕರನಾರಾಯಣ ಶಾಸ್ತ್ರಿ, ಕವಿಭೂಷಣ ವೆಂಕಪ್ಪ ಶೆಟ್ಟಿ ಮುಂತಾದವರು ಇಂತಹ ರಂಗಪ್ರಕಾರದಲ್ಲಿ ಕುರಿಯ ವಿಠಲ ಶಾಸ್ತ್ರಿ, ಕೀರಿಕ್ಕಾಡು ಮಾಸ್ತರ ವಿಷ್ಣು ಭಟ್, ದೇರಾಜೆ, ಶಂಕರನಾರಾಯಣ ಸಾಮಗ, ಶೇಣಿ ಮುಂತಾದವರ ಪ್ರವೇಶದಿಂದ ಇನ್ನಷ್ಟು ಪುಷ್ಟಿಗೊಂಡಿತು. ಈ ಸಂದರ್ಭದಲ್ಲೇ ತನ್ನ ಪ್ರವೇಶವಾಯಿತು ಎನ್ನುವ ಶ್ರೀ ಸಾಮಗರು ಮೊದಲು ಭಾಗವಹಿಸಿದ್ದು ಕಾಸರಗೋಡಿನಲ್ಲಿ ನಡೆದ ತಾಳಮದ್ದಲೆಯೊಂದರಲ್ಲಿ. ಕಾಸರಗೋಡು ಹಾಗೂ ಸುತ್ತುಮುತ್ತಲಿನ ಪ್ರದೇಶದ ಸಾಂಸ್ಕೃತಿಕ ಮೇಲ್ಮೆ ಬಗ್ಗೆ ಶ್ರೀಯುತರಿಗೆ ಮೆಚ್ಚುಗೆಯಿದೆ. ಆ ಪ್ರದೇಶದಲ್ಲಿ ಮುವತ್ತು ದಿನಗಳ ಕಾಲ ಹರಿಕತೆ ಮಾಡುತ್ತಿದ್ದುದನ್ನು ಆತ್ಮೀಯವಾಗಿ ನೆನೆಯುತ್ತಾರೆ. 1978ರಲ್ಲಿ ಮಂಗಳೂರಿನ

ಬೋಳಾರದಲ್ಲಿ ಎರಡು ತಿಂಗಳುಗಳ ಕಾಲ ಹರಿಕತೆ ನಡೆಸಿದ ಖ್ಯಾತಿ ಇವರದು. 15 ವರ್ಷಗಳಿಂದ ತುಳುವಿನಲ್ಲಿ ಹರಿಕತೆ ಮಾಡುತ್ತಿರುವ ಸಾಮಗರು ಆ ನಿಟ್ಟಿನಲ್ಲೂ ಪ್ರಸಿದ್ಧರಾಗಿದ್ದಾರೆ.

ಪ್ರಶಸ್ತಿ ಹಾಗೂ ಸನ್ಮಾನಗಳೆಂದರೆ ಶ್ರೀ ರಾಮದಾಸ ಸಾಮಗರು ಮಾರುದೂರ. ಇದಕ್ಕೆ ಕಾರಣ ಸನ್ಮಾನದೊಳಗಿನ ಆರ್ಥಿಕ ರಾಜಕೀಯ. ಇದನ್ನು ವಿರೋಧಿಸುವ ಇವರು "ಈ ದುಷ್ಟ ಪದ್ಧತಿಯಿಂದಾಗಿ ಅರ್ಹತೆ ಇರುವವರಿಗೆ ಪ್ರಶಸ್ತಿ, ಸನ್ಮಾನಗಳು ಲಭ್ಯವಾಗುತ್ತಿಲ್ಲ" ಎನ್ನುತ್ತಾರೆ. ಎಡನೀರು ಸಂಸ್ಥಾನಾಧೀಶರಿಂದ ಸನ್ಮಾನಿತರಾದ ಇವರು ಅಲ್ಲಿ ವಂತಿಗೆಯ ಅಂಶವೇನೂ ಇಲ್ಲವೆಂದು ತಿಳಿದಮೇಲೆಯೇ ಒಪ್ಪಿಗೆ ಕೊಟ್ಟಿದ್ದರು.

ಇಂದು ಅರವತ್ತರ ಹತ್ತಿರವಿರುವ ಸಾಮಗರು "ಆರ್ಥಿಕ ದೃಷ್ಟಿಯಿಂದಲೂ ಯಕ್ಷಗಾನ ರಂಗದಿಂದಾಗಿ ಸಂತೋಷದ ಜೀವನ ನಡೆಸುತ್ತಿದ್ದೇನೆ" ಎಂದು ತೃಪ್ತಿಯಿಂದ ಹೇಳುತ್ತಾರೆ. ಕಲಾವಿದನ ಸ್ವಾತಂತ್ರ್ಯಕ್ಕೆ ಹೆಚ್ಚಿನ ಬೆಲೆ ಕೊಡುವ ಇವರು ತಮಗೆ ಅದು ಸದಾದೊರೆತ ಬಗ್ಗೆ ಸಮಾಧಾನ ಉಳ್ಳವರಾಗಿದ್ದಾರೆ. ತುಳು ಯಕ್ಷಗಾನ ಪ್ರದರ್ಶನಗಳಲ್ಲಿ ಈಚೆಗೆ ಹೆಚ್ಚು ಭಾಗವಹಿಸುತ್ತಿರುವ ಇವರು ಆ ಬಗ್ಗೆ ಒಲವು ಉಳ್ಳವರಾಗಿದ್ದಾರೆ. "ಭಾವ ಪ್ರದರ್ಶನಕ್ಕೆ ಭಾಷೆಯ ಕಟ್ಟಿಲ್ಲ. ಇನ್ನೂ ಹೆಚ್ಚಿನ ತುಳು ಪ್ರಸಂಗಗಳು, ಅವುಗಳ ಪ್ರದರ್ಶನಗಳು ಬರಬೇಕು. ಲಿಪಿಯಿಲ್ಲದೇ ಇರುವುದು ಭಾಷೆಯ ಕೀಳಿಗೆ ಕಾರಣವಾಗುವುದಿಲ್ಲ. ಇಂದು ತುಳು ಪ್ರದರ್ಶನಗಳಲ್ಲಿ ದೋಷ ಕಾಣಿಸಿದರೆ, ಅದಕ್ಕೆ ಭಾಷೆ ಕಾರಣವಲ್ಲ. ಕಲಾವಿದನು ಅದರಲ್ಲಿ ಪರಿಚಿತನಾಗಿಲ್ಲದಿರುವುದೇ ಆಗಿದೆ. ಹೆಚ್ಚು ಅವಕಾಶಗಳು ಲಭ್ಯವಾದಂತೆ. ಅಭ್ಯಾಸ ಹೆಚ್ಚುತ್ತಾ ಹೋದಂತೆ ತುಳು ಯಕ್ಷಗಾನಗಳು ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ. ತುಳು ಯಕ್ಷಗಾನಗಳ ಬಗ್ಗೆ ವಿದ್ವಾಂಸರ ವಾದ ವಿವಾದವೆಲ್ಲ ಪೂರ್ವಾಗ್ರಹಪೀಡಿತವಾಗಿವೆ. ತುಳು-ಕನ್ನಡ ಮಿಶ್ರಣದ ಪ್ರದರ್ಶನಕ್ಕೆ ನನ್ನ ಒಲವಿಲ್ಲ. ದೇವತೆಗಳು, ಪುರಾಣ ಪುರುಷರು ಕನ್ನಡದಲ್ಲಿ ಮಾತನಾಡುವುದು ಉಳಿದ ಸಾಮಾನ್ಯರು ತುಳು ಮಾತಾಡುವಂತಹ ಮಿಶ್ರಣದ ಪ್ರದರ್ಶನಗಳು ನಿಲ್ಲಬೇಕು. ದೇವರುಗಳು ತುಳುವಿನಲ್ಲಿ ಮಾತನಾಡಬಾರದೆಂದಿಲ್ಲ. ಇದೆಲ್ಲ ಕಲಾವಿದರ ಸೌಕರ್ಯದಿಂದ ಆದ ವಿಪರ್ಯಾಸಗಳು" ಎಂದೆಲ್ಲ ಸಾಮಗರು ಹೇಳುವಲ್ಲಿ ತುಳು ಯಕ್ಷಗಾನ ಪ್ರಸಂಗಗಳ ಕುರಿತ ನಿಚ್ಚಳ ಒಲವು, ಸ್ಪಷ್ಟ ಅಭಿಪ್ರಾಯವು ವ್ಯಕ್ತವಾಗುತ್ತದೆ.

"ಬಡಗು ತಿಟ್ಟು, ತೆಂಕುತಿಟ್ಟೆಂಬ ಗೊಂದಲ ಹುಟ್ಟಲು ಮತ್ತು ನಡುವಿನ ಅಂತರ ಹೆಚ್ಚಲು ವಿದ್ವಾಂಸರೇ ಕಾರಣ. ಸಾಮಾನ್ಯ ಪ್ರೇಕ್ಷಕ ಈ ಯಾವ ತಿಟ್ಟಿಗೂ ಸೇರದೆ ಪ್ರದರ್ಶನದ ಆನಂದವನ್ನು ಹೊಂದುತ್ತಾನೆ. ಸಾಮಾಜಿಕ, ಚಾರಿತ್ರಿಕ ಯಕ್ಷಗಾನ ಪ್ರಸಂಗಗಳು ಪ್ರದರ್ಶನವಾಗುವುದರಲ್ಲಿ ತಪ್ಪೇನೂ ಇಲ್ಲ. ಹಾಗೆ ನೋಡ ಹೋದರೆ ಮೊತ್ತಮೊದಲ

ಯಕ್ಷಗಾನವಾದ 'ಕರಿಬಂಟನ ಕಾಳಗ'ದಲ್ಲಿ ಸಾಮಾಜಿಕತೆಯು ಸಾಕಷ್ಟಿದೆ. ಯಕ್ಷಗಾನದಲ್ಲಿ ಶಾಸ್ತ್ರೀಯತೆ ಬಂದದ್ದು ಈಚಿನ ಶತಕಗಳಲ್ಲಿ. ಈ ಕಾರಣದಿಂದ ಸಾಮಾಜಿಕ ಪ್ರಸಂಗಗಳು ಬರಬಾರದೆಂದಿಲ್ಲ. ಇನ್ನು ವೇಷಭೂಷಣ ಸರಿಹೊಂದುವುದಿಲ್ಲ ಎನ್ನುವುದು ನೆಪಕ್ಕಾಗಿ. ಯಕ್ಷಗಾನಕ್ಕಾಗಿ ವೇಷಭೂಷಣವೋ, ವೇಷಭೂಷಣಕ್ಕಾಗಿ ಯಕ್ಷಗಾನವೋ ಎಂಬುದನ್ನು ಯೋಚಿಸಬೇಕು. ಇಂದು ಯಕ್ಷಗಾನದ ಬಾಹ್ಯ ಪರಿಸರದಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ಹಿಂದೆಲ್ಲಾ ಅಭಿನಯದಲ್ಲಿ, ವರ್ಣಪ್ರದರ್ಶನಕ್ಕಾಗಿ ವಿಲಂಬವಿರುತ್ತಿತ್ತು. ಕಂಪನದ ಮೂಲಕ ನೆಲದಲ್ಲಿ ಕುಳಿತವರಿಗೆ ವಿಶಿಷ್ಟ ಅನುಭವಗಳು ಲಭ್ಯವಾಗುತ್ತಿದ್ದವು. ಅದೆಲ್ಲ ಮರೆಯಾದನಂತರವೇ ಇಂದು ಕಾಣುವ ಅಭಿನಯ ಬಂದದ್ದು. ಹಿಂದಿನ ಪೌರಾಣಿಕ ಪ್ರದರ್ಶನಗಳಲ್ಲಿ ಹಾಸ್ಯದ ಮೂಲಕ ಸಮಕಾಲೀನತೆ ತರುತ್ತಿದ್ದರು. ಆ ಬಗೆಯ ಕಲಬೆರಕೆಗಿಂತ ಇಂದಿನ ಸಾಮಾಜಿಕ ಪ್ರಸಂಗಗಳ ಪ್ರದರ್ಶನ ಕಳಪೆಯೇನೂ ಅಲ್ಲ. ಇದಕ್ಕೆ ಉದಾಹರಣೆಯಾಗಿ ಭಕ್ತ ಪ್ರಹ್ಲಾದದಲ್ಲಿ ಬರುವ "ಶಾಲೆ, ರತಿಕಲ್ಯಾಣದಲ್ಲಿ ಬರುವ 'ಕಾವಲುಗಾರ ಬ್ಯಾರಿ'ಯ ಪಾತ್ರಗಳನ್ನೆಲ್ಲ ನೋಡಬಹುದು. ಇದನ್ನೆಲ್ಲ ಗಮನಿಸಿದಾಗ ಸಮಾಜದ ಟೀಕೆಗೆ, ವ್ಯಂಗ್ಯವಿಡಂಬನೆಗೆ ಯಕ್ಷಗಾನದಲ್ಲಿ ಆಸ್ಪದವಿದೆಯಂತಾಯಿತು. ಹಾಗಿದ್ದ ಮೇಲೆ ಹೊಸ ಪ್ರಸಂಗಗಳನ್ನು ತಿರಸ್ಕರಿಸುವುದು ಏಕೆ? ಈ ಕಾರಣ ಔಚಿತ್ಯಪೂರ್ಣವಾದ ಎಲ್ಲಾ ಬದಲಾವಣೆಗಳಿಗೂ ಸ್ವಾಗತವಿರಬೇಕು" – ಇದು ಇಂದಿನ ಯಕ್ಷಗಾನದ ಹೊಸ ಪ್ರಸಂಗಗಳ ಬಳಕೆಯ ಬಗ್ಗೆ ಸಾಮಗರ ನಿಲುವಾಗಿದೆ.

"ಇಂದಿನ ಯಕ್ಷಗಾನದಲ್ಲಿ ಮೇಳೈಸುವಿಕೆಯ ಕೊರತೆಯಿದೆ" ಎನ್ನುವ ರಾಮದಾಸ ಸಾಮಗರು "ಸರಿಯಾದ ಹೊಂದಾಣಿಕೆ ಇಲ್ಲದೆ ಪ್ರದರ್ಶನ ಸೋಲುತ್ತಿದೆ" ಎನ್ನುತ್ತಾರೆ. ಈ ದೃಷ್ಟಿಯಿಂದ ಯಕ್ಷಗಾನಕ್ಕೊಬ್ಬ ನಿರ್ದೇಶಕ ಬೇಕು ಎನ್ನುತ್ತಾರೆ. ಆದರೆ ಮೇಳದಲ್ಲಿ ಒಡತನವಿರುವವರೆಗೆ ಸ್ವತಂತ್ರ ನಿರ್ದೇಶಕ ಬರುವ ಸಂಭವ ಕಡಿಮೆ. ಅಲ್ಲದೆ ಈ ಕಲೆಯ ಎಲ್ಲಾ ಅಂಗಗಳಲ್ಲೂ ಪರಿಣಿತನಾದವನು ದೊರೆಯುವುದು ಕಷ್ಟ. ಆದ್ದರಿಂದ ಸದ್ಯಕ್ಕಂತು ಆ ಬಗೆಯ ವ್ಯವಸ್ಥೆ ಬರಲಾರದು ಎಂದು ಅಭಿಪ್ರಾಯಿಸುತ್ತಾರೆ.

ಹರಿಕಥಾ ಸಾಹಿತ್ಯದ ಮೇಲೆ ಅಪಾರ ಅಭಿಮಾನವುಳ್ಳ ಸಾಮಗರು ಪಂಡಿತರು, ವಿದ್ವಾಂಸರು ಈ ಹರಿಕತೆಯ ಅವಜ್ಞೆ ಮಾಡಿರುವುದನ್ನು ಪ್ರತಿಭಟಿಸುತ್ತಾರೆ. ಸಮಾಜದಲ್ಲೂ ಹಿಂದೆಲ್ಲ ಇದ್ದ ಗೌರವಪೂರ್ಣ ಸ್ಥಾನವಿಲ್ಲವಾದ ಬಗ್ಗೂ ಇವರಿಗೆ ಅಸಮಾಧಾನವಿದೆ. "ಸಮಾಜದ ಓರೆಕೋರೆಗಳನ್ನು ಪುರಾಣ ಪ್ರಪಂಚದ ಕತೆಗಳ ಮೂಲಕ ತಿದ್ದಿ ಸಮಾಜದ ಸ್ವಾಸ್ಥ್ಯವನ್ನು ಕಾಪಾಡಬಲ್ಲ ಹರಿದಾಸರ ಬಗ್ಗೆ ಇನ್ನಾದರೂ ಸರಕಾರ ಹಾಗೂ ಅಕಾಡೆಮಿಗಳು ಗಮನವೀಯಬೇಕು. ಗಮಕಕ್ಕೆ ನೀಡುವಷ್ಟು ಪ್ರೋತ್ಸಾಹವೂ ಈ

ಪರಂಪರಾಗತ ಕಲೆಗೆ ಇಲ್ಲವಾಗಿರುವುದು ಬಹಳಷ್ಟು ವಿಷಾದನೀಯ. ಇನ್ನಾದರೂ ಅಕಾಡೆಮಿಗಳು ಈ ಬಗ್ಗೆ ಕಾರ್ಯ ನಿರ್ವಹಿಸಲಿ. ಜನತೆ ಹರಿಕತೆಯ ಮಹತ್ವವನ್ನು ಅರಿತು ಗುರುತಿಸಲಿ ಎಂದು ಕರೆಕೊಡುತ್ತಾರೆ.

ಹೀಗೆ ಶ್ರೀ ಸಾಮಗರು ವಿಶಿಷ್ಟ ರೀತಿಯ ಚಿಂತಕರಾಗಿದ್ದು, ಯಕ್ಷಗಾನ ನಾನಾ ಬಗೆಯಲ್ಲಿ ಕವಲೊಡೆಯುತ್ತಿರುವ ಈ ದಿನಗಳಲ್ಲಿ ಈ ಬಗೆಯ ಅನುಭವಿ ಕಲಾವಿದರ ಮಾತುಗಳಿಗೆ ಹೆಚ್ಚು ಒತ್ತು ಬೀಳುತ್ತದೆ, ಪುರಾಣ ಸಾಹಿತ್ಯಗಳ ಬಗ್ಗೆ ಆಮೂಲಾಗ್ರವಾಗಿ ಓದಿ, ಮನನ ಮಾಡಿಕೊಂಡಿರುವ ಯಕ್ಷಗಾನ ರಂಗದಲ್ಲಿ 25 ವರ್ಷಗಳಿಂದ ಸಕ್ರಿಯವಾ ದುಡಿಯುತ್ತಿರುವ ಶ್ರೀ ರಾಮದಾಸ ಸಾಮಗರು ಸಾಂಸ್ಕೃತಿಕವಾಗಿಯೂ ಮ ಉಳ್ಳವರಾಗಿದ್ದಾರೆ.

■

ಬಹುಮುಖ ಪ್ರತಿಭೆಯ

ಕೀರಿಕ್ಕಾಡು ಮಾಸ್ತರ್ ವಿಷ್ಣುಭಟ್

ಯಕ್ಷಗಾನ ವೃತ್ತಿ ಮೇಳದ ಕಲಾವಿದರಾಗದೆಯೂ, ಯಕ್ಷಗಾನದ ಅಂಗೋಪಾಂಗಗಳ ಪರಿಪೂರ್ಣ ಜ್ಞಾನ ಹೊಂದಿರುವ ಕೆಲವೇ ಹಿರಿಯರಲ್ಲಿ ಕೀರಿಕ್ಕಾಡು ಮಾಸ್ತರ್ ವಿಷ್ಣುಭಟ್ ಒಬ್ಬರು, ಎಲೆಯ ಮರೆಯ ಕಾಯಿಯಂತಿರುವ ಶ್ರೀಯುತರು, ನಡೆಸಿರುವ ಪ್ರಯೋಗಗಳು, ಮಾಡಿರುವ ಸಾಧನೆಗಳು ಒಂದೆರಡಲ್ಲ. ಮೊದಲಿಗೆ ವೃತ್ತಿಯಲ್ಲಿ ಮಾಸ್ತರರಾಗಿದ್ದ ಭಟ್ಟರು ಯಕ್ಷಗಾನ ಹವ್ಯಾಸಿಗಳಿಗೆ ಹಾಗೂ ಅರ್ಥಧಾರಿಗಳಿಗೆ ನಿಜವಾಗಿಯೂ 'ಮಾಸ್ತರ್' ಆಗಿದ್ದಾರೆ. ಅಸಂಖ್ಯ ಯಕ್ಷಗಾನ ಪ್ರಸಂಗಗಳನ್ನು, ಕಾವ್ಯ ಕಾದಂಬರಿಗಳನ್ನು ಬರೆದಿದ್ದಾರೆ. ಇವರ ಯಕ್ಷರಸ ಜೀವನ'ವು ಆತ್ಮ ವೃತ್ತಾಂತದಿಂದ ಕೂಡಿದ ಅನುಭವ ಕಥನವಾಗಿದೆ.

1913ರಲ್ಲಿ ಕಾಸರಗೋಡು ತಾಲೂಕಿನ ಕೀರಿಕ್ಕಾಡು ಕೇಶವ ಭಟ್ ಮತ್ತು ಲಕ್ಷ್ಮೀ ಅಮ್ಮನ ಮಗನಾಗಿ ಜನಿಸಿದ ಇವರನ್ನು ಬಾಲ್ಯದಲ್ಲಿ ಸೆಳೆದದ್ದು ಇಚ್ಲಂಪಾಡಿ ಮೇಳದ ಆಟಗಳು. ಐದನೆಯ ತರಗತಿಯವರೆಗೆ ಓದಿದ ಇವರು ಊರ ಹಿರಿಯರ ಸಹಕಾರದಿಂದ ತಮ್ಮೂರಿನಲ್ಲಿ ಶಾಲೆಯೊಂದನ್ನು ಸ್ಥಾಪಿಸಿ "ಮಾಸ್ತರ್" ಆದರು. ಅಂದಿನಿಂದ ಇಂದಿನವರೆಗೂ ಎಲ್ಲರಿಗೂ ಇವರು ಪರಿಚಿತರಾಗಿರುವುದು "ಕೀರಿಕ್ಕಾಡು ಮಾಸ್ತರ್"

ಎಂದೆ. ತೀರಾ ಯಕ್ಷಗಾನ ಅಭಿಮಾನಿಯಾಗಿದ್ದ ಇವರನ್ನು ಕೂಟಗಳಿಗೆ ಕರೆದುಕೊಂಡು ಹೋಗಿ, ಅರ್ಥಗಾರಿಕೆಯ ದಾರಿಯನ್ನು ತೋರಿ ಪ್ರೋತ್ಸಾಹಿಸಿದವರು ನಾರಾಯಣ ಕೇಕುಣ್ಣಾಯರು. ಮೊದಲಿಗೆ ಅಲ್ಲಲ್ಲಿ ಸ್ಥಳೀಯವಾಗಿ ಅರ್ಥಗಾರಿಕೆಯಲ್ಲಿ ಭಾಗವಹಿಸುತ್ತಿದ್ದ ಇವರು ಕೆಲವೇ ಸಮಯದಲ್ಲಿ ಹೆಸರು ಪಡೆದರು.

ತಮ್ಮ ಹುಟ್ಟಿದ ಊರನ್ನು ಬಿಟ್ಟು ದೇಲಂಪಾಡಿ ಗ್ರಾಮದ ಬನಾರಿಯೆಂಬಲ್ಲಿ ಬಂದು ನೆಲಸಿದ ಮೇಲೆ ವಿಷ್ಣು ಭಟ್ಟರಿಗೆ ಕೃಷಿಯೇ ಮುಖ್ಯ ಕಸುಬಾಯಿತು. ತಮ್ಮ ದೈನಂದಿನ ಕಷ್ಟ ಕಾರ್ಪಣ್ಯದ ನಡುವೆ ಯಕ್ಷಗಾನ ಬಿಡಲಾರದ ನಂಟಾಯಿತು. ಪ್ರಸಂಗಗಳು ಹಾಗೂ ಪೌರಾಣಿಕ ಸಾಹಿತ್ಯದ ಅಧ್ಯಯನ ಜೊತೆಯಲ್ಲೇ ಸಾಗಿತು.

ವೆಂಕಪ್ಪ ಶೆಟ್ಟಿ, ಪೊಳಲಿ ಶಂಕರನಾರಾಯಣ ಶಾಸ್ತ್ರಿ, ನಾರಾಯಣ ಕಿಲ್ಲೆ, ಅರ್ಕುಳ ಸುಬ್ರಾಯ ಆಚಾರ್ಯ ಮುಂತಾದವರ ಶ್ರೇಷ್ಠ ಮಟ್ಟದ ಅರ್ಥಗಾರಿಕೆಯಲ್ಲಿ ಜನಸ್ತೋಮವೇ ಮೈ ಮರೆಯುತ್ತಿದ್ದ ಕಾಲದಲ್ಲೇ ಅರ್ಥಗಾರಿಕೆಯ ಪ್ರಪಂಚಕ್ಕೆ ಇವರ ಪ್ರವೇಶವಾದದ್ದು. ಆ ಶ್ರೇಷ್ಠತೆಯ ಮಧ್ಯೆಯೂ ಭಿನ್ನರಾಗಿ ತಮ್ಮದೇ ಆದ ಛಾಪನ್ನು ಸ್ಥಾಪಿಸಿ, ಜನಮನವನ್ನು ಸೆಳೆದದ್ದು ಮಾಸ್ತರರ ಹೆಗ್ಗಳಿಕೆ. ಕಂಚಿನ ಕಂಠದಲ್ಲಿ ವಾದ, ಸ್ವರ ಎತ್ತುಗಡೆಯ ಬಗೆ, ಮಾತಿನಲ್ಲಿರುವ ಗಾಂಭೀರ್ಯ, ಗತ್ತುಗಾರಿಕೆ ಇವೆಲ್ಲ ಅವರಿಗೆ ಕರಗತವಾಗಿತ್ತು. ರಾವಣ, ಭೀಷ್ಮ, ಕೌರವ, ಕರ್ಣ, ದಶರಥ, ಜರಾಸಂಧ ಮುಂತಾದ ಪಾತ್ರಪೋಷಣೆಯಲ್ಲಿ ಕೀರಿಕ್ಕಾಡು ಅವರದೇ ಆದ ವಿಶಿಷ್ಟತೆ ಇದೆ. ಇದರಿಂದ ಅವರದೇ ಆದ ಶೈಲಿಯನ್ನು ಗುರುತಿಸಲಾಗುತ್ತಿದೆ. ಓತಪ್ರೋತವಾದ ಮಾತುಗಾರಿಕೆಯಲ್ಲಿ ಅಲಂಕಾರಿಕ ಭಾಷೆಯ ಉಪಮೆಗಳ ಮಿಂಚು ಇರುತ್ತದೆ. ಇದರಿಂದಲೇ ಇವರ ಮಾತು ಕಾವ್ಯಾತ್ಮಕವಾಗುತ್ತದೆ. ಸನ್ನಿವೇಶದ ಚಿತ್ರಣ, ಕೇಳುವವರ ಮನಸ್ಸಿನಲ್ಲಿ ಸದಾ ಉಳಿಯುವಂತೆ ಮಾಡಬಲ್ಲ ಪರಿಣಾಮಕಾರಿ ವಾಕ್ ಧೋರಣೆ, ಮಾತಿನಲ್ಲಿ ಸಮ್ಮಿಳಿತವಾಗಿ ಬರುವ ಅಧ್ಯಯನದ, ಚಿಂತನೆಯ ವಿಚಾರಧಾರೆಗಳು ಇವರ ಅರ್ಥಗಾರಿಕೆಯ ವಿಶೇಷಗಳಾಗಿವೆ.

ಮಾಸ್ತರರು ಕೇವಲ ಅರ್ಥಧಾರಿಗಳಾಗಿ ಮಾತ್ರ ಉಳಿದಿಲ್ಲ. ತಮ್ಮ ಊರಿನಲ್ಲಿನ ಉತ್ಸಾಹಿಗಳನ್ನೆಲ್ಲಾ ಕಲೆಹಾಕಿ ಯಕ್ಷಗಾನ ಕಲೆಯನ್ನು ಧಾರೆಯೆರೆದು 'ಗುರುಕುಲ'ವನ್ನು ಸ್ಥಾಪಿಸಿದರು. ಮುಂದೆ 1945ನೇ ಇಸವಿಯಲ್ಲಿ "ಶ್ರೀ ದೇಲಂಪಾಡಿ ಗೋಪಾಲಕೃಷ್ಣ ಯಕ್ಷಗಾನ ಸಂಘ" ವೆಂಬ ಹವ್ಯಾಸಿ ಸಂಸ್ಥೆಯನ್ನು ಸ್ಥಾಪಿಸಿ ಅದು ವರ್ಷಂಪ್ರತಿ ಉತ್ತಮ ಕಾರ್ಯಕ್ರಮವನ್ನು ನಡೆಸುವಂತೆ ನೋಡಿಕೊಂಡು ಬಂದಿದ್ದಾರೆ. ಹೊಸ ಪ್ರತಿಭೆಗಳನ್ನು ಗುರುತಿಸಿ ಬೆಳೆಸುವಲ್ಲೂ ಮಾಸ್ತರರ ಹಿರಿಮೆ ಇದೆ. ಖ್ಯಾತ ಅರ್ಥಧಾರಿ ಶೇಣಿ ಗೋಪಾಲಕೃಷ್ಣ ಭಟ್ ರ 'ಮೊದಲ ಗುರು' ಕೀರಿಕ್ಕಾಡು ಮಾಸ್ತರರಾಗಿದ್ದರೆಂಬಲ್ಲೇ 'ಮಾಸ್ತರ'ರ ಗುರುತ್ವದ ಹಿರಿಮೆ ಅರ್ಥವಾಗುತ್ತದೆ.

ಮಾಸ್ತರ್ ವಿಷ್ಣುಭಟ್ಟರು 60ಕ್ಕೂ ಹೆಚ್ಚಿನ ಯಕ್ಷಗಾನ ಪ್ರಸಂಗಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಶಿವಪಂಚಾಕ್ಷರಿ ಮಹಿಮೆ, ಸ್ವಯಂಪ್ರಭಾ ಪರಿಣಯ, ಕಂಜಾಕ್ಷಿ ಕಲ್ಯಾಣ, ರಕ್ಷಾಕವಚ ಮುಂತಾದವೆಲ್ಲಾ ಬಹಳ ಹೆಸರನ್ನು ಮಾಡಿವೆ. 'ವಿಷ್ಣು ಶರಣನ ದರ್ಪಣ', 'ಕಾವ್ಯಕುಸುಮಗಳು', ಇವರ ಕಾವ್ಯಗಳಾಗಿದ್ದರೆ ಕರವಸ್ತ್ರ, ಸಿಂಗಾರದ ಉಂಗುರ ಮುಂತಾದವು ಪತ್ತೇದಾರಿ ಕಾದಂಬರಿಗಳಾಗಿವೆ. ಆತ್ಮ ವೃತ್ತಾಂತವನ್ನು ಅನುಭವದ ನೆಲೆಯಲ್ಲಿ ವಿವರಿಸುತ್ತಾ ಸಾಗುವ 'ಯಕ್ಷರಸ ಜೀವನದಲ್ಲಿ' ಅನೇಕ ಹಿರಿಯ ಅರ್ಥಧಾರಿಗಳು ಭಾಗವಹಿಸಿರುವ ತಾಳಮದ್ದಲೆಯ ಅನೇಕ ರಸಪೂರ್ಣ ಘಟನೆಗಳ ವರ್ಣನೆ ಇದೆ. ಆತ್ಮೀಯವಾದ ಲವಲವಿಕೆಯ ಬರಹವಾಗಿದೆ. ಕೂಟಗಳ ಅರ್ಥಧಾರಿಯಾಗಿ, ಹವ್ಯಾಸಿ ಯಕ್ಷಗಾನ ಕಲಾವಿದರ ಗುರುವಾಗಿ, ಪ್ರಸಂಗಕರ್ತರಾಗಿ, ಬರಹಗಾರರಾಗಿ ಖ್ಯಾತರಾಗಿರುವ ಕೀರಿಕ್ಕಾಡು ಮಾಸ್ತರ್ ವಿಷ್ಣುಭಟ್ಟರ ಮೌಲಿಕ ಮಾತುಗಳು ಹಾಗೂ ವಿಚಾರಧಾರೆಗಳು ಬಹು ಮುಖ್ಯವಾಗಿವೆ. "ಮಾಸ್ತರ್" ಅವರ ಜತೆ ನಡೆಸಿದ ಸಂದರ್ಶನ ಈ ಕೆಳಗಿನಂತಿದೆ.

ಪ್ರ : ಯಕ್ಷಗಾನ ಕವಿಗೆ ರಂಗಪ್ರಜ್ಞೆ ಮುಖ್ಯವೇ ಅಥವಾ ಕಾವ್ಯಾನುಭೂತಿ ಮುಖ್ಯವೇ? ಪ್ರಸಂಗ ರಚನೆಯ ಹಿನ್ನೆಲೆಯಲ್ಲಿ ಇವುಗಳ ಮೇಳೈಸುವಿಕೆ ಹೇಗೆ ಸಾಗುತ್ತದೆ?

ಉ : ಎರಡೂ ಮುಖ್ಯವೆ. ನಿಮ್ಮ ಪ್ರಶ್ನೆಯೇ ಧ್ವನಿಸುವ ಹಾಗೆ ಈ ಎರಡೂ ಗುಣಗಳ ಮೇಳೈಸುವಿಕೆಯೇ ಯಕ್ಷಗಾನ ಕವಿಯ ವಿಶೇಷತೆ. ಕೇವಲ ರಂಗಪ್ರವೇಶ ಅಥವಾ ಕೇವಲ ಕಾವ್ಯಾನುಭೂತಿ ಮಾತ್ರವೇ ಯಕ್ಷಗಾನ ಕವಿಗೆ ಸಾಕಾಗುವುದಿಲ್ಲ. ಅವು ಒಂದಕ್ಕೊಂದು ಪೂರಕವಾಗಿ ಸೇರಿಕೊಂಡಾಗ ಯಕ್ಷಗಾನ ಕೃತಿರಚನೆ ಸಾರ್ಥಕವೆನಿಸುತ್ತದೆ. ಸನ್ನಿವೇಶ, ಸಂದರ್ಭಗಳ ಸಂಯೋಜನೆ, ವಿಭಿನ್ನ ರಸಗಳ ಬದಲಾವಣೆ, ಅಲ್ಲಲ್ಲಿಗೆ ತಕ್ಕುದಾದ ಶಬ್ದಗಳ ಜೋಡಣೆ ಮೊದಲಾದವುಗಳ ಅರಿವು ಕೃತಿಯ ಪ್ರದರ್ಶನದ ದೃಷ್ಟಿಯಲ್ಲಿ ತುಂಬ ಮುಖ್ಯವಾಗುತ್ತದೆ. ಯಾವ ಕಾಲಕ್ಕೆ ಯಾವ ಪಾತ್ರ, ಯಾವ ರಸ, ಎನ್ನುವ ಯಕ್ಷಗಾನದ ರಂಗಪ್ರಜ್ಞೆ ಪ್ರಸಂಗಕರ್ತನಿಗೆ ಇರಲೇಬೇಕು. ಕಾವ್ಯದ ಪ್ರತಿಭೆ ಮತ್ತು ಕಾವ್ಯ ಮನೋಧರ್ಮ ಬೇರೆ ಕವಿಗೆ ಇರುವ ಹಾಗೆ ಯಕ್ಷಗಾನ ಕವಿಗೂ ಇರಲೇ ಬೇಕಾಗುತ್ತದೆ. ಬಳಸುವ ಶಬ್ದಗಳಲ್ಲಿ 'ಯಕ್ಷಗಾನತ್ವ'ವನ್ನು ಮೆರೆಸುವುದು ಯಕ್ಷಗಾನ ಕವಿಯ ಹೆಚ್ಚುಗಾರಿಕೆ.

ಪ್ರ : ಪ್ರಸಂಗ ರಚನೆಗೆ ನೀವು ಸಿದ್ಧರಾಗುವ ಬಗೆ ಹೇಗೆ?

ಉ : ಪ್ರತ್ಯೇಕವಾದ ಸಿದ್ಧತೆಯೇನೂ ಇಲ್ಲ. ನಾನು ಆರಿಸಿಕೊಂಡ ಕಥಾ ಭಾಗವನ್ನು ಯಕ್ಷಗಾನ ಪ್ರಸಂಗಕ್ಕೆ ಉಚಿತವಾದ ಒಂದು ಚೌಕಟ್ಟಿನಲ್ಲಿ ಒಳಪಡಿಸಿ ಆಮೇಲೆ ಪ್ರಸಂಗ ಬರೆಯಲು ಪ್ರಾರಂಭಿಸುತ್ತೇನೆ. ಯಕ್ಷಗಾನ ಪ್ರದರ್ಶನದಲ್ಲಿ ಪಾತ್ರಗಳು ಹೀಗೆಯೇ ಇರಬೇಕು, ಹೀಗೆಯೇ ಬರಬೇಕು ಎಂಬ ಸಾಂಪ್ರದಾಯಿಕ ನಿಯಮಗಳಿರುವುದರಿಂದ ಮೂಲದ ಕಥೆಯಲ್ಲಿ ಅನಿವಾರ್ಯವಾದ ಕೆಲವು ಬದಲಾವಣೆಗಳನ್ನು ಮಾಡಬೇಕಾಗುತ್ತದೆ. ಹಾಡುಗಳ ಕುರಿತು, ರಾಗತಾಳಗಳ ಕುರಿತು, ಶಬ್ದಜೋಡಣೆಗಳ ಕುರಿತು, ನಾನು ಪೂರ್ವಭಾವಿಯಾಗಿ ಚಿಂತಿಸುವುದಿಲ್ಲ. ನನ್ನ ಮಟ್ಟಿಗೆ ಹೇಳುವುದಾದರೆ ಬರೆಯುತ್ತಾ ಹೋದಂತೆ ಹಾಡುಗಳು ತೆರೆಯುತ್ತಾ ಹೋಗುತ್ತದೆ. ನನ್ನ ಮೂಲ ಚೌಕಟ್ಟಿನಲ್ಲಿ ಅಗತ್ಯವೆನಿಸಿದರೆ ಆ ಮೇಲೆಯೂ ಅಲ್ಪ ಸ್ವಲ್ಪ ಬದಲಾವಣೆ ಮಾಡಿಕೊಳ್ಳುತ್ತೇನೆ. ಒಂದೇ ವಸ್ತುವಿನ ಪ್ರಸಂಗ ರಚನೆಗಳು ವಿರಳ. ಹಾಗೆ ಮಾಡಬೇಕಾಗಿ ಬಂದಾಗ ಕಥೆಗೂ ಯಕ್ಷಗಾನಕ್ಕೂ ಅಪಚಾರವಾಗದಂತಹ ಭಿನ್ನತೆಗಳನ್ನು ಹೊಂದಿಸಿಕೊಳ್ಳುತ್ತೇನೆ.

ಪ್ರ : ತಾಳಮದ್ದಲೆಯಲ್ಲಿ ನೀವು ಪ್ರಸಿದ್ಧ ಅರ್ಥಧಾರಿಯಾಗಿದ್ದು, ಮೇಳಗಳ ಆಟದಲ್ಲಿ ನೀವು ಭಾಗವಹಿಸದೇ ಇರಲು ಕಾರಣ?

ಉ : ಬಯಲಾಟದ ಕಲಾವಿದನಾಗಿ ಅದನ್ನೇ ಒಂದು ಕಸುಬಾಗಿ ಸ್ವೀಕರಿಸುವುದು ಸಾಧ್ಯವಾಗಲಿಲ್ಲ. ಆ ಕುರಿತು ಸರಿಯಾದ ಪರಿಶ್ರಮವಿಲ್ಲದೆ ಅತಿಥಿ ಕಲಾವಿದನಾಗಿ ಆದರೂ ಭಾಗವಹಿಸುವುದು ಉಚಿತವೆಂದು ನನಗೆ ಅನಿಸಲಿಲ್ಲ, ಬಯಲಾಟದ ಬಗ್ಗೆ ಯಾವುದೇ ಪೂರ್ವಾಗ್ರಹವಾಗಲಿ, ಮಡಿವಂತಿಕೆಯಾಗಲಿ ನನಗಿಲ್ಲ. ನನ್ನ ಶಿಷ್ಯರಲ್ಲಿ ಅನೇಕರನ್ನು ಮೇಳದ ಕಲಾವಿದರಾಗುವಂತೆ ನಾನೇ ಪ್ರೋತ್ಸಾಹಿಸಿದ್ದೇನೆ. ಮುಖ್ಯವಾಗಿ ಬಯಲಾಟದಲ್ಲಿ ಭಾಗವಹಿಸುವ ಆಸಕ್ತಿ ಇದ್ದರೂ ಅದನ್ನೇ ಒಂದು ಕಸುಬಾಗಿ ಸ್ವೀಕರಿಸುವ ಆ ಶಕ್ತಿ ನನಗಿರಲಿಲ್ಲ. ಕಾರಣ ಕೌಟುಂಬಿಕ ಮತ್ತು ಆರೋಗ್ಯ ಸ್ಥಿತಿ, ಯಕ್ಷಗಾನ ನಾಟಕಗಳಲ್ಲಿ ಹವ್ಯಾಸಿ ಕಲಾವಿದನಾಗಿ ಭಾಗವಹಿಸಿದ್ದು ನಮ್ಮದೇ ಆದ ಯಕ್ಷಗಾನ ಸಂಘವನ್ನು ಸಂಘಟಿಸಿ ದೀರ್ಘ ಕಾಲ ನಡೆಸಿಕೊಂಡು ಬಂದಿದ್ದೇನೆ.

ಪ್ರ : ಹಿಂದಿನ ಅರ್ಥಧಾರಿಗಳು, ಪಾತ್ರಧಾರಿಗಳು, ಭಾಗವತರುಗಳಲ್ಲಿ ನೀವು ಯಾರನ್ನು ಮೆಚ್ಚುತ್ತೀರಿ? ಯಾಕೆ ಮೆಚ್ಚುತ್ತೀರಿ? ಅವರ ವಿಶಿಷ್ಟತೆಗಳೇನು?

ಉ : ಬಲಿಪ ನಾರಾಯಣ ಭಾಗವತರು, ಮಾಂಬಾಡಿ ನಾರಾಯಣ ಭಾಗವತರು, ಪುತ್ತಿಗೆ ರಾಮಕೃಷ್ಣ ಜೋಯಿಸರು-ಇವರನ್ನು ನಾನು ಬಹಳವಾಗಿ ಮೆಚ್ಚಿದ್ದೇನೆ. ಅವರ ಶಿಸ್ತು, ನಿರ್ದೇಶನ ಆದರ್ಶವಾಗಿತ್ತು. ಯಕ್ಷಗಾನ ಭಾಗವತನಿಗೆ ಕೇವಲ ರಾಗಾಲಾಪನೆಗಳೇ ಮುಖ್ಯವಲ್ಲ. ಯಾರಿಗೆ ಪದ ಹೇಳುವುದು, ಯಾವಾಗ ಹೇಗೆ ಎನ್ನುವ ಪ್ರಜ್ಞೆ ಅವನಿಗೆ ಚೆನ್ನಾಗಿ ಇರಬೇಕು. ಸಾಹಿತ್ಯ ಜ್ಞಾನವೂ ಅಗತ್ಯ. 'ಆಗಂ ಗಯನೈದಿ' ಎಂಬುದನ್ನು 'ಆ ಗಂಗಯ ನೈದಿ' ಎಂದು ಹೇಳಿದರೆ ಎಂತಹ ಆಭಾಸ! ನಾನು ಮೆಚ್ಚಿದ ಭಾಗವತರಲ್ಲಿ ಬಹು ಮಟ್ಟಿಗೆ ಸರ್ವಾಂಗೀಣವಾದ ಸಿರಿ ಇತ್ತು.

ಕಿಲ್ಲೆ, ಪೊಳಲಿ ಶಾಸ್ತ್ರಿ, ವೆಂಕಪ್ಪ ಶೆಟ್ಟಿ, ಶ್ರೀಪತಿ ಶಾಸ್ತ್ರಿ ಮತ್ತು ಅರ್ಕುಳ ಸುಬ್ರಾಯ ಆಚಾರ್ಯ – ಈ ಶ್ರೇಷ್ಠ ಅರ್ಥಧಾರಿಗಳನ್ನು ನಾನು ಅದರ ಅಭಿಮಾನಗಳಿಂದ ಕಾಣುತ್ತೇನೆ. ಕಿಲ್ಲೆಯವರ ಮಾತಿನ ಶೈಲಿ, ಗತ್ತುಗಾರಿಕೆ, ವಾಕ್ಚಾತುರ್ಯ, ಪ್ರತ್ಯುತ್ಪನ್ನಮತಿತ್ವ ಅಸಾಧಾರಣವಾದದ್ದು. ಹಾಗೆಯೇ ಪೊಳಲಿಯವರ ಪಾಂಡಿತ್ಯ, ರಸ ಪ್ರಜ್ಞೆ ಅದ್ಭುತವಾದದ್ದು. ಸುಬ್ರಾಯಾಚಾರ್ಯರದ್ದು ಭಾವನಾಪೂರ್ಣವಾದ ಮಾತುಗಾರಿಕೆ, ಶ್ರೀಪತಿ ಶಾಸ್ತ್ರಿಗಳಲ್ಲಿ ಇನ್ನಿಲ್ಲದ ಸಹೃದಯತೆ. ವಿದ್ವತ್ ಪೂರ್ಣತೆ, ರಸಭಾವಗಳೊಂದಿಗೆ ವಿಶೇಷವಾದ ವಾದ ವಿವಾದ ಖಂಡನೆ ಮಂಡನೆಗಳಿಂದ ಪಾತ್ರ ಚಿತ್ರಣಕ್ಕೆ ಕಳೆ ಏರಿಸುವುದು ವೆಂಕಪ್ಪ ಶೆಟ್ಟರ ವೈಶಿಷ್ಟ್ಯ.

ಕೋಲುಳಿ ಸುಬ್ಬ, ಅಮರಕಣ್ಣ ಅಯ್ಯಪ್ಪ, ಮಾಣಂಗಾಯ ಕೃಷ್ಣಭಟ್, ಕುಂಬಳೆ ಗುಂಡ, ದೇರಣ್ಣ ರೈ, ಐತಪ್ಪ ರೈ, ಗಣಪತಿ ಭಟ್ಟ, ಮುಳಿಯ ಕೇಶವ ಭಟ್ಟ ಇವರೆಲ್ಲಾ ನಾವು ಮರೆಯಲಾರದ ಪಾತ್ರಧಾರಿಗಳು.

ಪ್ರ : ಯಕ್ಷಗಾನ ಕವಿಯಾಗಿರುವ ನೀವು ಮೆಚ್ಚುವ ಪ್ರಸಂಗಕಾರ ಯಾರು? ಪ್ರಸಂಗ ಹಾಗೂ ಪಾತ್ರಗಳು ಯಾವುವು?

ಉ : ಪಾರ್ತಿಸುಬ್ಬ, ಸಂಕಯ್ಯ ಭಾಗವತ – ಮೊದಲಾದ ಕವಿಗಳನ್ನು ನಾನು ಹೆಚ್ಚಾಗಿ ಮೆಚ್ಚಿಕೊಂಡಿದ್ದೇನೆ. ಪಾರ್ತಿಸುಬ್ಬನ ಎಲ್ಲಾ ಪ್ರಸಂಗಗಳೂ ಪ್ರತ್ಯೇಕವಾಗಿ ಪಂಚವಟಿ (ನಾನು ಕಲಿಸುವಾಗ ಈ ಪ್ರಸಂಗದ ಪದ್ಯಗಳಿಂದ ಪ್ರಾರಂಭಿಸುತ್ತಿದ್ದೆ) ಸಂಕಯ್ಯ ಭಾಗವತರ ಕೃಷ್ಣಾರ್ಜುನ ಕಾಳಗ ಅನೇಕ ದೃಷ್ಟಿಯಿಂದ ಯಕ್ಷಗಾನದ ಮಹತ್ವದ ಪ್ರಸಂಗಗಳು.

ಕರ್ಣ, ವಾಲಿ, ಅಂಗದ, ಭರತ, ರಾವಣ, ಭೀಷ್ಮ, ಜರಾಸಂಧ, ಅತಿಕಾಯ, ದಶರಥ ಮೊದಲಾದ ಪಾತ್ರಗಳ ನಿರ್ವಹಣೆಯಲ್ಲಿ ನಾನು ತೃಪ್ತಿ ಹೊಂದಿದ್ದೇನೆ. ಏನಿದ್ದರೂ ಈ ಬಗ್ಗೆ ಹೇಳಬೇಕಾದವರು ಸಹೃದಯರಾದ ಶ್ರೋತೃಗಳು.

ಪ್ರ : ಹವ್ಯಾಸಿ ಯಕ್ಷಗಾನ ಕಲಾವಿದರ ಸಂಘಟಕರಾಗಿ ಈ ಹವ್ಯಾಸಿಯಕ್ಷಗಾನ ಕಲಾವಿದರ ಭವಿಷ್ಯದ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಉ : ಹವ್ಯಾಸಿಯಾಗಲಿ, ವೃತ್ತಿನಿರತರಾಗಿರಲಿ ಕಲಾಸಕ್ತಿ ಮತ್ತುಶ್ರದ್ಧೆ ಇರಬೇಕಾದ್ದು ಮುಖ್ಯ. ಹವ್ಯಾಸಿಯೂ ಜನ ಮೆಚ್ಚುಗೆ ಪಡೆಯಲು ಸಾಧ್ಯವಿದೆ. ಹವ್ಯಾಸಿಗಳು ಸಂಘಟಿತರಾದರೆ ಭವಿಷ್ಯದ ಕುರಿತು ಹೆಚ್ಚಿನ ಭರವಸೆ ಮೂಡಬಹುದು.

ಪ್ರ : ಯಕ್ಷಗಾನಕ್ಕಿರುವ ಅಕಾಡೆಮಿಯ ಕಾರ್ಯ ನಿರ್ವಹಣೆಯ ಬಗ್ಗೆ ಹಾಗೂ ಪ್ರಶಸ್ತಿ ಪ್ರದಾನಗಳ ಬಗ್ಗೆ ಏನು ಹೇಳುತ್ತೀರಿ?

ಉ : ಅಕಾಡೆಮಿ ಬೇಕು. ಇದೆ. ಆದರೆ ಕಾರ್ಯನಿರ್ವಹಣೆ ಸಮರ್ಪಕವಿಲ್ಲ. ಸಹಾಯಧನ, ಪ್ರಶಸ್ತಿ ಪ್ರದಾನ ವ್ಯವಸ್ಥಿತವಾಗಿ ನಡೆಯುತ್ತಿಲ್ಲ. ಈ ಬಗ್ಗೆ ನಿಷ್ಪಕ್ಷಪಾತವಾದ ಖಚಿತ ಧೋರಣೆ ಇರಬೇಕು. ವಶೀಲಿಗೆ ಅವಕಾಶ ಇರಬಾರದು. ಮಾನದಂಡ ಕಲಾವಿದ ಮಿತ್ರರೊಬ್ಬರು ಹೇಳುವ ಹಾಗೆ 'ಮಾನದಂಡ'ಕ್ಕೆ ಕಾರಣವಾಗಬಾರದು.

"ಯಕ್ಷಗಾನದ ಸ್ವಂತಿಕೆಯನ್ನು ಕೆಡಿಸಬೇಡಿ. ಕಲಾಸಕ್ತಿಗೆ ಅನುಗುಣವಾದ ಅಧ್ಯಯನ, ಪರಿಶ್ರಮ ಬೆಳೆಸಿಕೊಳ್ಳಿ ಎಂಬುದೇ" ಇಂದಿನ ಯುವ ಕಲಾವಿದರಲ್ಲಿ ಕೀರಿಕ್ಕಾಡ್ ಮಾಸ್ತರ್ ವಿಷ್ಣುಭಟ್‌ರ ಮನವಿಯಾಗಿದೆ. ತಾರಾಮೌಲ್ಯ ಪ್ರವೇಶಿಸಿ ಬದಲಾಗುತ್ತಿರುವ ಯಕ್ಷಗಾನ ರಂಗಕ್ಕೆ ಇಂತಹ ಹಿರಿಯರ ಮಾತುಗಳು ಯೋಗ್ಯ ಮಾರ್ಗದರ್ಶಕವಾಗಿವೆ.

ಹೀಗೆ ಕವಿಯಾಗಿ, ಪ್ರಸಂಗಕಾರರಾಗಿ, ಅರ್ಥಧಾರಿಯಾಗಿ ಕಲಾವಿದರಿಗೆ ಮಾಸ್ತರರಾಗಿ ತಮ್ಮ ಬಾಳನ್ನು ನಡೆಸಿದ ಮಾಸ್ತರರು ಇದೇ 6–3–1986 ರಂದು ನಿಧನರಾದರು. ಮೇಳಗಳ ಹೊರಗೆ ಉಳಿದು ಅವರು ಮಾಡಿದ ಸಾಧನೆ, ಪಡೆದ ಸಿದ್ಧಿ ಮೆಚ್ಚುವಂತಹದು. ಅವರ ನಿಧನದಿಂದ ಹಳೆಯ ತಲೆಮಾರಿನ ಇನ್ನೊಂದು ಕೊಂಡಿ ಕಳಚಿದಂತಾಗಿದೆ. ಅವರಿಲ್ಲವಾದರೂ ಅವರು ಹಾಕಿಕೊಟ್ಟ ಶೈಲಿ, ತೋರಿದ ದಾರಿ ಇದೆ. ಅವರ ಗರಡಿಯಲ್ಲಿ ಪಳಗಿದ ಹಲವರು ಇಂದು ಅರ್ಥಧಾರಿಗಳಾಗಿ, ವೇಷಧಾರಿಗಳಾಗಿ ರಂಗದಲ್ಲಿ ಮೆರೆಯುತ್ತಿದ್ದಾರೆ. ಇದರಿಂದಾಗಿ ಮಾಸ್ತರರು ಯಕ್ಷಗಾನ ಆಸಕ್ತರ ಮನಸ್ಸಿನಲ್ಲಿ ಸದಾ ಉಳಿಯುವವರಾಗಿದ್ದಾರೆ. ■

ಶ್ರೇಷ್ಠ ಯಕ್ಷಗಾನ ಕಲಾವಿದ

ಕೆರೆಮನೆ ಮಹಾಬಲ ಹೆಗಡೆ

ಉನ್ನತ ಕಲಾವಿದನಿಗೆ ಜನಪ್ರಿಯತೆ ದೊರೆಯುವುದು ಬಹು ಅಪೂರ್ವ. ಯಕ್ಷಗಾನ ಕಲಾ ಇತಿಹಾಸದಲ್ಲೂ ಇದನ್ನು ಕಾಣಬಹುದು. ಆದರೆ ಈ ಕಲಾರಂಗದಲ್ಲಿ ಇಂತಹ ಒಂದು ಅಪೂರ್ವ ಸಂಗಮವಾಗಿರುವುದು ಶ್ರೀ ಕೆರೆಮನೆ ಮಹಾಬಲ ಹೆಗಡೆಯವರಲ್ಲಿ. ಅವರು ಪಡೆದಿರುವ ಶ್ರೇಷ್ಠ ಕಲಾಸಿದ್ಧಿಗೆ ಅಷ್ಟೇ ಅಪಾರ ಜನಮನ್ನಣೆಯೂ ದೊರೆತಿರುವುದು ಒಂದು ವಿಶೇಷ. ಬಡಗುತಿಟ್ಟಿನ ಯಕ್ಷಗಾನಕ್ಕೆ ಕೆರೆಮನೆ ಕುಟುಂಬದವರು ನೀಡಿದ ಕೊಡುಗೆ ಅಸಾಧಾರಣ. ಕೆರೆಮನೆ ಶಿವರಾಮ ಹೆಗಡೆ, ಶಂಭು ಹೆಗಡೆ, ಮಹಾಬಲ ಹೆಗಡೆ, ದಿ। ಗಜಾನನ ಹೆಗಡೆ ಇವರೆಲ್ಲರೂ ಈ ಕಲೆ ಇಂದು ಉತ್ತುಂಗ ಶಿಖರಕ್ಕೆ ಏರಲು ತಮ್ಮ ತಮ್ಮ ಕೊಡುಗೆ ನೀಡಿದ್ದಾರೆ. ಇಡಗುಂಜಿ ಮೇಳವನ್ನು ಕಟ್ಟಿ ಆ ಮೂಲಕ ಉತ್ತರ ಕನ್ನಡದಲ್ಲಿ ವನಸುಮದಂತಿದ್ದ ಈ ಕಲೆಯ ಬೆಡಗನ್ನು ಹೊರಗೆ ಎಲ್ಲೆಡೆಗೆ ಪಸರಿಸಿದ ಕೀರ್ತಿ ಈ ಕುಟುಂಬಕ್ಕೆ ಸಲ್ಲುತ್ತದೆ. ಆ ಮೇಳದಲ್ಲೇ ತಮ್ಮ ಕಲಾ ಬದುಕಿನ ಮೂವತ್ತೈದು ವರ್ಷಗಳ ಕಾಲವನ್ನು ಸೇವೆ ಸಲ್ಲಿಸಿದ ಶ್ರೀ ಕೆರೆಮನೆ ಮಹಾಬಲ ಹೆಗಡೆಯವರು ಆ ಮೇಳದಷ್ಟೇ ಕಲಾಭಿಮಾನಿಗಳಿಗೆ ಪರಿಚಿತರು. ಇವರ ಅಪಾರ ಕಲಾ ಶ್ರೀಮಂತಿಕೆಯನ್ನು ಕಂಡ ವಿದ್ವತ್ ವಲಯ 'ಮಹಾಬಲ' ಎಂಬ ಅಭಿನಂದನ ಗ್ರಂಥವನ್ನು ಇವರಿಗೆ ಸಲ್ಲಿಸಿತ್ತು.

ಇಡಗುಂಜಿ ಮೇಳದಲ್ಲಿ ತಮ್ಮ ಕಲಾ ಬದುಕಿನ ಹೆಚ್ಚಿನ ವರ್ಷ ಕಳೆದ ಇವರು ಕೊಲ್ಲೂರು, ಮೂಲ್ಕಿ, ಸಾಲಿಗ್ರಾಮ ಮೇಳಗಳಲ್ಲೂ ಇದ್ದರು. ಐದು ವರ್ಷಗಳ ಕಾಲ ಸಾಲಿಗ್ರಾಮ ಮೇಳದಲ್ಲಿದ್ದಾಗ ಅದಕ್ಕೆ ಒಂದು ಭದ್ರ ಬುನಾದಿ ಹಾಕಿಕೊಟ್ಟರು. 1978ರಲ್ಲಿ ಒಂದು ವರ್ಷ ಕಮಲ ಶಿಲೆಯ ಮೇಳಕ್ಕೆ ತಾವೇ ವ್ಯವಸ್ಥಾಪಕರಾಗಿದ್ದುಕೊಂಡು ಮೂರು ತಾಸಿನ ಮೇಳವಾಗಿ ನಡೆಸಿದರು. ಮುಂದೆ ಅನೇಕ ಕಡೆ ಅತಿಥಿ ಕಲಾವಿದರಾಗಿ ಪ್ರದರ್ಶನಗಳಲ್ಲಿ ಭಾಗವಹಿಸಿ ತಮ್ಮ ವೈಶಿಷ್ಟ್ಯಪೂರ್ಣ ಪಾತ್ರ ನಿರೂಪಣೆಯ ಮೂಲಕ ಎಲ್ಲರ ಗಮನ ಸೆಳೆದಿದ್ದಾರೆ.

ಪಾತ್ರದ ಶೀಲ ಸ್ವಭಾವವನ್ನು ಅರಿತು ಅದಕ್ಕೆ ಒಪ್ಪುವಂತೆ ಸಮರ್ಥವಾಗಿ ಪಾತ್ರ ನಿರ್ಮಾಣ ಮಾಡಿ, ಪ್ರೇಕ್ಷಕರ ಮನಸ್ಸಿನಲ್ಲಿ ಅಚ್ಚಳಿಯದಂತೆ ಪ್ರಭಾವ ಮೂಡಿಸುವುದರಲ್ಲಿ ಇವರಿಗೆ ಎಣೆಯಾದ ಕಲಾವಿದರೇ ಅಪೂರ್ವ. ನಾದ ಶುದ್ಧಿಗಾಗಿ ಸಂಗೀತವನ್ನು ಅಭ್ಯಾಸ ಮಾಡಿದ ಇವರು ಸೊಗಸಾಗಿ ಹಾಡಬಲ್ಲ ಶಕ್ತಿಯನ್ನು ಹೊಂದಿದ್ದಾರೆ. ಈ ಕಲೆಯಲ್ಲಿ ದುಡಿದಷ್ಟೇ ಪ್ರಮಾಣದಲ್ಲಿ ಯಕ್ಷಗಾನ ಕಲೆಯ ಒಳ ಹೊರಗಿನ ಬಗ್ಗೆ ಚಿಂತನ–ಮಂಥನವನ್ನು ನಡೆಸಿದ್ದಾರೆ. ಇಂತಹ ಕಲಾಸಕ್ತಿಯನ್ನು ಪಡೆದ ಶ್ರೀ ಕೆರೆಮನೆ ಮಹಾಬಲ ಹೆಗಡೆಯವರನ್ನು ಭೆಟ್ಟಿಮಾಡಿ ಸಂದರ್ಶಿಸಿದಾಗ ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳು ಬಹು ಮಾರ್ಮಿಕ ಹಾಗೂ ಮೌಲಿಕ.

ಪ್ರ : ಹಿಂದಿನ ಯಕ್ಷಗಾನ ರಂಗಭೂಮಿಯ ಬಗ್ಗೆ ತಮ್ಮ ವಿಚಾರಗಳೇನು?

ಉ : ಹಿಂದೆ ಇದ್ದ ಕಲಾವಿದರಲ್ಲಿ ಸಾಮಗ್ರಿಗಳು ಬಹು ಕಡಿಮೆ. ಆದರೆ ಇದ್ದ ಸಾಮಾಗ್ರಿಗಳು ಬಹಳ ಚೆನ್ನಾಗಿದ್ದವು. ಆ ಪರಿಸರದಲ್ಲಿನ ಎಲ್ಲಾ ಕಲಾವಿದರಲ್ಲಿ ಉಚ್ಚಮಟ್ಟದ ಕಲೆಗೆ ಸಂಬಂಧಿಸಿದ ನಿಷ್ಠೆಯ ಪ್ರಮಾಣ ಹೆಚ್ಚಾಗಿತ್ತು. ಆರ್ಥಿಕ ಅಂಶ ಎರಡನೆಯ ಸ್ಥಾನ ಗಳಿಸಿತ್ತು. ಅಲ್ಲದೆ ಪ್ರತಿಯೊಂದು ಗ್ರಾಮದಲ್ಲೂ ಈ ಕಲೆಯ ಬಗ್ಗೆ ಹೆಚ್ಚು ತಿಳಿದ ಕೆಲವರಾದರೂ ಇರುತ್ತಿದ್ದರು. ಅವರು ಕಲಾವಿದರು ಸರಿಯಾದ ದಾರಿಯಲ್ಲಿ ನಡೆಯಲು ಕಾರಣರಾಗುತ್ತಿದ್ದು ತಪ್ಪನ್ನು ಪ್ರತಿಭಟಿಸುತ್ತಿದ್ದರು. ಅಂತಹವರ ಮಾತಿಗೆ ಕಲಾವಿದರೂ ಮನ್ನಣೆ ಕೊಡುತ್ತಿದ್ದರು. ಹಿಂದೆ ಹಿಮ್ಮೇಳದವರಿಂದ ಹಾಗೂ ಹಿರಿಯ ವೇಷಧಾರಿಗಳಿಂದ ರಂಗಭೂಮಿಯ ನಿಯಂತ್ರಣವಿತ್ತು. ಸಾಕಷ್ಟು ಪೂರ್ವಭಾವಿ ಸಿದ್ಧತೆ ಮಾಡಿಕೊಂಡೇ ಪ್ರದರ್ಶನ ನಡೆಯುತ್ತಿತ್ತು.

ಪ್ರ : ಇಂದಿನ ಯಕ್ಷಗಾನ ರಂಗಭೂಮಿಯ ಬಗ್ಗೆ ಹಾಗೂ ಈ ಕಲೆಯ ಭವಿಷ್ಯದ ಬಗ್ಗೆ ನಿಮ್ಮ ಅನಿಸಿಕೆ ಏನು?

ಉ : ಇಂದು ಪರಿಸ್ಥಿತಿ ಬದಲಾಗಿದೆ. ಅವರಿವರ ಧೋರಣೆಗೆ ಅನುಸಾರ ಪ್ರದರ್ಶನ ನಡೆಯುವುದರಿಂದ ಅತ್ಯುಚ್ಚ ಮಟ್ಟದ ನಿರ್ವಹಣೆ ಸಾಧ್ಯವಾಗುತ್ತಿಲ್ಲ. ಇದರಿಂದಾಗಿ ಮೇಳ ಎಂಬ ಹೆಸರು ಹಿಂದಿನಂತೆ ಅನ್ವರ್ಥವಾಗುತ್ತಿಲ್ಲ. ಇಂದು ಮಾರ್ಗದರ್ಶಕ ಸಹೃದಯ ಪ್ರೇಕ್ಷಕರ ಕೊರತೆ ಎದ್ದು ಕಾಣುತ್ತದೆ. ಅಲ್ಲದೆ ಹಾಡುಗಾರಿಕೆ, ವೇಷಭೂಷಣ, ನೃತ್ಯ ಯಾವ ಅಂಗೋಪಾಂಗದಲ್ಲೂ ಬೆಳವಣಿಗೆಯ ಸೂಚನೆ ಕಾಣುತ್ತಿಲ್ಲ. ಇಷ್ಟೇ ಅಲ್ಲದೆ ಎರಡು ಮೂರು ದಶಕಗಳ ಹಿಂದೆ ಇದ್ದ ಗುಣಾತ್ಮಕ ಅಂಶಗಳೂ ಕೂಡ ಕಡಿಮೆಯಾಗುತ್ತಿವೆ, ಇಂದು ಇರುವುದಕ್ಕಿಂತ ಹಿಂದಿನ ಪ್ರದರ್ಶನಗಳು ಹೆಚ್ಚು ಕಲಾತ್ಮಕವಾಗಿ ಅಚ್ಚುಕಟ್ಟಿನಿಂದ ಕೂಡಿದ್ದವು. ನಮ್ಮ ಕಣ್ಣಿನ ಮುಂದೆಯೇ ಕಲೆ ನಶಿಸುತ್ತಿರುವುದನ್ನು ನಾವು ಕಾಣಬಹುದು.

ಪ್ರ : ಹೊಸ ಪ್ರಸಂಗ ಸೃಷ್ಟಿ ಹಾಗೂ ಪ್ರಸಂಗ ನಿರೂಪಣೆಯಲ್ಲಿನ ಬದಲಾವಣೆಯ ಬಗ್ಗೆ ನಿಮ್ಮ ಅಭಿಪ್ರಾಯ ಯಾವುದು –

ಉ : ಹಿಂದಿನ ಪ್ರಸಂಗ ಸೃಷ್ಟಿ ಹಾಗೂ ಪ್ರಸಂಗ ನಿರೂಪಣೆಯಲ್ಲಾಗಲೀ ಒಂದು ಬಗೆಯ ಉತ್ಕೃಷ್ಟತೆ ಕಾಣುತ್ತಿತ್ತು. ಮೂವತ್ತು ವರ್ಷಗಳ ಹಿಂದಿಗೂ ಮತ್ತು ಇಂದಿಗೂ ಹೋಲಿಸಿದಾಗ ನಾನು ಕಂಡಂತ ನಾನಾ ಬಗೆಯ ನೃತ್ಯ ಪ್ರಕಾರಗಳು, ಹತ್ತಾರು ಬಗೆಯ ಮೃದಂಗದ ಬೋಲುಗಳು, ಅನೇಕ ರಾಗರೂಪಗಳು, ಕಲಾವಿದರ ಅಲಕ್ಷ್ಯದಿಂದಾಗಿ ಈಗ ಕಾಣಿಸುತ್ತಿಲ್ಲ. ಇದನ್ನು ಗಣನೆಗೆ ತೆಗೆದುಕೊಂಡರೆ ಬಹು ಹಿಂದಿನ ಕಾಲದಿಂದಲೂ ಹೀಗೆ ಲುಪ್ತವಾಗುತ್ತಾ ಹೋಗುತ್ತಿರಬೇಕು.

ಪ್ರ : ಕಲಾ ಪ್ರದರ್ಶನದಿಂದ ತಾವು ಹೊಂದಿದ ಲಾಭ ಯಾವುದು?

ಉ : ಉತ್ತಮವಾಗಿ ಪಾತ್ರ ನಿರ್ವಹಣೆ ಮಾಡಿದಾಗ ನನಗೆ ಲಭಿಸುವ ಖುಷಿಯೇ ಮುಖ್ಯವಾದುದು. ತನ್ಮಯತೆಯಿಂದಲೇ ನನಗೆ ಉತ್ತಮ ಪ್ರದರ್ಶನ ನೀಡಲು ಸಾಧ್ಯ. ಜನರ ಚಪ್ಪಾಳೆಯನ್ನು ಎಂದೂ ನಾನು ಮಾಪನವಾಗಿಟ್ಟು ಕೊಂಡವನಲ್ಲ. ಪ್ರದರ್ಶನದಲ್ಲಿ ಗಳಿಸಿದ ಕಲಾನುಭವವೇ ದೊಡ್ಡದು.

ಪ್ರ : ಯಕ್ಷಗಾನ ಪ್ರದರ್ಶನ ಕಾಲವನ್ನು ಕಡಿಮೆ ಮಾಡುವ ತಮ್ಮ ಯೋಚನೆಗೆ ಹಿನ್ನೆಲೆ ಏನು? ಅದರ ಪರಿಣಾಮ ಏನು?

ಉ : ಯಾವುದೇ ಕಲೆಗೆ ಸಂಬಂಧಪಟ್ಟ ವ್ಯವಹಾರ ದೀರ್ಘವಾಗಬಾರದು

ಎಂಬುದು ನನ್ನ ನಿಲುವು. ದೀರ್ಘವಾದುದು ರೇಜಿಗೆ ಹುಟ್ಟಿಸುತ್ತದೆ. ಕಲೆ ಇರುವುದು ಸಂತೋಷಕ್ಕಾಗಿ. ಅದು ಬೇಕು ಎನ್ನುವಾಗಲೇ ಮುಗಿಯಬೇಕು. ಇದಕ್ಕೆ ಪ್ರಧಾನ ಕಾರಣವೆಂದರೆ ಪ್ರದರ್ಶನದ ಪರಿಣಾಮದ ತೀಕ್ಷ್ಣತೆಯು ಮಂಕಾಗಬಾರದು. ಅದರ ಮೊನೆ ವರ್ಚಸ್ಸು ಸದಾ ಉಳಿಯುವಂತಿರಬೇಕು. ಆಕಳಿಸುತ್ತಾ ತೂಕಡಿಸುತ್ತಾ ಬೆಳಗು ಆಗಲಿಲ್ಲವಲ್ಲ ಎನ್ನುವಂತಿರಬಾರದು. ಇಡೀ ರಾತ್ರಿಯ ಪ್ರದರ್ಶನವೆಂದರೆ 'ಬೆಳಗು ಮಾಡುವುದೇ' ಉದ್ದೇಶವಾಗುತ್ತದೆ. ಆರ್ಥಿಕವಾಗಿ ಇದು ಅನುಕೂಲವಾಗುವ ಸಾಧ್ಯತೆಯಿದೆ. ಕಲೆಯ ಹಿತದೃಷ್ಟಿಯಿಂದ, ಪ್ರೇಕ್ಷಕರ ಹಿತದೃಷ್ಟಿಯಿಂದ, ಕಲಾವಿದರ ಹಿತದೃಷ್ಟಿಯಿಂದ ಇದು ಅಗತ್ಯ. ಇಂದಲ್ಲ ನಾಳೆ ಈ ಬಗೆ ಬಂದೀತು.

ಪ್ರ : ಯಕ್ಷಗಾನ ಪ್ರದರ್ಶನ ವ್ಯವಸ್ಥೆಯಲ್ಲಿ ನಿರ್ದೇಶಕನ ಅಗತ್ಯವಿದೆಯೋ?

ಉ : ಉತ್ತಮ ನಿರ್ದೇಶಕರ ಅಗತ್ಯವಿದೆ. ಆದರೆ ಹೆಸರಿಗೆ ಇದ್ದರೆ ಪ್ರಯೋಜನವಿಲ್ಲ. ನಿರ್ದೇಶಿಸಬಲ್ಲ ಸಾಮರ್ಥ್ಯವಿದ್ದು ಅವನ ಮಾತನ್ನು ಕೇಳುವ ಕೇಳಬಲ್ಲ ಕಲಾವಿದರಿದ್ದರೆ ಖಂಡಿತಾ ಯಕ್ಷಗಾನ ಪ್ರದರ್ಶನ ಉತ್ತಮಗೊಳ್ಳಬಲ್ಲವು. ನಿರ್ದೇಶಕನಾಗುವವನು ಕಲೆಯ ಎಲ್ಲಾ ಅಂಗೋಪಾಂಗಗಳನ್ನು ಬಲ್ಲವನಾಗಿರಬೇಕು. ಎಲ್ಲಾ ಅಂಶಗಳಲ್ಲಿ ಪರಿಣತನಾಗಿರಬೇಕು. ಹಿಂದೆ ಭಾಗವತರು ಅದನ್ನು ನೋಡಿಕೊಳ್ಳುತ್ತಿದ್ದರು. ಇಂದು ಅದು ಕಡಿಮೆಯಾಗುತ್ತಿರುವುದರಿಂದ ಸ್ವಯಂ ಪ್ರಜ್ಞೆ ಪ್ರತಿಭೆ ಇದ್ದ ಹಿರಿಯ ಕಲಾವಿದರು ತಮ್ಮ ಪರಿಧಿಯ ಮೂಲಕ ಯುವ ಕಲಾವಿದರಿಗೆ ಯಾವ ಯಾವ ಅಂಶಗಳನ್ನು ಹೇಗೆ ಕೊಡಬೇಕೆಂದು ಯೋಚಿಸಿ ರಂಗಭೂಮಿ ಕಳೆ ಕಟ್ಟುವಂತೆ ಮಾಡಬಹುದು. ಆದರೆ ಕಲಾವಿದರು ಅವರ ಚೌಕಟ್ಟಿಗೆ ಒಳಪಡಬೇಕು. ಆದರೆ ಈ ಪರಿಸ್ಥಿತಿ ಬರುತ್ತದೋ ಇಲ್ಲವೊ ಹೇಳುವುದು ಕಷ್ಟ.

ಪ್ರ : ಯಕ್ಷಗಾನ ಪ್ರಸಂಗ ಸಾಹಿತ್ಯದ ಬಗ್ಗೆ ನಿಮ್ಮ ಅನಿಸಿಕೆಗಳೇನು?

ಉ : ಬಹುಮಟ್ಟಿಗೆ ಯಕ್ಷಗಾನದ ಹಾಡುಗಳು ಹೆಚ್ಚು ಜನರಿಗೆ ಸುಲಭವಾಗಿ ತಿಳಿಯುವಂತಹ ಸರಳ ಕನ್ನಡದ ಹಾಡುಗಳು. ಆದರೆ ಇವು ಉಂಟುಮಾಡುವ ಪರಿಣಾಮ ತೀವ್ರ. ಕೇಳುವವರ ಮನಸ್ಸಿನಲ್ಲಿ ಕೊರೆದು ನಿಲ್ಲುವ ಶಕ್ತಿಯನ್ನು ಗಳಿಸಿದೆ. ಸಾಹಿತ್ಯದ ದೃಷ್ಟಿಯಿಂದಲೂ ಈ ಬಗೆಯ ಹಾಡುಗಳು ಮಹತ್ವವಾಗಿದೆ.

ಪ್ರ : ನೀವು ಸಂಗೀತ ಹಾಗೂ ಭಾಗವತಿಗೆ ಅಭ್ಯಾಸ ಮಾಡಿದ್ದರಿಂದ ಪಡೆದ ಲಾಭವೇನು?

ಉ : ಸಂಗೀತದ ಅಭ್ಯಾಸದಿಂದ ನಾದಶುದ್ಧಿ, ಲಯಶುದ್ಧಿ ಇತ್ಯಾದಿಗಳ ಬಗ್ಗೆ ಸೂಕ್ಷ್ಮವಾಗಿ ಯೋಚಿಸುವುದು ಸಾಧ್ಯವಾಯಿತು. ಹಾಡುಗಾರಿಕೆಯ ಬಗ್ಗೆ ನನಗೆ ಒಲವು ಮೊದಲಿನಿಂದಲೂ ಇತ್ತು. ಇವೆರಡನ್ನೂ ಅಭ್ಯಾಸ ಮಾಡಿದುದರಿಂದ ಸೂಕ್ಷ್ಮ ಸಂವೇದನೆ ದೊರೆಯಿತು. ಈ ಸೂಕ್ಷ್ಮ ಸಂವೇದನೆ ಕೆಲವೊಮ್ಮೆ ಕಷ್ಟಕ್ಕೆ ಕಾರಣವಾಗಿದೆ. ನನ್ನ ಮನದ ಆಳದಲ್ಲಿ ಮೂಡಿ ಬಂದ ಭಾವಕ್ಕೂ ಅವರು ಹಾಡುವ ಭಾವಕ್ಕೂ ಕಂದಕವೇರ್ಪಟ್ಟು ಭಾವ ಪ್ರದರ್ಶನಕ್ಕೆ ಅಡಚಣೆ ಉಂಟಾದುದೂ ಉಂಟು.

ಪ್ರ : ಡಾ॥ ಶಿವರಾಮ ಕಾರಂತರ ವಿಚಾರಗಳ ಬಗ್ಗೆ ನಿಮ್ಮ ನಿಲುವು ಏನು?

ಉ : ಯಕ್ಷಗಾನ ಬದುಕಲು ಎಡೆಮಾಡಿಕೊಟ್ಟವರು ಡಾ॥ ಶಿವರಾಮ ಕಾರಂತರು ಎಂಬುದು ನನ್ನ ಖಂಡಿತ ಅಭಿಪ್ರಾಯ. ಅವರ ದೃಷ್ಟಿ ಧೋರಣೆಯನ್ನು ಇತರ ಕಲಾವಿದರು ಅರ್ಥ ಮಾಡಿಕೊಳ್ಳದೇ ಇದ್ದುದು ಒಂದು ವಿಪರ್ಯಾಸ. ಕಾರಂತರು ಈ ಯಕ್ಷಗಾನ ಕಲೆಯ ಬಗ್ಗೆ ಇಟ್ಟುಕೊಂಡ ನಿಲುವು ಬಹಳ ಮಹತ್ವದ್ದು.

ಮಾತಿನ ಮೂಲಕ ತಮ್ಮ ಅನುಭವವನ್ನು ತೆರೆದಿಟ್ಟ ಶ್ರೀ ಮಹಾಬಲ ಹೆಗಡೆಯವರ ಚಿಂತನಾ ಸಾಮರ್ಥ್ಯ ಬೆರಗುಗೊಳ್ಳುವಂತಹುದು. ಈ ಕಲಾವಿದ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳಲ್ಲಿ ಗಳಿಸಿದ ಖ್ಯಾತಿಯ ಹಿನ್ನೆಲೆಯನ್ನು ಇಲ್ಲಿ ಕಂಡುಕೊಂಡೆ.

ತಮ್ಮ ಪಾತ್ರಗಳಲ್ಲಿ ಅವರು ತೋರುತ್ತಿದ್ದ ಅಭಿನಯವಂತು ವರ್ಣನಾತೀತ. ಭೀಷ್ಮವಿಜಯದ ಭೀಷ್ಮನಾಗಿ ಅವರು ತೋರುತ್ತಿದ್ದ ಗಾಂಭೀರ್ಯಪೂರ್ಣ ನಡವಳಿಕೆ, ಹಿತಮಿತವಾದ ಮಾತು ಪಂಪನ "ಅತ್ಯುನ್ನತಿಯೊಳ್ ಅಮರ ಸಿಂಧೂದ್ಭವಂ" ಎಂಬ ಸಾಲನ್ನು ನೆನಪಿಗೆ ತರುತ್ತದೆ. ಗದಾಯುದ್ಧದಲ್ಲಿನ ಕರುಣಾರಸಪೂರಿತ ಸನ್ನಿವೇಶದಲ್ಲಿ ದುರ್ಯೋಧನನಾಗಿ ಅವರಾಡುವ ಮಾತುಗಳು ಪ್ರೇಕ್ಷಕರ ಕಣ್ಣಲ್ಲಿ ನೀರು ತರುತ್ತದೆ. ಸಾಲಿಗ್ರಾಮ ಮೇಳದಲ್ಲಿದ್ದಾಗ ನಡೆದ ಚಂದ್ರಹಾಸದಲ್ಲಿ ಇವರು ದುಷ್ಟಬುದ್ಧಿಯಾಗಿ, ದಿ। ಗಜಾನನ ಹೆಗಡೆಯವರು ವಿಷಯೆಯಾಗಿ ಪರಸ್ಪರ ಸಂಧಿಸಿ ಮಾತನಾಡುವಾಗ ಈ ಅಭಿಜಾತ ಕಲಾವಿದ ಸಹೋದರರು ತೋರಿದ ಅಭಿನಯ ಕಣ್ಣಿಗೆ ಕಟ್ಟುವಂತಹುದು. ಆಗಿನ ಇವರ ಗತ್ತುಗಾರಿಕೆ, ಕುಣಿತ, ಅಭಿನಯ, ಮಾತು ಎಣೆಯಿಲ್ಲದ್ದು,. ಇದೇ ಬಗೆಯ ಇನ್ನೊಂದುವಿಕಟ ಪಾತ್ರವಾದ 'ಕೀಚಕ'ನನ್ನು ಅಷ್ಟೇ ಜೀವಂತವಾಗಿ ನಿರ್ವಹಿಸುತ್ತಾರೆ.

ಈ ಕಲೆಯಲ್ಲಿ ಅವರಿಗೆ ಸಾಧಿತವಾಗಿರುವ ಹಿಡಿತ ನಿಜಕ್ಕೂ ಬೆರಗು ಗೊಳಿಸುವಂತಹುದು. ಹೀಗೆ ಯಕ್ಷಗಾನ ಕಲಾರಂಗದಲ್ಲಿನ ಮಹಾನ್ ಕಲಾವಿದರಾಗಿ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳ ಕಲಾಭಿಮಾನಿಗಳ ಗಮನವನ್ನು ಶ್ರೀ ಕೆರೆಮನೆ ಮಹಾಬಲ ಹೆಗಡೆಯವರು ಸೆಳೆದಿದ್ದಾರೆ.

■

ಧೀಮಂತ ಕಲಾವಿದ

ಕೆರೆಮನೆ ಶಂಭು ಹೆಗಡೆ

ಹದಿನೈದು ವರ್ಷಗಳಿಂದೀಚೆಗೆ ಯಕ್ಷಗಾನ ಕಲೆ ಕನ್ನಡ ಜಿಲ್ಲೆಗಳಲ್ಲಿ ಹಾಗೂ ಹೊರನಾಡುಗಳಲ್ಲಿ ಬೆಳೆಸಿಕೊಂಡ ಅಪಾರ ಅಭಿಮಾನ ಆಶ್ಚರ್ಯಕರವಾದುದು. ಈ ಸಂದರ್ಭದಲ್ಲೇ ಎಲೆಮರೆ ಕಾಯಂತಿದ್ದ ಅಸಾಮಾನ್ಯ ಪ್ರತಿಭೆಯ ಉತ್ತರ ಕನ್ನಡದ ಕಲಾವಿದರು ಬಡಗುತಿಟ್ಟಿನ ಮೇಳಗಳಾದ ಸಾಲಿಗ್ರಾಮ, ಅಮೃತೇಶ್ವರಿ ಮುಂತಾದವುಗಳಲ್ಲಿ ಪಾತ್ರವಹಿಸಿ ಹೊಸ ಸಾಧ್ಯತೆಯೊಂದನ್ನು ತೋರಿಸಿಕೊಟ್ಟರು. ಅದುವರೆಗೆ ಅಷ್ಟಾಗಿ ಪ್ರಕಾಶಿತವಾಗಿರದಿದ್ದ ಅಭಿನಯ, ಕುಣಿತ, ಗತ್ತುಗಳಿಂದ ಕಲಾರಸಿಕರ ಮನಸ್ಸನ್ನು ಸೂರೆಗೊಂಡರು. ಕೆರೆಮನೆ ಶಂಭುಹೆಗಡೆ, ಕೆರೆಮನೆ ಮಹಾಬಲ ಹೆಗಡೆ, ದಿ। ಕೆರೆಮನೆ ಗಜಾನನ ಹೆಗಡೆ, ಚಿಟ್ಟಾಣಿ ರಾಮಚಂದ್ರ ಹೆಗಡೆ, ಮುಂತಾದವರು ಇವರಲ್ಲಿ ಪ್ರಮುಖರು.

ರಾಷ್ಟ್ರಪ್ರಶಸ್ತಿ ಪುರಸ್ಕೃತ ಕೆರೆಮನೆ ಶಿವರಾಮ ಹೆಗಡೆಯವರು ಇಡಗುಂಜಿ ಮೇಳದ ಸಂಘಟನೆಯ ಮೂಲಕ (ಚದುರಿ ಹೋಗಿದ್ದ) ಕಲಾವಿದರನ್ನು ಒಂದೆಡೆ ಸೇರಿಸಿ ಉತ್ತರ ಕನ್ನಡದ ಶೈಲಿಗೆ ಒಂದು ನಿಖರತೆಯನ್ನು ಒದಗಿಸಿ ಕೊಟ್ಟರು. ಇಂತಹ ಶ್ರೇಷ್ಠ ಕಲಾವಿದರ ಮಗನಾದ ಶ್ರೀ ಶಂಭು ಹೆಗಡೆ ತಂದೆ ಹಾಕಿಕೊಟ್ಟ ಮಾರ್ಗದಲ್ಲಿ ನಡೆದು

ಇನ್ನಷ್ಟು ಕೊಡುಗೆ ನೀಡಿದರು. ಇವರೊಬ್ಬ ಧೀಮಂತ ಕಲಾವಿದ, ಇವರಲ್ಲಿ ಅನುಭವ, ಪ್ರತಿಭೆ ಹಾಗೂ ಕಲಾ ಪ್ರಜ್ಞೆ ಮುಪ್ಪುರಿಗೊಂಡಿವೆ.

ನಲವತ್ತಾರು ವರ್ಷ ವಯಸ್ಸಿನ ಶ್ರೀ ಶಂಭುಹೆಗಡೆಯವರಿಗೆ ಈ ರಂಗಭೂಮಿಯಲ್ಲಿ 28 ವರ್ಷಕ್ಕೂ ಹೆಚ್ಚಿನ ಅನುಭವವಿದೆ. ತಮ್ಮ 18–19ರ ವಯಸ್ಸಿನಲ್ಲಿಯೇ ಮೇಳದ ಆಟಗಳಲ್ಲಿ ತಂದೆಯವರೊಂದಿಗೆ ಭಾಗವಹಿಸುತ್ತಿದ್ದರು. ಅಧ್ಯಾಪನವನ್ನು ತಮ್ಮ ವೃತ್ತಿಯಾಗಿ ಆರಿಸಿಕೊಂಡ ಇವರು 2 ವರ್ಷ ಆ ವೃತ್ತಿಯಲ್ಲಿ ಇದ್ದರು ಮುಂದೆ 1960 ರಿಂದ 66ರವರೆಗೆ ಬೇರೆ ಬೇರೆ ವೃತ್ತಿ ಮೇಳಗಳಲ್ಲಿ ಅನುಭವ ಪಡೆದರು. ಮೊದಲಿಗೆ ತಂದೆಯವರು ಸಂಘಟಿಸಿದ ಇಡಗುಂಜಿ ಮೇಳದಲ್ಲೂ, ಆನಂತರ 63–64 ರಲ್ಲಿ ಕೊಲ್ಲೂರು ಮೇಳದಲ್ಲೂ, ಕಲಾವಿದರಾಗಿ ಇದ್ದರು. 64–65 ರಲ್ಲಿ ಮುಲ್ಕಿ ಮೇಳದಲ್ಲಿದ್ದು ಬಡಗು ಹಾಗೂ ತೆಂಕು ತಿಟ್ಟಿನ ಸಂಯೋಜಿತ ಆಟಗಳನ್ನು ಪ್ರದರ್ಶಿಸುತ್ತಿದ್ದರು. 1965ರಲ್ಲಿ ಗುಂಡುಬಾಳ ದೇವಸ್ಥಾನದ ಮೇಳದಲ್ಲಿದ್ದರು. 1966ರಲ್ಲಿ ಕೋರಿಯೋಗ್ರಫಿಯಲ್ಲಿ ಅಧ್ಯಯನ ಮಾಡಲು ಸಂಗೀತ ಅಕಾಡೆಮಿಯಿಂದ ಸ್ಕಾಲರ್‌ಷಿಪ್ ದೊರೆತದ್ದರಿಂದ ದೆಹಲಿಗೆ ತೆರಳಿದರು. ಅಲ್ಲಿ ಮೂರು ವರ್ಷಗಳ ಕಾಲ ರಂಗಭೂಮಿಯ ಬಗ್ಗೆ ಅಧ್ಯಯನ ನಡೆಸಿ 1969ರಲ್ಲಿ ಪುನಃ ವೃತ್ತಿ ರಂಗಕ್ಕೆ ಮರಳಿದರು. ಆ ಸಮಯದಲ್ಲಿ ಬಡಗು ತಿಟ್ಟಿನ ಮೇಳವಾದ ಸಾಲಿಗ್ರಾಮ ಮೇಳ ಅನೇಕ ಬಗೆಯ ಹೊಸತನದೊಂದಿಗೆ ಪುನರ್‌ಸಂಘಟಿತವಾಗಿತ್ತು. ಆಗ ಶಂಭು ಹೆಗಡೆಯವರು ತಮ್ಮ ಸಹೋದರರಿದ್ದ ಸಾಲಿಗ್ರಾಮ ಮೇಳವನ್ನು ಸೇರಿಕೊಂಡರು. 1973 ರವರೆಗೆ ಅದೇ ಮೇಳದಲ್ಲಿದ್ದರು. ಮುಂದೆ ಇಡಗುಂಜಿ ಮೇಳವನ್ನು ಪೂರ್ಣರೂಪದ ವೃತ್ತಿ ಮೇಳವನ್ನಾಗಿ ಮಾಡಿಕೊಂಡು, ಅಂದಿನಿಂದ 1984ರವರೆಗೆ ಮೇಳದ ಮುಖ್ಯ ಕಲಾವಿದ ಹಾಗೂ ಸಂಚಾಲಕರಾಗಿ ಎಲ್ಲರೂ ಶ್ಲಾಘಿಸುವಂತೆ ಮೇಳವನ್ನು ನಡೆಸಿಕೊಂಡು ಬಂದವರು. ಇದೀಗ ಇಡಗುಂಜಿ ಮೇಳದ ಖಾಯಂ ವೃತ್ತಿ ತಿರುಗಾಟವನ್ನು ನಿಲ್ಲಿಸಿದ್ದಾರೆ. ಆದರೂ ಆಗಾಗ ನೀಡುವ ಯಕ್ಷಗಾನ ಪ್ರದರ್ಶನಗಳ ಮೂಲಕ ಮೌಲಿಕವಾದ ಕೊಡುಗೆಯನ್ನು ಪ್ರಸ್ತುತ ಪಡಿಸುತ್ತಿದ್ದಾರೆ.

ಇವರಿಗೆ ಯಕ್ಷಗಾನ ಕಲೆಯ ಗುರುವೆಂದರೆ ತಂದೆ ಶ್ರೀಯುತ ಕೆರೆಮನೆ ಶಿವರಾಮ ಹೆಗಡೆ ಮತ್ತು ಕೆರೆಮನೆ ಶ್ರೀ ಮಹಾಬಲ ಹೆಗಡೆಯವರು. ಇವರೀರ್ವರು ತಮಗೆ ಆದರ್ಶವಾಗಿರುವುದು ಎನ್ನುತ್ತಾರೆ. "ಶ್ರೀ ಶಿವರಾಮ ಹೆಗಡೆ ಮತ್ತು ಮಹಾಬಲ ಹೆಗಡೆಯವರ ಪ್ರಬುದ್ಧ ಅಭಿನಯ, ಅಭ್ಯಾಸಯೋಗ್ಯ ಕುಣಿತ, ಅಚ್ಚುಕಟ್ಟಿನ ನಿರೂಪಣೆ, ಆ ಸಮಯದಲ್ಲಿ ಬಾಲಕನಾಗಿದ್ದ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿದೆ. ಅವರು ಹಾಕಿಕೊಟ್ಟ ದಿಸೆಯಲ್ಲಿ ನಾನು ಸಾಗಿದ್ದೇನೆ" ಎನ್ನುತ್ತಾರೆ. ಇನ್ನು ದೆಹಲಿಯಲ್ಲಿ ರಂಗಭೂಮಿಯ ಕುರಿತಾದ ವಿಶೇಷ ವಿಚಾರವನ್ನು ತಿಳಿಯುವಲ್ಲಿ ಹಾಗೂ ಕುಣಿತಗಳಿಗೆ ತಾತ್ವಿಕ ತಿಳಿವುಗಳನ್ನು

ನೀಡುವಲ್ಲಿ ಸಂಸ್ಥೆಯ ನಿರ್ದೇಶಕರಾದ ಶ್ರೀಮತಿ ಮಾಯಾರಾವ್, ಮೋನಿಕಾ ತನ್ವೀರ್, ಇಂದ್ರ ರಾಜಧಾನ್, ಅನಿಲ್ ಬಿಸ್ವಾಸ್ ಮುಂತಾದವರು ಇವರಿಗೆ ದಾರಿತೋರಿದ್ದಾರೆ. ಅಲ್ಲಿ ಇವರು ರಂಗಭೂಮಿಯ ನಿರ್ದೇಶನದ ತತ್ವಗಳನ್ನು ಅರಿತುಕೊಂಡರು.

ಯಕ್ಷಗಾನ ಕಲಾವಿದ ಶ್ರೀ ಶಂಭು ಹೆಗಡೆಯವರು ಎಲ್ಲರೊಂದಿಗೆ ಮಧುರ ಸಂಬಂಧವನ್ನು ಹೊಂದಿದವರು. ತಮ್ಮ ಇಡಗುಂಜಿ ಮೇಳದ ಸಂಚಾಲಕರಾಗಿಯೂ ಅವರು ಯಜಮಾನಿಕೆಯ ಪ್ರದರ್ಶನಕ್ಕೆ ಹೋಗದೆ ತಾವು ಒಬ್ಬ ಕಲಾವಿದರೆಂಬ ಭಾವನೆಯಿಂದಲೇ ಇದ್ದವರು. ಆದುದರಿಂದಲೇ ಮೇಳದ ಆಡಳಿತವು ಇವರಿಗೆ ಸುಗಮವಾಗಿ ಕಾಣಿಸಿಕೊಂಡಿದೆ.

ಪ್ರೇಕ್ಷಕರ ಬಗ್ಗೆ ಬಹು ಮುಗ್ಧರಾಗಿರುವ ಇವರು ತಮ್ಮ ಮೇಳಕ್ಕೆ ಅಭಿಮಾನಿಗಳು ತೋರಿಸಿದ ಪ್ರೋತ್ಸಾಹ ಮರೆಯಲಾರದ್ದು ಎನ್ನುತ್ತಾರೆ. "ಇಡಗುಂಜಿ ಮೇಳ ಬದುಕಿದ್ದೇ ಸಹೃದಯ ಪ್ರೇಕ್ಷಕರಿಂದ. ಅವರ ಅಭಿಮಾನ ಇಂದು ಈ ಮೇಳ ಕರಾವಳಿ ಹಾಗೂ ಮಲೆನಾಡಿನಲ್ಲಿ ತನ್ನ ವಿಶ್ವಾಸವನ್ನು ರುಜುವಾತು ಗೊಳಿಸಿದೆ" ಎಂಬ ಹೆಮ್ಮೆ ಇದೆ.

ಶ್ರೀ ಕೆರೆಮನೆ ಶಂಭುಹೆಗಡೆಯವರಿಗೆ ಇಡಗುಂಜಿ ಮೇಳದ ಮೇಲೆ ಅಪಾರ ಅಭಿಮಾನ. 1934ರಲ್ಲೇ ಸಂಘಟಿತವಾದ ಈ ಮೇಳದ ಪರಂಪರೆ, ಈ ಸಂದರ್ಭದಲ್ಲಿ ಈ ಮೇಳಗಳಿಸಿದ ಹಿರಿಮೆ ಗರಿಮೆಗಳೆಲ್ಲ ಇವರಿಗೆ ಸದಾ ಸ್ಫೂರ್ತಿದಾಯಕವಾಗಿದೆ. ಇಡಗುಂಜಿಮೇಳ ಒಮ್ಮೆ ಬಯಲಾಟದ ಮೇಳವಾಗಿ ಮತ್ತೆ ಥಿಯೇಟರ್ ಮೇಳವಾಗಿ ಪುನಃ ಸಂಚಾರಿ ಮೇಳವಾಗಿದ್ದ ಆ ದಿನಗಳನ್ನೆಲ್ಲಾ ಪ್ರೀತಿಯಿಂದ ನೆನೆಯುತ್ತಾರೆ, ತಾವು ಸಾಲಿಗ್ರಾಮ ಮೇಳದಲ್ಲಿದ್ದಾಗಲೂ ಆರಂಭಿಕ ಆಟ ಹಾಗು ಅಂತ್ಯದ ಆಟ ಆಡುವುದರ ಮೂಲಕ ಮೇಳ ನಿಲ್ಲದಂತೆ ನೋಡಿಕೊಂಡಿದ್ದನ್ನು ತಿಳಿಸುವಾಗೆಲ್ಲ ಅಭಿಮಾನ ಅವರ ಕಣ್ಣಲ್ಲಿ ಮಿನುಗುತ್ತದೆ.

ತಮ್ಮ ಮೇಲ್ವಿಚಾರಣೆಯ ಮೊದಲ ನಾಲ್ಕು ವರ್ಷದ ಕಷ್ಟದಿನಗಳನ್ನು ಮಾರ್ಮಿಕವಾಗಿ ತಿಳಿಸುತ್ತಾ ಆಗಿನ ಆರ್ಥಿಕ ನಷ್ಟಗಳನ್ನೆಲ್ಲಾ ಈಗ ತುಂಬಿಕೊಳ್ಳುತ್ತಿದ್ದೇವೆ ಎನ್ನುತ್ತಾರೆ. ಮೇಳವನ್ನು ಒಂದು ಸುಭದ್ರ ತಳಪಾಯದ ಮೇಲೆ ನಿಲ್ಲಿಸುವವರೆಗೆ ತಾವು ಅನುಭವಿಸಿದ ಮಾನಸಿಕ ವೇದನೆಗಳನ್ನು ಬಹುಹೃದಯಂಗಮವಾಗಿ ಬಿಚ್ಚಿಕೊಳ್ಳುತ್ತಾರೆ. ತಾವು ಮಾಡುವ ಪಾತ್ರಗಳಲ್ಲಿ ಸದಾ ತಾದಾತ್ಮ್ಯದಿಂದ ಅಭಿನಯಿಸುವ ಶ್ರೀ ಶಂಭುಹೆಗಡೆಯವರಿಗೆ ಯಕ್ಷಗಾನ ಪಾತ್ರ ನಿರ್ವಹಣೆ ನೋವನ್ನು ನಿವಾರಿಸಲು ಉತ್ತಮ ಸಾಧನವಾಗಿದೆ. ಸಹೋದರ ಕೆರೆಮನೆ ಶ್ರೀ ಗಜಾನನ ಹೆಗಡೆಯವರು ನಿಧನಹೊಂದಿದ ವರ್ಷವಂತು ಹಗಲೆಲ್ಲಾ ಅವರ ಪಾಲಿಗೆ ಗೊಂದಲ ನೋವಿನದ್ದಾದರೆ, ರಾತ್ರಿ ಪಾತ್ರಗಳನ್ನು ವಹಿಸಿ ರಂಗಭೂಮಿ ಪ್ರವೇಶಿಸಿದರೆ ಆ ವೇದನೆಗಳೆಲ್ಲಾ

ಮರೆಯುತ್ತಿದ್ದರು. ನಿತ್ಯಜೀವನದ ತಾಪತ್ರಯ ಮರೆಯಲು ಪಾತ್ರ ನಿರ್ವಹಣೆ ಇವರಿಗೆ ಅಗತ್ಯ.

ಭಾರತ, ರಾಮಾಯಣ ಹಾಗು ಪುರಾಣಗಳ ವಸ್ತುವಿರುವ ಪ್ರಸಂಗಗಳನ್ನು ಮಾತ್ರ ಇಡಗುಂಜಿ ಮೇಳದವರು ಆಡುತ್ತಿರುವುದು ಎಲ್ಲರಿಗೂ ತಿಳಿದ ಸಂಗತಿ. ಇದಕ್ಕೆ ಕಾರಣ ಶ್ರೀ ಶಂಭುಹೆಗಡೆಯವರಿಗೆ ಆ ಬಗೆಯ ಪ್ರಸಂಗಗಳಲ್ಲಿರುವ ಒಲವೇ ಆಗಿದೆ. ಮಾನವೀಯ ಸಮಸ್ಯೆಗಳ ಬಗ್ಗೆ ಹೆಚ್ಚು ಒತ್ತು ಇರುವ 'ದೇವಿ ಮಹಾತ್ಮೆ' ಬ್ರಹ್ಮಕಪಾಲ, ಹರಿಶ್ಚಂದ್ರ, ನಳದಮಯಂತಿ, ಸುಧನ್ವ ಕಾಳಗ, ಕೃಷ್ಣಾರ್ಜುನಕಾಳಗ, ಕರ್ಣ ಪರ್ವ, ಕೃಷ್ಣ ಸಂಧಾನ, ಪಟ್ಟಾಭಿಷೇಕ ಇಂತಹ ಪ್ರಸಂಗಗಳನ್ನು ಇವರು ಹೆಚ್ಚು ಮೆಚ್ಚುತ್ತಾರೆ.

ಶ್ರೀ ಹೆಗಡೆಯವರ ಮೆಚ್ಚಿನ ಪಾತ್ರಧಾರಿಗಳೆಂದರೆ ಶ್ರೀ ಶಿವರಾಮ ಹೆಗಡೆ, ಶ್ರೀ ಮಹಾಬಲ ಹೆಗಡೆ, ಮೂಡ್ಕಣಿ ನಾರಾಯಣ ಹೆಗಡೆ, ಅಳಿಕೆ ರಾಮ ರೈ, ಕೋಳ್ಯೂರು ರಾಮಚಂದ್ರರಾವ್ ಮುಂತಾದವರು. ಇವರ ಮೆಚ್ಚಿನ ಭಾಗವತರೆಂದರೆ-ಗುಂಡ್ಮಿ ರಾಮಚಂದ್ರ ನಾವಡ, ನೆಬ್ಬೂರ ನಾರಾಯಣ ಭಾಗವತರು, ಗೋಪಾಲ ಕಮ್ತಿ, ನಾರಾಯಣ ಉಪ್ಪೂರ ಮುಂತಾದವರು.

ಪ್ರೇಕ್ಷಕರ ಮನಮಿಡಿಯುವಂತೆ ಕರುಣಾರಸವನ್ನು ಹೊರಹೊಮ್ಮಿಸಬಲ್ಲ ಶಕ್ತಿ ಶ್ರೀಯುತರಿಗಿದೆ, ಶೋಕಪೂರಿತವಾದ ಇವರ ಮಾತುಗಳಿಗೆ ಎಂತಹ ಕಠಿಣ ಹೃದಯಗಳನ್ನೂ ಕರಗಿಸಬಲ್ಲ ಶಕ್ತಿ ಇದೆ. ಆ ಬಗೆಯ ಪಾತ್ರಗಳಲ್ಲಿ ಇವರಿಗೆ ಖ್ಯಾತಿ ತಂದವುಗಳೆಂದರೆ ಹರಿಶ್ಚಂದ್ರ, ಕರ್ಣ, ಬ್ರಹ್ಮಕಪಾಲದ ಈಶ್ವರಮುಂತಾದವುಗಳು. ವೀರರಸ ಪಾತ್ರಗಳಲ್ಲೂ ಇವರು ಕಲಾಭಿಮಾನಿಗಳ ಗಮನಸೆಳೆದಿದ್ದಾರೆ. ಚಂದ್ರಹಾಸದ ದುಷ್ಟಬುದ್ಧಿ, ವಿರಾಟಪರ್ವದ ಕೀಚಕ, ರಾವಣ, ಸಂಧಾನದ ಕೃಷ್ಣ ಮಾಗಧ ಈ ಬಗೆಯ ಪಾತ್ರಗಳಲ್ಲೂ ಇವರು ವಿರಾಜಿಸಿದ್ದಾರೆ. ಕಾರ್ತವೀರ್ಯಾರ್ಜುನದಲ್ಲಿನ ನೀರಾಟದ ದೃಶ್ಯದ ನಿರೂಪಣೆಯಂತೂ ಅವರ ಅಸಾಮಾನ್ಯ ಕಲಾಶಕ್ತಿಯ ಸಾಕಾರವಾಗಿದೆ. ದುಷ್ಟಬುದ್ಧಿ, ಸಾಲ್ವ, ಮದನ, ಕಾಶಿಮಾಣಿ, ತೀರ್ಥಯಾತ್ರೆಯ ಕೃಷ್ಣ ಪಾತ್ರಗಳನ್ನು ಬಹು ಸೊಗಸಾಗಿ ನಿರ್ವಹಿಸಿದ್ದಾರೆ.

ಶ್ರೀ ಶಂಭು ಹೆಗಡೆಯವರು ಒಬ್ಬ ಪ್ರಜ್ಞಾವಂತ ಕಲಾವಿದ ಎಂಬುದರಲ್ಲಿ ಸಂದೇಹವಿಲ್ಲ. ಈ ರಂಗಭೂಮಿಯ ಬಗ್ಗೆ ಇವರು ಸಾಕಷ್ಟು ಚಿಂತನೆ ನಡೆಸಿದ್ದಾರೆ ಮಾತ್ರವಲ್ಲದೆ ವೃತ್ತಿ ಕಲಾವಿದರು ಆಗಿದ್ದು ಪರಿಪೂರ್ಣ ಜ್ಞಾನವನ್ನು ಪಡೆದಿದ್ದಾರೆ. ಈಗಂತೂ ಮೇಳವೊಂದರ ವ್ಯವಸ್ಥಾಪಕರೂ ಆಗಿದ್ದು ತಾವು ಕಂಡ ಕನಸುಗಳನ್ನು ನಡೆಸಿದ ಪ್ರಯೋಗಗಳನ್ನು ಅಳವಡಿಸಿಕೊಳ್ಳುವುದರಲ್ಲಿ ಸಫಲರಾಗಿದ್ದಾರೆ. ಇಂತಹ ಧೀಮಂತ ಕಲಾವಿದರನ್ನು ಸಂದರ್ಶಿಸಿದಾಗ ಕೆಳಕಂಡ ಅಭಿಪ್ರಾಯಗಳು ವ್ಯಕ್ತವಾಗಿವೆ.

ಪ್ರ : ಯಕ್ಷಗಾನವನ್ನು ತಾವು ಯಾವ ವರ್ಗದ ಕಲೆ ಎಂದು ಪರಿಗಣಿಸುತ್ತೀರಿ?

ಉ : ಯಕ್ಷಗಾನ ಒಂದು ಸಾಂಪ್ರದಾಯಿಕ ಕಲೆ. ಇಂದು ಅದು ಜಾನಪದ ಲಕ್ಷಣವನ್ನು ಕಳೆದುಕೊಳ್ಳುತ್ತಿದೆ. ಹಾಗೆಂದು ಇದು ಶಾಸ್ತ್ರೀಯ ಮಟ್ಟಕ್ಕೆ ಪೂರ್ತಿ ಏರಿಲ್ಲ. ಇಲ್ಲಿ ಸಂಪ್ರದಾಯಕ್ಕೆ ಹೆಚ್ಚು ಮನ್ನಣೆ. ಭಾಗವತಿಕೆಯಾಗಲಿ, ವೇಷಗಾರಿಕೆಯಾಗಲಿ, ಕುಣಿತ ಅಭಿನಯಗಳಾಗಲಿ ಎಲ್ಲವೂ ತಂದೆಯನ್ನೋ, ಗುರುಗಳನ್ನೋ ಅನುಸರಿಸಿಕೊಂಡು ಬರುತ್ತದೆ. ಕಲಾವಿದನಾದವನಿಗೆ ಹಲವು ಬಾರಿ ತಾನು ಮಾಡುತ್ತಿರುವುದು ಏಕೆ ಎಂದೇ ತಿಳಿದಿರುವುದಿಲ್ಲ. ಸಂಪ್ರದಾಯ ಮಾತ್ರ ಹಾಗೆಎಂದು ಆತ ತಿಳಿದುಕೊಂಡಿದ್ದಾನೆ. ಈ ಕಲೆಯಲ್ಲಿ ಜಾನಪದದ ಮೂಲ ಅಂಶವಾದ ಅತಿ ಭಾವುಕತೆ ಬಂದಿದೆ. ಆದುದರಿಂದ ಇದೊಂದು ಜಾನಪದ ಕಲೆ ಎನ್ನುತ್ತಾರೆ. ನನ್ನ ದೃಷ್ಟಿಯಲ್ಲಿ ಇದಕ್ಕಿಂತ ಹೆಚ್ಚಾಗಿ ಸಾಂಪ್ರದಾಯಿಕ ಕಲೆ ಎಂಬುದೇ ಹೆಚ್ಚು ಉತ್ತಮ.

ಪ್ರ : ಜಾನಪದ ಕಲೆಯಲ್ಲಿ, ಚಲನಶೀಲ ಅಂಶಗಳು ಬರುತ್ತವೆ ಅಂತಹಕ್ಕೆ ಕಟ್ಟನ್ನು ಹಾಕುವುದು ಸರಿಹೊಂದುತ್ತದೆಯೊ?

ಉ : ಜಾನಪದ ಕಲೆ ಎಂದ ಮಾತ್ರಕ್ಕೆ ಹೊಸತನ್ನೇ ಸದಾ ತರಬೇಕೆಂದಿಲ್ಲ, ಅದರ ಮೂಲ ಸ್ವರೂಪಕ್ಕೆ ಧಕ್ಕೆಯಾಗುವಂತಹ ಪ್ರಭಾವವನ್ನು ತಿರಸ್ಕರಿಸುವುದು ಅನಿವಾರ್ಯ. ಭಾವನಾತ್ಮಕ ಅಂಶಗಳನ್ನು ನಿತ್ಯಜೀವನದಲ್ಲೂ ಕಾಣುತ್ತೇವೆ. ಹಾಗೆಂದು ಈ ಸಮಕಾಲೀನ ಪಾತ್ರಗಳ ಮೂಲಕವೇ ಅವುಗಳನ್ನು ತರಬೇಕಾದ ಅಗತ್ಯವಿಲ್ಲ. ಪೌರಾಣಿಕ ಪ್ರಸಂಗಗಳಲ್ಲೂ ಸಾರ್ವತ್ರಿಕವಾದ ಮೌಲ್ಯಗಳು ಹುದುಗಿವೆ. ಅವುಗಳ ಮೂಲಕ ಅವು ಇಂದಿಗೂ ಪ್ರಸ್ತುತಗೊಳಿಸಲು ಸಾಧ್ಯ. ಈ ಬಗೆಯ ಪ್ರಸಂಗಗಳು ಜನರನ್ನು ಸುಸಂಸ್ಕೃತಗೊಳಿಸುತ್ತವೆ. ಅವುಗಳಲ್ಲಿ ರಂಜನೆ ಅಂಶವು ಇದೆ, ಪ್ರಸಂಗಕಾರರು ಕೂಡ ಆವರಣ ಭಂಗ ಮಾಡುವಂತಹ ವಸ್ತುಗಳನ್ನು ಆರಿಸುವುದು ತಪ್ಪು. ಯಕ್ಷಗಾನ ಶೈಲಿಗೆ ಪೌರಾಣಿಕವಾದ ಆವರಣವೇ ಹೆಚ್ಚು ಸೂಕ್ತ. ಈ ಕಾರಣ ಹಳೆಯ ವಸ್ತುವನ್ನೇ ಆರಿಸಿ ಹೊಸದೃಷ್ಟಿಯನ್ನು ಕೊಟ್ಟು ರಂಗಕ್ಕೆ ಹೆಚ್ಚು ಹೊಂದುವಂತೆ ನಿರೂಪಿಸಬೇಕಾದ ಅಗತ್ಯ ಇಂದು ಹೆಚ್ಚಿದೆ.

ಪ್ರ : ಯಕ್ಷಗಾನ ಕಲಾವಿದರಾದ ನಿಮಗೆ ಕೋರಿಯಾಗ್ರಫಿಯ ಅಧ್ಯಯನ ಸಹಾಯಕವಾದ ಬಗೆ ಹೇಗೆ?

ಉ : ಕೋರಿಯಾಗ್ರಫಿ ಎಂದರೆ ರಂಗ ನಿರ್ದೇಶನ ತಂತ್ರದ ಅಭ್ಯಾಸವಾಗಿದೆ. ಕಲಾವಿದನಾದವನು ರಂಗದ ಮೇಲೆ ತಾನು ಕಂಡ ಹೊಸ ಅಂಶಗಳನ್ನು ಅಳವಡಿಸಿಕೊಳ್ಳುವುದೇ ಆಗಿದೆ. ಮೊದಮೊದಲಿಗೆ ಹೊಸ ಕಲ್ಪನೆಗಳನ್ನು ತರಲು ಸಾಧ್ಯವೇ ಆಗಲಿಲ್ಲ. ಇದಕ್ಕೆ ಕಾರಣ ಇದರ ವ್ಯವಸಾಯಿ ಸ್ವರೂಪ ಆರ್ಥಿಕಲಾಭವೇ ವ್ಯವಸ್ಥಾಪಕರಿಗೆ ಮುಖ್ಯವಾಗಿರುವಾಗ ಕಲಾತ್ಮಕ ಅಂಶಗಳು ಗೌಣವಾಗುತ್ತವೆ. ಅಲ್ಲದೆ, ಸಹಕಲಾವಿದರು ಮಾತನ್ನು ಅರ್ಥ ಮಾಡಿಕೊಳ್ಳುವಂತಿರಬೇಕು. ಇವೆಲ್ಲವುಗಳಿಂದ ಮೊದಲ 4–5 ವರ್ಷಗಳಲ್ಲಿ ನನ್ನ ಈ ವಿಶೇಷ ಅಭ್ಯಾಸ ಉಪಯೋಗವಾಗಲಿಲ್ಲ. ಆದರೆ ಇಡಗುಂಜಿ ಮೇಳಕ್ಕೆ ನಾನೇ ವ್ಯವಸ್ಥಾಪಕನಾದ ನಂತರ ಕೆಲವೊಂದು ಬದಲಾವಣೆ ಮಾಡಿಕೊಂಡಿದ್ದೇನೆ. ರಂಗದಲ್ಲಿನ ಬೆಳಕು ಸಂಯೋಜನೆ ಬಗ್ಗೆ ಸುಧಾರಿಸಿದ್ದೇನೆ. ಅರ್ಧಚಂದ್ರಾಕೃತಿಯ ರಂಗಸ್ಥಳದ ನಿರ್ಮಾಣವು ನನ್ನ ಕಲ್ಪನೆಯಿಂದಲೇ ನಿರ್ಮಾಣಗೊಂಡಿದೆ. ಕೆಲವು ಪಾತ್ರಗಳಿಗೆ ತೆರೆ ಹಿಡಿಯುವುದರಲ್ಲೂ ಕೂಡ ಹೊಸ ದೃಷ್ಟಿಯಿಂದ ಬೆಳೆಸಿದ್ದೇನೆ. ಉದಾ: ದುಷ್ಟಬುದ್ಧಿ, ಇನ್ನು ಈ ದಿಸೆಯಲ್ಲಿ ಕೆಲವು ಯೋಜನೆಗಳನ್ನು ಇಟ್ಟುಕೊಂಡಿದ್ದೇನೆ. ಅವುಗಳನ್ನು ಕಾರ್ಯರೂಪಕ್ಕೆ ತರುವುದರ ಬಗ್ಗೆ ಯೋಚಿಸುತ್ತಿದ್ದೇನೆ.

ಪ್ರ : ಇಂದಿನ ಯಕ್ಷಗಾನ ರಂಗಭೂಮಿಯ ಬಗ್ಗೆ ನಿಮ್ಮ ಅಭಿಪ್ರಾಯ ಏನು?

ಉ : ಯಕ್ಷಗಾನ ಕಲೆ ಒಂದು ಬಗೆಯಲ್ಲಿ ಸಮಷ್ಟಿ ಕಲೆ. ಇಲ್ಲಿ ನಾನಾ ಅಂಶಗಳ ಔಚಿತ್ಯಪೂರ್ಣ ಹೊಂದಾಣಿಕೆಯೇ ಅತ್ಯಂತ ಮುಖ್ಯವಾದದ್ದು. ವೇಷಗಾರಿಕೆ, ಕುಣಿತ, ಅಭಿನಯ, ಮಾತು ಇವೆಲ್ಲಾ ಉತ್ತಮ ಮಟ್ಟದಲ್ಲಿದ್ದು ಸಮನ್ವಯಗೊಳ್ಳಬೇಕು. ಆದರೆ ಈ ದೃಷ್ಟಿಯಿಂದ ರಂಗಭೂಮಿಯನ್ನು ಕಂಡಾಗ ನಿರಾಶೆಯಾಗುತ್ತದೆ. ಮಾತುಗಾರಿಕೆಯಲ್ಲಿ ರಾಜಕೀಯ ವಿಚಾರಗಳು, ಸ್ವಪ್ರತಿಷ್ಠೆಯ ಆಲಾಪಗಳು ದೈನಂದಿನ ಮಾತುಗಳನ್ನು ತುರುಕುವುದರ ಮೂಲಕ ಪೌರಾಣಿಕ ಆವರಣ ಭಂಗವಾಗುವಂತಹದನ್ನು ಇಂದಿನ ಪ್ರದರ್ಶನದಲ್ಲಿ ಕಾಣಬಹುದು – ಹಳೆಯ ಸಂಪ್ರದಾಯಿಕ ಶೈಲಿ ನಶಿಸುತ್ತಿದೆ. ಇಂದಿನ ಈ ರಂಗಭೂಮಿ ದಾರಿತಪ್ಪುತ್ತಿರುವುದರಲ್ಲಿ ಎಲ್ಲರ ಪಾಲು ಇದೆ, ಒಂದು ರಂಗಭೂಮಿ ಸುಸ್ಥಿರತೆಯನ್ನು ಪಡೆಯಲು ಪ್ರಜ್ಞಾವಂತ ಪ್ರೇಕ್ಷಕ ಅವಶ್ಯಕ. ಪ್ರೇಕ್ಷಕನಲ್ಲಿ ಸದಭಿರುಚಿಯ ಕೊರತೆಯಿದ್ದರೆ ಸಂಘಟಕ ಅವರ ರುಚಿಗೆ ಅನುಗುಣವಾಗಿ ಕಲಾವಿದನನ್ನು ದುಡಿಸಬಲ್ಲ.

ಸಂಘಟಕರ ಅವ್ಯವಹಾರ, ಕಲಾವಿದರಿಗೆ ಕಲೆಯ ಬಗ್ಗೆಯಿರುವ ಅಪ್ರಾಮಾಣಿಕತೆ, ಪ್ರೇಕ್ಷಕರ ಕೀಳು ಅಭಿರುಚಿಗಳು ಯಾವುದೇ ಕಲೆಯನ್ನಾದರು ಅಪಾಯದ ಅಂಚಿಗೆ ಕೊಂಡೊಯ್ಯಬಲ್ಲದು ಯಕ್ಷಗಾನ ಈ ನಿಟ್ಟಿನಲ್ಲಿ ಸಾಗುತಿರುವುದು ವ್ಯಸನಕರವಾದ ಅಂಶ.

ಪ್ರ : ಮೇಳದ ವ್ಯವಸ್ಥಾಪಕರಾಗಿ ನೀವು ಪಡೆದ ಅನುಭವಗಳೇನು?

ಉ : ಯಕ್ಷಗಾನದಲ್ಲಿರುವ ಕಲಾವಿದರನ್ನು ಗಮನಿಸಿದರೆ ಇಂದು ಕಾಣಿಸಿಕೊಳ್ಳುವಷ್ಟು ಮೇಳಗಳ ಅಗತ್ಯವಿಲ್ಲ. ನಿಜವಾಗಿಯೂ ಕಲಾವಿದರ ಕೊರತೆ ಇಂದು ಹೆಚ್ಚಿದೆ. ಯಾವುದೇ ಮೇಳವನ್ನು ಇಂದು ಪರಿಪೂರ್ಣ ಮೇಳ ಎಂದು ಕರೆಯುವಂತಿಲ್ಲ. ಇದರ ನಡುವೆ ಕಲಾವಿದರಿಗಾಗಿ ನಡೆಯುವ ಹೋರಾಟಗಳು. ಅವ್ಯವಹಾರಗಳು ಈ ರಂಗವನ್ನು ಕಲುಷಿತಗೊಳಿಸುತ್ತಿದೆ. ಕೇವಲ ಮನರಂಜನೆ ಒಂದನ್ನೇ ಮುಖ್ಯವಾಗಿಟ್ಟುಕೊಂಡ ವೃತ್ತಿ ಮೇಳಗಳು ಹಣ ಸಂಪಾದನೆಗೆ ಆದ್ಯತೆ ಕೊಟ್ಟವು. ಇವುಗಳಲ್ಲದೆ ಆಟಗಳನ್ನು ವಹಿಸಿಕೊಳ್ಳುವ ಗುತ್ತಿಗೆದಾರರ ಪಾತ್ರ ಹೆಚ್ಚುತ್ತಾ ಹೋದಂತೆ ಮೇಳದ ಸ್ಥಾನ ನಿರ್ದೇಶನ ಕಷ್ಟವಾಗುತ್ತದೆ. ನಮ್ಮ ಮೇಳಕ್ಕೆ ಸಂಬಂಧಿಸಿದಂತೆ ಆದಷ್ಟು ಪೌರಾಣಿಕ ಪ್ರಸಂಗಗಳನ್ನೇ ಪ್ರದರ್ಶಿಸುತ್ತಿದ್ದೇವೆ. ಹೆಚ್ಚಾಗಿ ಪರಂಪರಾನುಗತ ಶೈಲಿಯಲ್ಲಿ ಪ್ರಸಂಗ ನಿರೂಪಣೆ ಸಾಗಿಬಂದಿದೆ. ಜನ ಇದನ್ನು ಬಹಳಷ್ಟು ಕಡೆಗಳಲ್ಲಿ ಅಪೂರ್ವವಾಗಿ ಸ್ವಾಗತಿಸಿದ್ದಾರೆ. ಅವರು ಕೊಟ್ಟ ಪ್ರೋತ್ಸಾಹ ನನ್ನನ್ನು ಮುಗ್ಧನನ್ನಾಗಿ ಮಾಡಿದೆ. ಇನ್ನು ನಾನೂ ಒಬ್ಬ ಕಲಾವಿದನೇ ಆದುದರಿಂದ ಪ್ರದರ್ಶನದ ವ್ಯವಸ್ಥೆಯಂತೂ ನನಗೆಂದೂ ಸಮಸ್ಯೆಯಾಗಿಲ್ಲ.

ಪ್ರ : ಇಂದಿನ ಯಕ್ಷಗಾನ ಕಲಾವಿದರ ಬಗ್ಗೆ ನಿಮ್ಮ ಅನಿಸಿಕೆ ಏನು?

ಉ : ಯಕ್ಷಗಾನ ಕಲಾವಿದರಲ್ಲಿ ಇಂದು ಎರಡು ವರ್ಗ ಎದ್ದು ಕಾಣುತ್ತದೆ. ಮೊದಲ ವರ್ಗದವರು ಈಗಾಗಲೇ ಸಾಕಷ್ಟು ತಮ್ಮ ಪ್ರತಿಭೆಯನ್ನು ವ್ಯಕ್ತಪಡಿಸಿ ಹೆಸರು ಗಳಿಸಿದವರು. ಈ ಬಗೆಯ ಕಲಾವಿದರನ್ನು ಮೆಚ್ಚುವ ಅಭಿಮಾನಿಗಳ ಒಂದು ಗುಂಪೇ ಇದೆ. ಈ ಬಗೆಯ ಗುಂಪು ಯಕ್ಷಗಾನ ಕಲೆಗೆ ದೊರೆಯುವ ಪ್ರೋತ್ಸಾಹ ದೃಷ್ಟಿಯಿಂದ ಸ್ವಾಗತಾರ್ಹವಾದರೂ ಅನೇಕ ಬಗೆಯ ಅನಾವಶ್ಯಕ ಪ್ರತಿಕ್ರಿಯೆಗೆ ಕಾರಣವಾಗಿದೆ: ಕೆಲವೊಮ್ಮೆ ಅನೌಚಿತ್ಯಗಳೆಲ್ಲಾ ಅಸಾಧಾರಣತೆಯ ಹಣೆ ಪಟ್ಟಿಯನ್ನು ಅಂಟಿಸಿಕೊಳ್ಳುತ್ತದೆ. ಎರಡನೆಯ ವರ್ಗದ ಕಲಾವಿದ ಇದನ್ನೇ

ಜನಾದರವೆಂದು ತಿಳಿದುಕೊಂಡು ಅನುಕರಿಸುತ್ತಾರೆ. ಇಂತಹ ಅನುಭವವಿಲ್ಲದ ಅನುಕರಣೆ ಅಪಾಯಕ್ಕೆ ಕಾರಣ. ಅನೇಕಬಾರಿ, ಸಾಹಿತ್ಯದಲ್ಲಿ ಕೃತಿಚೌರ್ಯವಿದ್ದಂತೆ ಒಬ್ಬ ಹಿರಿಯ ಕಲಾವಿದನ ನೇರ ಅನುಕರಣ ರಂಗದ ಮೇಲೆ ಮೂಡುತ್ತದೆ. ಇದರಿಂದ ಕಲಾವಿದನಾದವನ ಸ್ವಂತ ಸೃಜನಶೀಲತೆ ಸೋರಿಹೋಗುತ್ತದೆ. ಇದು ಬೆಳವಣಿಗೆಯ ಲಕ್ಷಣವಲ್ಲ. ಪ್ರತಿಯೊಬ್ಬ ಕಲಾವಿದನಾದವನು ತಾನೇ ಸ್ವತಃ ಯೋಚನೆ ಮಾಡಬೇಕು. ಸಾಕಷ್ಟು ಅನುಭವವನ್ನು ಪಡೆದಿರಬೇಕು. ಆಗ ಹಳೆಯದಕ್ಕೆ ಬಂಡಾಯವೆಂಬಂತೆ ಹೊಸತು ಮೂಡುತ್ತಾ ಬರುತ್ತದೆ. ಇದು ಇಂದು ಎಲ್ಲೂ ಕಂಡುಬರುತ್ತಿಲ್ಲ.

ಪ್ರ : ಹವ್ಯಾಸಿ ಕಲಾವಿದರು ಈ ದಿಶೆಯಲ್ಲಿ ಸಾಗಬಲ್ಲರೆ?

ಉ : ರಂಗಸ್ಥಳದ ಅನುಭವದ ಕೊರತೆ ಹಾಗೂ ಈ ಕಲೆಯಲ್ಲಿ ಸಂಪೂರ್ಣ ತೊಡಗಿಸಿ ಕೊಳ್ಳಲಾಗದೇ ಇರುವುದರಿಂದ ಹವ್ಯಾಸಿ ಕಲಾವಿದರಿಂದ ಅಂತಹ ಹಿರಿದಾದುದೇನನ್ನು ನಿರೀಕ್ಷಿಸಲಾಗುವುದಿಲ್ಲ. ಅವರ ಅಭಿಮಾನ ಹಾಗೂ ಚಟುವಟಿಕೆ ಪ್ರಶಂಸಾರ್ಹದುದು. ಅಲ್ಲಲ್ಲಿ ಇಂತಹ ಹವ್ಯಾಸಿ ಸಂಸ್ಥೆಗಳಿಂದ ಪ್ರೇಕ್ಷಕರ ಸದಭಿರುಚಿಯಾದರು ಹೆಚ್ಚಲು ಸಾಧ್ಯ.

ಪ್ರ : ಸರಕಾರ ಹಾಗು ಅಕಾಡೆಮಿಗಳು ಈ ಕಲೆಗೆ ಕೊಡುತ್ತಿರುವ ಪ್ರೋತ್ಸಾಹದ ಬಗ್ಗೆ ನಿಮ್ಮ ಅಭಿಪ್ರಾಯ ಏನು?

ಉ : ಅಕಾಡೆಮಿ ಮತ್ತು ಸರಕಾರದಿಂದ ದೊರೆಯುವ ನೆರವಿನ ಪ್ರಮಾಣ ಬಹು ಅಲ್ಪವಾದುದು. ಅವರ ಯೋಜನೆಗಳು ಹೆಚ್ಚಾಗಿ ಕಾಗದ ರೂಪದಲ್ಲಿ ಮಾತ್ರ ಇರುತ್ತದೆ. ಮೂರು ವರ್ಷಗಳ ಕಾಲ ಅಕಾಡೆಮಿಯ ಸದಸ್ಯನಾಗಿದ್ದರೂ ಅಂತಹ ಕೆಲಸವನ್ನೇನನ್ನು ಮಾಡಲು ಸಾಧ್ಯವಾಗಿಲ್ಲ. ಇದಕ್ಕೆ ಕಾರಣ ಅಲ್ಲಿನ ಕಾರ್ಯವೈಖರಿಯೇ ಆ ಬಗೆಯದು. ಅಕಾಡೆಮಿ ಸರಕಾರಕ್ಕೆ ಕಾರ್ಯಗಳನ್ನು ಸೂಚಿಸಲು ಮಾತ್ರ ಸಾಧ್ಯವೇ ಹೊರತು, ಅದೇ ಸ್ವಯಂ ಏನೂ ಮಾಡಲು ಸಾಧ್ಯವಿಲ್ಲ.

ಹೀಗೆ ಅನೇಕ ಸ್ವಂತ ವಿಚಾರಧಾರೆಗಳನ್ನು ಇಟ್ಟುಕೊಂಡಿರುವ ಶ್ರೀ ಕೆರೆಮನೆ ಶಂಭು ಹೆಗಡೆಯವರು ಚಿಕಿತ್ಸಕ ದೃಷ್ಟಿಯುಳ್ಳವರು. ಇಂತಹ ಚಿಂತಕ ಶಕ್ತಿಯುಳ್ಳ ಕಲಾವಿದರಿಂದ ಕಲಾರಂಗದಲ್ಲಿ ಆರೋಗ್ಯಪೂರ್ಣ ದೃಷ್ಟಿ ಬೆಳೆಯಲು ಸಾಧ್ಯ. ■

ಜನಪ್ರಿಯ ಕಲಾವಿದ

ಚಿಟ್ಟಾಣಿ ರಾಮಚಂದ್ರ ಹೆಗಡೆ

ಮೊದಲು ಇಂಗ್ಲೀಷ್ ರಿಂದ 'ಕ್ಯಾನರೀಸ್ ಡಿಸ್ಟ್ರಿಕ್ಟ್' ಎಂದು ಕರೆಸಿಕೊಂಡ ಕನ್ನಡ ಜಿಲ್ಲೆ ಅವರ ಆಡಳಿತದ ಅನುಕೂಲಕ್ಕೋಸ್ಕರ ಎರಡು ಹೋಳಾಗಿ 'ಉತ್ತರ ದಕ್ಷಿಣ'ವಾಗಿ ಬೇರ್ಪಟ್ಟಿತು. ಆದರೂ ಈ ಭಾಗದ ಜನರ ನಡೆ ನುಡಿ, ಆಚಾರ ವಿಚಾರ, ರೂಢಿ ಸಂಪ್ರದಾಯಗಳಲ್ಲಿ ಇಂದಿಗೂ ಹಲವು ಸಾಮ್ಯ ಉಳಿದು ಬಂದಿದೆ. ಈ ಎರಡು ಜಿಲ್ಲೆಯ ಜನರ ರಕ್ತಮಾಂಸಗಳಲ್ಲಿ ಸೇರಿ ಹೋದ ಕಲೆಯೆಂದರೆ ಯಕ್ಷಗಾನ. ಇತ್ತೀಚಿನ ವರ್ಷಗಳವರೆಗೆ ಈ ಎರಡು ಜಿಲ್ಲೆಗಳ ಕಲಾವಿದರ ನಡುವೆ ಸಂಪರ್ಕ ಏರ್ಪಡಲೇ ಇಲ್ಲ. ಆದರೆ ಕಲೆಯ ಅಂತಃಸತ್ವದಿಂದಾಗಿ ಹಾಗೂ ಈ ಎರಡು ಜಿಲ್ಲೆಯ ಕಲಾವಿದರ ಕೂಡುವಿಕೆಯಿಂದಾಗಿ ಯಕ್ಷಗಾನ ಕಲೆಗೊಂದು ಪುಷ್ಟಿ ಲಭಿಸಿತು. ಉತ್ತರ ಕನ್ನಡದ ಪ್ರತಿಭಾವಂತ ಕಲಾವಿದರ ಸೇರ್ಪಡೆಯಿಂದಬಡಗು ಹಾಗೂ ತೆಂಕು ತಿಟ್ಟಿನ ಮೇಳಗಳು ಜನಾದರವನ್ನು ಗಳಿಸಲು ಸಾಧ್ಯವಾಯಿತು. ತಮ್ಮ ಕಲಾಪ್ರತಿಭೆಯಿಂದ ಎರಡು ಜಿಲ್ಲೆಯಲ್ಲೂ ಜನಾನುರಾಗಿಗಳಾದ ಕೆಲವೇ ಕಲಾವಿದರಲ್ಲಿ ಶ್ರೀ ಚಿಟ್ಟಾಣಿ ರಾಮಚಂದ್ರ ಹೆಗಡೆಯವರು ಒಬ್ಬರು.

ಕೆಲವರು ಕಲಾವಿದರು ವಂಶದಲ್ಲೇ ಹುಟ್ಟಿ, ಹುಟ್ಟಿನಿಂದಲೇ ಕಲೆಯ ಸಂಪರ್ಕ

ಉಳ್ಳವರಾಗಿ ಬದುಕಿನಲ್ಲೂ ಕಲೆಗಾಗಿ ಜೀವ ತೇಯ್ದು ದೊಡ್ಡವರಾಗುತ್ತಾರೆ. ಇನ್ನು ಕೆಲವರು ತಮ್ಮಲ್ಲೇ ಅಡಗಿದ್ದ ಸುಪ್ತ ಪ್ರವೃತ್ತಿಯಿಂದಾಗಿ ತಮ್ಮ ಕಲಾ ಬದುಕಿಗೆ ಬಂದ ಎಲ್ಲ ಎಡರು ತೊಡರುಗಳನ್ನು ನಿವಾರಿಸಿಕೊಂಡು ಯಶಸ್ಸನ್ನು ಗಳಿಸುತ್ತಾರೆ. ಶ್ರೀ ಚಿಟ್ಟಾಣಿಯವರದು ಎರಡನೆಯ ಹಾದಿ. ಹೊನ್ನಾವರ ತಾಲೂಕಿನ ಹೊಸಕುಳಿ ಗ್ರಾಮದ ಚಿಟ್ಟಾಣಿಯ ಹೆಗಡೆ ಮನೆತನದಲ್ಲಿ ಹುಟ್ಟಿದ ಇವರ ತಂದೆಯ ಮನೆಯವರಿಗಾಗಲಿ, ತಾಯಿಯ ಮನೆಯವರಿಗಾಗಲಿ ಯಕ್ಷಗಾನ ಕಲೆಯ ಸೋಂಕು ಇದ್ದಿರಲಿಲ್ಲ. ಎಳೆಯ ಹುಡುಗನಿಗೆ ಶಾಲೆಗೆ ಹೋಗುವ ದಿನದಿಂದಲೂ 'ಆಟ'ದ ಹುಚ್ಚು. ರಾತ್ರಿಯೆಲ್ಲ ಜಾಗರಣೆ ಮಾಡಿ ಆಟ ನೋಡಿಕೊಂಡು ಬಂದರೆ ಮಾರನೆಯ ದಿನ ತೋಟ, ಗುಡ್ಡಗಳೆಲ್ಲ ಹುಡಿಯಾಗುವಂತೆ ಕುಣಿಯುವುದು, ಈ ಆಟದ ಹುಚ್ಚು ಹಿಡಿದ ಮೇಲೆ ಹತ್ತಿರದಲ್ಲೆಲ್ಲೇ ಆಟವಾಗಲಿ ಅಲ್ಲಿಗೆ ಮನೆಯವರಿಗೆ ತಿಳಿಯದಂತೆ ಹೋಗುವುದು. ಅದನ್ನೇ ನೆನೆಸಿಕೊಂಡು ಹಗಲೆಲ್ಲಾ ಕುಣಿಯುವುದು ಪರಿಪಾಠವಾಯಿತು.

ಹಸಿರು ಬಟ್ಟೆಯನ್ನು ಹೊದ್ದು ನಿಂತ ಗುಡ್ಡ ಬೆಟ್ಟಗಳು, ಮೆಲುಗಾಳಿಗೆ ಬಾಗಿ ಬಳುಕುವ ಮರಗಿಡಗಳು, ರೈತರ ಬೆವರಿಗೆ ಪ್ರತಿಯಾಗಿ ತುಂಬಿ ನಿಂತ ತೋಟ ಗದ್ದೆಗಳು, ಮಳೆರಾಯನ ಹಾಡಿಗೆ ಶ್ರುತಿ ಹಿಡಿಯುವ ತೋಡು ಹೊಳೆಗಳು ಈ ನೈಸಗಿಕ ಸಂಪತ್ತಿನ ನಡುವೆ ಬೆಳೆದ ಮನುಷ್ಯನಿಗೆ ವಿರಾಮ ಕಾಲದ ಮನರಂಜನೆಯ ಸಾಧನವೆಂದರೆ ಯಕ್ಷಗಾನವೊಂದೇ. ನಲವತ್ತು ವರ್ಷಗಳ ಹಿಂದೆ ಇಂದಿನಂತೆ ವ್ಯವಸ್ಥಿತ ಮೇಳಗಳಾಗಲೀ, ಕ್ರಮಬದ್ಧ ಆಟದ ರೀತಿ, ರಿವಾಜುಗಳಾಗಲೀ ಇದ್ದಿರಲಿಲ್ಲ. ಕೆಲವು ಊರಿನಲ್ಲಿ ಉತ್ಸಾಹಿ ಕಲಾವಿದರು ಬಿಡುವಿನ ಸಮಯದಲ್ಲಿ ಸೇರಿ ಒಂದು 'ಮೇಳ'ವಾಗಿ ಮಾಡಿಕೊಂಡು, ಸ್ವಲ್ಪ ಕಾಲ ಅಭ್ಯಾಸ ಮಾಡಿ ಯಕ್ಷಗಾನವನ್ನು ಪ್ರದರ್ಶಿಸುತ್ತಿದ್ದರು. ಇಡೀ ವರ್ಷದಲ್ಲಿ 20-30 ಆಟಗಳನ್ನಾಡುತ್ತಿದ್ದರು. ಹೊಸಕುಳಿಯಲ್ಲೂ ಪ್ರತಿವರ್ಷ ಈ ಬಗೆಯ ಅಭ್ಯಾಸ ಹಾಗೂ ಪ್ರದರ್ಶನ ನಡೆಯುತ್ತಿದ್ದವು. ಹುಡುಗನ ಅಮಿತ ಉತ್ಸಾಹ ಕಂಡ ಚಿಕ್ಕಪ್ಪ ಶಿವ ಹೆಗಡೆ ಮನೆಯವರಿಗೆ ಗೊತ್ತಾಗದಂತೆ ರಾತ್ರಿ ಹೊತ್ತಿನಲ್ಲಿ ಕರೆದುಕೊಂಡು ಹೋಗಿ ಯಕ್ಷಗಾನದ ಅಭ್ಯಾಸಕ್ಕೆ ಸೇರಿಸಿದರು. ಸ್ವಲ್ಪ ತರಬೇತಿಯಲ್ಲೇ ಇವರ ಸಾಮರ್ಥ್ಯವನ್ನು ಗುರುತಿಸಿದ ಬಾಳಗದ್ದೆ ರಾಮಕೃಷ್ಣ ಭಾಗವತರು ಯಕ್ಷಗಾನದ ಕುಣಿತವನ್ನು ಕಲಿಸಿಕೊಟ್ಟರು. ಮನೆಯವರಿಗೆ ವಿಚಾರ ತಿಳಿದು ಮೇಳ ಸೇರುವುದನ್ನು ವಿರೋಧಿಸಿದರೂ ಹಠತೊಟ್ಟು ಹೊಸಕುಳಿ ಮೇಳವನ್ನು ಸೇರಿದರು. ಅಂದು ಯಕ್ಷಗಾನದ ಬಗ್ಗೆ ಜನತೆಯಲ್ಲಿ ಬಹು ತಾತ್ಸಾರದ ಭಾವನೆ ಇತ್ತು. ಹುಡುಗ ಮೇಳಕ್ಕೆ ಸೇರಿದನೆಂದರೆ ಕೆಟ್ಟುಹೋದನೆಂದೇ ಭಾವಿಸುತ್ತಿದ್ದರು. ಇಂದು ಜನಪ್ರಿಯತೆಯ ತುತ್ತ ತುದಿಗೇರಿದ ಚಿಟ್ಟಾಣಿ ಅಂದಿನ ತಂದೆ ತಾಯಿಗಳ ನೋವನ್ನು ಮಾರ್ಮಿಕವಾಗಿ ಸೂಚಿಸುತ್ತಾರೆ.

ಹೀಗೆ ಹೊಸಕುಳಿ ಮೇಳದವರ ಬಯಲಾಟಗಳಲ್ಲಿ ಭಾಗವಹಿಸುತ್ತಿದ್ದ ಚಿಟ್ಟಾಣಿಯವರು ಮುಂದೆ ಮೂಡಕಣಿ ಮೇಳಕ್ಕೆ ಸೇರಿಕೊಂಡರು. ನಂತರ ಮೂರೂರು ಕಲ್ಲಬ್ಬೆ ಮೇಳವನ್ನು ಸೇರಿದರು. ಅಲ್ಲಿ ಕಡತೋಕರ 'ಭೋಜ ಕಾಳಿದಾಸ'ದಲ್ಲಿನ ಕಲಾಧರನ ಪಾತ್ರವು ಇವರ ಕಲಾಭಿವ್ಯಕ್ತಿಗೆ ಸೂಕ್ತವಾಯಿತು. ಈ ಪಾತ್ರ ಮುಖ್ಯ ಪಾತ್ರವಲ್ಲವಾದರೂ ಚಿಟ್ಟಾಣಿಯವರ ಸಹಜ ಅಭಿನಯದಿಂದ ಇವರ ಹೆಸರು ಮನೆಮಾತಾಯಿತು. ಜನರು ಇವರನ್ನು 'ಕಲಾಧರ ಹೆಗಡೆ' ಎಂದೇ ಕರೆದರು.

ನಂತರ ಸಿರಸಿಯ ಮೇಳದಲ್ಲಿ ಎರಡು ವರ್ಷಗಳ ಕಾಲ ಇದ್ದು ಮುಂದೆ ಸಂತೆಗುಳಿ ನಾರಾಯಣ ಭಟ್ಟರಿದ್ದ ಇಡಗುಂಜಿ ಮೇಳದಲ್ಲಿದ್ದರು. 1970ರಲ್ಲಿ ಬಡಗು, ತೆಂಕು ಹಾಗೂ ಉತ್ತರ ಕನ್ನಡದ ಕಲಾವಿದರ ಕೂಟದಿಂದ ಯಕ್ಷಗಾನ ಪ್ರದರ್ಶನವೊಂದು ಕುಂದಾಪುರದಲ್ಲಿ ನಡೆಯಿತು. ಅಂದಿನ ಪ್ರಸಂಗ 'ಭೋಜ ಕಾಳಿದಾಸ'. ಚಿಟ್ಟಾಣಿಯವರದು ಕಲಾಧರನ ಪಾತ್ರ. ಇವರ ಪಾತ್ರ ವೈಖರಿಯನ್ನು ನೋಡಿದ ಶ್ರೀಧರ ಹಂದೆಯವರು ಬಡಗುತಿಟ್ಟಿಗೆ ಆಹ್ವಾನಿಸಿದರು. ನೂತನ ವ್ಯವಸ್ಥೆಗೆ ಆಗತಾನೇ ಅಳವಟ್ಟ ಅಮೃತೇಶ್ವರಿ ಯಕ್ಷಗಾನ ಮೇಳಕ್ಕೆ ಎರಡನೇ ವೇಷಧಾರಿಯಾಗಿ ಬಂದರು.

ಚಿಟ್ಟಾಣಿಯವರಿಗೆ ಹೆಸರು ತಂದ ಪಾತ್ರಗಳೆಂದರೆ 'ಭಸ್ಮಾಸುರ ಮೋಹಿನಿ'ಯ ಭಸ್ಮಾಸುರ, 'ಗದಾಯುದ್ಧ'ದ ಕೌರವ, 'ಭೋಜ ಕಾಳಿದಾಸ'ದ ಕಲಾಧರ, 'ಚಂದ್ರ ಹಾಸ'ದ ದುಷ್ಟಬುದ್ಧಿ, 'ಕೀಚಕ ವಧೆ'ಯ ಕೀಚಕ, 'ಲಂಕಾದಹನ'ದ ಆಂಜನೇಯ ಇತ್ಯಾದಿ ಪಾತ್ರಗಳು. ಇವರಿಗೆ ವೀರರಸ ಹಾಗೂ ಶೃಂಗಾರ ಪ್ರಧಾನವಾದ ಪ್ರಸಂಗಗಳು ಬಹು ಇಷ್ಟ.

ಉತ್ತರ ಕನ್ನಡದಿಂದ ಬಡಗುತಿಟ್ಟಿನ ಮೇಳಕ್ಕೆ ಬಂದ ಶ್ರೀ ಚಿಟ್ಟಾಣಿ ಭಿನ್ನ ರುಚಿಯ ಪ್ರೇಕ್ಷಕರನ್ನು ರಂಜಿಸುವುದು ಅನಿವಾರ್ಯವಾಗಿತ್ತು. ಈ ಬಗ್ಗೆ ಗಮನ ಸೆಳೆದಾಗ. "ಕುಣಿತದಲ್ಲಿ ಬಡಗುತಿಟ್ಟಿಗೆ ಹೊಂದುವಂತೆ ಅಲ್ಪ ಸ್ವಲ್ಪ ಬದಲಾವಣೆ ಮಾಡಿಕೊಂಡಿದ್ದೇನೆ. ಆದರೆ ಅಭಿನಯದಲ್ಲಿ ನನ್ನದು ನನ್ನದ್ದೇ. ಅದೇ ನನ್ನ ಆಕರ್ಷಣೆಗೆ ಕಾರಣ. ಕಲಾವಿದನಲ್ಲಿ ಸ್ವಂತಿಕೆ ಇಲ್ಲವಾದರೆ ಆತ ಉಳಿಯಲಾರ. ಇದು ನನ್ನ ಅನುಭವ" ಎನ್ನುತ್ತಾರೆ. 'ದಕ್ಷಿಣ ಕನ್ನಡದ ಪ್ರೇಕ್ಷಕರಲ್ಲಿ ಕಲಾವಿದರ ಬಗ್ಗೆ ಅಂಧಾಭಿಮಾನ ಇಲ್ಲ. ಯಾರು ಹೆಚ್ಚು ರಂಜಿಸುತ್ತಾರೋ ಅವರನ್ನು ಮೆಚ್ಚುತ್ತಾರೆ' ಎಂಬುದು ಇವರ ಅಭಿಪ್ರಾಯ.

ಉತ್ತರ ಕನ್ನಡದಲ್ಲಿ ಎರಡನೇ ವೇಷಧಾರಿಗೆ ಬಡಗುತಿಟ್ಟಿನಷ್ಟು ಎತ್ತರದ ಸ್ಥಾನ ಕೊಟ್ಟಿಲ್ಲ. ಅಲ್ಲಿ ಆತ ಉಳಿದ ಪಾತ್ರವನ್ನು ಮಾಡಬಹುದು. ಯಾರಿಗೆ ಯಾವುದು ಹೊಂದುವುದೋ ಅದನ್ನು ಮಾಡುತ್ತಾರೆ. ಆದರೆ ಬಡಗುತಿಟ್ಟಿನಲ್ಲಿ ಎರಡನೆಯ ವೇಷದವರು ಎಂದರೆ ಬಹು ಗೌರವ. ಆತನಿಗೆ ಎಂದೇ ಮೀಸಲಾದ ಪಾತ್ರಗಳಿವೆ. ಅವುಗಳನ್ನು ಆತ

ಅಭಿನಯಿಸಬೇಕು. ಈ ಬಗ್ಗೆ ಹೆಗಡೆಯವರ ಗಮನ ಸೆಳೆದಾಗ 'ಉತ್ತರ ಕನ್ನಡದ ಕ್ರಮವೇ ಉತ್ತಮ. ಒಂದೇ ಮೇಳದ ಕಲಾವಿದರಲ್ಲಿ ವಿಂಗಡಣೆ ಸಲ್ಲದು' ಎನ್ನುತ್ತಾರೆ.

ಬಡಗು ತಿಟ್ಟಿನಲ್ಲಿ ಚಿಟ್ಟಾಣಿ ಜನಪ್ರಿಯರಾದುದು ತಮ್ಮ ಅಭಿನಯ ಸಾಮರ್ಥ್ಯದ ಮೂಲಕ. ಪಾತ್ರಗಳಲ್ಲಿ ತಾದಾತ್ಮ್ಯ ಹೊಂದಿ ಅವುಗಳ ಮನೋಧರ್ಮವನ್ನು ತಮ್ಮದನ್ನಾಗಿ ಮಾಡಿಕೊಂಡು ಅದಕ್ಕೆ ಅನುಗುಣವಾಗಿ ಅಭಿನಯಿಸುವುದು ಅವರಿಗೆ ಸಹಜವಾಗಿ ಬಂದಿದೆ. ಉದಾಹರಣೆಗೆ 'ಮೋಹಿನಿ ಭಸ್ಮಾಸುರ'ದಲ್ಲಿ ಭಸ್ಮಾಸುರನ ಹಸಿವನ್ನು, ಕಾಮವನ್ನು, ಅಧಿಕಾರ ದಾಹವನ್ನು ತೋರಿಸುವಾಗೆಲ್ಲ ರಾಕ್ಷಸೀ ಪ್ರವೃತ್ತಿಗೆ ಅನುಗುಣವಾದ ವಿಕಟ ಅಟ್ಟಹಾಸದ ಅಭಿನಯ ನೀಡುತ್ತಾರೆ. ಈ ಬಗೆಯ ಅಭಿನಯ ಎಷ್ಟು ಜನಪ್ರಿಯವಾಗಿದೆಯೆಂದರೆ, ಉಳಿದ ಕಲಾವಿದರೂ ಈ ಬಗೆಯಾಗಿ ಅಭಿನಯಿಸಿದಾಗ ಅದನ್ನು 'ಚಿಟ್ಟಾಣಿ ಸ್ಟೈಲ್' ಎಂದೇ ಗುರುತಿಸುತ್ತಾರೆ. ಈ ಬಗೆಯ ಅಭಿನಯ ವಿಶೇಷಕ್ಕೆ ತಮ್ಮದೇ ಆದ ಮುದ್ರೆಯೊನ್ನೊತ್ತಿದ್ದು ಚಿಟ್ಟಾಣಿಯವರ ವೈಶಿಷ್ಟ್ಯ. ಇದಕ್ಕೆ ಅವರು ಕೊಡುವ ವಿವರಣೆ "ನಾನು ಕೂಡ ಈ ಎಲ್ಲಾ ಅಭಿನಯ ಮಾಡುವಾಗ ಪ್ರತ್ಯಕ್ಷವೋ ಪರೋಕ್ಷವೋ ಹಿರಿಯರಿಗೆ ಋಣಿಯಾಗಿದ್ದೇನೆ. ಕೊಂಡದಕುಳಿ ಲಕ್ಷ್ಮಣ ಹೆಗಡೆಯವರ ಹನುಮಂತ, ಪರಮಯ್ಯ ಹಾಸ್ಯಗಾರರ ಭಸ್ಮಾಸುರ, ಶಿವರಾಮ ಹೆಗಡೆಯವರ ಕೌರವ, ಕೊಂಡದಕುಳಿ ರಾಮ ಹೆಗಡೆಯವರ ವಾಲಿ, ಮುಂತಾದ ಪಾತ್ರಗಳು ಒಂದಲ್ಲ ಒಂದು ವಿಧದಿಂದ ನನ್ನ ಮೇಲೆ ಪ್ರಭಾವ ಬೀರಿವೆ. ಆದರೆ ಅವರ ನಟನೆಯ ಉತ್ತಮ ಅಂಶಗಳನ್ನು ಹೀರಿಕೊಂಡು, ನನ್ನದನ್ನು ಸೇರಿಸಿಕೊಂಡು ಅಭಿನಯಿಸುತ್ತಿದ್ದೇನೆ. ಕಲೆಯಲ್ಲಿ ಪರಂಪರೆ ಅಗತ್ಯ, ಕಿರಿಯ ಕಲಾವಿದರು ನನ್ನ ಅಭಿನಯವನ್ನು ಅನುಕರಿಸಿದರೆ ತಪ್ಪಲ್ಲ. ಆದರೆ ಅವರ ಸ್ವಂತಿಕೆಯನ್ನು ಅದಕ್ಕೆ ಸೇರಿಸಬೇಕು. ಆಗ ಅದು ಜೀವಂತವಾಗುತ್ತದೆ" ಎಂಬುದು ಕಲಾಪರಂಪರೆಯ ಬಗ್ಗೆ ಅವರಿಗಿದ್ದ ದೃಷ್ಟಿ ಧೋರಣೆಯನ್ನು ಬಿಂಬಿಸುತ್ತದೆ.

ಯಕ್ಷಗಾನದ ಭವಿಷ್ಯದ ಬಗ್ಗೆ ಚಿಟ್ಟಾಣಿಯವರಿಗೆ ತೀವ್ರ ಕಳವಳವಿದೆ. ಸಮರ್ಥ ಕಲಾವಿದರ ಪರಂಪರೆ ಕೊನೆಯಾಗಬಹುದೆಂಬ ಭಯ ಅವರಿಗೆ ಇದೆ. 'ಸಾಮಾನ್ಯವಾಗಿ ಇಂದಿನ ಯುವ ಕಲಾವಿದರು ಒಂದೆರಡು ವರ್ಷಗಳಲ್ಲೇ ಸ್ವಲ್ಪ ಹೆಸರು ಬಂದೊಡನೆ ಅಭ್ಯಾಸದ ಕಡೆಗೆ ವಿಮುಖರಾಗುತ್ತಾರೆ. ಇದರಿಂದ ಮುಂದೆ ಅವರು ಉತ್ತಮ ಕಲಾವಿದರಾಗಿ ಬೆಳೆಯುವ ಸಾಧ್ಯತೆ ಕಡಿಮೆ. ಒಳ್ಳೆಯ ಕಲಾವಿದರಿದ್ದರೆ ಮಾತ್ರ ಕಲೆ ಉಳಿಯುತ್ತದೆ. ಕೇವಲ ಆಸಕ್ತರಿಗೆ ತರಬೇತು ಕೊಟ್ಟರೆ ಪ್ರಯೋಜನವಿಲ್ಲ. ಯೋಗ್ಯತೆ ಉಳ್ಳವರಿಗೆ ಅಭ್ಯಾಸ ಕೊಟ್ಟು, ತರಬೇತು ಮಾಡಿ ಮುಂದೆ ತರಬೇಕು. ಇದಕ್ಕೆ ನಿವೃತ್ತರಾದ ಭಾಗವತರನ್ನು ಇಲ್ಲವೇ ಮುಖ್ಯ ವೇಷಧಾರಿಗಳನ್ನು ಮೇಳಕ್ಕೆ ನಿರ್ದೇಶಕರನ್ನಾಗಿ ಸೇರಿಸಿಕೊಳ್ಳಬಹುದು. ಇದರಿಂದಾಗಿ ನಿವೃತ್ತ, ಅಶಕ್ತ ಕಲಾವಿದರಿಗೂ ಆರ್ಥಿಕವಾಗಿ

ಅನುಕೂಲವಾಗುತ್ತದೆ. ಕಲಾ ಪರಂಪರೆ ಉಳಿಯಲು ಸಹಾಯವಾಗುತ್ತದೆ' – ಎಂಬುದು ಇವರ ಅನಿಸಿಕೆ.

ಯಕ್ಷಗಾನ ಕಲೆ ಕೇವಲ ಹಣ ಸಂಪಾದನೆಗಾಗಿ ಇರುವ ಕಲೆ ಅಲ್ಲ. ಅದರ ಮೂಲಕ ಬಾಳಿನಲ್ಲಿ ನೊಂದವನಿಗೆ ಸಾಂತ್ವನ ಲಭಿಸುತ್ತದೆ. ಜೀವನ ಮೌಲ್ಯವನ್ನು ಸಾರುವ ಪ್ರಸಂಗಗಳಿಂದ ಜನಜೀವನ ಉತ್ತಮಗೊಳ್ಳುವ ಸಾಧ್ಯತೆಯಿದೆ. ಜನರ ಬಾಳಿಗೊಂದು ಸುಖ ಸಂತೋಷವನ್ನು ಕೊಟ್ಟು ಅವರಲ್ಲಿ ಉತ್ತಮ ಸಂಸ್ಕಾರ ಬೆಳೆಯುವಲ್ಲಿ ಈ ಕಲೆ ಸಹಕಾರಿಯಾಗುತ್ತದೆ ಎಂದು ಮುಂತಾಗಿ ಮಾತಾಡುತ್ತಿರುವಾಗ ಚಿಟ್ಟಾಣಿಯವರ ಕಣ್ಣುಗಳಲ್ಲಿ ಯಕ್ಷಗಾನದ ಬಗೆಗಿನ ಗಾಢವಾದ ಅಭಿಮಾನದ ಮಿಂಚು ಹೊಳೆಯುತ್ತದೆ. ■

ಮಾತಿನ ಮೋಡಿಕಾರ

ಕುಂಬಳೆ ಸುಂದರ ರಾವ್

1950ರ ಈಚೆಗಿನ ತೆಂಕುತಿಟ್ಟಿನ ಯಕ್ಷಗಾನದಲ್ಲಿ ಮಾತುಗಾರಿಕೆಗೆ ವಿಶಿಷ್ಟ ಸ್ಥಾನ ಲಭಿಸಿದೆ. ಈ ರಂಗಕ್ಕೆ ಆಗಮಿಸಿದ ಹರಿದಾಸರು ತಮ್ಮ ಮನಸೆಳೆಯುವ ವಾಗ್ ವಿಲಾಸದ ಮೂಲಕ ಪಾತ್ರದ ಒಳಗನ್ನೆಲ್ಲಾ, ದ್ವಂದ್ವ ಸಂಘರ್ಷಗಳನ್ನೆಲ್ಲಾ ಪ್ರೇಕ್ಷಕರಿಗೆ ಸಾಕ್ಷಾತ್ಕರಿಸಿ ಅದಕ್ಕೊಂದು ಭದ್ರಸ್ಥಾನ ಬರುವಂತೆ ಮಾಡಿದರು. ಇದರಿಂದಾಗಿ ಆ ಸರಿ ಸುಮಾರಿನ ಮೇಳಗಳೆಲ್ಲವೂ ಮಾತುಗಾರರನ್ನು ಆಶ್ರಯಿಸಬೇಕಾದ ಸ್ಥಿತಿ ಬಂತು. ಹಾಗೆ ಈ ರಂಗಕ್ಕೆ ಬಂದ ಕಲಾವಿದರು, ಹರಿದಾಸರು ಇಂದು ಮಾತುಗಾರಿಕೆಯನ್ನು ತೆಂಕುತಿಟ್ಟಿನ ಒಂದು ವೈಶಿಷ್ಟ್ಯವಾಗುವಂತೆ ಮಾಡಿದರು, ಮಾತ್ರವಲ್ಲ ತಾವೂ ಅದ್ವಿತೀಯ ಕಲಾವಿದರಾಗಿ ಮೆರೆದರು. ಅಂತಹವರಲ್ಲಿ ಶ್ರೀ ಕುಂಬಳೆ ಸುಂದರರಾವ್ ಮುಖ್ಯರು.

ಶ್ರೀ ಕುಂಬಳೆಯವರಿಗೆ ಈಗ 52 ವರ್ಷ ವಯಸ್ಸು. ಕಳೆದ 33 ವರ್ಷಗಳಿಂದ ಅವರು ಯಕ್ಷಗಾನ ರಂಗದಲ್ಲಿ ದುಡಿಯುತ್ತಿದ್ದಾರೆ. ಮೇಳಕ್ಕೆ ಸೇರಿದ ಕಾಲದಿಂದ ಇಂದಿನವರೆಗೂ ತಮ್ಮ ವಿಶಿಷ್ಟ ವಾಗ್ ವಿಲಾಸದಿಂದಲೇ ಪ್ರೇಕ್ಷಕರಿಗೆ ಪರಿಚಿತರಾಗಿದ್ದಾರೆ. ಈಗಿನ ಕೇರಳಕ್ಕೆ ಸೇರಿರುವ, ಪುರಾತನ ಕಾಲದಿಂದಲೂ ಯಕ್ಷಗಾನ ಕಲೆಗೆ ಆಶ್ರಯ ನೀಡಿರುವ ಕುಂಬಳೇ ಇವರ ಜನ್ಮಸ್ಥಳ. ತಂದೆ ಕುಂಞಿಕಣ್ಣ, ತಾಯಿ ಸೀತಾ, ಯಕ್ಷಗಾನದಲ್ಲಿ

ಆಸಕ್ತಿ ಇರುವ ಅಜ್ಜ, ಮಲೆಯಾಳಿ ನಾಟಕದಲ್ಲಿ ಭಾಗವಹಿಸುತ್ತಿದ್ದ ಚಿಕ್ಕಪ್ಪ, ಇವರೆಲ್ಲರಿಂದ ಕಲಾಶ್ರದ್ಧೆಯಿರುವ ವಾತಾವರಣದಲ್ಲೇ ಬೆಳೆಯುವ ಅಪೂರ್ವ ಅವಕಾಶ ಶ್ರೀ ಸುಂದರರಾವ್ ಅವರಿಗೆ ಲಭಿಸಿತು. ಆ ಕಾಲದಲ್ಲೇ ಏಳನೆಯ ತರಗತಿಯವರೆಗೆ ಓದಿದ ಇವರು ಮನೆಯಲ್ಲೇ ಸಾಕಷ್ಟು ಓದಿಕೊಂಡವರು. ಊರಿನ ಸುತ್ತಮುತ್ತ ನಡೆಯುತ್ತಿದ್ದ ತಾಳ ಮದ್ದಲೆಗಳು ಇವರನ್ನು ಕೈಬೀಸಿ ಕರೆದವು. ಅದ್ಭುತವಾದ ವಾಗ್ ಝರಿಯನ್ನು ಹೊಂದಿದ್ದ ಇವರ ಮಾತುಗಾರಿಕೆ ಎಲ್ಲರನ್ನೂ ತಲೆದೂಗಿಸಿದವು. ಭಾಷಾ ಪ್ರಭುತ್ವ, ವಿಷಯಮಂಡನೆ, ಪಾತ್ರದಲ್ಲಿ ತಾದಾತ್ಮ್ಯ ಮುಂತಾದ ಗುಣಗಳನ್ನು ಈ ಸಂದರ್ಭದಲ್ಲಿ ರೂಢಿಸಿಕೊಂಡಿದ್ದರು. ಹವ್ಯಾಸಿ ಯಕ್ಷಗಾನ ಕಲಾವಿದರಾಗಿದ್ದ ಇವರಿಗೆ ಆಗ ಬಣ್ಣದ ವೇಷ ಮಾಡುತ್ತಿದ್ದ ಬಣ್ಣದ ಕುಟ್ಯಪ್ಪ ಅವರು ನೃತ್ಯಗತಿಗಳನ್ನು ಕಲಿಸಿದ್ದು ಮಾತ್ರವಲ್ಲದೆ ತಮ್ಮೊಂದಿಗೆ ಮೇಳವನ್ನು ಸೇರುವಂತೆ ಮಾಡಿದರು. 1953ರಲ್ಲಿ ಕೂಡ್ಲು ಮೇಳದ ಸಂಚಾಲಕರಾಗಿದ್ದ ವೆಂಕಟರಾವ್ ಕಾಂಡಿಲ್‌ಕರ್ ಅವರಿಗೆ ಮಾತುಗಾರ ಕಲಾವಿದರ ಅಗತ್ಯ ಬಹಳವಿದ್ದಿತ್ತು. ಇವರ ಪ್ರವೇಶದಿಂದ ಆ ಕೊರತೆ ತುಂಬಿಕೊಂಡಿತು.

ಮಾತುಗಾರಿಕೆಯಲ್ಲೇ ಪ್ರಧಾನರಾಗಿರುವ ಶ್ರೀ ಕುಂಬಳೆ ಸುಂದರ ರಾವ್ ಅವರಿಗೆ ಇಂದಿಗೂ ತಾವು ನೃತ್ಯದಲ್ಲಿ ಪರಿಪೂರ್ಣರಾಗಿಲ್ಲ ಎಂಬ ಭಾವನೆ ಇದೆ. ಕುಣಿತ ಕಡಿಮೆಯಾದರೂ ಮಾತುಗಳಿಂದ ಅದನ್ನು ತುಂಬಿಕೊಡಬಲ್ಲ ಶಕ್ತಿಯನ್ನು ಪಡೆದಿದ್ದ ಇವರು ಅಂದಿನ ಹಲವು ಮೇಳಗಳ ಸ್ವಾಗತಕ್ಕೆ ಕಾರಣರಾದರು. ಕೂಡ್ಲು ಮೇಳದಲ್ಲಿ ಎರಡು ವರ್ಷ ಸೇವೆ ಸಲ್ಲಿಸಿದ ನಂತರ ಇರಾ ಸೋಮನಾಥೇಶ್ವರ, ಸುರತ್ಕಲ್ ಮತ್ತೆ ಕೂಡ್ಲು ಮೇಳಗಳಲ್ಲೆಲ್ಲಾ ಸಂಚರಿಸಿ ಕಳೆದ ಹದಿನಾರು ವರ್ಷಗಳಿಂದ ಧರ್ಮಸ್ಥಳ ಮೇಳದಲ್ಲಿ ದುಡಿಯುತ್ತಿದ್ದಾರೆ. ತಮ್ಮ ಕಲಾ ಜೀವನವನ್ನು ಟೆಂಟ್ ಮೇಳಗಳಿಂದಲೇ ಪ್ರಾರಂಭಿಸಿರುವ ಇವರು ಹೆಚ್ಚಿನ ಹಿರಿಯ ಕಲಾವಿದರಂತೆ ಪ್ರಾಥಮಿಕ ಹಂತದಿಂದಲೇ ಬೆಳೆದು ಬಂದವರಲ್ಲ. ಮೊದಲ ವರ್ಷಗಳಲ್ಲೇ ಮುಖ್ಯ ಪಾತ್ರಗಳನ್ನು ವಹಿಸುವ ಸಂದರ್ಭ ಬಂದುದರಿಂದ ಕುಣಿತದಲ್ಲಿ ಯಜಮಾನ್ಯ ಸ್ಥಾಪಿಸುವುದು ಅಸಾಧ್ಯವಾಯಿತು. ಆದರೂ ನೃತ್ಯ ಹೇಳಿಕೊಟ್ಟ ಕುಟ್ಯಪ್ಪು ವಹಿಸಿದ ಶ್ರಮವನ್ನು, ಕುರಿಯ ವಿಠಲ ಶಾಸ್ತ್ರಿಗಳು ತೋರಿದ ಮಾರ್ಗದರ್ಶನವನ್ನು ತೆಂಕು ತಿಟ್ಟಿನ ಪ್ರಧಾನ ವೇಷಧಾರಿ ಕಾವುಕಣ್ಣ ವ್ಯಕ್ತಪಡಿಸಿದ ಕಾಳಜಿಯನ್ನು ಬಹು ಆಪ್ತತೆಯಿಂದ ನೆನೆಯುತ್ತಾರೆ. ಯಕ್ಷಗಾನವನ್ನು ಪ್ರವೇಶಿಸಿದ ದಿನಗಳಲ್ಲಿ ಹರಿದಾಸ ಶ್ರೀ ಶಂಕರನಾರಾಯಣ ಸಾಮಗರನ್ನೇ ಮಾತುಗಾರಿಕೆಗೆ ಆದರ್ಶವಾಗಿ ಇರಿಸಿಕೊಂಡಿದ್ದರು. ಈಗ ಶ್ರೀ ಶೇಣಿ ಗೋಪಾಲಕೃಷ್ಣ ಭಟ್ಟರನ್ನೇ ಮೇಲ್‌ಪಂಕ್ತಿಯಾಗಿ ಇಟ್ಟುಕೊಂಡಿದ್ದಾರೆ. ಭಾವಪೂರ್ಣ ಪಾತ್ರಗಳಲ್ಲಿ ಉತ್ಕೃಷ್ಟ ಕಲೆಗಾರಿಕೆಯನ್ನು ತೋರಿಸಬಲ್ಲ ಶ್ರೀ ಕುಂಬಳೆಯವರಿಗೆ ಕೃಷ್ಣ, ಭರತ, ಕರ್ಣ, ಪರೀಕ್ಷಿತ ಮುಂತಾದ ಪಾತ್ರಗಳು ಖ್ಯಾತಿಯನ್ನು ತಂದಿವೆ. ಶ್ರೀಯುತರ ಕೃಷ್ಣನನ್ನಂತು ಜನ

ಬಹು ಆಪ್ತತೆಯಿಂದ ನೆನೆಯುತ್ತಾರೆ. ಚಿಕ್ಕ ಚಿಕ್ಕ ವಾಕ್ಯಗಳಲ್ಲಿ ವಿಚಾರವನ್ನು ಪ್ರಸ್ತುತ ಪಡಿಸುವ ಕ್ರಮ, ಕ್ರಮಬದ್ಧ ವಾದಗಾರಿಕೆಯಲ್ಲಿ ಸಾಗುವ ಇವರ ಮಾತಿನ ವಿಧಾನ ಹೆಚ್ಚಿನವರಿಗೆ ಸಿದ್ಧಿಸಿಲ್ಲ. ಮಾತುಗಾರಿಕೆಯ ಈ ತಂತ್ರದ ದೃಷ್ಟಿಯಿಂದ ಇವರು ಅದ್ವಿತೀಯರೇ.

ಶ್ರೀ ಕುಂಬಳೆ ಸುಂದರರಾವ್ ಅವರು ಮೊದಲಿನ ವರ್ಷಗಳಲ್ಲಿ ಪ್ರಾಸಬದ್ಧ ಮಾತುಗಾರಿಕೆಯಿಂದ ಪ್ರೇಕ್ಷಕರನ್ನು ದಂಗುಬಡಿಸಿದವರು. ಯಾವುದೇ ಬಗೆಯ ಪದವಿದ್ದರೂ ಪದಕ್ಕೆ ತಕ್ಕ ಪ್ರಾಸಾಂತ್ಯವುಳ್ಳ ಪದ ಜೋಡಿಸಿ ಅಚ್ಚರಿಗೊಳಿಸುತ್ತಿದ್ದರು. ಮನೆಮಾತು ಮಲೆಯಾಳಿ ಆದರೂ ಕನ್ನಡದಲ್ಲಿ ಅವರು ಸಾಧಿಸಿದ ಈ ಅಪೂರ್ವ ಶಕ್ತಿಯನ್ನಂತೂ ಮೆಚ್ಚಲೇ ಬೇಕು. ಸರಾಗವಾಗಿ ಬರುತ್ತಿದ್ದ ಪದ ಪುಂಜಗಳಿಗೆ ಅವರ ಅವಿರತವಾದ ಕನ್ನಡ ಓದೇ ಕಾರಣವಾಗಿದೆ. ಯಾವುದೇ ಸಂದರ್ಭವಿರಲಿ ಹೆಚ್ಚಾಗಿ ಓದುತ್ತಲೇ ಇರುವ ಇವರ ಶಬ್ದ ಸಂಪತ್ತು ಮೆಚ್ಚಬೇಕಾದ್ದೆ. ಆದರೆ ಇವರ ಈ ವಿಶೇಷ ಶಕ್ತಿಯನ್ನು ಉಳಿದ ಕಲಾವಿದರು ಅನುಕರಿಸಿ, ಬಾಯಿಪಾಠ ಮಾಡಿ ಪ್ರದರ್ಶಿಸಿದ್ದನ್ನು ಕಂಡಾಗ, ಕಡ್ಡಾಯವಾಗಿ ಕಡಿಮೆ ಮಾಡಿದ್ದು ಕೂಡ ಕುತೂಹಲಕರ. ಇವತ್ತಿನ ಪ್ರದರ್ಶನಗಳಲ್ಲಿ ಇವರ ಈ ಬಗೆಯ ಚಮತ್ಕಾರ ಇಲ್ಲವೆಂದೇ ಹೇಳಬಹುದು. ಶೃಂಗಾರ, ಹಾಸ್ಯ, ವೀರರಸಗಳ ಸನ್ನಿವೇಶದಲ್ಲಿ ಪ್ರಾಸಗಾರಿಕೆ ಒಪ್ಪುತ್ತದೆ ಎನ್ನುವ ಶ್ರೀ ಸುಂದರರಾವ್ ಅವರು ದುಃಖದ ಸನ್ನಿವೇಶಕ್ಕೆ ಮಾತ್ರ ಅದು ಬಾಹಿರ ಎನ್ನುತ್ತಾರೆ.

ವಹಿಸುವ ಪಾತ್ರಗಳಲ್ಲಿ ಕರುಣ, ಭಕ್ತಿ, ಶೃಂಗಾರ ರಸಗಳೇ ಪ್ರಧಾನ ಅಂಶಗಳಾಗಿದ್ದರೆ ಹೆಚ್ಚು ಅನುಕೂಲ ಎನ್ನುವ ಇವರು ಆ ಬಗೆಯ ಪಾತ್ರಗಳುಳ್ಳ ಪ್ರಸಂಗಗಳಾದ ಭೀಷ್ಮಪರ್ವ, ಕೃಷ್ಣ ಸಂಧಾನ, ಪಂಚವಟಿ, ಕೃಷ್ಣಲೀಲೆ, ಸುಭದ್ರಾ ಕಲ್ಯಾಣ, ಸುಧನ್ವ ಕಾಳಗ ಮುಂತಾದವುಗಳನ್ನು ಹೆಚ್ಚು ಮೆಚ್ಚುತ್ತಾರೆ. ಹಿರಿಯ ಭಾಗವತರಾದ ಅಗರಿ, ಉಪ್ಪೂರ, ಮಂಡೆಚ್ಚರನ್ನು ಗೌರವದಿಂದ ನೆನೆಯುತ್ತಾರೆ. ಶ್ರೀ ಕುಂಬಳೆಯವರ ದೃಷ್ಟಿಯಲ್ಲಿ ಈಚಿನ ಪ್ರಸಂಗಕಾರರಾದ ಅಮೃತ ಸೋಮೇಶ್ವರ ಮತ್ತು ರಾಘವ ನಂಬಿಯಾರರ ಪ್ರಸಂಗಗಳಲ್ಲಿ ಉತ್ತಮ ಸಾಹಿತ್ಯಾಂಶವಿದೆ. ಹಿರಿಯ ಕಲಾವಿದರಾದ ಶ್ರೀ ಕುರಿಯ ವಿಠಲ ಶಾಸ್ತ್ರಿ, ಶ್ರೀ ಬಣ್ಣದ ಕುಟ್ಯಪ್ಪು, ಶ್ರೀ ಅಳಿಕೆ ರಾಮರೈ, ಶೀ ಕಾವುಕಣ್ಣ, ಶ್ರೀ ಶೇಣಿ ಮುಂತಾದವರೆಲ್ಲಾ ಆದರ್ಶರಾಗಿದ್ದಾರೆ. ಶ್ರೀಯುತರು ತಮ್ಮ ಸಹಕಲಾವಿದರಾದ ಶ್ರೀ ಗೋವಿಂದ ಭಟ್, ಶ್ರೀ ರಮೇಶಾಚಾರ್ಯ, ಶ್ರೀ ಕೋಳ್ಯೂರು ರಾಮಚಂದ್ರ ರಾವ್, ಶ್ರೀ ಪುತ್ತೂರು ನಾರಾಯಣ ಹೆಗಡೆ ಮುಂತಾದವರ ಕಲಾಭಿವ್ಯಕ್ತಿಯನ್ನು ಮೆಚ್ಚಿಕೊಳ್ಳುತ್ತಾರೆ.

ಯಕ್ಷಗಾನ ಕಲಾವಿದ ಬರೀ ಬೇಸಿಗೆಯ ಪ್ರದರ್ಶನಗಳನ್ನೇ ನಂಬಿ ಜೀವನ ಸಾಗಿಸುವಂತಿಲ್ಲ ಎಂದು ಹೇಳುವ ಶ್ರೀ ಕುಂಬಳೆ ಹಿಂದೆಲ್ಲಾ ಮಳೆಗಾಲದಲ್ಲಿ ತಾಳ

ಮದ್ದಲೆ ಮಾತುಬಲ್ಲ ಈ ಕಲಾವಿದರಿಗೆ ಆಶ್ರಯ ನೀಡುತ್ತಿತ್ತು. 70ರ ಈಚೆಗೆ ನಗರಗಳಲ್ಲಿ ನಡೆಯುವ ಮಳೆಗಾಲದ ಪ್ರದರ್ಶನಗಳು ಆಟದ ಕಲಾವಿದರಿಗೆ ಅನುಕೂಲಕರವಾಗಿವೆ ಎನ್ನುತ್ತಾರೆ.

ಇವತ್ತಿನ ಯಕ್ಷಗಾನದ ಸ್ಥಿತಿಯ ಬಗ್ಗೆ ಸಾಕಷ್ಟು ಚಿಂತನೆ ನಡೆಸುತ್ತಿರುವ ಶ್ರೀ ಕುಂಬಳೆ ಸುಂದರರಾವ್ ಅವರ ಮಾತುಗಳು ಬಹಳ ವಾಸ್ತವವಾಗಿದೆ – "ಯಕ್ಷಗಾನ ಇಂದು ವ್ಯಾಪಾರಿ ಸರಕಾದ್ದರಿಂದಲೇ ಅನೇಕ ಬಗೆಯ ಅಧ್ವಾನಗಳಿಗೆ ಕಾರಣವಾಗಿದೆ, ಕಲೆ ಉಳಿಯಬೇಕೆಂಬ ಕಾಳಜಿ ಎಲ್ಲಾ ಯಜಮಾನರುಗಳಲ್ಲಿ ಇಲ್ಲ. ಅದೇ ರೀತಿ ಕಲಾವಿದರಲ್ಲೂ ಸಂಘಟನೆ ಇಲ್ಲ. ಯಜಮಾನರ ಬಾಲವನ್ನೇ ಹಿಡಿಯುವವರ ಸಂಖ್ಯೆ ಹೆಚ್ಚಿರುವಾಗ ಯಾವುದೇ ಸುಧಾರಣೆ ಕಷ್ಟವಾಗುತ್ತದೆ. ಇವತ್ತಿನ ಅಸಂಖ್ಯ ತುಳು ಪ್ರಸಂಗಗಳಿಗೂ, ಆಧುನಿಕ ಕನ್ನಡ ಪ್ರಸಂಗಗಳಿಗೂ ಜನರ ಅಪೇಕ್ಷೆಯೇ ಕಾರಣ ಎಂಬ ಯಜಮಾನರ ಮಾತುಗಳಲ್ಲಿ ಸುಳ್ಳೇನೂ ಇಲ್ಲ. ಆದುದರಿಂದ ಇಡೀ ಸಮಾಜವೇ ಸುಧಾರಣೆಯಾಗದ ಹೊರತು, ಜಾಗೃತವಾಗದ ಹೊರತು ಪರಿಸ್ಥಿತಿ ಸುಧಾರಿಸುವಂತಿಲ್ಲ. ಕಲಾವಿದ ಪರಿಸ್ಥಿತಿಯ ಕೂಸಾಗಿದ್ದಾನೆ. ರಾತ್ರಿ ಬೆಳಗು ಮಾಡುವುದೇ ಉದ್ದೇಶವಾದ್ದರಿಂದ ಕಲಾತ್ಮಕ ದೃಷ್ಟಿಯಾಗಲೀ, ಸಾಂಪ್ರದಾಯಿಕ ಶಿಸ್ತಾಗಲೀ ಬರಲು ಸಾಧ್ಯವಿಲ್ಲ. ಈ ಕಾರಣದಿಂದಲೇ ಕುಣಿತ, ಬಣ್ಣಗಾರಿಕೆ, ವೇಷಗಾರಿಕೆ, ಹಾಡುಗಾರಿಕೆಗಳಲ್ಲಿ ಬಹಳಷ್ಟು ಉತ್ತಮ ಅಂಶಗಳು ನಶಿಸುತ್ತಿವೆ. ಇನ್ನಾದರೂ ಕಲಾವಿದರ ಸಂಘಟನೆ ನಡೆದು ಪೌರಾಣಿಕ ಪ್ರಸಂಗಗಳನ್ನೇ ಆಡುವುದು ಎಂದು ನಿರ್ಣಯವಾಗಬೇಕು. ತುಳು ಭಾಷೆಯಲ್ಲಿ ಆಡುವಾಗಲೂ ರಾಮಾಯಣ, ಮಹಾಭಾರತ, ಪುರಾಣಗಳಿಗೆ ಸಂಬಂಧಿಸಿದ ತುಳು ಪ್ರಸಂಗಗಳನ್ನೇ ಆಯ್ಕೆ ಮಾಡಬೇಕು. ಇಲ್ಲವಾದರೆ ಯಕ್ಷಗಾನ ಸ್ವಲ್ಪ ಕಾಲದಲ್ಲೇ ಆಶುನಾಟಕ ರೂಪಕ್ಕೆ ತಿರುಗೀತು" ಎಂಬುದು ಶ್ರೀ ಕುಂಬಳೆ ಸುಂದರರಾವ್ ಅವರ ಅಭಿಪ್ರಾಯವಾಗಿದೆ.

ಹಿಂದಿನ ಪ್ರೇಕ್ಷಕರಿಗೂ ಇವತ್ತಿನ ಪ್ರೇಕ್ಷಕರಿಗೂ ಇರುವ ವ್ಯತ್ಯಾಸವನ್ನು ಶ್ರೀ ಕುಂಬಳೆಯವರು ಬಹು ಸಮರ್ಪಕವಾಗಿ ಗುರುತಿಸಿದ್ದಾರೆ – "30 ವರ್ಷಗಳ ಕೆಳಗೆ ಯಕ್ಷಗಾನ ಪ್ರೇಕ್ಷಕನ ಕಣ್ಣೂ ಬಹು ಸೂಕ್ಷ್ಮವಾಗಿತ್ತು. ಆತ ಈ ಕಲೆಯ ವೇಷಗಾರಿಕೆಯ ವೈವಿಧ್ಯವನ್ನು, ನೃತ್ಯದ ಲಯ ಸೂಕ್ಷ್ಮವನ್ನು, ಹಾಡಿನ ಭಾವ ತರಂಗಿತೆಯನ್ನು ಸವಿಯಬಲ್ಲ ಹೃದಯವುಳ್ಳವನಾಗಿದ್ದ. ಆದರೆ ಇಂದಿನ ಪ್ರೇಕ್ಷಕ ಆ ಸೂಕ್ಷ್ಮತೆಗಳನ್ನು ಕಳೆದುಕೊಂಡಿದ್ದಾನೆ. ಅದರ ಬದಲು ಮನಸ್ಸಿಗೆ ಮುದಕೊಡುವ, ಕಿವಿಗೆ ಹಿತವಾಗುವ ಮಾತುಗಾರಿಕೆಯನ್ನು ಬಯಸುತ್ತಿದ್ದಾನೆ. ಇದಕ್ಕೆ ಕಾರಣ ಸಮಾಜದಲ್ಲಾದ ವಿದ್ಯಾ ಪ್ರಚಾರವೇ ಆಗಿದೆ. ಓದು ಬಲ್ಲ ಪ್ರೇಕ್ಷಕರ ಸಂಖ್ಯೆ ಇವತ್ತು ಹೆಚ್ಚಿರುವುದನ್ನು ಮರೆಯಬಾರದು. 1950ರ ಆಚೀಚೆ ಹರಿದಾಸರ ಪ್ರವೇಶದಿಂದ ಯಕ್ಷಗಾನದಲ್ಲಿ ಮಾತುಗಾರಿಕೆ ಅನಿವಾರ್ಯವಾಯಿತು.

ಆಗ ಮೇಳಗಳು ಒಬ್ಬೊಬ್ಬ ಮಾತುಗಾರರನ್ನು ಆಶ್ರಯಿಸಿದ್ದಾರೆ, ಈಗ ಎಲ್ಲಾ ಪಾತ್ರಗಳು ಮಾತುಗಾರಿಕೆಯನ್ನೇ ನಂಬಿಕೊಂಡಿವೆ. ಇದರಿಂದಾಗಿ ರಂಗದಲ್ಲಿ ಹೊಂದಾಣಿಕೆ ತಪ್ಪಿದೆ. ಅನಗತ್ಯ ಮಾತುಗಾರಿಕೆ ಬೆಳೆದಿದೆ. ಮಾತುಗಾರಿಕೆ ಪ್ರಧಾನವಾದ್ದರಿಂದ ಈ ಕಲೆಯ ಉಳಿದ ಮೂಲಭೂತ ಅಂಗಗಳಿಗೆ ಅಪಚಾರವಾಗುತ್ತಿದೆ. ಈ ಬಗ್ಗೆಲ್ಲಾ ಆಸಕ್ತರು ಚಿಂತಿಸಬೇಕಾಗಿದೆ" ಎಂಬುದೇ ಶ್ರೀ ಕುಂಬಳೆಯವರ ನಿಲುವಾಗಿದೆ.

ಸಂಪೂರ್ಣ ಬಯಲಾಟದ ಮೇಳಗಳಲ್ಲಿ ಭಾಗವಹಿಸಿದ ಅನುಭವ ಶ್ರೀ ಕುಂಬಳೆಯವರಿಗೆ ಇಲ್ಲವಾದರು ಕಳೆದ ಹದಿನಾರು ವರ್ಷಗಳಿಂದ ಧರ್ಮಸ್ಥಳ ಮೇಳದ ಕಲಾವಿದನಾಗಿರುವುದರಿಂದ ಬಯಲಾಟವಾಡುವ ಅವಕಾಶ ಲಭಿಸಿದೆ. ಈ ಮೇಳಕ್ಕೆ ವರ್ಷವರ್ಷವೂ ಬಯಲಾಟ ಹೆಚ್ಚುತ್ತಿರುವುದನ್ನು ಗಮನಿಸುತ್ತಿರುವ ಶ್ರೀ ರಾವ್ ಸ್ವಲ್ಪ ಕಾಲದಲ್ಲೇ ಆ ಮೇಳ ಪೂರ್ಣ ಹರಕೆಯಾಟದ ಮೇಳವಾದರೂ ಆದೀತು ಎನ್ನುತ್ತಾರೆ. ಟೆಂಟ್ ಹಾಗು ಬಯಲಾಟದ ಪ್ರೇಕ್ಷಕರಲ್ಲಿ ವ್ಯತ್ಯಾಸ ಇರುವುದನ್ನು ಗಮನಿಸಿರುವ ಇವರು ಟೆಂಟ್‌ನ ಪ್ರೇಕ್ಷಕ ಸ್ವಲ್ಪ ನಾಗರೀಕನಾಗಿ ವರ್ತಿಸುವುದನ್ನು ಗಮನಿಸಿದ್ದಾರೆ. ಸೌಕರ್ಯದ ದೃಷ್ಟಿಯಿಂದ ಟೆಂಟ್, ಕಲಾವಿದರಿಗೆ, ಪ್ರೇಕ್ಷಕರಿಗೆ ಅನುಕೂಲ ಎಂಬುದು ಇವರ ಅಭಿಮತ.

ಶ್ರೀ ಕುಂಬಳೆ ಸುಂದರ ರಾವ್ ಇವರು ಬಡಗಿನ ಕಲಾವಿದರೊಂದಿಗೆ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆಯೇ ಹೊರತು, ಬಡಗಿನ ಮೇಳದ ಕಲಾವಿದರಾಗಿ ಸಂಚರಿಸಿದವರಲ್ಲ, ಈ ಎರಡು ತಿಟ್ಟುಗಳ ಸಮನ್ವಯ ಕಷ್ಟವೆನ್ನುವ ಅವರು ಇವೆರಡೂ ಭಿನ್ನ ಸಂಪ್ರದಾಯವಾದ್ದರಿಂದ ಹಾಗೇ ಉಳಿದು ಬರುವ ಸಾಧ್ಯತೆ ಹೆಚ್ಚು ಎನ್ನುತ್ತಾರೆ. ಇಂದು ಭಾಗವತರ ಬುದ್ಧಿವಂತಿಕೆಯಿಂದ ಕಲಾವಿದರ ಮಾನಸಿಕ ಹೊಂದಾಣಿಕೆಯಿಂದ ಅಲಲ್ಲಿ ಎರಡು ತಿಟ್ಟುಗಳ ಕಲಾವಿದರು ಪ್ರದರ್ಶನ ಒಂದರಲ್ಲೇ ದುಡಿಯಲು ಸಾಧ್ಯವಾಗಿದೆ, ಎನ್ನುವ ಇವರು ತಿಟ್ಟುಗಳ ಸಮನ್ವಯ ಸಾಧಿತವಾಗಬೇಕೆಂದಿದ್ದರೆ ಭಾರಿ ಪ್ರಯತ್ನಗಳೇ ಬೇಕಾದೀತು. ಇದಕ್ಕೆ ಎರಡು ತಿಟ್ಟಿನ ಕಲಾಸಕ್ತರು ಒಂದಾಗಿ ದೀರ್ಘಕಾಲ ಚಿಂತಿಸಿ ರೂಪರೇಷೆ ನಿರ್ಧರಿಸಬೇಕಾದೀತು ಎನ್ನುತ್ತಾರೆ.

ಯಕ್ಷಗಾನ ರಂಗದಲ್ಲಿ ಇಂದು ಕಾಣಿಸುತ್ತಿರುವ ತಾರಾಮೌಲ್ಯಗಳ ಬಗ್ಗೆ ಶ್ರೀ ಕುಂಬಳೆಯವರಿಗೆ ಅಸಮಾಧಾನ ಏನೂ ಇಲ್ಲ. ಅಭಿಮಾನಿಗಳು ಕೊಡುವ ಪ್ರೋತ್ಸಾಹದಿಂದ ತನ್ಮಯತೆ ಬರುತ್ತದೆ; ಸ್ಫೂರ್ತಿ ಹೆಚ್ಚುತ್ತದೆ. ಈ ಬಗೆಯ ಪ್ರೋತ್ಸಾಹ ಕಲಾವಿದರೆಲ್ಲರಿಗೂ ಇರಬೇಕು ಎಂಬ ಅಭಿಪ್ರಾಯವುಳ್ಳ ಇವರಿಗೆ ಅಪಾರ ಅಭಿಮಾನಿಗಳ ಪ್ರೋತ್ಸಾಹವೇ ಶ್ರೀರಕ್ಷೆಯಾಗಿದೆ. ಅಭಿಮಾನಿಗಳಿಂದ ರಂಗಸ್ಥಳದಲ್ಲಿ ಇದಿರು ಕಲಾವಿದನಿಗೆ ಯಾವೊಂದು ತೊಂದರೆಯಾಗುವುದಿಲ್ಲ ಎಂದು ಖಚಿತವಾಗಿ ಹೇಳುತ್ತಾರೆ.

ಮಳೆಗಾಲದ ಆಟಗಳು ಇಂದಿನ ಅನಿವಾರ್ಯ ಎನ್ನುವ ಶ್ರೀ ಸುಂದರ ರಾವ್ ಅವರು ಬೇರೆ ಬೇರೆ ಮನೋಧರ್ಮದ ಸ್ತರದ ಕಲಾವಿದರೊಂದಿಗೆ ಬೆರೆಯುವ ಅವಕಾಶ ಇದರಿಂದ ಆಗುತ್ತದೆ ಎನ್ನುತ್ತಾರೆ – "ಮಳೆಗಾಲದ ಆಟಗಳು ವೈವಿಧ್ಯಮಯ ಪ್ರಸಂಗಗಳನ್ನು ಆಡುವುದರಿಂದ ಕಲಾವಿದನಿಗೆ ಬೆಳೆಯಲು ಅವಕಾಶ ಮಾಡಿಕೊಡುತ್ತದೆ. ಇಂದಿನ ಟೆಂಟ್ ಮೇಳಗಳು ಒಂದೋ ಎರಡೋ ಪ್ರಸಂಗಗಳನ್ನು ನಂಬಿಕೊಂಡು ಆಡುವುದರಿಂದ ವೈವಿಧ್ಯದ ಕೊರತೆ. ಅನುಭವಕ್ಕೆ ಕಡಿಮೆ ಅವಕಾಶ ಉಂಟಾಗುತ್ತಿದೆ. ಇದನ್ನೆಲ್ಲಾ ನಿವಾರಿಸಲು ಮಳೆಗಾಲದ ಆಟಗಳು ಅಗತ್ಯ. ಒಂದೇ ತರಹದ ಯಾಂತ್ರಿಕತೆಯನ್ನು ಇವು ತೊಡೆದು ಹಾಕುತ್ತವೆ. ಆದರೆ ಕೆಲವೊಮ್ಮೆ ಪೂರ್ವಭಾವಿ ಸಿದ್ಧತೆ ಇಲ್ಲದೆ, ಹೊಂದಾಣಿಕೆ ಇಲ್ಲದೆ ಅಸಂಬದ್ಧವಾಗುವ, ಗೊಂದಲವಾಗುವ ಸಂಭವ ಇದೆ. ಬೇರೆ ಬೇರೆ ಮೇಳದ ಮುಖ್ಯ ಕಲಾವಿದರನ್ನು ಒಂದೆಡೆ ನೋಡುವ ಅವಕಾಶ ನಗರದ ಪ್ರೇಕ್ಷಕರಿಗೆ ಇದರಿಂದ ಲಭ್ಯವಾಗಿದೆ. ಈ ಕಾರಣಕ್ಕಂತೂ ಸ್ವಾಗತಾರ್ಹ" ಎನ್ನುತ್ತಾರೆ.

ಬಹಳಷ್ಟು ವರ್ಷಗಳಿಂದ ತಾಳಮದ್ದಲೆಯಲ್ಲಿ ಸಕ್ರಿಯವಾಗಿ ಭಾಗವಹಿಸಿರುವ ಶ್ರೀ ಕುಂಬಳೆ ಸುಂದರರಾವ್ ಅವರು ಆ ಪ್ರಕಾರದಲ್ಲೂ ಹೆಸರು ಮಾಡಿದ್ದಾರೆ. ಇವರ ವಾಕ್ಯ ಸರಣಿ, ಪಾತ್ರ ಬೆಳವಣಿಗೆಯ ದೃಷ್ಟಿ ಎದುರು ಅರ್ಥಧಾರಿಯನ್ನು ವಾದಕ್ಕೆ ಹಚ್ಚುವ ಬಗೆ ಇವೆಲ್ಲಾ ವಿಶಿಷ್ಟವಾದದ್ದಾಗಿದೆ. ಜನತೆ ಶ್ರೀ ಕುಂಬಳೆಯವರ ಅರ್ಥಗಾರಿಕೆಯನ್ನು ಅಭಿಮಾನದಿಂದ ನೆನೆಯುತ್ತಾರೆ.

ತೆಂಕುತಿಟ್ಟಿನ ಕೆಲವು ವೈಲಕ್ಷಣ್ಯಗಳನ್ನು ಉಳಿಸಿ ಬೆಳೆಸುವಲ್ಲಿ ಇವರಿಗೆ ಆಸಕ್ತಿ ಇದೆ. "ವೀರರಸ ಪ್ರಧಾನವಾದ ಕುಣಿತ, ಅದಕ್ಕೆ ಒಪ್ಪುವ ಚಂಡೆಯ ಬಡಿತ ತೆಂಕು ತಿಟ್ಟಿನಲ್ಲಿ ಮಹತ್ವವಾದದ್ದಾಗಿದೆ. ಕಲಾವಿದರೆಲ್ಲಾ ಇದಕ್ಕೆ ಹೊಂದುವಂತೆ ಪ್ರದರ್ಶಿಸಬೇಕು. ಬಣ್ಣದ ವೇಷ ತೆಂಕುತಿಟ್ಟಿನ ಸಂಪತ್ತಾಗಿದ್ದು ಅದು ನಶಿಸದಂತೆ ನೋಡಿಕೊಳ್ಳಬೇಕು. ಚಿಟ್ಟೆಗಾರಿಕೆ ಆಕರ್ಷಕ ವೇಷಗಾರಿಕೆ ಇವೆಲ್ಲಾ ಉಳಿಯಬೇಕು. ಬಣ್ಣ ಬರೆದುಕೊಳ್ಳುವಲ್ಲಿನ ವೈವಿಧ್ಯವನ್ನು ಎಳೆಯ ಕಲಾವಿದರು ಅರಿಯ ಬೇಕು. ಪುನಃ ಹಳೆಯ ಪ್ರಸಂಗಗಳನ್ನು ಆಡುವ ಬಗ್ಗೆ ಮೇಳದವರೆಲ್ಲಾ ದೃಢ ಸಂಕಲ್ಪ ಮಾಡಬೇಕು. ಕಲಾವಿದರಲ್ಲಿ ಈ ಬಗ್ಗೆ ಐಕ್ಯತೆ ಮೂಡಿ ಕಲಾತ್ಮಕ ಸಂಪತ್ತನ್ನು ಉಳಿಸಿಕೊಂಡು ಬರುವಲ್ಲಿ ಪ್ರಯತ್ನವಿರಬೇಕು" ಎಂಬುದೇ ಇವರ ಆಸೆಯಾಗಿದೆ.

ಯಕ್ಷಗಾನಕ್ಕೊಂದು ಪ್ರತ್ಯೇಕ ಅಕಾಡೆಮಿ ಬೇಕೆನ್ನುವ ಶ್ರೀ ಸುಂದರರಾವ್ ಅವರು ಸರಕಾರ ಇಂದು ರಚಿಸಿರುವ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ಇವೆರಡೂ ರಂಗಕ್ಕೂ ಪ್ರಯೋಜನವಿಲ್ಲವಾಗಿದೆ ಎನ್ನುತ್ತಾರೆ. "ಯಕ್ಷಗಾನ ಅಕಾಡೆಮಿ ರಚನೆಯಿಂದ ಕಥಕ್ಕಳಿಯಲ್ಲಿ ಇರುವಂತೆ ಕಲಾಶಾಲೆಯೊಂದನ್ನು ಪ್ರಾರಂಭಿಸಬಹುದು. ಇದರಿಂದ

ಎರಡೂ ತಿಟ್ಟುಗಳ ಸಾಂಪ್ರದಾಯಿಕ ಮೌಲ್ಯಗಳಿಗೆ ಹೆಚ್ಚು ಗಮನ ನೀಡಲು ಸಾಧ್ಯ. ಒಳ್ಳೆಯ ಕಲಾವಿದರಿಂದ ಸೂಕ್ತ ತರಬೇತಿ, ಪ್ರಾಜ್ಞರಿಂದ ಕಾರ್ಯಶಿಬಿರ ಮುಂತಾದವುಗಳನ್ನೆಲ್ಲಾ ಹಮ್ಮಿಕೊಳ್ಳಬಹುದು. ಅಕಾಡೆಮಿ ಮಾಸಾಶನ ಪ್ರಶಸ್ತಿಗಳನ್ನು ಕೊಡುವಾಗ ಹೆಚ್ಚು ಅರ್ಹರಾದವರನ್ನು ಗುರುತಿಸಿಕೊಡಲು ಇದರಿಂದ ಸಹಾಯಕವಾಗುತ್ತದೆ. ಇನ್ನಾದರೂ ಸರಕಾರ ಈ ಬಗ್ಗೆ ಕಣ್ಣು ತೆರೆಯಬೇಕು ಎಂಬುದೇ ಶ್ರೀ ಕುಂಬಳೆಯವರ ಅಭಿಮತವಾಗಿದೆ.

ಇವತ್ತಿನ ಹವ್ಯಾಸಿ ಕಲಾವಿದರ ಬಗ್ಗೆ ಹಾಗೂ ಹವ್ಯಾಸಿ ಸಂಸ್ಥೆಗಳ ಬಗ್ಗೆ ಆದರದ ಭಾವನೆಯನ್ನು ಹೊಂದಿರುವ ಶ್ರೀ ಕುಂಬಳೆಯವರು ಯಕ್ಷಗಾನ ಕಲಾಸಕ್ತರ ಸಂಖ್ಯೆಯನ್ನು ಹೆಚ್ಚಿಸುವಲ್ಲಿ ಇವರ ಪಾತ್ರ ವಿಶೇಷವಾಗಿದೆ ಎನ್ನುತ್ತಾರೆ. "ವೃತ್ತಿ ರಂಗಭೂಮಿ ಬೆಳೆಯುವಲ್ಲಿ ಹವ್ಯಾಸಿಗಳು ಪೂರಕವಾಗಿರುತ್ತಾರೆ. ಅವರಿಂದಲೇ ಈ ಕಲೆಯ ಬಗ್ಗೆ ಇಂದು ಎಲ್ಲ ಕಡೆ ವಿಶೇಷ ಒಲವು ಕಾಣೀಸಿಕೊಂಡಿದೆ. ಯೋಗ್ಯ ತರಬೇತಿ ಮಾರ್ಗದರ್ಶನ ದೊರೆತರೆ ಹವ್ಯಾಸಿಗಳಿಂದ ಹೆಚ್ಚಿನದನ್ನು ನಿರೀಕ್ಷಿಸಬಹುದು. ಅದೇ ರೀತಿ ಕಲಾಕೇಂದ್ರ ಹಾಗೂ ತರಬೇತಿ ಸಂಸ್ಥೆಗಳಲ್ಲಿ ತರಬೇತಾದ ಅನೇಕರು ಇಂದು ಹವ್ಯಾಸಿ ಸಂಸ್ಥೆಗಳ ಮೂಲಕ ಮಾಡುತ್ತಿರುವ ಸೇವಾ ಕಾರ್ಯವನ್ನು ಶ್ಲಾಘಿಸಬೇಕು" ಎಂಬುದು ಇವರ ನಿಲುವು.

ಇನ್ನು ಮುಂದಿನ ವರ್ಷಗಳಲ್ಲಾದರೂ ಯಕ್ಷಗಾನ ಕಲಾವಿದರಾಗುವವರು ಕನಿಷ್ಟ ಎಸ್.ಎಸ್.ಎಲ್.ಸಿ.ಯನ್ನಾದರೂ ಓದಿದವನಾಗಿರಬೇಕು ಎನ್ನುವ ಶ್ರೀ ಕುಂಬಳೆಯವರು ಇದರಿಂದ ಕಲಾವಿದ ಪ್ರಾಥಮಿಕ ಅಂಶಗಳನ್ನಾದರೂ ಅರಿತುಕೊಳ್ಳುವಂಥವನಾಗುತ್ತಾನೆ ಎನ್ನುತ್ತಾರೆ. ಮೇಳದ ಒಳಗೆ ದೊರೆಯುವ ಶಿಕ್ಷಣದೊಂದಿಗೆ ಪರಸ್ಪರ ಸಮಾಲೋಚನೆ, ಕಾರ್ಯಶಿಬಿರ ವಿಚಾರ ಕಮ್ಮಟ ಇವುಗಳಲ್ಲೆಲ್ಲಾ ಭಾಗವಹಿಸುವಂತಿರಬೇಕು. ಇದರಿಂದ ಹೊಸ ಬಗೆಯ ಚಿಂತನೆ, ಮಂಡನೆಗಳು ಸಾಧ್ಯವಾಗುತ್ತದೆ. ಇದಕ್ಕೆ ಪ್ರತಿಯೊಬ್ಬ ಕಲಾವಿದನು ಸಿದ್ಧನಾಗಿರಬೇಕೆಂಬುದೇ ಶ್ರೀ ಕುಂಬಳೆಯವರ ಕಳಕಳಿಯಾಗಿದೆ.

ಸತತ ಅಭ್ಯಾಸ, ಸ್ವಯಂ ಪ್ರತಿಭೆಯಿಂದ ಮಾತ್ರ ಕಲಾವಿದ ಬೆಳೆಯ ಬಲ್ಲ ಎನ್ನುವ ಶ್ರೀ ಕುಂಬಳೆ ಸುಂದರರಾವ್ ಎಳೆಯ ಕಲಾವಿದರು ಈ ದೃಷ್ಟಿಯನ್ನು ರೂಢಿಸಿಕೊಳ್ಳಬೇಕು ಎನ್ನುತ್ತಾರೆ. ಶುದ್ಧ ಕಲಾತ್ಮಕ ದೃಷ್ಟಿಯ ಕೆಲವೇ ಕಲಾವಿದರಲ್ಲಿ ಮುಖ್ಯರಾಗಿರುವ ಇವರ ಅಭಿಪ್ರಾಯಗಳಿಗೆ ಪ್ರಾಮಾಣಿಕ ಚಿಂತನೆಯ ಬಲವಿದೆ. ರಂಗದಲ್ಲಿ ಅಪಾರ ಅಭಿಮಾನಿಗಳನ್ನು ಸ್ನೇಹಿತ ಕಲಾವಿದರನ್ನು ಹೊಂದಿರುವ ಇವರ ವಿಚಾರ ಲಹರಿಗಳು ಮುಂದಿನ ಪಿಳಿಗೆಗೆ ಅನುಕರಣಯೋಗ್ಯವಾಗಬಲ್ಲವು. ಕಲಾವಿದ ಬೆಳೆಯುತ್ತಲೇ ಇರಬೇಕೆಂಬ ಧೋರಣೆಯ ಶ್ರೀಯುತರು ಹೊಸ ಅಂಶಗಳಿಗೆ, ವಿಚಾರಗಳಿಗೆ ಸದಾ ತೆರೆದ ಹೃದಯದವರಾಗಿದ್ದಾರೆ. ■

ಜನಾದರಣೀಯ ಸ್ತ್ರೀ ಪಾತ್ರಧಾರಿ

ಕೋಳ್ಯೂರು ರಾಮಚಂದ್ರ ರಾವ್

ನಲವತ್ತು ಐವತ್ತು ವರ್ಷಗಳ ಕೆಳಗೆ ತೆಂಕು ತಿಟ್ಟಿನ ಯಕ್ಷಗಾನಕ್ಕೆ ಕಾಯಕಲ್ಪವನ್ನು ನೀಡಿದವರು ದಿ| ಕುರಿಯ ವಿಠಲ ಶಾಸ್ತ್ರಿಗಳು. ಕಲಾಸುಧಾರಣೆಯ ಬಗ್ಗೆ ಅವರು ನಡೆಸಿದ ಪ್ರಯತ್ನಗಳು, ಈ ರಂಗದಲ್ಲಿ ಮಾಡಿದ ಪ್ರಯೋಗಗಳು, ಎಳೆಯ ಕಲಾವಿದರಲ್ಲಿ ಅವರು ಮೂಡಿಸಿದ ಪ್ರಭಾವಗಳು ಯಕ್ಷಗಾನ ಉಳಿಯುವಲ್ಲಿ ಮಹತ್ವವಾದವುಗಳಾಗಿವೆ. ಅದುವರೆಗೆ ಗ್ರಾಮ್ಯವಾಗಿದ್ದ ಯಕ್ಷಗಾನಕ್ಕೆ ಉಳಿದ ಕಲಾಪ್ರಕಾರಗಳ ಉತ್ತಮ ಅಂಶಗಳನ್ನು ಇವರು ಕಸಿ ಮಾಡಿದರು. ಶ್ರೀಯುತರ ಕೆಲವೊಂದು ಕೊಡುಗೆಗಳು ವಿವಾದಾಸ್ಪದವಾಗಿದ್ದರೂ ಅವರೊಬ್ಬ ಸ್ಮರಣೀಯ ವ್ಯಕ್ತಿ ಎಂಬುದರಲ್ಲಿ ಸಂದೇಹವಿಲ್ಲ. ಎಳೆಯ ಪ್ರತಿಭೆಗಳನ್ನು ಗುರುತಿಸಿ ರಂಗಕ್ಕೆ ತಂದು ಸೂಕ್ತ ತರಬೇತಿ ನೀಡುವಲ್ಲಿ ಅವರು ವಹಿಸುತ್ತಿದ್ದ ಶ್ರಮ ಮಾತ್ರ ಅನನ್ಯವಾಗಿತ್ತು. ಇಂದು ಅವರು ಪರಿಚಯಿಸಿದ ಅನೇಕ ಬಾಲಕಲಾವಿದರು ಬೇರೆ ಬೇರೆ ಅಂಗಗಳಲ್ಲಿ ಪರಿಣತರಾಗಿ ಖ್ಯಾತರಾಗಿದ್ದಾರೆ. ಅಂತಹವರಲ್ಲಿ ಸ್ತ್ರೀ ವೇಷಧಾರಿ ಶ್ರೀ ಕೋಳ್ಯೂರು ರಾಮಚಂದ್ರ ರಾವ್ ಮುಖ್ಯರು. ಅರವತ್ತರ ಅಂಚಿಗೆ ಕಾಲಿರಿಸಲಿರುವ ಇವರಿಗೆ ಈ ರಂಗದಲ್ಲಿ ನಲವತ್ತು ವರ್ಷಕ್ಕೂ ಹೆಚ್ಚಿನ ಅನುಭವ ಇದೆ.

ಶ್ರೀ ರಾಮಚಂದ್ರ ರಾಯರ ಹುಟ್ಟೂರು ಬಂಟ್ವಾಳ ತಾಲ್ಲೂಕಿನ ಕರೋಪಾಡಿ. ಆದರೆ ಇವರ ಬಾಲ್ಯವೆಲ್ಲಾ ಕಳೆದದ್ದು ಕಾಸರಗೋಡು ಸಮೀಪದ ಕೋಳ್ಯೂರಿನಲ್ಲಿ. ಶ್ರೀಯುತರ ತಂದೆ ನಾರಾಯಣ ಭಟ್ಟರು ವೃತ್ತಿಯಲ್ಲಿ ವ್ಯವಸಾಯಗಾರರು. ತಾಯಿ ರಾಧಮ್ಮ. ತಂದೆ ತಾಯಿಗಳಿಬ್ಬರನ್ನೂ ಬಾಲ್ಯದಲ್ಲೇ ಕಳೆದುಕೊಂಡ ಇವರನ್ನು ಅಣ್ಣ ಮುಕುಂದ ರಾವ್ ಅವರು ಸಾಕಿದರು. ಇವರ ಅಜ್ಜ ಮಹಾಬಲೇಶ್ವರ ಭಟ್ಟರು ಯಕ್ಷಗಾನ ತಾಳಮದ್ದಲೆಗಳಲ್ಲಿ ಭಾಗವಹಿಸುತ್ತಿದ್ದವರು. ಇವರ ಎಳೆಯ ಕಾಲದಲ್ಲಿ ಖ್ಯಾತವಾಗಿದ್ದ ಕುಂಡಾವು, ಕಟೀಲು ಮೇಳಗಳ ಆಟಗಳನ್ನು ಸಣ್ಣ ಪ್ರಾಯದಲ್ಲಿ ತಪ್ಪದೇ ನೋಡುತ್ತಿದ್ದರು. ಕೋಳ್ಯೂರರಿಗೆ ಹೀಗೆ ಯಕ್ಷಗಾನದ ನಂಟಾಯಿತು. ಇವರ ಬಾಲ್ಯದ ಕಾಲವೆಂದರೆ ಕುರಿಯ ವಿಠಲ ಶಾಸ್ತ್ರಿಗಳು ಹಾಗೂ ಅವರ ತಂದೆ ವೆಂಕಟರಮಣ ಶಾಸ್ತ್ರಿಗಳು ಸೇರಿ ಯಕ್ಷಗಾನ ನಾಟಕ ಕಂಪೆನಿಯನ್ನು ಪ್ರಾರಂಭಿಸುತ್ತಿದ್ದ ಕಾಲ, ಅಂದಿನ 11 ಫಾರ್ಮ (8ನೆಯ ತರಗತಿ) ವರೆಗೆ ಓದಿದ ಇವರು ಮುಂದೆ ಓದುವ ಅನುಕೂಲ ಇಲ್ಲದೆ ಮನೆಯಲ್ಲೇ ಉಳಿದಿದ್ದ ಸಂದರ್ಭದಲ್ಲಿ ಶ್ರೀ ವಿಠಲ ಶಾಸ್ತ್ರಿಗಳು ಮೇಳಕ್ಕೆ ಕರೆದು ಸೇರಿಸಿಕೊಂಡರು. ಅಷ್ಟೇ ಅಲ್ಲದೆ ಗುರುವಿನಂತೆ, ಅಣ್ಣನಂತೆ ನೋಡಿಕೊಂಡರು. ತಮ್ಮ ಇಂದಿನ ಎಲ್ಲಾ ಯಶಸ್ಸಿಗೆ ಕುರಿಯರ ಮಾರ್ಗದರ್ಶನವೇ ಕಾರಣ ಎಂದು ಹೇಳುವ ಶ್ರೀ ರಾಮಚಂದ್ರ ರಾವ್ ಶಾಸ್ತ್ರಿಗಳನ್ನು ಗೌರವಾದರದಿಂದ, ಆಪ್ತತೆಯಿಂದ ನೆನೆಯುತ್ತಾರೆ.

ಶ್ರೀ ಕೋಳ್ಯೂರರು ಮೇಳಕ್ಕೆ ಸೇರಿದ ಕಾಲದಲ್ಲಿ ಯಕ್ಷಗಾನಕ್ಕೆ ಇಂದಿರುವ ಆಕರ್ಷಣೆ ಇರಲಿಲ್ಲವಾದರೂ ಕಳಪೆ ಎಂಬ ಅಭಿಪ್ರಾಯವೇನೂ ಇದ್ದಿರಲಿಲ್ಲ. ಎಳೆಯನಾಗಿ ಧರ್ಮಸ್ಥಳ ಮೇಳವನ್ನು ಸೇರಿಕೊಂಡ ಇವರಿಗೆ ಮೊದಲಿಗೆ ಬಂದದ್ದು ಬರೇ ಬಾಲಗೋಪಾಲರ ವೇಷ. ಎರಡು ವರ್ಷಗಳ ನಂತರ ಕಟೀಲು, ಕುಂಡಾವು ಮೇಳಗಳಲ್ಲಿ ಸಂಚರಿಸಿ ಮತ್ತೆ ಧರ್ಮಸ್ಥಳ ಮೇಳಕ್ಕೆ ಸ್ತ್ರೀ ಪಾತ್ರಧಾರಿಯಾಗಿ ಬಂದರು. ಅದರೊಂದಿಗೆ ಪುಂಡು ವೇಷಗಳಾದ ಕೃಷ್ಣ, ಬಭ್ರುವಾಹನ, ಅಭಿಮನ್ಯು ಮುಂತಾದ ವೇಷಗಳು ಇವರ ಪಾಲಿಗೆ ದೊರೆತವು. ಹನ್ನೆರಡು ವರ್ಷಗಳ ಕಾಲ ವಿಠಲ ಶಾಸ್ತ್ರಿಗಳ ಮಾರ್ಗದರ್ಶನದಲ್ಲೇ ಕಲಾ ವ್ಯವಸಾಯ ಮಾಡಿದ ಇವರು ಅದ್ವಿತೀಯ ಸ್ತ್ರೀ ಪಾತ್ರಧಾರಿ ಎಂಬ ಹೆಸರನ್ನು ಗಳಿಸಿದರು. 1960 ರಿಂದ ಮತ್ತೆ ಸುರತ್ಕಲ್, ಕೂಡ್ಲು, ಇರಾ ಸೋಮನಾಥೇಶ್ವರ, ಕರ್ನಾಟಕ ಯಕ್ಷಗಾನ ಸಭಾ ಮುಂತಾದ ಮೇಳಗಳಲ್ಲಿ ಸಂಚರಿಸಿ ಕಳೆದ ಎರಡು ವರ್ಷಗಳಿಂದ ಈಚೆಗೆ ಬಪ್ಪನಾಡು ಮೇಳದಲ್ಲಿ ಪ್ರಧಾನ ಸ್ತ್ರೀ ವೇಷಧಾರಿಯಾಗಿ ವೃತ್ತಿನಿರತರಾಗಿದ್ದಾರೆ.

ಶ್ರೀ ಕೋಳ್ಯೂರು ರಾಮಚಂದ್ರ ರಾವ್ ಒಬ್ಬ ಪ್ರಪೂರ್ಣ ಕಲಾವಿದ ಆರಂಭದ ದಿನಗಳಲ್ಲಿ ಇವರು ವಹಿಸುತ್ತಿದ್ದ ಶ್ರಮ, ತೋರುತ್ತಿದ್ದ ಶ್ರದ್ಧೆ ಅನುಪಮ. ಶ್ರೀ ವಿಠಲ

ಶಾಸ್ತ್ರಿಗಳು ವ್ಯವಸ್ಥೆಗೊಳಿಸಿದ್ದ ನೃತ್ಯ ತರಬೇತಿ ಕಾರ್ಯಕ್ರಮಗಳಲ್ಲಿ ಇವರು ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಮೊದಲಿಗೆ ಎರಡು ವರ್ಷ ಕೊಚ್ಚಿ ಪರಮಶಿವಂ ಇವರಿಂದ ಭರತನಾಟ್ಯ ಅಭ್ಯಾಸ ಮಾಡಿದರು. ಅದೇ ರೀತಿ ಕಥಕಳಿ ಸಂಪ್ರದಾಯದ ಕುಣಿತವೂ ಕರಗತವಾಯಿತು. ಶಾಸ್ತ್ರಿಗಳೊಂದಿಗೆ ಭಸ್ಮಾಸುರ ಮೋಹಿನಿಯ ಮೋಹಿನಿಯಾಗಿ ಅಪೂರ್ವ ಪ್ರದರ್ಶನವನ್ನು ನೀಡಿದರು. ಮಂಗಳೂರಿನ ಕೃಷ್ಣರಾವ್ ಅವರ ಶಿಷ್ಯರಾಗಿ ಒಂದು ವರ್ಷ ನೃತ್ಯಾಭ್ಯಾಸ ಮಾಡಿದರು. ಯಕ್ಷಗಾನದ ಸಾಂಪ್ರದಾಯಿಕ ಸ್ತ್ರೀ ವೇಷದ ಸಕಲ ಪರಿಚಯವನ್ನು ಅಂದಿನ ಪ್ರಸಿದ್ಧ ಪಾತ್ರಧಾರಿ ಕರ್ಗಲ್ಲು ಸುಬ್ಬಣ್ಣ ಭಟ್ಟರಿಂದ ಮಾಡಿಕೊಂಡರು. ಅಗರಿ ಶ್ರೀನಿವಾಸ ಭಾಗವತರು, ಕಟೀಲು ಪುರುಷೋತ್ತಮ ಭಟ್ಟರು ಇವರಿಗೆ ಹರೆಯದ ದಿನಗಳಲ್ಲಿ ಮಾರ್ಗದರ್ಶನ ಮಾಡಿದವರು.

ಮಳೆಗಾಲದ ಆಟಗಳಲ್ಲಿ ಮಾತ್ರ ಬಡಗು ತಿಟ್ಟಿನ ಕಲಾವಿದರೊಂದಿಗೆ ಪ್ರದರ್ಶನವಿತ್ತಿರುವ ಇವರಿಗೆ ಇಂದು ಇವೆರಡೂ ಮೇಳಗಳ ಕಲಸು ಮೇಲೋಗರದ ಬಗ್ಗೆ ಖೇದವಿದೆ. ತೆಂಕು ತಿಟ್ಟಿನ ನಾಟ್ಯ ಸ್ವಲ್ಪ ಗಡುಸಾಗಿದ್ದು ಸ್ವಲ್ಪ ಗಂಭೀರವಾಗಿದೆ. ಅಂತೆಯೇ ಚಂಡೆಯೂ ಅದಕ್ಕೆ ಪೂರಕ. ಆದರೆ ಬಡಗಿನಲ್ಲಿ ಮದ್ದಳೆಯ ಪೆಟ್ಟುಗಳೇ ಹಿರಿದಾಗಿದ್ದು ಲಾಸ್ಯ ವೈವಿಧ್ಯಕ್ಕೆ ವಿಶಿಷ್ಟ. ಕುಣಿತದಲ್ಲಿ ಹೀಗೆ ಸೂಕ್ಷ್ಮ ವ್ಯತ್ಯಾಸಗಳಿದ್ದು ಸಮ್ಮಿಶ್ರಣದಿಂದ ರಸಭಂಗವಾಗುತ್ತದೆ ಎಂಬುದು ಶ್ರೀ ಕೋಳ್ಯೂರರ ಪ್ರಾಮಾಣಿಕ ಅಭಿಪ್ರಾಯ. ತಾವು ಭರತನಾಟ್ಯ, ಕಥಕಳಿ ಅಭ್ಯಾಸ ಮಾಡಿದ್ದರೂ ಪ್ರದರ್ಶನದಲ್ಲಿ ಅವುಗಳಲ್ಲಿ ವ್ಯಕ್ತವಾಗದ ಹಾಗೆ ಎಚ್ಚರ ವಹಿಸುತ್ತಿರುವುದನ್ನು ನೆನೆಯುವ ಶ್ರೀಯುತರು ತಿಟ್ಟುಗಳೆರಡೂ ಪರಸ್ಪರ ಲೀನವಾಗುವುದಿಲ್ಲವಾದ್ದರಿಂದ ಮಳೆಗಾಲದ ಪ್ರದರ್ಶನ ಹೆಚ್ಚಾಗಿ ಕೆಡುತ್ತದೆ ಎನ್ನುತ್ತಾರೆ.

ಕಲಾವಿದರಿಗೆ ಪಾತ್ರದ ಒಳಗೂ ಸ್ಫೂರ್ತಿ ಕೊಟ್ಟಂತೆ ಹೆಚ್ಚು ಕಸಬು ಮಾಡಲು ಸಾಧ್ಯ. ನಿಜವಾದ ಕಲಾವಿದರು ಪಾತ್ರದ ಒಳಗನ್ನು ಪ್ರಕಟಿಸುವಲ್ಲೇ ಸಂತೋಷ ಪಡುತ್ತಾರೆ. ಈ ಕಾರಣದಿಂದಲೇ ರಸ ವೈವಿಧ್ಯವುಳ್ಳ ಪಾತ್ರಗಳನ್ನೇ ಹೆಚ್ಚು ಮೆಚ್ಚುವ ಶ್ರೀ ಕೋಳ್ಯೂರರು ದಾಕ್ಷಾಯಣೀ, ದೇವಯಾನೀ, ಚಂದ್ರಾವಳಿ, ಅಂಬೆ, ಸೀತೆ, ಚಂದ್ರಮತಿ, ದ್ರೌಪದಿ ಮುಂತಾದ ಪಾತ್ರಗಳನ್ನು ಮೆಚ್ಚುತ್ತಾರೆ. ಈ ಬಗೆಯ ಪಾತ್ರಗಳುಳ್ಳ ಪ್ರಸಂಗಗಳು ಪ್ರದರ್ಶನಗಳಲ್ಲಿ ಯಶಸ್ವಿಯಾಗಬಲ್ಲವು ಎನ್ನುವ ಶ್ರೀಯುತರು ಸಮರ್ಥನೆಗೆ ದ್ರೌಪದಿ ವಸ್ತ್ರಾಪಹರಣ, ಶಕುಂತಲಾ ಪರಿಣಯ, ದಕ್ಷಯಜ್ಞ, ಪಂಚವಟಿ, ಪಟ್ಟಾಭಿಷೇಕ, ಕೀಚಕವಧೆ, ಕೃಷ್ಣ ಸಂಧಾನ, ಸುಭದ್ರಾ ಕಲ್ಯಾಣ ಮುಂತಾದವನ್ನು ಹೆಸರಿಸುತ್ತಾರೆ. ಈ ಪ್ರಸಂಗಗಳನ್ನು ಬರೆದಿರುವ ಪಾರ್ತಿಸುಬ್ಬ, ಧ್ವಜಪುರದ ನಾಗಪ್ಪಯ್ಯ, ವಿಷ್ಣು ಮುಂತಾದ ಪ್ರಸಂಗಕಾರರ ರಚನಾ ಸಾಮರ್ಥ್ಯವನ್ನು ಶ್ರೀಯುತರು ಹೊಗಳುತ್ತಾರೆ.

ಶ್ರೀ ಕೋಳ್ಯೂರರಂತಹವರು ಒಂದು ರೀತಿಯಲ್ಲಿ ಈ ರಂಗದ ಎರಡು ಪೀಳಿಗೆಯ ಕಲಾವಿದರಲ್ಲಿ ಕೊಂಡಿಯಂತೆ ಇದ್ದವರು. ಹಳೆಯ ತಲೆಮಾರಿನ ಕಲಾವಿದರಾದ ವಿಠಲ ಶಾಸ್ತ್ರಿ, ಮೂಡಬಿದ್ರೆ ವಾಸು, ಕದ್ರಿ ವಿಷ್ಣು, ಭಾಗವತರಾಗಿ ಖ್ಯಾತರಾಗಿದ್ದ ಬಲಿಪ ನಾರಾಯಣ ಭಾಗವತ, ಅಗರಿ ಶ್ರೀನಿವಾಸ ಭಾಗವತ, ಮಾಂಬಾಡಿ ನಾರಾಯಣ ಭಾಗವತ, ಪುಟ್ಟು ನಾರಾಯಣ ಭಾಗವತ ಮುಂತಾದವರ ಅನುಪಮ ಕಲಾಭಿವ್ಯಕ್ತಿಯನ್ನು ಮನಸಾರೆ ಮೆಚ್ಚಿದ್ದಾರೆ. ಇಂದಿನ ತರುಣ ಪಾತ್ರಧಾರಿಗಳಲ್ಲಿ ಕುಂಬಳೆ ಶ್ರೀಧರ ರಾವ್, ತಾರಾನಾಥ ಬಲ್ಯ, ಅಂಬಾ ಪ್ರಸಾದ್, ಶಿವರಾಮ ಜೋಗಿ ಮುಂತಾದವರ ಭವಿಷ್ಯದ ಬಗ್ಗೆ ಭರವಸೆಯನ್ನು ಇರಿಸಿಕೊಂಡಿದ್ದಾರೆ.

ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಈ ರಂಗದಲ್ಲಿ ದುಡಿದಿರುವ ಶ್ರೀ ಕೋಳ್ಯೂರರಿಗೆ ವೃತ್ತಿ ಜೀವನದಲ್ಲಿ ತೃಪ್ತಿ ಇದೆ. ಯಕ್ಷಗಾನದಿಂದಾಗಿಯೇ ತಾನು ಮೇಲೆ ಬಂದೆ ಎಂದು ಇಂದಿಗೂ ಅಭಿಮಾನದಿಂದ ಹೇಳಿಕೊಳ್ಳುತ್ತಾರೆ. ಕಳೆದ ಹತ್ತು ವರ್ಷಗಳಿಂದ ತಾಳಮದ್ದಲೆ ಪ್ರಕಾರದಲ್ಲೂ ಸಕ್ರಿಯವಾಗಿ ಭಾಗವಹಿಸುತ್ತಿರುವ ಶ್ರೀಯುತರು ಇಲ್ಲೂ ಶ್ರೋತೃಗಳಿಗೆ ಪಾತ್ರದ ಒಳಗನ್ನು ತೋರುವಲ್ಲಿ ಯಶಸ್ವಿಯಾಗಿದ್ದಾರೆ.

ಇಂದಿನ ಯಕ್ಷಗಾನ ವ್ಯವಸಾಯೀ ರಂಗ ಪಡೆದುಕೊಳ್ಳುತ್ತಿರುವ ಬದಲಾವಣೆಯ ಬಗ್ಗೆ ಗಾಬರಿ ವ್ಯಕ್ತಪಡಿಸುತ್ತಿರುವ ರಾವ್ ಅವರು ರಂಗದಲ್ಲಿ ಕಾಣಿಸುತ್ತಿರುವ ಅತಿಗಳನ್ನು ವಿರೋಧಿಸುತ್ತಾರೆ. "ಹಿಂದೆ ಹರಿದಾಸರುಗಳ ಪ್ರವೇಶದಿಂದ ಈ ಕಲೆಗೊಂದು ಆಯಾಮ ದೊರೆಯಿತು. ಅವರು ಯಕ್ಷಗಾನ ಸಾಹಿತ್ಯದ ಮಹತ್ವವನ್ನು ಮನವರಿಕೆ ಮಾಡಿಕೊಟ್ಟರು. ಇದು ಆ ಕಾಲಕ್ಕೆ ಅಗತ್ಯವೂ, ಒಳ್ಳೆಯದೂ ಆಯಿತು. ಆದರೆ ಇಂದು ಮಾತೆಂದರೆ ಹಾಸ್ಯವೇ ಎಂಬಂತಾಗಿದೆ. ಇದರಿಂದಾಗಿಯೇ ಇವತ್ತಿನ ಅಸಂಬದ್ಧ ಮಾತುಗಾರಿಕೆ ದೋಷವಾಗುತ್ತದೆ. ಯಾವ ಬದಲಾವಣೆ ಬಂದರೂ ಒಳಿತಿಗೆ ಮುಖ ಮಾಡಬೇಕೇ ಹೊರತು ಜಾರುದಾರಿಗೆ ಅಲ್ಲ. ಪ್ರೇಕ್ಷಕರ ಅಭಿರುಚಿಯನ್ನು ಉತ್ತಮ ಪಡಿಸುವುದು ಯಕ್ಷಗಾನ ಕಲಾವಿದರ ಕರ್ತವ್ಯವಾಗಿದೆ" ಎಂಬುದೇ ಇವರ ನಿಲುವು.

ಬಯಲಾಟ ಸಂಪ್ರದಾಯದಿಂದ ಯಕ್ಷಗಾನವು ಟೆಂಟ್ ರೂಪಕ್ಕೆ ತಿರುಗಿದ್ದರಿಂದ ಕಲಾವಿದರ ಸುಖ ಸೌಕರ್ಯ ಹೆಚ್ಚಿದೆ ಎಂಬ ಶ್ರೀ ಕೋಳ್ಯೂರರು ಈ ಕಲಾ ಪ್ರಕಾರದಲ್ಲಿ ಹೊಸತನಕ್ಕಾಗಿಯೇ ವೇಷಭೂಷಣ, ಕುಣಿತ, ಮಾತುಗಾರಿಕೆಗಳಲ್ಲಿ ಸಲ್ಲದ ಅಂಶಗಳನ್ನು ವಿರೋಧಿಸುತ್ತಾರೆ, ಹಿಂದಿನ ಬಯಲಾಟ ಸಂಪ್ರದಾಯಗಳಲ್ಲಿ ಪ್ರಸಂಗ ಪ್ರದರ್ಶನದಲ್ಲಿ ವೈವಿಧ್ಯವಿದ್ದು ಕಲಾವಿದರು ಬೆಳೆಯಲು ಅವಕಾಶವಿರುತ್ತಿತ್ತು. ತಿರುಗಾಟದ ನೂರೆಂಬತ್ತು ಆಟಗಳು ಒಂದಕ್ಕಿಂತ ಇನ್ನೊಂದು ಭಿನ್ನವಾಗಿರುತ್ತಿದ್ದವು. ಇದರಿಂದ ಕಲಾವಿದನ ಅನುಭವ ಕ್ಷಿತಿಜ ವಿಸ್ತಾರಗೊಳ್ಳುತ್ತಿತ್ತು. ಅಲ್ಲದೆ ಹಿರಿಯ ಕಲಾವಿದರಿಂದ, ಪ್ರಜ್ಞಾವಂತ

ಪ್ರೇಕ್ಷಕರಿಂದ ಮಾರ್ಗದರ್ಶನ ಪಡೆಯಲು ಅವಕಾಶ ಇರುತ್ತಿತ್ತು. ಆದರೆ ಇಂದಿನ ಟೆಂಟ್ ಮೇಳಗಳು ಹೆಚ್ಚಾಗಿ ಒಂದೋ ಎರಡೋ ಪ್ರಸಂಗಗಳನ್ನೇ ಆಡುತ್ತಿರುವುದರಿಂದ ಪ್ರದರ್ಶನಗಳಲ್ಲಿ ವೈವಿಧ್ಯವೇ ಇಲ್ಲವಾಗಿದೆ. ಇದರಿಂದಾಗಿ ಇಂದು ಮಾಡಿದ್ದನ್ನೇ ನಾಳೆಯೂ ಹೇಳುವುದು ಎಂಬಂತಾಗಿದೆ. ಇದರಿಂದ ಹೊಸ ಕಲಾವಿದರಿಗೆ ಅನುಭವ ದೊರೆಯುವುದಿಲ್ಲ. ಅಲ್ಲದೆ ಸ್ವಂತದ್ದನ್ನು ಕೃಷಿ ಮಾಡಲು ಅವಕಾಶ ಇರುವುದಿಲ್ಲ. ಹಿಂದೆಲ್ಲಾ ಒಬ್ಬ ಎಳೆಯ ಕಲಾವಿದ ಮೇಳ ಸೇರಿದರೆ ಕೋಡಂಗಿಯಾಗಿ, ಬಾಲಗೋಪಾಲನಾಗಿ ಸ್ತ್ರೀ ವೇಷ, ಪುಂಡು ವೇಷಧಾರಿಯಾಗಿ ಮಾಡಿ ಮುಂದುವರಿಯುವ ಪರಿಪಾಠವಿತ್ತು. ಇವತ್ತು ಸಭಾಲಕ್ಷಣ ಭಾಗವೇ ಕಡಿಮೆಯಾಗಿರುವುದರಿಂದ ಕಲಾವಿದರಿಗೆ ದೊರೆಯುತ್ತಿದ್ದ ಶಿಕ್ಷಣ ಸೌಕರ್ಯ ಇಲ್ಲವಾದಂತಾಗಿದೆ. ಈ ಕಾರಣದಿಂದಾಗಿಯೇ ಹೊಸ ಕಲಾವಿದರು ಕೇವಲ ಅನುಕರಣಾ ಚತುರರೇ ಹೊರತು ಹೊಸತನ್ನು ಸೃಷ್ಟಿಸಲು ಸಾಧ್ಯವಿಲ್ಲದವರಾಗಿದ್ದಾರೆ" ಎಂಬುದು ಶ್ರೀ ರಾಮಚಂದ್ರ ರಾವ್ ಅವರ ಅಭಿಪ್ರಾಯವಾಗಿದೆ.

"ಆಧುನಿಕ ಪ್ರಸಂಗಗಳಿಂದ ಮತ್ತು ತುಳು ಪ್ರಸಂಗಗಳಿಂದ ಯಕ್ಷಗಾನದ ಕಲಾಸಂಪತ್ತು ಕಡಿಮೆಯಾಗಿದೆ. ಪೌರಾಣಿಕ ಪ್ರಪಂಚದಿಂದ ದೂರ ಉಳಿಯುವ ಈ ಬಗೆಯ ಪ್ರಸಂಗಗಳು ರಂಜನೆಯನ್ನೇನೋ ನೀಡಬಹುದು. ಆದರೆ ಈ ಕಲೆಯ ಶಾಶ್ವತ ಸಂಪತ್ತಾದ ವೇಷಗಾರಿಕೆ, ಬಣ್ಣಗಾರಿಕೆ, ಕುಣಿತ ಮುಂತಾದವೆಲ್ಲಾ ನಶಿಸಲು ಕಾರಣವಾಗಿದೆ. ಭಾಷೆಯ ಕಾರಣದಿಂದ ತುಳುವಿನಲ್ಲಿ ಯಕ್ಷಗಾನ ಆಡಬಾರದೆಂದೇನೂ ಅಲ್ಲ. ಆದರೆ ಸಾಮಾನ್ಯರು ಆಡುವ ಮಾತೆ ರಂಗದಲ್ಲಿ ಮೂಡಿದಾಗ ಯಕ್ಷಗಾನದ ಗಾಂಭೀರ್ಯ ಹಾಳಾಗುತ್ತದೆ. ಈ ಕಾರಣ ತುಳು ಪ್ರದರ್ಶನಗಳ ಪರಿಷ್ಕರಣ ಅಗತ್ಯ. ಕನ್ನಡ ಆಧುನಿಕ ಪ್ರಸಂಗಗಳೂ ಕೂಡ ಪೌರಾಣಿಕ ಹಿನ್ನೆಲೆಯಲ್ಲೇ ಬರುವಂತೆ ನೋಡಿಕೊಳ್ಳಬೇಕಾಗಿದೆ. ರಂಗದ ಇಂದಿನ ಎಲ್ಲ ಅವ್ಯವಸ್ಥೆಗಳನ್ನು ಹೋಗಲಾಡಿಸಲು ನಿರ್ದೇಶಕನೊಬ್ಬ ಅಗತ್ಯ". ಇದು ಶ್ರೀ ಕೋಳ್ಯೂರರವರ ನಿಲುವಾಗಿದೆ.

ಯಕ್ಷಗಾನದ ಸುಧಾರಣೆಯ ಬಗ್ಗೆ ಶ್ರೀ ಕೋಳ್ಯೂರರಲ್ಲಿ ಕೆಲವು ಸ್ಪಷ್ಟ ಖಚಿತ ಯೋಜನೆಗಳಿವೆ – "ಸರಕಾರಕ್ಕೆ ಈ ಕಲೆಯ ಸುಧಾರಣೆಯ ಬಗ್ಗೆ ಪ್ರಾಮಾಣಿಕ ಕಾಳಜಿ ಇದ್ದರೆ ಕೆಲವೊಂದು ನಿಯಂತ್ರಣಗಳನ್ನು ತರಬೇಕು. ನೆರೆ ರಾಜ್ಯದ ಕಥಕಳಿಯಲ್ಲಿ ಇರುವಂತೆ ಇಲ್ಲೂ ಸರ್ಟಿಫಿಕೇಟುಗಳನ್ನು ಕಲಾವಿದರಿಗೆ ನೀಡುವ ಪದ್ಧತಿ ಬರಬೇಕು. ಈ ಕಲೆಯ ನಾಲ್ಕೂ ಅಂಗಗಳಲ್ಲಿ ಅನುಭವ ಗಳಿಸಿದ ನಂತರವೇ ರಂಗ ಪ್ರವೇಶಕ್ಕೆ ಅನುಮತಿ ನೀಡಬೇಕು. ಅಲ್ಲದೆ ಈ ಕಲೆಯ ಒಳ್ಳೆಯ ಅಂಶಗಳನ್ನು ಉಳಿಸುವ, ರೂಢಿಸುವ ಕಾರಣಕ್ಕಾಗಿ ಅನುಭವಿಗಳ ಮಂಡಳಿಯೊಂದನ್ನು ರಚಿಸಿ ಅವರ ಮಾರ್ಗದರ್ಶನದಲ್ಲಿ ಕಲಾ ವ್ಯವಸಾಯ ಸಾಗಬೇಕು. ಮೇಳಗಳ ಮೇಲೂ ಬಿಗಿ

ನಿಯಂತ್ರಣ ವಿದ್ದು ವ್ಯಾಪಾರೀ ದೃಷ್ಟಿಗಿಂತ ಕಲಾದೃಷ್ಟಿ ಪ್ರಧಾನವಾಗಬೇಕು. ಆರಂಭದ ದಿನಗಳಲ್ಲಿ ಇವುಗಳೆಲ್ಲಾ ಹಸ್ತಕ್ಷೇಪ ಎನಿಸಿದರೂ ದೂರ ದೃಷ್ಟಿಯಿಂದ ಇವು ಅಗತ್ಯ. ಮೇಳಗಳ ಪ್ರದರ್ಶನಕ್ಕೆ ನಿರ್ದೇಶಕನೊಬ್ಬನಿದ್ದು ಎಲ್ಲಾ ಕಲಾವಿದರು ಆತನ ಮಾರ್ಗದರ್ಶನಕ್ಕೆ ಒಳಪಡಬೇಕು. ಹಿಂದೆಲ್ಲಾ ಸಮರ್ಥ ಭಾಗವತರು ರಂಗವನ್ನು ನಿರ್ದೇಶಿಸುತ್ತಿದ್ದುದನ್ನು ನೆನೆಯಬಹುದು. ಇಂದು ಭಾಗವತರಿಗೆ ಆ ಸ್ಥಾನ ಇಲ್ಲವಾದ್ದರಿಂದಲೇ ಹೊಂದಾಣಿಕೆ ತಪ್ಪಿ ಹೋಗಿದೆ. ಈ ಕಾರಣ ಒಬ್ಬ ಹಿರಿಯ ಕಲಾವಿದ ಇಲ್ಲವೇ ಹಿರಿಯ ಭಾಗವತ ಕಲಾವಿದರನ್ನು ಕೊಂಡೊಯ್ಯುವ ಶಕ್ತಿಯನ್ನು ಗಳಿಸಿ ರಸಸ್ಥಾಯಿಯನ್ನು ಗುರುತಿಸಿ, ಪ್ರದರ್ಶನ ಯಶಸ್ವಿಯಾಗಿ ಪ್ರಕಟಿಸಲು ಬದ್ಧನಾಗಬೇಕು. ಇದರಿಂದ ಎಲ್ಲರೂ ಈ ರಂಗದಲ್ಲಿ ಸಮರ್ಪಕವಾಗಿ ಕೃಷಿ ಮಾಡಲು ಸಾಧ್ಯವಾಗುತ್ತದೆ." ಹೀಗೆ ಮಾತನಾಡುವ ಶ್ರೀ ಕೋಳ್ಯೂರರ ಮಾತುಗಳಲ್ಲಿ ಅನುಭವದ ಪ್ರೇರಣೆ ಇದೆ.

ಇವತ್ತಿನ ಪ್ರೇಕ್ಷಕರ ಅಭಿರುಚಿ ಬದಲಾಗಬೇಕೆನ್ನುವ ಶ್ರೀ ರಾಮಚಂದ್ರ ರಾವ್ ಅವರು ಕುರುಡು ಅಭಿಮಾನಕ್ಕಿಂತ ಉತ್ತಮ ಕಲಾ ದೃಷ್ಟಿಯನ್ನು ಬೆಳೆಸಿಕೊಳ್ಳುವ ಪರಿಪಾಠಕ್ಕೆ ಆದ್ಯತೆ ನೀಡುತ್ತಾರೆ. "ಕಲಾವಿದರ ಸಂಘಟನೆ ಈ ರಂಗದಲ್ಲಿ ಆಗಬೇಕಾದ ಕಾರ್ಯ. ಇದರಿಂದ ಪೈಪೋಟಿ ತಪ್ಪಿ ಪರಿಸ್ಥಿತಿ ಉತ್ತಮಗೊಳ್ಳುತ್ತದೆ. ಆದರೆ ಮೇಳ ಯಜಮಾನರುಗಳು ಇದಕ್ಕೆ ಅವಕಾಶ ಕೊಡಬಲ್ಲರೇ ಎಂಬುದೇ ಪ್ರಶ್ನೆಯಾಗಿದೆ" ಎನ್ನುವ ಶ್ರೀಯುತರಿಗೆ ಇಂದಿನ ಹವ್ಯಾಸಿ ಕಲಾವಿದರಲ್ಲಿ ಅಂತಹ ಭರವಸೆ ಏನೂ ಇಲ್ಲ. "ಹವ್ಯಾಸಿಗಳು ಕಲಾವಿದರಾಗಿ ತಯಾರಾಗಿಯೇ ಇಲ್ಲ. ಒಂದೆರಡು ವೇಷ ಮಾಡಿದ ಮಾತ್ರಕ್ಕೆ ಆತ ತಾನೊಬ್ಬ ಕಲಾವಿದ ಎಂಬ ರೀತಿಯಿಂದ ವರ್ತಿಸುವುದು ತಪ್ಪು. ಈ ಕಲೆಯ ಒಳ ಹೊರಗನ್ನು ಅರಿತು ಕಲೆ ಕೆಡದಂತೆ ನೋಡಿಕೊಳ್ಳಬೇಕಾಗಿದೆ. ಶ್ರಮದಾಯಕ ಕಲೆಯಾದ ಯಕ್ಷಗಾನವನ್ನು ಹವ್ಯಾಸಿಗಳು ಬಹು ಸರಳವೆಂದು ತೀರ್ಮಾನಿಸಿರುವುದೇ ನನ್ನ ಈ ಮಾತುಗಳಿಗೆ ಕಾರಣ" ಎಂದು ಹೇಳುವ ಶ್ರೀ ಕೋಳ್ಯೂರರು ಹವ್ಯಾಸಿ ಸಂಸ್ಥೆಗಳ ಅಸ್ತಿತ್ವದ ಬಗ್ಗೆ ಮಾತ್ರ ವಿರೋಧ ವ್ಯಕ್ತಪಡಿಸುವುದಿಲ್ಲ. ಏಕೆಂದರೆ ಕಲಾ ಪ್ರಕಾರದ ಅಭಿರುಚಿಯನ್ನು ವಿಸ್ತರಿಸುವಲ್ಲಿ ಅವರು ಅಗತ್ಯ ಎನ್ನುತ್ತಾರೆ.

ಇಂದಿನ ಸರಕಾರ, ಅಕಾಡೆಮಿಗಳು ಮಾಡುತ್ತಿರುವ ಕಾರ್ಯಗಳ ಬಗ್ಗೆ ಶ್ರೀ ರಾಮಚಂದ್ರ ರಾವ್' ಅವರಿಗೆ ಅಸಮಾಧಾನ ಇದೆ. "ಸರಕಾರದ ಕೆಲವು ಉದ್ದೇಶ ಒಳ್ಳೆಯದಾದರು ನಡೆಯುತ್ತಿರುವ ದಾರಿ ಸರಿಯಾಗಿಲ್ಲ. ಇದರಿಂದಾಗಿಯೇ ಮಾಸಾಶನ, ಪ್ರಶಸ್ತಿಗಳು ಸರಿಯಾದ ರೀತಿಯಲ್ಲಿ ವಿನಿಯೋಗವಾಗುತ್ತಿಲ್ಲ. ಕಲಾದೃಷ್ಟಿಗಿಂತ ಹೆಚ್ಚಾಗಿ ರಾಜಕೀಯ ದೃಷ್ಟಿ ಅಲ್ಲಿ ಪ್ರಧಾನ. ನಿಜವಾದ ಕಲಾವಿದರು ಯಾರು ಎಂದು ಹುಡುಕುವ ಶ್ರಮ ತೆಗೆದುಕೊಳ್ಳಬೇಕು." ಹೀಗೆ ಅಭಿಪ್ರಾಯಿಸುವ ಇವರು ಕಲಾ ಕೇಂದ್ರದ ಶಿಕ್ಷಣ ವ್ಯವಸ್ಥೆಯ

ಬಗ್ಗೂ ತಮ್ಮದೇ ಆದ ವಿಚಾರ ಧಾರೆಯನ್ನಿರಿಸಿಕೊಂಡಿದ್ದಾರೆ – "ಕಲಾ ಕೇಂದ್ರಗಳ ಶಿಕ್ಷಣ ಕಾಲಾವಧಿ ಹೆಚ್ಚಿಸಬೇಕು. ಸಂಪೂರ್ಣ ತರಬೇತಾದನಂತರವೇ ಸರ್ಟಿಫಿಕೇಟು ನೀಡಬೇಕು. ರಂಗದ ಅನುಭವವನ್ನು ಕಲಿಕೆಯ ಕಾಲದಲ್ಲೇ ನೀಡಬೇಕು. ಯಾವ ಅಂಗದಲ್ಲಿ ನುರಿತಿದ್ದಾರೋ ಆ ಅಂಗದಲ್ಲೇ ಮುಂದುವರಿಯುವ ಅವಕಾಶ ನೀಡಬೇಕು. ಎರಡು ತಿಟ್ಟುಗಳ ಕಲಸು ಮೆಲೋಗರವಾಗದಂತೆ ನೋಡಿಕೊಳ್ಳಬೇಕು."

ಸ್ತ್ರೀಯರು ಯಕ್ಷಗಾನ ಪ್ರದರ್ಶನದಲ್ಲಿ ಸ್ತ್ರೀ ಪಾತ್ರವನ್ನು ವಹಿಸುವುದು ಸಾಧ್ಯವಿಲ್ಲ ಎಂಬುದೇ ಶ್ರೀ ಕೋಳ್ಯೂರರ ಅಭಿಮತ. ಪಾರಂಪರಿಕ ರಂಗಭೂಮಿಯಲ್ಲಿ ಇದು ಆಭಾಸಕ್ಕೆ ಕಾರಣವಾದೀತೆ ಹೊರತು ಮತ್ತೇನೂ ಉಪಯೋಗವಾಗಲಾರದು ಎನ್ನುತ್ತಾರೆ – "ಸ್ತ್ರೀಯರ ಸ್ತ್ರೀ ವೇಷದಿಂದ ಎದುರು ಕಲಾವಿದನಿಗೆ ಇರಿಸು ಮುರಿಸಾಗುತ್ತದೆ. ಇಷ್ಟು ಸಲೀಸಾಗಿ ಮನಬಿಚ್ಚಿ ಮಾತನಾಡಲು ಸಾಧ್ಯವಾಗುವುದಿಲ್ಲ. ಅಲ್ಲದೆ ವೀರರಸ ಪ್ರಧಾನವಾಗಿರುವ ಈ ರಂಗದಲ್ಲಿ ಹೆಂಗಸಿಗೆ ಪಾತ್ರವಹಿಸುವುದು ಕಷ್ಟ" ಎನ್ನುವ ಇವರು ಮುಂದೆ ಸ್ತ್ರೀಯರೇ ಸ್ತ್ರೀ ಪಾತ್ರ ವಹಿಸುವ ದಿನಗಳು ಬರುವ ಸಾಧ್ಯತೆಯನ್ನೇ ತಳ್ಳಿ ಹಾಕುತ್ತಾರೆ.

ಸ್ತ್ರೀ ಪಾತ್ರಧಾರಿಯಾದವನಿಗೆ ಉತ್ತಮ ಕಂಠ, ಒಳ್ಳೆಯ ರೂಪ, ಲಾಸ್ಯಮಯ ನಾಟ್ಯಗಾರಿಕೆ, ಬೆಡಗು ಬಿನ್ನಾಣವನ್ನು ಸಾಕ್ಷಾತ್ಕರಿಸಬಲ್ಲ ಶಕ್ತಿ ಇರಬೇಕಾಗುತ್ತದೆ. ಶ್ರಮಪೂರ್ಣ ಅಭ್ಯಾಸದಿಂದ ಮಾತ್ರ ಇಲ್ಲಿ ಯಶಸ್ಸು ಗಳಿಸಲು ಸಾಧ್ಯ ಎನ್ನುವ ಶ್ರೀ ಕೋಳ್ಯೂರರು ಸಾಕಷ್ಟು ಜನ ಸ್ತ್ರೀ ಪಾತ್ರ ವಹಿಸುತ್ತಿದ್ದರೂ ಯಶಸ್ವಿಯಾಗುವವರು ಬಹು ವಿರಳ ಎನ್ನುತ್ತಾರೆ. ಕಳೆದ ಹತ್ತು ಹನ್ನೆರಡು ವರ್ಷಗಳಿಂದ ತಾಳಮದ್ದಲೆ ಪ್ರಕಾರದಲ್ಲೂ ಸಕ್ರಿಯವಾಗಿ ಭಾಗವಹಿಸುತ್ತಿದ್ದು ಅಲ್ಲೂ ತಮ್ಮ ಉತ್ತಮ ಮಾತುಗಾರಿಕೆಯಿಂದ ಶ್ರೋತೃಗಳಿಗೆ ಬೇಕಾದವರಾಗಿದ್ದಾರೆ.

ಇಂದಿನ ಕಲಾವಿದರು ಶ್ರಮಕ್ಕೆ, ಅಭ್ಯಾಸಕ್ಕೆ ಹೆಚ್ಚಿನ ಬೆಲೆಯನ್ನು ಕೊಟ್ಟಾಗ ಮಾತ್ರ ಈ ಕಲೆ ಉಳಿದೀತು ಎಂಬುದು ಇವರ ಅಭಿಪ್ರಾಯ. ಅದಕ್ಕಾಗಿ ಇಂದಿನ ತರುಣ ಕಲಾವಿದರಲ್ಲಿ ಹೆಚ್ಚಿನ ಶ್ರದ್ಧೆ ಆಸಕ್ತಿಗೆ ಕರೆ ನೀಡುತ್ತಾರೆ. ಈ ರಂಗದಲ್ಲಿ ಆಸಕ್ತರಾಗಿರುವ ಎಲ್ಲರೂ ಕಲೆಯ ಸುಧಾರಣೆಗೆ ಚಿಂತನೆಯನ್ನು ನಡೆಸಬೇಕು, ಸರಕಾರ ಅಕಾಡೆಮಿಗಳು ಸೂಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂಬುದೇ ಇವರ ನಿಲುವಾಗಿದೆ. ಇಂದು ಉಳಿದಿರುವ ಬಹು ವಿರಳ ಶ್ರೇಷ್ಠ ಸ್ತ್ರೀ ಪಾತ್ರಧಾರಿಗಳಲ್ಲಿ ಇವರು ಮುಖ್ಯರಾದ್ದರಿಂದ ಇವರ ಚಿಂತನೆಗೆ, ನಿಲುವುಗಳಿಗೆ ಹೆಚ್ಚಿನ ಬೆಲೆ ಇದೆ. ಕುರಿಯ ವಿಠಲ ಶಾಸ್ತ್ರಿಗಳ ಕನಸುಗಾರಿಕೆಯ ಫಲಗಳಂತಿರುವ ಶ್ರೀಯುತರ ಕಲೆಗಾರಿಕೆ ಯಕ್ಷಗಾನ ರಂಗದಲ್ಲಿ ಅಪ್ರತಿಮ ಮೋಡಿಯನ್ನು ಮಾಡಿದೆ. ಅಂತಹ ಸಂಪ್ರದಾಯ ಮುಂದುವರಿಯಬೇಕಾಗಿದೆ. ■

ಮನಮೋಹಕ ಸ್ತ್ರೀ ಪಾತ್ರಧಾರಿ

ಕೋಟ ವೈಕುಂಠ

ಯಕ್ಷಗಾನವನ್ನು ಗಂಡು ಕಲೆ ಎಂದು ಶಾಂತ ಕವಿಗಳು (ಬಾಳಚಾರ್ಯ ಸಕ್ಕರಿ) ಕರೆದಿದ್ದಾರೆ. ಇಲ್ಲಿನ ಕುಣಿತ, ಗತ್ತು, ನಡೆನುಡಿ, ಹಾವಭಾವಗಳಲ್ಲೆಲ್ಲಾ ವೀರರಸವೇ ಪ್ರಧಾನ. ಕಿವಿಗಡಚಿಕ್ಕುವ ಚಂಡೆಯ ಬಡಿತ, ವೇಷಗಾರರ ಅಬ್ಬರ, ಇವುಗಳೆಲ್ಲಾ ಪ್ರೇಕ್ಷಕರನ್ನು ಬಡಿದೆಬ್ಬಿಸುತ್ತವೆ. ಇಲ್ಲಿ ಬರುವ ಸ್ತ್ರೀ ಪಾತ್ರಗಳಲ್ಲೂ ಹೆಚ್ಚಿನವು ಪರಾಕ್ರಮವನ್ನು ತೋರುವವವೇ. ಈ ಎಲ್ಲಾ ದೃಷ್ಟಿಯಿಂದ ಇದು ಗಂಡು ಕಲೆ. ಈಚಿನ ದಶಕಗಳವರೆಗೆ ಸ್ತ್ರೀಯರು ಯಕ್ಷಗಾನದಲ್ಲಿ ಭಾಗವಹಿಸುತ್ತಲೇ ಇದ್ದಿರಲಿಲ್ಲ. ಇಂದಿಗೂ ವ್ಯವಸಾಯೀ ರಂಗಭೂಮಿಯಲ್ಲಿ ಸ್ತ್ರೀ ಪಾತ್ರಗಳನ್ನು ನಿರ್ವಹಿಸುತ್ತಿರುವವರು ಪುರುಷರೇ. ಪುರುಷ ಪ್ರಧಾನ ಯಕ್ಷಗಾನದಲ್ಲಿ ಸ್ತ್ರೀಯರು ಪಾತ್ರಧಾರಿಯಾಗಿ ಕಾಣಿಸಿಕೊಳ್ಳುತ್ತಿರುವುದು ಹವ್ಯಾಸೀ ರಂಗಕ್ಕಷ್ಟೇ ಸೀಮಿತವಾಗಿದೆ. ವೃತ್ತಿರಂಗಭೂಮಿಯ ಕೆಲವು ವೇಷಧಾರಿಗಳು ತಮ್ಮ ಅಭಿವ್ಯಕ್ತಿ ಸಾಮರ್ಥ್ಯದಿಂದ ಜನಮನವನ್ನು ಸೂರೆಗೊಂಡಿದ್ದಾರೆ. ಅಂತಹ ಕೆಲವೇ ಸ್ತ್ರೀ ಪಾತ್ರಧಾರಿಗಳಲ್ಲಿ ಕೋಟ ವೈಕುಂಠರು ಒಬ್ಬರು. ವ್ಯವಸಾಯೀ ರಂಗಭೂಮಿಯಲ್ಲಿ ತಮ್ಮ ಅದ್ವಿತೀಯ ಅಭಿನಯ ಸಾಮರ್ಥ್ಯದಿಂದ ಕಳೆದ ಇಪ್ಪತ್ತೈದು ವರ್ಷಗಳಿಂದ ಜನಾನುರಾಗಿಗಳಾಗಿದ್ದಾರೆ.

ನಲವತ್ತೈದು ವರ್ಷ ವಯಸ್ಸಿನ (1940) ಕೋಟ ವೈಕುಂಠರ ತಂದೆ ಬಸವ ಮರಕಾಲ, ತಾಯಿ ಕಾವೇರಿ. ಇವರು ಕೋಟಗಿಳಿಯಾರು ಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮಾಡಿದವರು. ಕೋಟ ಹೈಸ್ಕೂಲಿನಲ್ಲಿ ಮೂರನೆಯ ಫಾರ್ಮ ವರೆಗೆ ಓದಿದ ಅವರು ಆಟದ ಹುಚ್ಚಿನಿಂದಾಗಿ ಮೇಳ ಸೇರಿಕೊಂಡರು. ಆ ಕಾಲದಲ್ಲಿ ಮಂದರ್ತಿ, ಅಮೃತೇಶ್ವರಿ ಮೇಳಗಳೆಲ್ಲಾ ಉತ್ತಮ ಬಯಲಾಟವನ್ನು ಪ್ರದರ್ಶಿಸಿ ಜನಾನುರಾಗಿಗಳಾಗಿದ್ದವು. ಒಂದು ದೃಷ್ಟಿಯಿಂದ ಅದು ಬಡಗು ತಿಟ್ಟಿನ ಉಚ್ಛ್ರಾಯ ಕಾಲ. ಅಮೃತೇಶ್ವರಿ ಮೇಳವನ್ನು ಸೇರಿಕೊಂಡ ಶ್ರೀ ವೈಕುಂಠರು ಸ್ವಲ್ಪ ಕಾಲದಲ್ಲೇ ತಮ್ಮ ಸಾಮರ್ಥ್ಯವನ್ನು ವ್ಯಕ್ತಪಡಿಸಿದರು. ಮೊದಲಿಗೆ ಕೋಡಂಗಿಯಾಗಿ ನಂತರ ಬಾಲಗೋಪಾಲರಾಗಿ, ಮುಂದೆ ಪುಂಡು ವೇಷ, ಸ್ತ್ರೀ ವೇಷಗಳಲ್ಲಿ ಪಾತ್ರ ನಿರ್ವಹಿಸುತ್ತಾ ಬಂದರು. ಉತ್ತಮ ರೂಪ, ಹಾಗೇ ಕಂಠ ಮಾಧುರ್ಯವುಳ್ಳ ಇವರಿಗೆ ಸ್ತ್ರೀ ಪಾತ್ರ ನಿರ್ವಹಿಸುವಲ್ಲೇ ಉತ್ತಮ ಭವಿಷ್ಯ ಇದೆ ಎಂಬುದು ಅಂದಿನ ಹಿರಿಯ ಕಲಾವಿದರ ಅಭಿಪ್ರಾಯವಾಯಿತು. ಜನತೆಯೂ ಸ್ತ್ರೀ ಪಾತ್ರಗಳಲ್ಲೇ ಇವರನ್ನು ಹೆಚ್ಚು ಮೆಚ್ಚಿಕೊಂಡರು. ಇಂದು ಯಕ್ಷಗಾನ ರಂಗದಲ್ಲೇ ಶ್ರೇಷ್ಠ ಸ್ತ್ರೀ ಪಾತ್ರಧಾರಿ ಎಂಬ ಖ್ಯಾತಿಯನ್ನು ಕೋಟ ವೈಕುಂಠ ಗಳಿಸಿದ್ದಾರೆ.

ವೈಕುಂಠರಿಗೆ ಬಡಗು ತೆಂಕು ತಿಟ್ಟುಗಳೆರಡರಲ್ಲೂ ಅನುಭವವಿದೆ. ಇವರ ಮೊದಲ ಗುರುಗಳು ಮದ್ದಲೆಗಾರ ಮಹಾಬಲ ಕಾರಂತರು. ಹಳ್ಳಾಡಿ ಶೀನ, ಶಿರಿಯಾರ ಮಂಜು ನಾಯಕ, ತೆಕ್ಕಟ್ಟೆ ಆನಂದ ಮಾಸ್ತರ ಇವರುಗಳೆಲ್ಲಾ ಬೇರೆ ಬೇರೆ ಮೇಳಗಳಲ್ಲಿದ್ದಾಗ ಮಾರ್ಗದರ್ಶಕರಾಗಿದ್ದರು. ಶ್ರೀ ನಾರಾಯಣ ಉಪ್ಪೂರರು ಹಿಮ್ಮೇಳದಲ್ಲಿದ್ದು ಇವರನ್ನು ಸಾಕಷ್ಟು ತಿದ್ದಿದ್ದಾರೆ. ಬಡಗಿನ ಅಮೃತೇಶ್ವರಿ, ಮಂದರ್ತಿ, ಕೊಲ್ಲೂರು, ಮಾರಣಕಟ್ಟೆ, ಪೆರ್ಡೂರು ಮೇಳಗಳಲ್ಲಿ ಭಾಗವಹಿಸಿದ ಅನುಭವದೊಂದಿಗೆ ತೆಂಕಿನ ಧರ್ಮಸ್ಥಳ, ಸುರತ್ಕಲ್ ಮೇಳಗಳಲ್ಲೂ ಸ್ತ್ರೀ ಪಾತ್ರ ಮಾಡಿದ ಅನುಭವ ಇದೆ. ಕುರಿಯ ಶ್ರೀ ವಿಠಲ ಶಾಸ್ತ್ರಿಗಳ ಮಾರ್ಗದರ್ಶನ ಕೋಟ ವೈಕುಂಠರಿಗೆ ಲಭಿಸಿತ್ತು. ಇವೆಲ್ಲದರ ಫಲವಾಗಿ ತೆಂಕು ಬಡಗುಳೆರಡರಲ್ಲೂ 'ಸೈ' ಅನಿಸಿಕೊಂಡಿದ್ದಾರೆ. ಪ್ರಸ್ತುತ ಅಮೃತೇಶ್ವರೀ ಮೇಳದ ವ್ಯವಸ್ಥಾಪಕತ್ವದ ಜವಾಬ್ದಾರಿಯನ್ನು ವಹಿಸಿಕೊಂಡಿರುವ ಕೋಟ ವೈಕುಂಠರು ಯಕ್ಷಗಾನದ ನೃತ್ಯಭಾಗದಲ್ಲಿ ಪರಿಣತರು. 1959ರಲ್ಲಿ ತರುಣ ಕಲಾವಿದರಾಗಿ ದೆಹಲಿಗೆ ತೆರಳಿದ ಇವರು ತಮ್ಮ ಮೋಹಕ ನೃತ್ಯದಿಂದ ಜನಮನ ಸೆಳೆದರು. ಅಂದಿನ ಪ್ರಧಾನಿ ನೆಹರೂರವರ ಮುಂದೆ ಪ್ರದರ್ಶಿಸಿದ ಅಭಿಮನ್ಯು ಕಾಳಗದಲ್ಲಿ ಅಭಿಮನ್ಯುವಾಗಿ ಗಮನ ಸೆಳೆದು ಪದಕಗಳಿಸಿದ್ದಾರೆ. ಇವರ ವೇಷಗಾರಿಕೆಯು ಆಕರ್ಷಕವಾಗಿದ್ದು ಆ ಕಾಲದಲ್ಲೇ ಅನೇಕ ಗೋಡೆ ಕ್ಯಾಲಂಡರುಗಳಿಗೆ ಮಾದರಿಯಾಗಿದ್ದರು.

ಹಳೆಯ ಪ್ರಸಂಗಗಳಲ್ಲೇ ಹೆಚ್ಚಿನ ಒಲವನ್ನು ಹೊಂದಿರುವ ಕೋಟ ವೈಕುಂಠರು ಕರ್ಣಾರ್ಜುನ ಕಾಳಗ, ಕೃಷ್ಣಾರ್ಜುನ ಕಾಳಗ, ಪಟ್ಟಾಭಿಷೇಕ, ಅಭಿಮನ್ಯು ಕಾಳಗ, ರಾಮಾಂಜನೇಯ, ಮುಂತಾದ ಪ್ರಸಂಗಗಳನ್ನು ಹೆಚ್ಚು ಮೆಚ್ಚುತ್ತಾರೆ. ತಮಗೆ ಹಿರಿಯರಾಗಿದ್ದು ಮಾರ್ಗದರ್ಶನ ಮಾಡಿದ ಹಾರಾಡಿ ರಾಮಗಾಣಿಗ, ಹರಾಡಿ ಕೃಷ್ಣ ಗಾಣಿಗ, ಶಿರಿಯಾರ ಮಂಜು ನಾಯಕ, ಹಿರಿಯ ಸ್ತ್ರೀ ವೇಷಧಾರಿ ಹಾರಾಡಿ ನಾರಾಯಣ ಗಾಣಿಗ ಇವರ ಅಪೂರ್ವ ಕಲಾ ಸಾಮರ್ಥ್ಯವನ್ನು ಕೊಂಡಾಡುತ್ತಾರೆ. ಇವತ್ತಿನ ಕಲಾವಿದರಲ್ಲಿ ಕೆರೆಮನೆ ಮಹಾಬಲ ಹೆಗಡೆ, ಕೆರೆಮನೆ ಶಂಭು ಹೆಗಡೆ, ಜಲವಳ್ಳಿ ವೆಂಕಟೇಶ್ ರಾವ್, ಚಿಟ್ಟಾಣಿ ರಾಮಚಂದ್ರ ಹೆಗಡೆ, ಅಳಿಕೆ ರಾಮಯ್ಯೆ, ಗೋವಿಂದಭಟ್, ಪುತ್ತೂರು ನಾರಾಯಣ ಹೆಗಡೆ ಮುಂತಾದವರನ್ನು ಹೆಚ್ಚು ಮೆಚ್ಚುತ್ತಾರೆ. ಶೇಷಗಿರಿ ಭಾಗವತರು, ನಾರಾಯಣ ಉಪ್ಪೂರರು ತಮ್ಮನ್ನು ಸೊಗಸಾಗಿ ಕುಣಿಸುತ್ತಿದ್ದುದನ್ನು ಆಪ್ತತೆಯಿಂದ ನೆನೆಯುತ್ತಾರೆ. ಪಾತ್ರದ ಚಿತ್ರಣದಲ್ಲಿ ಶೀಲ ಸ್ವಭಾವಕ್ಕೆ ಹೆಚ್ಚಿನ ಬೆಲೆಯನ್ನು ಕೊಡುವ ಕೋಟ ವೈಕುಂಠರು ಸುಭದ್ರೆ, ಕೈಕೆ, ದ್ರೌಪದಿ, ಅಂಬೆ, ಪ್ರಭಾವತಿ, ಚಂದ್ರಾವಳಿ, ಮುಂತಾದ ಪಾತ್ರಗಳ ನಿರ್ವಹಣೆಯಲ್ಲಿ ಹೆಚ್ಚಿನ ತೃಪ್ತಿಯನ್ನು ಪಡೆದಿದ್ದಾರೆ, ಬಡಗಿನಲ್ಲಿ ಹೆಚ್ಚು ಜನಪ್ರಿಯವಾಗಿರುವ ಮಹಾಭಾರತ ಪ್ರಸಂಗಗಳು, ತೆಂಕಿನವರು ಹೆಚ್ಚಾಗಿ ಆಡುವ ರಾಮಾಯಣದ ಪ್ರಸಂಗಗಳು ಇವರಿಗೆ ಹೆಸರನ್ನು ತಂದುಕೊಟ್ಟವುಗಳಾಗಿವೆ. ಕೋಟ ವೈಕುಂಠರ ಕುಣಿತದ ಲಾಸ್ಯ, ಪಾತ್ರದ ಸೊಬಗು ಹೆಚ್ಚಿನ ಪ್ರೇಕ್ಷಕರನ್ನು ಸೆಳೆದಿವೆ. ಅವರ ಮೂವತ್ತು ವರ್ಷಕ್ಕೂ ಮಿಕ್ಕಿದ ಈ ರಂಗದ ಅನುಭವ ಅನೇಕ ವಿಚಾರಗಳನ್ನು ಪ್ರಶ್ನೆಗಳನ್ನು ನಮ್ಮ ಮುಂದೆ ಎತ್ತುವಂತಹದ್ದಾಗಿದೆ. ಅನೇಕ ಆಧುನಿಕ ಸಂಗತಿಗಳಿಂದ ಆಕರ್ಷಿತರಾಗಿರುವ ಇವರು ಯಕ್ಷಗಾನದ ಇಂದಿನ ವ್ಯವಸ್ಥೆಯ ಬಗ್ಗೆ ಆಡುವ ಮಾತುಗಳಲ್ಲಿ ಸತ್ಯಾಂಶಗಳು ಸಾಕಷ್ಟು ಇವೆ. ಭವಿಷ್ಯದ ರಂಗ ಬೆಳವಣಿಗೆಯ ದೃಷ್ಟಿಯಿಂದ ಅವರ ಮಾತುಗಳು ಮಹತ್ವಪೂರ್ಣ.

ಪ್ರ : ಬಯಲಾಟದ ಹಾಗೂ ಟೆಂಟ್ ಮೇಳಗಳೆರಡರಲ್ಲೂ ಅನುಭವ ಇರುವ ನಿಮಗೆ ಇವತ್ತಿನ ಬಯಲಾಟದ ವ್ಯವಸ್ಥಾಪಕತ್ವ ಹೇಗೆ ಅನಿಸುತ್ತದೆ?

ಉ : ಟೆಂಟ್ ಮೇಳದ ವ್ಯವಸ್ಥೆಯೇ ಉತ್ತಮ ಎನಿಸುತ್ತದೆ. ಬಯಲಾಟದಲ್ಲಿ ಮುಖ್ಯವಾಗಿ ಕಾಣುವುದು ಅನಿಶ್ಚಯತೆ. ಟೆಂಟಿನಲ್ಲಿ ಅದಿಲ್ಲ. ಅಲ್ಲಿ ಹೆಚ್ಚಿನ ಆಟಗಳು ಮೊದಲೇ ನಿಷ್ಕರ್ಷೆಯಾಗಿರುತ್ತವೆ. ಉಳಿದೆಡೆ ಕೂಡ ಅಭಿಮಾನಿ ಪ್ರೇಕ್ಷಕರಿಂದ ಅನುಕೂಲಕರ ಪ್ರತಿಕ್ರಿಯೆ ಇರುತ್ತದೆ. ಆದರೆ ಬಯಲಾಟಗಳಲ್ಲಿ ಯಾರ ಹರಕೆ ಇದೆ? ಎಂದು ಆಡಿಸುತ್ತಾರೆ? ಎಂದೆಲ್ಲಾ ಹುಡುಕುವುದೇ ಕಷ್ಟವಾಗುತ್ತದೆ ಅವರನ್ನೆಲ್ಲಾ ಹಿಡಿದು ಆಡಿಸುವುದು ಇಲ್ಲವೇ ಚಂದಾ ಎತ್ತಿ ಆಡಿಸುವುದು

ವ್ಯವಸ್ಥಾಪಕರಾದವರಿಗೆ ಸಾಕು ಬೇಕಾಗುತ್ತದೆ. ಟೆಂಟ್ ಮೇಳ ಬಂದ ನಂತರ ಯಕ್ಷಗಾನ ವ್ಯಾಪಾರೀ ಸರಕಾಗಿದೆ ನಿಜ. ಅಲ್ಲಿ ಮಾಲಿಕ ಲಕ್ಷಾಂತರ ರೂಪಾಯಿ ತೊಡಗಿಸಿ ಅದನ್ನು ಮರಳಿ ಪಡೆಯಲು ಏನೇನೋ ಕಸರತ್ತು ಮಾಡಬೇಕಾಗುತ್ತದೆ. ಟೆಂಟ್ ಮೇಳದಿಂದಾಗಿ ಸಂಪ್ರದಾಯ ಬಿಟ್ಟ ಬಗ್ಗೆ ಬೇಸರ ಇದೆ. ಆದರೆ ಇದಕ್ಕೆ ಕಲಾವಿದರು. ಪ್ರೇಕ್ಷಕರೂ ಕಾರಣರು. ಸಿನಿಮಾ, ನಾಟಕ ನೋಡಿದ ಮಂದಿಗೆ ಹಳೆಯ ಪ್ರಸಂಗಗಳು ಹಿಡಿಸುವುದಿಲ್ಲ. ಈ ಕಾಲಕ್ಕೆ ಬೇಕಾದಂತೆ ಕಲಾವಿದನು ಏನೇನೋ ಮಾಡುತ್ತಾನೆ.

ಪ್ರ : ಡಾ॥ ಶಿವರಾಮ ಕಾರಂತರ ಮಾರ್ಗದರ್ಶನದಲ್ಲಿ ತರಬೇತಾದ ನಿಮಗೆ ಅವರ ತರಬೇತಿ ಬಗ್ಗೆ ಏನನಿಸುತ್ತದೆ?

ಉ : ಕಾರಂತರ ನೃತ್ಯ ನಾಟಕದಲ್ಲಿ ಭಾಗವಹಿಸಿದ್ದರಿಂದ ಅಭಿನಯ ಪ್ರಜ್ಞೆ, ಕುಣಿತದಲ್ಲಿ ಭಾವವನ್ನು ಮಿಂಚಿಸಬೇಕಾದ ಬಗೆ, ರಾಗಗಳ ಪರಿಚಯ, ಸಮಯಕ್ಕೆ ಹೊಂದುವ ಮಾತುಗಾರಿಕೆ ಇವೇ ಮುಂತಾದ ಶಿಸ್ತುಗಳು ಲಭಿಸಿವೆ. ಆದರೆ ಒಂದು ಸಂಗತಿ ಎಂದರೆ ಅವರ ಮಾರ್ಗದರ್ಶನವನ್ನು ವ್ಯವಸಾಯೀ ರಂಗದಲ್ಲಿ ಸಂಪೂರ್ಣವಾಗಿ ರೂಢಿಸಿಕೊಳ್ಳುವುದು ಕಷ್ಟ. ವ್ಯವಸಾಯೀ ಮೇಳದಲ್ಲಿ ತಾಲೀಮಾಗಲಿ, ಪ್ರಸಂಗದ ಬಗ್ಗೆ ತರಬೇತಿಯಾಗಲಿ ಇಲ್ಲ. ಇಲ್ಲಿ ವೈಯಕ್ತಿಕವಾಗಿ ಗೊತ್ತಿದ್ದಷ್ಟನ್ನು ಖುಷಿಗೆ ಬಂದಂತೆ ಆಡುವುದು. "ಬೆಳಗು ಮಾಡುವುದೇ" ಉದ್ದೇಶವಾದ್ದರಿಂದ ಏನು ಮಾಡಿದರೂ ನಡೆಯುತ್ತದೆ ಎಂಬ ಭಾವವಿದೆ. ಕಾರಂತರ ತರಬೇತಿಯಿಂದ ವೈಯುಕ್ತಿಕವಾಗಿ ಲಾಭವಾಗಿದೆ. ಆದಷ್ಟು ಔಚಿತ್ಯಪೂರ್ಣವಾಗಿ, ಹಿಮ್ಮೇಳದ ಗುಂಗಿಗೆ ಅನುಸರಿಸಿ ಪ್ರಸಂಗಕಾರನ ಉದ್ದೇಶಕ್ಕೆ ಸರಿಯಾಗಿ ಪಾತ್ರ ನಿರ್ವಹಿಸುವ ಜವಾಬ್ದಾರಿ ಕಲಾವಿದನದ್ದು ಎಂಬುದನ್ನು ಅವರಿಂದ ತಿಳಿದುಕೊಂಡಿದ್ದೇನೆ.

ಪ್ರ : ಯಕ್ಷಗಾನ ಕಲಾವಿದನ ದೃಷ್ಟಿಯಿಂದ ಇವತ್ತಿನ ಪರಿಸ್ಥಿತಿ ಬಗ್ಗೆ ನಿಮ್ಮ ಅಭಿಪ್ರಾಯ ಏನು?

ಉ : ಮೊದಲಿಗೆ ಹೋಲಿಸಿದರೆ ಇಂದಿನ ಯಕ್ಷಗಾನ ಕಲಾವಿದನ ಸ್ಥಿತಿ ಚೆನ್ನಾಗಿದೆ. ಬಯಲಾಟದ ಮೇಳಗಳಲ್ಲಿದ್ದಾಗ ಆರ್ಥಿಕವಾಗಿ ಕಲಾವಿದ ಕಷ್ಟ ಪಡುತ್ತಿದ್ದ, ಆದರೆ ಈಗ ಸಂಪಾದನೆ ಚೆನ್ನಾಗಿದೆ. ಈ ಸ್ಥಿತಿಯಲ್ಲಿ ಕಲಾವಿದರು ಸಂಘವೊಂದನ್ನು ಕಟ್ಟಿಕೊಳ್ಳುವುದು ಉತ್ತಮ ಎನ್ನಿಸುತ್ತದೆ.

ಇದರಿಂದ ಅಶಕ್ತ ಕಲಾವಿದರಿಗೆ ಸಹಕರಿಸಬಹುದು. ತಮ್ಮ ತಮ್ಮೊಳಗೆ ಪರಸ್ಪರ ಕಷ್ಟಗಳಿಗೆ ಒಂದಾಗಬಹುದು. ಆದರೆ ಅಸೂಯೆ, ಮಾತ್ಸರ್ಯಗಳೇ ಹೆಚ್ಚಿರುವಾಗ ಇದು ಸಾಧ್ಯವೇ? ಎನ್ನುವುದು ಪ್ರಶ್ನೆ.

ಪ್ರ : ಇಂದಿನ ಪ್ರದರ್ಶನಗಳ ಕಲಾತ್ಮಕತೆ ಬಗ್ಗೆ ನಿಮ್ಮ ಅಭಿಪ್ರಾಯ ಏನು?

ಉ : ಕಲೆಯಿಂದ ಸಮಾಜಕ್ಕೆ ಉಪಯೋಗವಿದೆ. ಸಮಾಜವನ್ನು ತಿದ್ದುವಲ್ಲೇ ಕಲೆಯ ಮಹತ್ವ ಇರುವುದು. ಕಲೆ ಉಳಿಯಬೇಕಾದರೆ ಕಲಾವಿದನು ಉಳಿಯಬೇಕಾಗುತ್ತದೆ. ಆಗ ಒಳ್ಳೆಯ ಕಲಾವಿದ ಉಳಿದಾನು. ಅದರಿಂದ ಒಳ್ಳೆಯ ಕಲೆ, ಒಳ್ಳೆಯ ಸಮಾಜದ ನಿರ್ಮಾಣವಾಗಬಹುದು. ಇವತ್ತಿನ ಪ್ರದರ್ಶನಗಳನ್ನು ನೋಡಿದರೆ ಜನತೆ ಕಲಾವಿದನಿಂದ ಇಲ್ಲ ಸಲ್ಲದ್ದನ್ನು ಬಯಸುತ್ತಿದ್ದಾರೆ. ಈ ಕಲೆಯನ್ನು ವಿಮರ್ಶಿಸಿ ಮಾರ್ಗದರ್ಶಿಸಿ ಬೆಲೆಕಟ್ಟುವ ಶಕ್ತಿ ಸಂಸ್ಕಾರವಂತ ಜನತೆಗೆ ಬರಬೇಕು. ಅದರಿಂದ ಒಳ್ಳೆಯ ಪ್ರದರ್ಶನಗಳು ನಡೆದಾವು.

ಪ್ರ : ಸ್ತ್ರೀ ಪಾತ್ರಧಾರಿಗೆ ಯಕ್ಷಗಾನದಲ್ಲಿ ಇರುವ ಸ್ಥಾನಮಾನ ಯಾವುದು?

ಉ : ಯಕ್ಷಗಾನದಲ್ಲಿ ಸ್ತ್ರೀ ಪಾತ್ರವು ಪ್ರಧಾನವಾದದ್ದೇ. ಎರಡನೆಯ ವೇಷಕ್ಕೆ ಸರಿ ಸಮಾನವಾದ ಸ್ಥಾನ ಸ್ತ್ರೀ ಪಾತ್ರಕ್ಕೂ ಇದೆ. ಒಟ್ಟು ಪ್ರದರ್ಶನದ ಯಶಸ್ಸಿಗೆ ಉತ್ತಮ ಸ್ತ್ರೀ ಪಾತ್ರಬೇಕು. ಇನ್ನು ಸ್ತ್ರೀ ಪಾತ್ರಧಾರಿಗಳಾಗಿ ಹೆಸರು ಪಡೆಯುವುದು ಕಷ್ಟಕರವೇ. ಆತನಿಗೆ ದೈವದತ್ತವಾದ ಸ್ವರಸಂಪತ್ತು, ಹಾವಭಾವ ಲಾಸ್ಯಗಳಲ್ಲಿ ಮೂಡಬೇಕಾದ ನವಿರು, ಉತ್ತಮ ರೂಪು ಹಾಗು ಮೈಕಟ್ಟು ಇವೆಲ್ಲಾ ಸ್ತ್ರೀ ಪಾತ್ರಧಾರಿ ಪಡೆದುಕೊಂಡು ಬಂದಿರಬೇಕು. ಇಂತಹವರು ವಿರಳರಾದ್ದರಿಂದಲೇ ಯಶಸ್ವೀ ಸ್ತ್ರೀ ಪಾತ್ರಧಾರಿಗಳು ಬಹಳ ಕಡಿಮೆ.

ಪ್ರ : ಯಕ್ಷಗಾನದಲ್ಲಿ ಸ್ತ್ರೀ ವೇಷವನ್ನು ಸ್ತ್ರೀಯರೇ ವಹಿಸಿದರೆ ಈ ಸಮಸ್ಯೆಯನ್ನು ನೀಗಿಸಬಹುದಲ್ಲವೆ?

ಉ : ಸ್ತ್ರೀ ವೇಷವನ್ನು ಸ್ತ್ರೀಯರೇ ಧರಿಸುವುದು ಸಾಧ್ಯವಿಲ್ಲ. ಏಕೆಂದರೆ ಉಳಿದವರು ಗಂಡಸಾದ್ದರಿಂದ ಸ್ತ್ರೀಗೆ ಸಂಕೋಚವಾಗುತ್ತದೆ. ಅಲ್ಲದೆ ಇಲ್ಲಿನ ಸ್ತ್ರೀ ವೇಷಕ್ಕೂ ಕಠಿಣ ಶ್ರಮಬೇಕು. ಇನ್ನು ಸ್ತ್ರೀಯರದ್ದೇ ಒಂದು ಮೇಳವಾದರೆ ತೊಂದರೆ ಇಲ್ಲ. ಯಕ್ಷಗಾನ ಪ್ರೇಕ್ಷಕ ಒಂದು ವ್ಯವಸ್ಥೆಗೆ ಒಳಪಟ್ಟಿದ್ದಾನೆ. ಅದರ ಅನ್ವಯ ಯಕ್ಷಗಾನದ ಸ್ತ್ರೀ ವೇಷಕ್ಕೆ

ಪುರುಷರ ಕೋಮಲ ಕಂಠವನ್ನೆ ಪ್ರೇಕ್ಷಕ ನಿರೀಕ್ಷಿಸುತ್ತಾನೆ. ಈ ಎಲ್ಲಾ ಕಾರಣದಿಂದ ಕೇವಲ ಸ್ತ್ರೀ ಪಾತ್ರಗಳಿಗೆ ಮಾತ್ರ ಸ್ತ್ರೀಯರ ಸಂಭವ ಇಲ್ಲ.

ಪ್ರಶ್ನೆ : ಇಂದಿನ ತರುಣ ಕಲಾವಿದರ ಬಗ್ಗೆ ನಿಮ್ಮ ಅಭಿಪ್ರಾಯಗಳೇನು?

ಉ : ಹಿಂದಿನ ಮಟ್ಟದ ನೃತ್ಯದ ಆವಿಷ್ಕಾರವೇ ಇಂದು ಕಾಣುತ್ತಿಲ್ಲ. ಹೆಚ್ಚಿನ ತರುಣ ಕಲಾವಿದರು ಅಭ್ಯಾಸಕ್ಕೆ ಬೆಲೆ ಕೊಡುತ್ತಿಲ್ಲ. ಅನೇಕ ಸಾಂಪ್ರದಾಯಿಕ ಅಂಶಗಳು ನಶಿಸುತ್ತಿವೆ. ತರಬೇತಿ ಶಾಲೆ, ಕಲಾಕೇಂದ್ರಗಳಿದ್ದರೂ ವ್ಯವಸಾಯೀ ಸ್ವರೂಪದಲ್ಲಿ ದೊರೆಯುತ್ತಿದ್ದ ಶಿಕ್ಷಣ ಇಂದು ಇಲ್ಲವಾಗಿದೆ. ಎಳೆಯ ಕಲಾವಿದರ ಅನುಕರಣೆಯ ಚಪಲವೂ ಸ್ವಂತಿಕೆಯನ್ನು ಕುಗ್ಗಿಸುತ್ತಿವೆ. ಹಿಂದಿನ ಕಲಿಕೆಯಲ್ಲಿ ಮೂಲವನ್ನು ತಿಳಿದುಕೊಳ್ಳುವ ಅವಕಾಶ ಹೆಚ್ಚಿತ್ತು. ಯಕ್ಷಗಾನದಲ್ಲಿ ಗುರುಮುಖದಿಂದ ಕಲಿಯುವುದರೊಂದಿಗೆ ನೋಡಿ ಕಲಿಯುವುದು ಪ್ರಧಾನವೇ.

ಪ್ರ : ಇಂದಿನ ಸ್ತ್ರೀ ವೇಷದ ವೇಷಗಾರಿಕೆಯ ಬಗ್ಗೆ ನಿಮ್ಮ ಅನಿಸಿಕೆಗಳೇನು?

ಉ : ಯಕ್ಷಗಾನ ರಂಗದಲ್ಲಿ ಸ್ತ್ರೀ ವೇಷ ಪುರುಷ ವೇಷಕ್ಕೆ ಪೋಷಕವಾಗಬೇಕು. ವೇಷಗಾರಿಕೆಯ ದೃಷ್ಟಿಯಿಂದ ಸಿನಿಮಾತಾರೆಯರ ಅನುಕರಣೆಯಾಗಲೀ, ಕೇಶಾಲಂಕಾರ ವೈವಿಧ್ಯವಾಗಲೀ ಸಲ್ಲದು. ಕಾರಂತರು ಸೂಚಿಸಿದ ಶಿರೋಭೂಷಣ ಯಕ್ಷಗಾನಕ್ಕೆ ಹೆಚ್ಚು ಒಪ್ಪುತ್ತದೆ. ಅದೇ ರೀತಿ ಹಳೇಕಾಲದ ಸ್ತ್ರೀ ಪಾತ್ರಧಾರಿಗಳು ಧರಿಸುತ್ತಿದ್ದ ಓಲೆ ಕಂಚುಕವನ್ನು ಧರಿಸಬಹುದು. ಕಾಗದದ ಹೂವು ಆಧುನಿಕ ಆಭರಣಗಳು ಹೊಸ ಬಗೆಯ ಸೀರೆ ಇವೆಲ್ಲಾ ಆವರಣ ಭಂಗವನ್ನು ಮಾಡುತ್ತವೆ. ತಲೆ ಕೆದರಿಕೊಂಡಿರುವುದು, ಹೊಸ ರೀತಿಯಲ್ಲಿ ಸೀರೆ ಉಡುವುದು ರಂಗಕ್ಕೆ ಅಪಚಾರ.

ಪ್ರ : ಇಂದಿನ ಹವ್ಯಾಸಿರಂಗದ ಸ್ತ್ರೀ ಕಲಾವಿದರ ಬಗ್ಗೆ ನಿಮ್ಮ ವಿಚಾರಗಳೇನು?

ಉ : ಹವ್ಯಾಸಿಗಳು ಪುರುಷರೇ ಇರಲಿ, ಸ್ತ್ರೀಯರೇ ಇರಲಿ ಆಸಕ್ತಿಯಂತೂ ಇದೆ. ಶ್ರದ್ಧೆಯಿಂದ ಕೂಡಿದ ಶ್ರಮಪೂರ್ಣ ಅಭ್ಯಾಸದಿಂದ ಒಳ್ಳೆಯ ಪ್ರದರ್ಶನ ಸಾಧ್ಯವಾದೀತು. ಒಂದು ದಶಕದ ಈಚೆಗಷ್ಟೇ ಸ್ತ್ರೀಯರು ಈ ರಂಗಭೂಮಿಯಲ್ಲಿ ಕಾಣಿಸಿಕೊಳ್ಳುತ್ತಿರುವುದು. ಇದು ಸಂತೋಷದಾಯಕವೇ. ಹವ್ಯಾಸಿಗಳಿಂದ ಈ ರಂಗಕ್ಕೆ

ಹಾನಿಯಾಗಲಾರದು. ನೋಡುವ ಕಣ್ಣುಗಳು ಹೆಚ್ಚಾದವು. ಆದ್ದರಿಂದ ಸ್ವಾಗತಾರ್ಹ.

ಪ್ರ : ಸರಕಾರ ಯಕ್ಷಗಾನ ಕಲೆಗಾಗಿ ಮಾಡುತ್ತಿರುವ ಕಾರ್ಯಗಳ ಬಗ್ಗೆ ನಿಮ್ಮ ಅಭಿಪ್ರಾಯ ಏನು?

ಉ : ಸರಕಾರ ಅಕಾಡೆಮಿ ಮೂಲಕ ಹಿರಿಯ ಕಲಾವಿದರಿಗೆ ಗೌರವಧನ, ಅಶಕ್ತ ಕಲಾವಿದರಿಗೆ ಮಾಸಾಶನ ಎಲ್ಲವನ್ನೂ ಏರ್ಪಡಿಸುತ್ತದೆ. ಆದರೆ ಯೋಗ್ಯರಿಗೆ ಇವೆಲ್ಲಾ ದೊರೆಯಬೇಕು. ಅಶಕ್ತ ಕಲಾವಿದರ ರಕ್ಷಣೆಯಲ್ಲಿ ಸರಕಾರದಷ್ಟೇ ಸಹಕಲಾವಿದರ ಹಾಗೂ ಪ್ರೇಕ್ಷಕರ ಜವಾಬ್ದಾರಿ ಇದೆ. ನಿವೃತ್ತಿಯ ಅಂಚಿಗೆ ಬಂದೊಡನೆ ಕಲಾವಿದ ಭವಿಷ್ಯದ ಬಗ್ಗೆ ಚಿಂತಿಸುತ್ತಾ ಕೂರುವ ಸ್ಥಿತಿ ಇರಬಾರದು. ಉಳಿದ ಉದ್ಯೋಗಗಳಲ್ಲಿ ಇರುವಂತೆ ಪ್ರಾವಿಡೆಂಟ್ ಫಂಡ್, ಗ್ರಾಚುಯಿಟಿ ಮುಂತಾದ ಸೌಲಭ್ಯಗಳು ಇರಬೇಕು.

ಹೀಗೆ ಯಕ್ಷಗಾನ ರಂಗದ ಬಗ್ಗೆ ತಮ್ಮದೇ ಆದ ಅಭಿಪ್ರಾಯವುಳ್ಳ ಕೋಟ ವೈಕುಂಠರು ಆಧುನಿಕ ವಿಚಾರದ ಅಡಿಯಲ್ಲಿ ಬದುಕುತ್ತಿರುವವರು. ಇವರಿಗೆ ದೊರೆತ ಮಾರ್ಗದರ್ಶನ, ಆದ ಅನುಭವಗಳು ವಿಶೇಷವಾದ್ದರಿಂದ ಇವರಾಡುವ ಮಾತುಗಳಿಗೆ ಹೆಚ್ಚಿನ ಬೆಲೆ.

■

ವಿಭಿನ್ನ ಪಾತ್ರಗಳಿಗೆ ಜೀವ ತುಂಬುವ

ಪೆರುವಡಿ ನಾರಾಯಣ ಭಟ್

ಯಕ್ಷಗಾನದ ಪೌರಾಣಿಕ ಪ್ರಪಂಚಕ್ಕೆ ಆಗಾಗ ಸಮಕಾಲೀನತೆಯ ಸೇತುವನ್ನು ನಿರ್ಮಿಸುವ ಹಾಸ್ಯಗಾರನಿಗೆ ಈ ರಂಗದಲ್ಲಿ ವಿಶೇಷ ಜವಾಬ್ದಾರಿಯಿದೆ. ಆತ ಕೇವಲ ನಕ್ಕು ನಗಿಸಲು ಇರುವ ವ್ಯಕ್ತಿಯಲ್ಲ. ರಂಗದ ಎಲ್ಲಾ ಅಂಗಗಳಲ್ಲೂ ನುರಿತವನಾಗಿರ ಬೇಕಾದ ಹಾಸ್ಯಗಾರ ಸಣ್ಣ ಪಾತ್ರಗಳಾದ ಚಾರಕ, ದೂತನಿಂದ ಹಿಡಿದು ಪ್ರಸಂಗದುದ್ದಕ್ಕೂ ಬರಬಹುದಾದ ದೊಡ್ಡ ಪೋಷಕ ಪಾತ್ರಗಳನ್ನು ಕೆಲವೊಮ್ಮೆ ನಿರ್ವಹಿಸಬೇಕಾಗುತ್ತದೆ. ನಾರದ, ಋಷಿ, ಮುನಿ, ಮಂತ್ರಿ, ಅಗಸ, ಜನಸಾಮಾನ್ಯ, ಕಾವಲುಗಾರ, ಸೈನಿಕ, ಹೀಗೆ ವಿಭಿನ್ನ ಪಾತ್ರಗಳನ್ನು ಯೋಗ್ಯವಾಗಿ ಅಭಿವ್ಯಕ್ತಿಸುವಲ್ಲೇ ಹಾಸ್ಯಗಾರರ ಸಾಮರ್ಥ್ಯ ವ್ಯಕ್ತವಾಗುವುದು. ಒಂದು ರೀತಿಯಿಂದ ಹಾಸ್ಯಗಾರನೆಂದರೆ ದಶಾವತಾರಿ ಇದ್ದಂತೆ. ಈ ದೃಷ್ಟಿಯಿಂದ ವಿರಳವಾಗುತ್ತಿರುವ ಪ್ರಮುಖ ಹಾಸ್ಯಗಾರರಲ್ಲಿ ಶ್ರೀ ಪಿ. ನಾರಾಯಣ ಭಟ್ಟರು ಒಬ್ಬರು.

ಯಕ್ಷಗಾನ ನಾರಾಯಣ ಭಟ್ಟರಿಗೆ ವಂಶ ಪಾರಂಪರ್ಯವಾಗಿ ಬಂದ ಕಲೆ. ಭಟ್ಟರ ತಂದೆ ಜಿಲ್ಲೆಯ ಖ್ಯಾತ ಭಾಗವತ ಮನೆತನವಾದ ಪದ್ಯಾಣ ಮನೆಯವರು. ತಾಯಿಯ ಮನೆಯವರು ಯಕ್ಷಗಾನ ರಂಗದಲ್ಲೇ ಅತಿ ಹಿರಿಮೆ ಗಳಿಸಿರುವ ಸಂಕಯ್ಯ ಭಾಗವತರ

ವಂಶಜರು. ಹೀಗೆ ಎರಡೂ ಕಡೆಗಳಿಂದಲೂ ಯಕ್ಷಗಾನ ಭಟ್ಟರಲ್ಲಿ ಹರಿದು ಬಂದಿದೆ. ಪದ್ಯಾಣ ಬೀಮ ಭಟ್ ಮತ್ತು ಗುಣವತಿಯಮ್ಮ ಎಂಬ ದಂಪತಿಗಳ ಮಗನಾಗಿ 1927ರಲ್ಲಿ ಜನಿಸಿದ ಇವರಿಗೆ ಬಾಲ್ಯದಲ್ಲೇ ಪಿತೃ ವಿಯೋಗವಾಗಿ ಅಜ್ಜನ ಮನೆಯ ಆಶ್ರಯ ಲಭಿಸಿತು. ಕಾಸರಗೋಡಿನ ಬಾಯಾರು ಪ್ರದೇಶದ ಆಢ್ಯ ವ್ಯಕ್ತಿಯಾಗಿದ್ದ ಅಜ್ಜ ಪೆರುವಡಿ ಶಂಕರ ನಾರಾಯಣ ಭಟ್ಟರು ಶಾಲೆಗಳಿಗೆ ಕೊರತೆಯಿದ್ದ ಆ ಕಾಲದಲ್ಲಿ 5ನೇ ತರಗತಿಯವರೆಗೆ ಓದಿಸಿದರು. ನಡುವೆ ಮಂಜೇಶ್ವರದಲ್ಲಿ ಸ್ವಲ್ಪ ಸಂಸ್ಕೃತ ಅಭ್ಯಾಸವೂ ನಡೆಯಿತು. ಬಾಲ್ಯ ದಿನಗಳಲ್ಲಿ ಬಯಲಾಟಗಳನ್ನು ನೋಡಿ ಬಂದ ಭಟ್ಟರು ಮನೆಯಲ್ಲಿ ತಾವೇ ಗೆಳೆಯರೊಂದಿಗೆ ಕೂಡಿಕೊಂಡು ಆಟಕೂಟಗಳನ್ನು ನಡೆಸುತ್ತಿದ್ದರು. ಅನುಕರಣೆ ಚಪಲ ಆ ಕಾಲದಲ್ಲೇ ಮೊಳೆಯಿತು. ಈ ಸಂದರ್ಭದಲ್ಲೇ ಕುರಿಯ ವಿಠಲ ಶಾಸ್ತ್ರಿಗಳು ಯಕ್ಷಗಾನದ ನೃತ್ಯ ವೈಭವಗಳನ್ನು ಹೊಸ ರೀತಿಯಲ್ಲಿ ಬೆರಗು ಹುಟ್ಟಿಸುವಂತೆ ಪ್ರಸ್ತುತ ಪಡಿಸಿ ಖ್ಯಾತಿ ಹೊಂದುತ್ತಿದ್ದರು. ಶಾಸ್ತ್ರಿಗಳ ವಿಲಾಸ ವಿಭ್ರಮಗಳನ್ನು ನೋಡಿದ ಎಳೆಯ ಮನಸ್ಸು ಬಹು ಬೇಗ ಮಾರುಹೋಯಿತು. ಇದರ ಫಲವಾಗಿ ಹುಟ್ಟಿದ ಗೀಳಿನಿಂದ ತಮ್ಮ 17ನೇ ವಯಸ್ಸಿನಲ್ಲೇ ಶಾಸ್ತ್ರಿಗಳ ಧರ್ಮಸ್ಥಳದ ಮೇಳವನ್ನು ಭಟ್ಟರು ಸೇರಿಕೊಂಡರು. ಮೊದಲ ವರ್ಷಗಳಲ್ಲಿ ಕುರಿಯಾರ ನೃತ್ಯ ನಡೆ, ಹಾವಭಾವ, ಪಾತ್ರದಲ್ಲಿನ ತಾದಾತ್ಮ್ಯತೆ, ಶೃಂಗಾರ ಚೇಷ್ಟೆಗಳ ಅನುಕರಣೆಯಲ್ಲೇ ಸಾಫಲ್ಯವನ್ನು ಕಂಡರು. ಇದರೊಂದಿಗೆ ಮಾತುಗಾರಿಕೆಗೆ ಆ ಕಾಲದ ಖ್ಯಾತ ಅರ್ಥಧಾರಿ ಶ್ರೀ ಶಂಕರ ನಾರಾಯಣ ಸಾಮಗರ ಪ್ರಭಾವವೂ ಮೇಳೈಸಿತು. ಅಗರಿ ಶ್ರೀನಿವಾಸ ಭಾಗವತ ಹಾಗೂ ಕರ್ಗಲ್ಲು ಸುಬ್ಬಣ್ಣ ಭಟ್ಟರ ಮಾರ್ಗದರ್ಶನವೂ ಲಭಿಸಿತು. ಇದೆಲ್ಲದರ ಫಲವಾಗಿ ಸ್ವಲ್ಪ ಕಾಲದಲ್ಲೇ ನಾರಾಯಣ ಭಟ್ಟರು ಜನಪ್ರಿಯರಾದರು.

ಅಷ್ಟಾಗಿ ಮೈಕಟ್ಟಿಲ್ಲದ ನಾರಾಯಣಭಟ್ಟರ ಪಾಲಿಗೆ ಹಾಸ್ಯಗಾರನ ಪಾತ್ರ ಬಂದದ್ದು ವಿಶಿಷ್ಟ ಸಂದರ್ಭದಲ್ಲಿ. ಮೇಳದ ಪ್ರಧಾನ ಹಾಸ್ಯಗಾರ ಅನಾರೋಗ್ಯದಿಂದ ಬಳಲುತ್ತಿದ್ದಾಗ ಎಲ್ಲ ಪಾತ್ರಗಳಲ್ಲೂ ಸೈ ಎನಿಸಿಕೊಂಡಿದ್ದ ಭಟ್ಟರನ್ನೇ ಹಾಸ್ಯಕ್ಕೆ ಆರಿಸಿದರು. ಅದರಲ್ಲಿ ಇವರು "ಸೈ" ಎನಿಸಿಕೊಂಡಿದ್ದರಿಂದ ಮುಂದೆ ಈ "ಪಟ್ಟವೇ" ಖಾಯಂ ಆಯಿತು. ಧರ್ಮಸ್ಥಳ ಮೇಳಗಳಲ್ಲಿ 10 ವರ್ಷಗಳ ಸೇವೆನಂತರ ಇವರ ಅಜ್ಜನ ಮನೆಯವರು ಸಂಘಟಿಸಿದ ಮೂಲ್ಕಿ ಮೇಳಕ್ಕೆ ಬಂದರು. ಸ್ವಲ್ಪ ಕಾಲ ಈ ಮೇಳಕ್ಕೆ ಇವರೇ ಸಂಚಾಲಕರಾದರು. ಮುಂದೆ ಕೂಡ್ಲು, ಸುರತ್ಕಲ್, ಅಮೃತೇಶ್ವರಿ, ಅರುವ, ಕದ್ರಿ ಹಾಗೇ ಹಲವು ಮೇಳಗಳಲ್ಲಿ ದುಡಿದಿದ್ದು ಈಗ ಕದ್ರಿ ಮೇಳದಲ್ಲೇ ಪ್ರಧಾನ ಹಾಸ್ಯಗಾರರಾಗಿದ್ದಾರೆ. ಬೇರೆ ಬೇರೆ ಮೇಳಗಳಲ್ಲಿದ್ದುದರಿಂದ ವಿಪುಲವಾದ ಅನುಭವ ಲಭಿಸಿದೆ. ಬಯಲಾಟ ಟೆಂಟ್‌ಗಳ ತೆಂಕು ಬಡಗುಗಳೆರೆಡರ ಅನುಭವವೂ ಇವರಿಗೆ ದೊರೆತಿದೆ. ಅನೇಕ ಬಾರಿ ವ್ಯವಸ್ಥಾಪಕರ ಮೇಲಿನ ಅಸಮಾಧಾನ, ರಂಗದಲ್ಲಿನ

ಅವ್ಯವಸ್ಥೆ, ಸಹಕಲಾವಿದರ ಅಸಹಕಾರ ಹೀಗೆ ಒಂದಿಲ್ಲೊಂದು ಮೇಳ ಬದಲಾವಣೆಗೆ ಕಾರಣವಾಗಿದೆ.

ಹಾಸ್ಯವೆಂದೊಡನೆ ನಗಿಸುವುದು, ಅಶ್ಲೀಲವಾಗಿ ಮಾತನಾಡುವುದು, ಅಸಂಬದ್ಧವಾಗಿ ಹರಟುವುದು ಎಂಬೆಲ್ಲ ಭಾವನೆ ಇದ್ದುದ್ದನ್ನು ಹೋಗಲಾಡಿಸಿ ಶುದ್ಧ ಹಾಸ್ಯದಿಂದ ಪ್ರೇಕ್ಷಕರನ್ನು ಸೆಳೆಯಲು ಸಾಧ್ಯ ಎಂಬುದನ್ನು ಇವರು ತೋರಿಸಿಕೊಟ್ಟರು. ಹಾಗೆ ನೋಡ ಹೋದರೆ ನಾರಾಯಣ ಭಟ್ಟರಿಗೆ ಖ್ಯಾತಿ ತಂದ ಪಾತ್ರಗಳು ಹಾಸ್ಯಕ್ಕಿಂತ ಹೆಚ್ಚಿಗೆ ಕರುಣ, ಶೃಂಗಾರ ರಸವೊಸರುವ ಪಾತ್ರಗಳೇ. ನಳದಮಯಂತಿಯ ಬಾಹುಕ, ಪಾರಿಜಾತದ ಮಕರಂದ, ಕೃಷ್ಣಲೀಲೆಯ ವಿಜಯ, ಪಾಪಣ್ಣ ವಿಜಯದ ಪಾಪಣ್ಣ, ಶನಿ ಮಹಾತ್ಮೆಯ ವಿಕ್ರಮ, ಪಂಚವಟಿ ಪಟ್ಟಾಭಿಷೇಕದ ಗುಹ ಈ ಪಾತ್ರಗಳಲ್ಲೆಲ್ಲ ಶ್ರೀ ಭಟ್ಟರು ಮಿಂಚಿ ಮೆರೆದಿದ್ದಾರೆ.

ಬಣ್ಣದ ವೇಷ ಮಾಡುತ್ತಿದ್ದ ಸುಬ್ಬಣ್ಣ ಶೆಟ್ಟಿ, ಮಡೂರು ತಿಮ್ಮಪ್ಪ, ಕದ್ರಿ ತಿಮ್ಮಪ್ಪ, ಪುರುಷೋತ್ತಮ ಭಟ್, ಅಳಿಕೆ ರಾಮ ರೈ ಮುಂತಾದವರೆಲ್ಲಾ ಭಟ್ಟರು ಮೆಚ್ಚುವ ಪಾತ್ರಧಾರಿಗಳು. ಹಳೆಯ ಪೌರಾಣಿಕ ಪ್ರಸಂಗಗಳಲ್ಲಿ ಹೆಚ್ಚು ಒಲವಿರುವ ನಾರಾಯಣ ಭಟ್ಟರು ಅಲ್ಲಿನ ಪಾತ್ರ ವೈಶಿಷ್ಟ್ಯವನ್ನು ಆತ್ಮೀಯವಾಗಿ ನೆನೆಯುತ್ತಾರೆ. ಹೊಸ ಪ್ರಸಂಗಕಾರರಲ್ಲಿ ಅದರಲ್ಲೂ ತುಳು ಪ್ರಸಂಗಕಾರರಲ್ಲಿ ಅಮೃತ ಸೋಮೇಶ್ವರ, ನಾರಾಯಣ ಶೆಟ್ಟಿ, ಪುರುಷೋತ್ತಮ ಪೂಂಜ ಮುಂತಾದವರ ಪ್ರಸಂಗಗಳಲ್ಲಿನ ಸಾಹಿತ್ಯಾಂಶಗಳನ್ನು ಹೊಗಳುತ್ತಾರೆ. ಹಿಂದಿನ ಬಯಲಾಟದ ಮೇಳಗಳಲ್ಲಿನ ಕಷ್ಟದ ದಿನಗಳಿಗೆ ಹೋಲಿಸಿದರೆ ಇಂದು ಆರ್ಥಿಕವಾಗಿ ಕಲಾವಿದರ ಪಾಲಿಗೆ ಸುಖಕರ ದಿನಗಳಿವೆ ಎನ್ನುವ ತೃಪ್ತಿ ಶ್ರೀಯುತರಿಗಿದೆ. ತುಂಬು ಕುಟುಂಬದವರಾದ ಇವರಿಗೆ ಮೇಳದಲ್ಲಿರುವುದರಿಂದ ಸಂಸಾರ ಹಾಗೂ ವ್ಯವಹಾರಗಳನ್ನು ಹೊಂದಿಸಿಕೊಂಡು ಹೋಗುವುದು ಕಷ್ಟ ಎಂಬ ಅಭಿಪ್ರಾಯವುಳ್ಳವರಾಗಿದ್ದಾರೆ. ಯಕ್ಷಗಾನ ರಂಗಭೂಮಿಯ ಬಗ್ಗೆ ಸಾಕಷ್ಟು ಚಿಂತನೆ ನಡೆಸುತ್ತಿರುವ ಈ ಹಾಸ್ಯಗಾರರ ಅನುಭವ ರಂಗಭೂಮಿಯ ಒಳ ಹೊರಗನ್ನು ಅರಿಯುವಲ್ಲಿ ಸಹಾಯಕ.

ಪ್ರ : ಬಯಲಾಟ ಹಾಗೂ ಟೆಂಟ್ ಮೇಳಗಳೆರಡರಲ್ಲೂ ದುಡಿದಿರುವ ನಿಮಗೆ ಈ ಎರಡೂ ವ್ಯವಸ್ಥೆಗಳ ಬಗ್ಗೆ ಹೇಗೆನಿಸುತ್ತದೆ?

ಉ : ಬಯಲಾಟಗಳು ಕಲಾವಿದನ ಕಲೆಗಾರಿಕೆಗೆ ಪೂರಕವಾಗಿದ್ದವು. ಆ ಕಾಲದಲ್ಲಿ ಆತ ಊರಿಂದೂರಿಗೆ ಒಟ್ಟಿಗೆ ನಡೆದೇ ಹೋಗುತ್ತಿದ್ದಾಗೆಲ್ಲ ಹಿಂದಿನ ದಿನದ ಪ್ರದರ್ಶನಗಳ ಬಗ್ಗೆ ಚರ್ಚೆ ನಡೆಸುತ್ತಿದ್ದರು. ಇದರಿಂದ ತಿದ್ದಿಕೊಳ್ಳುವ ಅವಕಾಶವಿತ್ತು. ಇದರೊಂದಿಗೆ ಪ್ರೇಕ್ಷಕರಲ್ಲೂ ಒಳ್ಳೆಯ

ಅಭಿರುಚಿ ಉಳ್ಳವರಿದ್ದು ಅವರು ಯೋಗ್ಯ ಸಲಹೆ ಕೊಡಬಲ್ಲವರಾಗಿದ್ದರು. ಮೇಳಕ್ಕೆ ಸೇರಿದವ ಕೋಡಂಗಿಯಿಂದಲೇ ಅಭ್ಯಾಸ ಸುರು ಮಾಡುವುದರಿಂದ ತಳಪಾಯ ಗಟ್ಟಿಯಾಗಿ ಮುಂದೆ ಆತನಿಗೆ ಎಲ್ಲ ಪಾತ್ರಗಳ ಒಳ ಹೊರಗನ್ನು ಅರಿಯುವ ಅವಕಾಶ ಲಭಿಸುತ್ತಿತ್ತು. ಕಲಾವಿದ ಪರಿಪೂರ್ಣ ಕಲಾವಿದನಾಗಿ ರೂಪುಗೊಳ್ಳುತ್ತಿದ್ದ. ಇದರಿಂದ ರಂಗದ ಸಂಪತ್ತು ಉಳಿದು, ಬೆಳೆದು ಬರಲು ಸಾಧ್ಯವಾಯಿತು.

ಇಂದು ಮಾತ್ರ ಇವೆಲ್ಲವೂ ಗತವೈಭವಗಳಾಗಿವೆ. ಟೆಂಟ್ ಮೇಳ ಬಂದದ್ದರಿಂದಲೇ ಹಾಳಾಯಿತೆಂದು ಅರ್ಥವಲ್ಲ. ಕಲಾವಿದರ ಧೋರಣೆ. ಪ್ರೇಕ್ಷಕರ ಅಭೀರುಚಿ ಎಲ್ಲಾ ಇಂದು ಬದಲಾಗಿದೆ. ಮುಖ ಭಾವವೇ ಪ್ರಧಾನ ಎಂದು ತಿಳಿದ ಕಲಾವಿದರು ಮುಖವನ್ನು ಮರೆಸುವಷ್ಟು ಪ್ರಧಾನವಾಗಿದ್ದ ವೇಷ ಭೂಷಣಗಳನ್ನು ಕಡಿಮೆ ಮಾಡಿದರು. ನೃತ್ಯಗೊತ್ತಿಲ್ಲದವರೂ ಖ್ಯಾತಿ ಪಡೆದದ್ದನ್ನು ನೋಡಿ ಬಲ್ಲವರೂ ನೃತ್ಯ ಬಿಟ್ಟರು. ರಂಗಸ್ಥಳದಲ್ಲಾದ ಬದಲಾವಣೆಯೊಂದಿಗೆ ವೇಷಧಾರಣೆಯಲ್ಲೂ ಬದಲಾವಣೆ ಬಂದವು. ಇವೆಲ್ಲವುಗಳಿಂದ ಇಂದಿನ ಪ್ರದರ್ಶನಗಳು ಶಿಥಿಲಗೊಂಡಿವೆ. ಔಚಿತ್ಯಪೂರ್ಣ ಬದಲಾವಣೆಗೆ ಸ್ವಾಗತ ಕೋರಬಹುದು. ಆದರೆ ಸವಲತ್ತಿಗಾಗಿ ಮಾಡುವುದು ಕಲೆಗೆ ಮಾರಕ. ಬಯಲಾಟಕ್ಕೆ ಪ್ರದರ್ಶನಗಳ ಸಣ್ಣ ಪುಟ್ಟ ಕೊರತೆಗಳನ್ನು ನೀಗಿಸುವ ಶಕ್ತಿಯಿದೆ ಅನಿಸುತ್ತದೆ. ಆರ್ಥಿಕ ದೃಷ್ಟಿಯಿಂದ ಯೋಚಿಸಿದರೆ ಟೆಂಟ್ ಮೇಳಗಳೇ ಒಳ್ಳೆಯವು ಎನ್ನಿಸುತ್ತದೆ. ಹಿಂದೆಲ್ಲಾ ಮಳೆಗಾಲ ಬಂತೆಂದರೆ ಕಲಾವಿದ ದೀನನಾಗಿ ಶ್ರೀಮಂತರನ್ನು ಆಶ್ರಯಿಸಬೇಕಾದ ಸ್ಥಿತಿ ಇತ್ತು.ಇಂದು ಅದು ತಪ್ಪಿದೆ. ಬಯಲಾಟದಲ್ಲಿದ್ದ ಶಿಕ್ಷಣಕ್ರಮವಾಗಲೀ, ಹೊಂದಾಣಿಕೆ ಬುದ್ಧಿಯಾಗಲಿ ಟೆಂಟ್ ಮೇಳದಲ್ಲಿ ಇಲ್ಲವಾಗಿದೆ.

ಪ್ರ : ಹಾಗಾದರೆ ಇವತ್ತಿನ ಪ್ರದರ್ಶನಗಳು ಕಳಪೆಯವು ಎಂದು ನಿಮ್ಮ ಅಭಿಪ್ರಾಯವೇ?

ಉ : ಹಿಂದಿಗೆ ಹೋಲಿಸಿದಾಗ ಹಾಗೆ ಅನ್ನಿಸುತ್ತದೆ. ಹಿಂದೆಲ್ಲಾ ಪ್ರಸಂಗಗಳಲ್ಲಿ ಹಾಗೂ ಪ್ರದರ್ಶನಗಳಲ್ಲಿ ಒಂದು ಆದರ್ಶ, ನೀತಿ ಇರುತ್ತಿತ್ತು. ಅದಕ್ಕೆ ಸರಿಯಾಗಿ ಪ್ರಧಾನ ಪಾತ್ರಧಾರಿ ಜನರಿಗೆ ಮಾದರಿಯಾಗುವಂತಹ ನಡೆನುಡಿ ತೋರುತ್ತಿದ್ದ. ಸಮಾಜದ ಸ್ವಾಸ್ತ್ಯಕ್ಕೆ ಇದು ಅಗತ್ಯ. ಇವತ್ತಿನ ಹೆಚ್ಚಿನ ಪ್ರಸಂಗಗಳಲ್ಲಿ ಪ್ರಧಾನ ಪಾತ್ರಧಾರಿಗೆ ಖಳನಾಯಕ ಪಾತ್ರ

ಲಭಿಸುತ್ತಿದ್ದು ಆತ ಸಮಾಜದ ಕೆಡುಕುಗಳಿಗೆ ಸಾಕಾರನಾಗುತ್ತಾನೆ. ಇದರಿಂದ ಕಲಾವಿದನ ಪಾತ್ರಾಭಿವ್ಯಕ್ತಿಗೂ ಕಷ್ಟ. ಜನರನ್ನು ಪ್ರಚೋದಿಸುವುದು, ತಕ್ಷಣ ಖುಷಿ ಕೊಡುವುದೇ ಉದ್ದೇಶವಾದುದರಿಂದ ಸಮಾಜದ ಆರೋಗ್ಯಕ್ಕೆ ಹಾನಿ. ಇವತ್ತಿನ ಪ್ರದರ್ಶನಗಳಲ್ಲಿ ಎಲ್ಲಾ ಪಾತ್ರಧಾರಿಗಳು ನಗಿಸುವುದು, ರಂಜಿಸುವುದೇ ತಮ್ಮ ಗುರಿ ಎಂದುಕೊಂಡಿದ್ದಾರೆ. ಕಲಾತ್ಮಕ ದೃಷ್ಟಿ ಮಸಕಾಗಲು, ಚೇಷ್ಟೇ ಹೆಚ್ಚಲು ಇದೇ ಕಾರಣ. ಈ ಸಂದರ್ಭದಲ್ಲಿ ಹಾಸ್ಯಗಾರರ ಪರಿಸ್ಥಿತಿ ಬಹಳ ಕಷ್ಟದ್ದು. ಎಲ್ಲರೂ ನಗಿಸುವಾಗ ಈತ ಇನ್ನೂ ಹೆಚ್ಚು ನಗಿಸಬೇಕು ಎಂದರೆ ಇನ್ನಷ್ಟು ಹೆಚ್ಚು ಚೇಷ್ಟೆ ಮಾಡಬೇಕು. ಹೇಳಬಾರದ್ದನ್ನು ಹೇಳಬೇಕು. ಇದರಿಂದ ಆವರಣ ಭಂಗವಾಗುತ್ತದೆ.

ಪ್ರ : ತುಳು ಯಕ್ಷಗಾನಗಳ ಬಗ್ಗೆ ಏನು ಹೇಳುತ್ತೀರಿ?

ಉ : ತುಳು ಭಾಷೆಯಲ್ಲಿ ಯಕ್ಷಗಾನ ಪ್ರದರ್ಶನಗಳನ್ನು ನಡೆಸುವುದು ಅಪರಾಧವೇನಲ್ಲ. ಸಾಕಷ್ಟು ಹಿಂದೆಯೇ ತುಳು ಪ್ರಸಂಗಗಳ ರಚನೆಯಾಗಿವೆ. ಈಗ ಇರುವುದು ಯಾವಬಗೆಯ ತುಳುವಿನಲ್ಲಿ ವ್ಯವಹರಿಸಬೇಕು ಎಂಬುದರಲ್ಲಿ. ಬೋಳಾರು ನಾರಾಯಣ ಶೆಟ್ಟಿಯಂತವರು ತುಳುವಿನಲ್ಲಿ ಪಾತ್ರ ನಿರ್ವಹಿಸಿಯೂ ಪಾತ್ರದ ಘನತೆಗೆ ಚ್ಯುತಿ ತರುತ್ತಿರಲಿಲ್ಲ. ಇವತ್ತು ಹೆಚ್ಚಿನ ತುಳು ಪ್ರಸಂಗಗಳು ಕಾಲ್ಪನಿಕವಾಗಿದ್ದು ಚಾರಿತ್ರಿಕ ಹಾಗೂ ಸಾಮಾಜಿಕದ ಕಲಸು ಮೇಲೋಗರವಾಗಿದೆ. ಭಾಷೆ, ಅಭಿನಯ, ವೇಷ ಭೂಷಣಗಳಲ್ಲೆಲ್ಲ ಸಮಕಾಲಿನತೆ ಇಣುಕುತ್ತಿದ್ದು ಗಾಂಭೀರ್ಯ ಭಂಗವಾಗುತ್ತಿದೆ. ಬಳಕೆ ಮಾತನ್ನು ಬಿಟ್ಟು ಪುರಾಣದ ಆಧಾರ ಕೊಟ್ಟು ಮಾತನಾಡಿದರೆ ಪ್ರೌಢಿಮೆಗಳಿಸಲು ಸಾಧ್ಯ. ವೇಷಗಾರಿಕೆಯಲ್ಲೂ ಕೂಡ ಚಿಂತನೆ ಅಗತ್ಯ. ಕೆಲವಕ್ಕೆ ಕಿರೀಟ ಇವೆ. ಕೆಲವಕ್ಕೆ ಇಲ್ಲ. ಹೀಗೆಲ್ಲವಾಗಿ ಗೊಂದಲ ಏರ್ಪಟ್ಟಿವೆ.

ಪ್ರ : ಹಾಸ್ಯಗಾರರಾಗಿ ಇವತ್ತಿನ ಪ್ರೇಕ್ಷಕರ ಬಗ್ಗೆ ನಿಮ್ಮ ಅನಿಸಿಕೆ ಏನು?

ಉ : ಹಿಂದಿನ ಪ್ರೇಕ್ಷಕರಲ್ಲಿ ಒಂದು ಮಾನದಂಡ ಇತ್ತು. ಯಾವುದು ಕಲೆ ಯಾವುದು ಅಲ್ಲ ಎಂಬ ತಿಳುವಳಿಕೆ ಇತ್ತು. ಇವತ್ತು ಪ್ರೇಕ್ಷಕರ ಸಂಖ್ಯೆ ಹೆಚ್ಚಿದೆಯೇ ಹೊರತು ಬಿಗಿ ನಿಯಮ ಇಲ್ಲ. ದಿನವೂ ಒಂದೊಂದು ಹೊಸತನ್ನು ಇವತ್ತಿನ ಪ್ರೇಕ್ಷಕರು ಬಯಸುತ್ತಾರೆ. ಇದರಿಂದಾಗಿ ಕಲಾವಿದ

ಏನೇನೊ ಸರ್ಕಸ್ ಮಾಡುತ್ತಲೇ ಇರುತ್ತಾನೆ. ಪ್ರೇಕ್ಷಕರನ್ನು ಸೆಳೆದು ಕೊಳ್ಳಬೇಕೆಂಬ ಆತುರದಲ್ಲಿ ರಂಗಕ್ಕೆ ಅಪಚಾರಗಳು ನಡೆಯುತ್ತಿವೆ. ಹಾಸ್ಯದ ದೃಷ್ಟಿಯಿಂದ ಹೇಳುವುದಾದರೆ ತೆಂಕಿನಲ್ಲಿ ಹಾಸ್ಯಕ್ಕೆ ಹೊಸತನ ದೊರಕಿಸಿದವರು ವಿಟ್ಲ ಗೋಪಾಲಕೃಷ್ಣ ಜೋಷಿಯವರು. ಅವರಿಂದ ಮುಂದಕ್ಕೆ ಏನೇನೋ ಹೊಸತನ ಬರುತ್ತಿದೆ. ಜನರಲ್ಲಿ ಹಾಸ್ಯಗಾರ ಇರುವುದು ನಗಿಸುವುದಕ್ಕೇ ಮಾತ್ರ ಎಂಬ ಭಾವನೆ ಬೆಳೆಯುತ್ತಿದೆ. ನನ್ನ ದೃಷ್ಟಿಯಲ್ಲಿ ನಗಿಸುವುದಕ್ಕಿಂತ ಕೊಟ್ಟ ಪಾತ್ರವನ್ನು ಅಪಚಾರವಿಲ್ಲದೆ ನಿರ್ವಹಿಸುವುದು ಮುಖ್ಯ ಎಂದುಕೊಂಡಿದ್ದೇನೆ.

ಪ್ರ : ಯಕ್ಷಗಾನದಲ್ಲಿ ಹಾಸ್ಯದ ಉತ್ಪತ್ತಿಯ ಬಗೆಯನ್ನು ವಿವರಿಸುತ್ತೀರಾ?

ಉ : ರಂಗದಲ್ಲಿ ಹಾಸ್ಯದ ಉತ್ಪತ್ತಿ ಮುಖ್ಯವಾಗಿ ಆಕಾರ, ಸ್ವರ, ಕುಣಿತ, ಹಾವಭಾವ, ವೇಷಗಾರಿಕೆಯಲ್ಲಿ ವ್ಯಕ್ತವಾಗುತ್ತದೆ. ನಗೆಗೇಡು, ಅಪಹಾಸ್ಯ ವಿಚಾರಗಳೆಲ್ಲ, ಹಾಸ್ಯಕ್ಕೆ ಕಾರಣ. ತಾಳ ಲಯಬದ್ಧವಾಗಿದ್ದು ಕುಣಿತದಲ್ಲಿ ವಿಕೃತಿ ತೋರಲು ಸಾಧ್ಯ. ಪದಗಳನ್ನು ವಿರೂಪಗೊಳಿಸುವುದು, ಸಂಬಂಧವಿಲ್ಲದೆ ಮಾತನಾಡುವುದು, ಪಾತ್ರಕ್ಕೆ ತಕ್ಕ ಚೇಷ್ಟೆಗಳನ್ನು ಮಾಡುವುದು ಇವೆಲ್ಲ ಹಾಸ್ಯಕ್ಕೆ ಕಾರಣ. ಆದರೆ ನಾನು ಮನಸ್ವಿಯಾಗಿ ಹಾಸ್ಯಕ್ಕೆ ಒಗ್ಗಿದವನಲ್ಲ. ಈಗಂತೂ ವಯೋಮಾನದಿಂದ ಮನಸ್ಸಿಗೆ ಅಷ್ಟು ಬರುವುದಿಲ್ಲ. ಹಾಸ್ಯಕ್ಕಿಂತ ಮಿಗಿಲಾಗಿ ಕರುಣಾರಸ ಪ್ರಧಾನ ಪಾತ್ರಗಳಾದ ಪಾಪಣ್ಣ, ಬಾಹುಕ ಮುಂತಾದವುಗಳು ನನಗೆ ಹೆಚ್ಚು ತೃಪ್ತಿ ತಂದಿವೆ. ಹಿಂದೆಲ್ಲ ಹಾಸ್ಯಗಾರ ಎಲ್ಲಾ ಬಗೆಯ ಪಾತ್ರಗಳನ್ನೂ ಮಾಡಲು ಬಲ್ಲವನಾಗಿರಬೇಕಿತ್ತು, ನಾರದ, ದೂರ್ವಾಸ, ಬ್ರಾಹ್ಮಣ ಮುಂತಾದ ಪಾತ್ರಗಳು ಮಾಡಿ 'ಸೈ' ಎನಿಸಿಕೊಂಡ ಹಾಸ್ಯಗಾರರಿದ್ದಾರೆ.

ಪ್ರ : ಒಂದು ಹಾಸ್ಯ ಪಾತ್ರದ ವಿಶ್ಲೇಷಣೆ ಮಾಡಬಹುದೇ?

ಉ : ಉದಾಹರಣೆಗೆ 'ಮಾಗದ ವಿಜಯ'ದ ಕೃಷ್ಣನನ್ನೇ ತೆಗೆದುಕೊಳ್ಳೋಣ. ಅದು ಹಾಸ್ಯಗಾರನಿಗೆ ಮೀಸಲು. ಪಾತ್ರವಹಿಸುವ ಮೊದಲೇ ಅದರ ಮೂಲ ರೇಖೆಯನ್ನ ಹಿಂದಿನ ಕಲಾವಿದರ ಪ್ರದರ್ಶನಗಳಿಂದ ತಿಳಿದುಕೊಂಡಿರಬೇಕು. ಪ್ರಸಂಗದ ಒಟ್ಟು ಕಥೆ, ಅದರಲ್ಲಿ ಈ ಪಾತ್ರದ ಪಾತ್ರ ಎಲ್ಲವನ್ನು ಯೋಚಿಸಿ ಎದುರಿನ ವೇಷಧಾರಿ ಆಡಬಹುದಾದ ಮಾತುಗಳನ್ನು ಊಹಿಸಬೇಕಾಗುತ್ತದೆ. ಆ ಮೇಲೆ ತಾನು ನಡೆದುಕೊಳ್ಳಬೇಕಾದ ರೀತಿ, ನುಡಿಯಬೇಕಾದ ಮಾತುಗಳನ್ನು

ಸಿದ್ಧಪಡಿಸಿಕೊಳ್ಳಬೇಕು. ಮಾಗಧನ ಅರಮನೆಯನ್ನು ಪ್ರವೇಶಿಸುವಾಗ ಹಿಂಬಾಗಿಲಿನಿಂದ ಪ್ರವೇಶಿಸಿ ಹಸನ್ಮುಖಿಯಾಗಿದ್ದು. ಪಾತ್ರದ ಒಳ ಭಾವನೆಗಳಿಗೆ ಅಭಿವ್ಯಕ್ತಿ ಕೊಡಬೇಕು. ಬೇರೆ ಜಾರಕ, ದೂತ ಪಾತ್ರಗಳಲ್ಲಿ ರಿಪಿಟೇಷನ್‌ನಿಂದ ತಪ್ಪು ಹೇಳಿ ಪುನಃ ಸರಿ ಹೇಳುವುದರಿಂದ ಆಡುಮಾತಿನ ಬಳಕೆಯಿಂದ ದ್ವಂದ್ವಾರ್ಥ ಪದ ಪ್ರಯೋಗದಿಂದ ಹಾಸ್ಯ ಮಿಂಚಿಸಲು ಸಾಧ್ಯ. ಹಾಸ್ಯ ಯಶಸ್ವಿಯಾಗಲು ಎದುರು ಪಾತ್ರಧಾರಿಯ ಸಹಾಯವಂತು ತೀರಾ ಅನಿವಾರ್ಯ. ಹೊಂದಾಣಿಕೆ ಕಲಾವಿದರಲ್ಲಿ ಇಲ್ಲದೇ ಹೋದರೆ ಬಹಳ ಕಷ್ಟ. ಇವತ್ತು ಗೊಂದಲವಿದೆ.

ಪ್ರ : ಇವತ್ತಿನ ರಂಗಭೂಮಿಯ ಗೊಂದಲವನ್ನು ನಿರ್ದೇಶಕನನ್ನು ತರುವ ಮೂಲಕ ಸರಿಪಡಿಸಲು ಸಾಧ್ಯವೆ?

ಉ : ಸಮರ್ಥನಾದ ನಿರ್ದೇಶಕ ಸಿಕ್ಕಿದರೆ ಯಕ್ಷಗಾನಕ್ಕೆ ಘನತೆ ಮರ್ಯಾದೆ ಸಿಕ್ಕಬಹುದು. ಪಾತ್ರದ ಒಳಗನ್ನು ಹೊರ ತೆಗೆಯಲು, ಪಾತ್ರಗಳಲ್ಲಿ ಹೊಂದಾಣಿಕೆ ಮೂಡಿಸಲು ನಿರ್ದೇಶಕ ಬೇಕು. ಇವತ್ತಿನ ಎಲ್ಲರೂ ವಿಜೃಂಭಿಸಬೇಕು ಎಂಬ ಪ್ರವರ್ತಿಯನ್ನು ತೊಡೆದುಹಾಕಿ, ಯಕ್ಷಗಾನ ಸೆಳೆಯುವಂತೆ ಮಾಡಲು ನಿರ್ದೇಶಕ ಅಗತ್ಯ ಎಂದು ಅನಿಸುತ್ತದೆ. ಆದರೆ ಆತ ಕಲಾವಿದನ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಬಾರದು. ಇಂದು ಅನೇಕ ಕಡೆ ಶಿಬಿರ, ಕಮ್ಮಟಗಳು ನಡೆಯುತ್ತಿವೆ. ಆದರೆ ಅದರಲ್ಲಿ ವೃತ್ತಿ ಕಲಾವಿದರು ಭಾಗವಹಿಸುತ್ತಿಲ್ಲ. ಇದರಿಂದಾಗಿ ಕಮ್ಮಟದ ಫಲ ಪರಿಣಾಮಕಾರಿಯಾಗಿಲ್ಲ. ಅಕಾಡೆಮಿಗಳು, ಸಂಘ ಸಂಸ್ಥೆಗಳು, ವೃತ್ತಿ ಕಲಾವಿದರಿಗೂ ಶಿಬಿರಗಳನ್ನು ನಡೆಸಬೇಕು.

ಪ್ರ : ಇಂದಿನ ಹವ್ಯಾಸಿ ಯಕ್ಷಗಾನ ಕಲಾವಿದರ ಬಗ್ಗೆ ನಿಮ್ಮ ಅಭಿಪ್ರಾಯ ಏನು?

ಉ : ಹವ್ಯಾಸಿಗಳ ಉದ್ದೇಶವೇನೊ ಒಳ್ಳೆಯದು. ಅನುಭವ ಕಡಿಮೆಯಾಗಿ ತಪ್ಪಿಯಾರೆ ಹೊರತು ಮರ್ಯಾದೆಯನ್ನು ಮೀರುವುದಿಲ್ಲ. ಹವ್ಯಾಸಿಗಳ ಚಟುವಟಿಕೆ ಇನ್ನಷ್ಟು ಹೆಚ್ಚಬೇಕು. ಕಾಲೇಜುಗಳು ಈ ದಿಸೆಯಲ್ಲಿ ಕಾರ್ಯ ಪ್ರವೃತ್ತರಾಗಬಹುದು. ಹವ್ಯಾಸಿಗಳು ಕನಿಷ್ಠ ತಿಂಗಳಿಗೆ ಒಂದೆರಡು ಬಾರಿಯಾದರೂ ವೇಷ ಧರಿಸಬೇಕು. ಆದರೆ ಯಾವುದೇ ರಂಗ ಭೂಮಿಯಲ್ಲಿ ವೃತ್ತಿ ಇಲ್ಲದಿದ್ದರೆ ಪ್ರಯೋಗ ಕಡಿಮೆಯಾಗುತ್ತದೆ. ಪ್ರಯೋಗಗಳಿಲ್ಲದೆ ಪರಿಣಾಮ ಇಲ್ಲ. ಈ ಕಾರಣ ವೃತ್ತಿ ಮೇಳಗಳೇ

ನಿರ್ಣಾಯಕ. ಅವುಗಳನ್ನು ಪುನಃ ಚೇತನ ಗೊಳಿಸುವುದೇ ನಮ್ಮೆಲ್ಲರ ಕರ್ತವ್ಯವಾಗಬೇಕು.

ಪ್ರ : ಉದಯೋನ್ಮುಖ ಹಾಸ್ಯಗಾರರ ಬಗ್ಗೆ ನಿಮ್ಮ ವಿಚಾರ ಏನು?

ಉ : ಹೊಸಬರಲ್ಲಿ ಹಾಸ್ಯ ಪ್ರವೃತ್ತಿ ಇದೆ. ಆದರೆ ಸಂಗ್ರಹ ಶಕ್ತಿ ಕಡಿಮೆ. ಬರಿ ನಗಿಸುವುದೇ ಉದ್ದೇಶವಾಗಬಾರದು. ಹಾಸ್ಯಗಾರ ಹಾಕಿದ ಒಂದೇ ಅಂಗಿಯಲ್ಲಿ ಎಲ್ಲಾ ಪಾತ್ರವನ್ನೂ ವಹಿಸಲು ಮುಂದಾಗಬೇಕು. ಸಾಲಿಗ್ರಾಮ ಮಂಜುನಾಥಯ್ಯ ಇದಕ್ಕೆ ಉತ್ತಮ ಉದಾಹರಣೆ. ಹೊಸ ಪ್ರಸಂಗ ರಚನೆಗಳಲ್ಲಿ ಎಲ್ಲೆಡೆ ಹಾಸ್ಯ ತುರುಕುತ್ತಿದ್ದಾರೆ. ಇದು ತಪ್ಪಬೇಕು. ಕತೆಯನ್ನು ಮರೆಸುವಂತೆ ಹಾಸ್ಯವನ್ನು ಬೆಳೆಸುವುದನ್ನು ನಿಲ್ಲಿಸಬೇಕು.ಕಥಾ ಪ್ರವಾಹಕ್ಕೆ ಹಾಸ್ಯ ಪೂರಕವಾಗುವಂತೆ ಉದಯೋನ್ಮುಖರು ನೋಡಿಕೊಳ್ಳಬೇಕು.

"ಒಟ್ಟಿನಲ್ಲಿ ಇವತ್ತಿನ ಕಲಾವಿದರು ಕಲೆಗಿಂತ ಹೆಚ್ಚಾಗಿ ಸಾಮಾಜಿಕ ಮನ್ನಣೆಗೆ ತಹತಹಿಸುತ್ತಿದ್ದಾರೆ. ಪ್ರತಿಷ್ಠೆ ಗೌರವಕ್ಕಾಗಿ ಜನರ ಸಂಪರ್ಕ ಅಧ್ಯರ ಸಂಬಂಧ ಬೆಳೆಸುತ್ತಿದ್ದಾರೆ. ಇದು ತಪ್ಪಿ ಅರ್ಹತೆಯಿಂದ ಮನ್ನಣೆ ಗಳಿಸಲು ಪ್ರಯತ್ನಿಸಬೇಕು. ಆಗ ಇಂದಲ್ಲ ನಾಳೆ ಗೌರವ ಸಿಕ್ಕುತ್ತದೆ. ಸತ್ವವಿಲ್ಲದೆ ಹಿಂಬಾಗಿಲಿನಿಂದ ಬರುವ ಗೌರವ ಕಲಾವಿದನ ಪ್ರತಿಭೆಗೆ ಆಘಾತ ಒದಗಿಸುತ್ತದೆ. ಕಲಾವಿದರ, ಹಾಗೂ ಕಲೆಯ ಬೆಳವಣಿಗೆ ಇದರಿಂದ ಸಾಧ್ಯವಿಲ್ಲ. ತಾರಾಮೌಲ್ಯಕ್ಕಾಗಿ ಗುಂಪು ಕಟ್ಟಿಕೊಳ್ಳದೆ ಶಾಸ್ತ್ರಬದ್ಧ ಪ್ರಯೋಗಗಳನ್ನು ತರಲು ಪ್ರಯತ್ನಿಸಿದರೆ ಯಕ್ಷಗಾನ ಕಲೆ ಉಳಿದೀತು, ಬೆಳೆದೀತು."

ಹೀಗೆಲ್ಲಾ ಯಕ್ಷಗಾನದ ಬಗ್ಗೆ ಕಾಳಜಿಯಿಂದ ಮಾತನಾಡುವ ಭಟ್ಟರು ಕಳೆದ ನಲವತ್ತು ವರ್ಷಗಳಿಂದ ಪ್ರದರ್ಶನದಲ್ಲಿ ಒಳ್ಳೆಯದನ್ನು ಆಶಿಸಿದವರು. ಎಲೆಯ ಮರೆಯ ಕಾಯಿಯಂತೆ ಸೇವೆ ಸಲ್ಲಿಸುತ್ತಿದ್ದ ಇವರಿಗೆ ಕಳೆದಬಾರಿ ಅಕಾಡೆಮಿಯವರು ಮಾಸಾಶನವಿತ್ತು ಗೌರವಿಸಿದ್ದಾರೆ. ಮೇಲ್ಮಟ್ಟದ ಹಾಸ್ಯದಿಂದ ಎಲ್ಲಾ ವರ್ಗದ ಪ್ರೇಕ್ಷಕನ ಅಭಿಮಾನಗಳಿಗೆ ಕಾರಣರಾದಂತೆ ಸೌಜನ್ಯಪೂರಿತ ನಡೆಯಿಂದ ಸಹ ಕಲಾವಿದರ ಆದರಕ್ಕೆ ಭಾಜನರಾಗಿದ್ದಾರೆ.

■

ಜನಪ್ರಿಯ ಹಾಸ್ಯಗಾರ

ಕುಂಜಾಲು ರಾಮಕೃಷ್ಣ

ಯಕ್ಷಗಾನದಲ್ಲಿ ಹಾಸ್ಯಗಾರನ ಪಾತ್ರ ವಿಶಿಷ್ಟವಾದ್ದು. ಸಂಸ್ಕೃತ ನಾಟಕದಲ್ಲಿ ವಿದೂಷಕನು ಮಾಡುವಂತೆ ಇಲ್ಲಿ ಕೂಡ ಈತನು ಪ್ರೇಕ್ಷಕರಲ್ಲಿ ಹಾಸ್ಯ ರಸೋತ್ಪತ್ತಿ ಉಂಟು ಮಾಡುವಲ್ಲಿ ಕಾರಣನಾಗುತ್ತಾನೆ. ದ್ವಾರಪಾಲಕನ ವೇಷದಲ್ಲೋ ಬೇಟೆಗಾರನ ವೇಷದಲ್ಲೋ, ವೃದ್ಧ ಬ್ರಾಹ್ಮಣನ ವೇಷದಲ್ಲೋ ಈತ ಕಾಣಿಸಿಕೊಂಡು ಜನತೆಯನ್ನು ನಗೆಗಡಲಲ್ಲಿ ಅದ್ದುತ್ತಾನೆ. ಇಂತಹ ಪಾತ್ರ ನಿರ್ವಹಣೆ ಮಾಡಿ ಜನತೆಯಿಂದ ಮೆಚ್ಚುಗೆಯನ್ನು ಪಡೆಯುವುದು ಅಂತಹ ಕಡಿಮೆಯ ಕಲಾಸಿದ್ಧಿಯೇನಲ್ಲ. ಅಂತಹ ಪಾತ್ರಗಳನ್ನು ಯಥೋಚಿತವಾಗಿ ನಡೆಸಬೇಕಾದರೆ ಕಲಾವಿದನ ಮನೋವೃತ್ತಿಯು ಹಾಸ್ಯವನ್ನು ಅವಲಂಬಿಸಿರಬೇಕು. ಒಂದು ನಡೆಯಲ್ಲೋ, ಮಾತಿನಲ್ಲೋ, ಕುಣಿತದ ಗತಿಯಲ್ಲೋ, ವೇಷಗಾರಿಕೆಯಲ್ಲೋ ಆತ ವಕ್ರತೆಯನ್ನು ತಂದು ಆ ಮೂಲಕ ನಗುವನ್ನು ತರುತ್ತಾನೆ. ಇಂದು ಇಂತಹ ಪಾತ್ರಗಳನ್ನು ಧರಿಸಿ ಸದಾ ಜನತೆಯ ಮನದಲ್ಲಿ ಉಳಿದಿರುವ ಕೆಲವೇ ಹಾಸ್ಯಗಾರರಲ್ಲಿ ಶ್ರೀ ಕುಂಜಾಲು ರಾಮಕೃಷ್ಣರು ಮುಖ್ಯರು. ಹಾಸ್ಯವನ್ನು ತಮ್ಮ ಉಸಿರನ್ನಾಗಿಯೇ ಮಾಡಿಕೊಂಡಿದ್ದಾರೋ ಎಂಬಷ್ಟು ಸಹಜವಾಗಿ ನಟಿಸುವ ಇವರ ಅನುಭವ ತಿಳಿಯಲು ಯೋಗ್ಯವಾದುದು.

ಉಡುಪಿ ತಾಲ್ಲೂಕಿನ ನೀಲಾವರದ ಸಮೀಪದ ಕುಂಜಾಲು ಪದ್ಮನಾಭ ನಾಯ್ಕ ಮತ್ತು ಶಾರದಾಬಾಯಿಯವರ ಮಗನಾದ ಕುಂಜಾಲು ರಾಮಕೃಷ್ಣ ಅವರಿಗೆ 37 ವರ್ಷ ವಯಸ್ಸು. ತಮ್ಮ ಬಾಲ್ಯದ ದಿನಗಳಲ್ಲಿ ಆಸುಪಾಸಿನಲ್ಲಿ ಎಲ್ಲೇ ಆಟವಾಗಲಿ ತಪ್ಪದೆ ನೋಡಿ ಬರುತ್ತಿದ್ದರು. ಎಂಟನೆಯ ಇಯತ್ತೆಯವರೆಗೆ ಇವರ ವಿದ್ಯಾಭ್ಯಾಸವಾಗಿದೆ. ಈ ಬಾಲಕನ 'ಹುಡುಗಾಟಿಕೆ'ಯ ಆಟ ನೋಡಿದ ದಿ. ಮದ್ದಲೆ ತಿಮ್ಮಪ್ಪ ನಾಯ್ಕರು ಈ ಹುಡುಗ ಮುಂದೆ ಉತ್ತಮ ಯಕ್ಷಗಾನ ಕಲಾವಿದನಾಗಬಹುದು ಎಂಬ ಆಸೆಯಿಂದ ಕೊಲ್ಲೂರು ಮೂಕಾಂಬಿಕಾ ಯಕ್ಷಗಾನ ಮಂಡಳಿಗೆ 12 ವರ್ಷದವನಿರುವಾಗ ಸೇರಿಸಿದರು. ಅಲ್ಲಿ ಕೋಡಂಗಿ ವೇಷವನ್ನು ಧರಿಸುವುದರಿಂದ ಪ್ರಾರಂಭಿಸಿ, ಮುಂದೆ ಬಾಲಗೋಪಾಲ ಹಾಗೂ ಒತ್ತು ಹಾಸ್ಯಗಾರನಾಗಿ ಕಾರ್ಯ ನಿರ್ವಹಿಸಿದರು. ಎರಡು ವರ್ಷಗಳ ಕಾಲ ಅಲ್ಲಿ ನಿರಂತರ ಅಭ್ಯಾಸ ಮಾಡಿದ ಇವರು "ಬೇಡರ ಕಣ್ಣಪ್ಪ" ಪ್ರಸಂಗದ 'ಕಾಶಿಮಾಣಿ' ಪಾತ್ರವನ್ನು ವಹಿಸಿ ತಮ್ಮ ಸಾಮರ್ಥ್ಯವನ್ನು ತೋರಿಸಿ ಕೊಟ್ಟರು. ಈ ಪಾತ್ರ ಧರಿಸಿದ್ದರಿಂದ ಹಾಸ್ಯಗಾರ ಪಾತ್ರ ಇವರಿಗೆ ಲಭಿಸಿತು. ಹಾಸ್ಯವೇ ಅವರಿಗೆ ಹಿಡಿಸಲು ಕಾರಣ ಅವರ ಮನೋವೃತ್ತಿ ಹಾಗೂ ಅವರ ರೂಪವಾಗಿದೆ. "ಹಾಸ್ಯ ತಮ್ಮ ಮನೋವೃತ್ತಿಗೆ ಅಂಟಿಕೊಂಡಿದೆ" ಎನ್ನುವ ಇವರಿಗೆ ತಂದೆಯ ಚಿಕ್ಕಪ್ಪ ನೀರ ಬಚ್ಚಲ ನಾರಾಯಣ ನಾಯಕರ ಪ್ರಭಾವವೂ ಇದೆ. ಸಂಗೀತಗಾರರಾಗಿದ್ದ ಅವರು ಇವರಿಗೆ ಮೊದಲೇ ಆಸಕ್ತಿ ಹುಟ್ಟುವಂತಹ ಕೆಲಸಗಳನ್ನು ಮಾಡಿದ್ದರು. ಹಿರಿಯರ ಆಶೀರ್ವಾದದಿಂದ ನಾಲ್ಕು ಜನರ ಮೆಚ್ಚುಗೆಯ ಮಾತಿನಿಂದ ನನ್ನಲ್ಲಿ ಹಾಸ್ಯಕ್ಕೆ ಹೊಂದಿ ಹೋಗುವ ಭಾವ ಲಭಿಸಿತು. ಇದೇ ನನ್ನ ಕಲಾ ಜೀವನದ ಸಿದ್ಧಿಗೆ ಕಾರಣವಾಯಿತು ಎನ್ನುತ್ತಾರೆ.

ಕೊಲ್ಲೂರು ಮೇಳದಲ್ಲಿ ಮೊದಲೆರಡು ವರ್ಷ, ನಂತರ ಮಾರಣ ಕಟ್ಟೆಯಲ್ಲಿ ಒಂದು ವರ್ಷ, ಮುಂದೆ ಅಮೃತೇಶ್ವರಿ ಹಾಗೂ ಸಾಲಿಗ್ರಾಮ ಮೇಳಗಳಲ್ಲಿ ತಲಾ ಐದು ವರ್ಷಗಳ ಸೇವೆ ಸಲ್ಲಿಸಿ, ಮುಂದೆ ಎಂಟು ವರ್ಷಗಳ ಕಾಲ ಇಡಗುಂಜಿ ಮೇಳದಲ್ಲಿ ಪ್ರಮುಖ ಹಾಸ್ಯಗಾರರಾಗಿದ್ದರು. ಪ್ರಕೃತ ಮಂದರ್ತಿ ಮೇಳದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಇವರು ಕೊಲ್ಲೂರು ಮೇಳದಲ್ಲಿದ್ದಾಗ ಅಲ್ಲಿನ ಹಾಸ್ಯಗಾರರಾಗಿದ್ದ ದಿ. ಹಾರಾಡಿ ಕೊರಗಪ್ಪ ಹಾಸ್ಯಗಾರರನ್ನು ನೋಡಿ ಮೆಚ್ಚಿಕೊಂಡಿದ್ದರು. ಹಾಗೆಂದು ಅವರ ಅನುಕರಣೆ ಮಾಡಿದವರಲ್ಲ. ಪಾತ್ರ ನಿರ್ವಹಿಸುವಾಗ ಮನಸ್ಸಿನಲ್ಲಿ ಹೊಳೆದದ್ದನ್ನು ಹಾಸ್ಯ ಮುಖೇನ ವ್ಯಕ್ತಪಡಿಸಬಲ್ಲರು. ಕುಣಿತವನ್ನು ಹಾಸ್ಯಕ್ಕೆ ತಿರುಗಿಸಿ ತಮ್ಮ ಸ್ವಂತಿಕೆಯನ್ನು ಮೆರೆಸಿದರು. ಪ್ರಮುಖ ವೇಷಧಾರಿಗಳ ಕುಣಿತ ಹಾಗೂ ಮಾತನ್ನು ತಿರುಗಿಸಿ ಹಾಸ್ಯಕ್ಕೇ ಪರಿವರ್ತಿಸಬಲ್ಲ ಶಕ್ತಿ ಇವರಿಗೆ ಇದೆ.

ಮೇಳ ವ್ಯವಸ್ಥೆಯ ಬಗ್ಗೆ ಈ ಕಲಾವಿದ ಪ್ರಾಮಾಣಿಕವಾಗಿ ನುಡಿಯುತ್ತಾರೆ. ಅಂದಿನ ಬಯಲಾಟದ ಮೇಳಗಳಲ್ಲಿ ನಿದ್ರಾಹಾರಗಳು ಸರಿಯಾದ ಸಮಯಕ್ಕೆ ದೊರೆಯುತ್ತಿರಲಿಲ್ಲ. ಅಲ್ಲದೆ 8–10 ಮೈಲು ನಡೆದೇ ಹೋಗಬೇಕಾಗುತ್ತಿತ್ತು. ಸೌಕರ್ಯವೂ ಕಡಿಮೆ. ಇಂದು ಟೆಂಟ್ ಮೇಳವು ಬಂದ ನಂತರ ಪರಿಸ್ಥಿತಿ ತುಂಬಾ ಸುಧಾರಿಸಿದೆ. ಆರ್ಥಿಕವಾಗಿ ಅನುಕೂಲವಾಗಿದೆ. ಒಂದೊಂದು ಪ್ರಸಂಗ ವರ್ಷಕ್ಕೆ ಹಲವು ಬಾರಿಯಾಗುತ್ತದೆ. ಯಾವುದೇ ಒಬ್ಬ ಕಲಾವಿದನಿಂದ ಆಟ ಒಳ್ಳೆಯದಾಗುವುದು ಎಂಬುವುದಿಲ್ಲ. ಎಲ್ಲವೂ ಸಮಪ್ರಮಾಣದಲ್ಲಿ ಸೇರಿಕೊಂಡಾಗ ಉತ್ತಮ ಪ್ರದರ್ಶನ ನೀಡಲು ಸಾಧ್ಯ ಎನ್ನುತ್ತಾರೆ.

ತಮ್ಮ ಹಾಸ್ಯಗಾರ ವೃತ್ತಿಯ ಬಗ್ಗೆ ತೃಪ್ತಿ ತಾಳಿರುವ ಇವರು ಮೇಳದಲ್ಲಿ 'ಹಾಸ್ಯಗಾರ'ನಿಗೂ ಒಂದು ಪ್ರಮುಖ ಸ್ಥಾನವಿದೆ. ಸಹೋದ್ಯೋಗಿಗಳೂ ಕೂಡ ಹಾಸ್ಯಗಾರನೊಂದಿಗೆ ಗೌರವದಿಂದಲೇ ವರ್ತಿಸುತ್ತಾರೆ ಎನ್ನುತ್ತಾರೆ.

ಯಕ್ಷಗಾನ ಕಲೆಗಾಗಿ ದುಡಿದು ಶ್ರೀಮಂತರಾದ ಕಲಾವಿದರು ಯಾರೂ ಇಲ್ಲ. ಹಾಗೆ ನೋಡಲು ಹೋದರೆ ಸರಸ್ವತಿ ಮತ್ತು ಲಕ್ಷ್ಮಿ ಇಬ್ಬರೂ ಒಂದೆಡೆ ಸೇರುವುದು ಬಲು ಅಪರೂಪ. ಈ ಕಾರಣ ಹಣಕ್ಕಾಗಿಯೇ ಯೋಚಿಸುವುದು ತಪ್ಪು ಎನ್ನುವ ಇವರು ಇದ್ದುದರಲ್ಲೇ ತೃಪ್ತಿಪಟ್ಟುಕೊಂಡು ಬದುಕುವ ಸ್ವಭಾವದವರು. ಇನ್ನು ಸನ್ಮಾನ, ಪ್ರಶಸ್ತಿ ನೀಡುವಾಗಲೆಲ್ಲಾ ಕಲಾಭಿಮಾನಿಗಳಾಗುವುದಕ್ಕಿಂತ ವ್ಯಕ್ತಿಗಳ ಅಭಿಮಾನಿಗಳಾಗಿ ಕೊಡುವುದೇ ಹೆಚ್ಚು. ಇದು ಆರೋಗ್ಯಪೂರ್ಣವಾದುದಲ್ಲ ಎನ್ನುವುದು ಇವರ ಅಭಿಪ್ರಾಯ. ಸನ್ಮಾನಿಸುವ ವ್ಯಕ್ತಿಯ ಮೇಲಿನ ಅಭಿಮಾನಕ್ಕಿಂತ ಆತನು ಪ್ರಕಟಿಸುವ ಉಚ್ಚಮಟ್ಟದ ಕಲೆಯ ಬಗ್ಗೆ ಅಭಿಮಾನ ತಾಳಬೇಕು. ಹಾಸ್ಯಗಾರರ ದೃಷ್ಟಿಯಿಂದ ನೋಡಿದರೆ ಇದುವರೆಗೆ ಹಾಸ್ಯಗಾರರಾದವರಿಗೆ ಅಂತಹ ಪ್ರಶಸ್ತಿಗಳು ಲಭಿಸಿಲ್ಲ. ಹಾಸ್ಯಗಾರರಾಗಿ ಖ್ಯಾತಿ ಪಡೆದವರೆಂದರೆ ವಿಟ್ಲ ಗೋಪಾಲಕೃಷ್ಣ ಜೋಷಿಯವರು. ಹಾಸ್ಯಗಾರರ ಪೈಕಿ ಪ್ರಶಸ್ತಿ ಹಾಗೂ ಸನ್ಮಾನಕ್ಕೆ ಯೋಗ್ಯರಾದ ವ್ಯಕ್ತಿ. ಇನ್ನಾದರೂ ಈ ಕಡೆಗಣಿಕೆ ತಪ್ಪಬೇಕು ಎಂದು ತಿಳಿಸುತ್ತಾರೆ.

ಈ ಕಲಾ ಬದುಕಿನ ಬಗ್ಗೆ ಮಾತನಾಡುತ್ತಾ 'ತಮ್ಮ ಬದುಕಿಗೆ ಈ ಕಲೆ ಅನಿವಾರ್ಯವಾದುದು. ಈ ಕಲೆಯನ್ನು ಬದುಕಿಗಾಗಿ ಆಶ್ರಯಿಸುವುದಕ್ಕಿಂತ ಬದುಕೇ ಒಂದು ಕಲಾ ರಂಗವಾಗಿ ಮಾರ್ಪಡಿಸುವುದು ಮುಖ್ಯ. ಉತ್ತಮ ಕಲೆಯನ್ನು ಸ್ವೀಕರಿಸುವ ಸಮಾಜವಿದ್ದಾಗ ಅಂತಹ ಸುಸಂಸ್ಕೃತ ಸಮಾಜಕ್ಕೆ ನಮ್ಮಲ್ಲಿರುವ ಕಲೆಯ ಉತ್ತಮ ಅಂಶವನ್ನು ಸಾಕ್ಷಿಪೂರ್ವಕವಾಗಿ ಕೊಡುವಂತಹ ಕಾರ್ಯ ನಿಲ್ಲಬಾರದು. ಉತ್ತಮ ಕಲೆಯನ್ನು ಉಳಿಸುವಲ್ಲಿ ಎಲ್ಲರಿಗಿಂತ ಪ್ರೇಕ್ಷಕನ, ಕಲಾಭಿಮಾನಿಯ ಜವಾಬ್ದಾರಿ ಹೆಚ್ಚಿನದು.

ಕೇವಲ 'ಫ್ಯಾನ್' ಆಗಿ ಉಳಿಯುವುದಕ್ಕಿಂತ ಪ್ರತಿ ಪಾತ್ರವನ್ನು ಶೋಧಿಸಿ, ಅದರ ನಿರ್ವಹಣೆ ಗಮನಿಸಿ ಮೆಚ್ಚಬೇಕು. ಈ ಬಗೆಯ ಆರೋಗ್ಯಪೂರ್ಣ ದೃಷ್ಟಿಕೋನ ಬೆಳೆಯುವುದು ಅತ್ಯಂತ ಅಗತ್ಯ ಎನ್ನುತ್ತಾರೆ. ತಾವು ನಿರ್ವಹಿಸುವ ಪಾತ್ರವನ್ನು ಯೋಚಿಸಿ, ಅದರಲ್ಲಿ ಹಾಸ್ಯ ಹೊಮ್ಮಿಸಲು ಸಾಧ್ಯವೇ ಎಂದು ಯೋಚಿಸಿ ಭಾವಪೂರ್ಣವಾಗಿ ಅಭಿನಯಿಸುವುದು ಇವರ ಕ್ರಮ. ಇಂತಹ ಬದುಕಿನಲ್ಲೇ ಸಂತೋಷವನ್ನು ಕಂಡುಕೊಂಡಿದ್ದಾರೆ.

ದಿ। ಹಾರಾಡಿ ರಾಮ ಗಾಣಿಗ, ಕೆರೆಮನೆ ಶಿವರಾಮ ಹೆಗಡೆ, ಕೆರೆಮನೆ ಮಹಾಬಲ ಹೆಗಡೆ, ಕೆರೆಮನೆ ಶಂಭು ಹೆಗಡೆ, ಶಿರಿಯಾರ ಮಂಜು ನಾಯ್ಕ, ದಿ। ಗಜಾನನ ಹೆಗಡೆ, ಕೋಟಾ ವೈಕುಂಠ ಮುಂತಾದವರ ಪಾತ್ರ ನಿರ್ವಹಣೆಯನ್ನು ಮನಸಾ ಮೆಚ್ಚಿಕೊಂಡಿರುವ ಕುಂಜಾಲು ರಾಮಕೃಷ್ಣಯ್ಯ ಅವರಲ್ಲಿರುವ ತಾದಾತ್ಮ್ಯ ಭಾವವನ್ನು ಹೊಗಳುತ್ತಾರೆ. ನೂತನ ಪ್ರಸಂಗಗಳಿಗಿಂತ ಹಳೆಯ ಪ್ರಸಂಗಗಳನ್ನು ಹೆಚ್ಚು ಮೆಚ್ಚುವ ಈ ಹಾಸ್ಯಗಾರರಿಗೆ ಮುದವನಿತ್ತ ಪ್ರಸಂಗಗಳೆಂದರೆ ಸತ್ಯ ಹರಿಶ್ಚಂದ್ರ, ಚಂದ್ರಹಾಸ ಮುಂತಾದವುಗಳು. ಮೇಳದ ಯಜಮಾನರುಗಳ ವ್ಯಾಪಾರ ದೃಷ್ಟಿಯಿಂದಾಗಿ ನೂತನ ಪ್ರಸಂಗಗಳು ಚಲಾವಣೆಗೆ ಬರುತ್ತವೆ. ಆದರೆ ಅವುಗಳ ಆಯುಸ್ಸು ಒಂದು ಯಾ ಎರಡು ವರ್ಷ ಮಾತ್ರ. ತಿಟ್ಟಿನಲ್ಲಿ ಮಾತ್ರ ಅಂತಹ ಭೇದ ಭಾವನೆ ಸಲ್ಲದು. ಅವರವರ ತಿಟ್ಟು ಅವರವರಿಗೆ ಇಷ್ಟವಾದುದು ಎನ್ನುತ್ತಾರೆ. ಪ್ರಸಂಗಗಳ ಕಂಠಪಾಠ, ರಸಾನುಭವ, ರಂಗಸ್ಥಳದ ಪರಿಜ್ಞಾನ, ಕತೆಯನ್ನು ಮೇಳೈಸುವ ಪರಿ, ಲಯ ಜ್ಞಾನ ಇರುವಂತಹ ಭಾಗವತರೇ ಸಮರ್ಥರು. ಅವರನ್ನು ನಾನು ಸದಾ ಗೌರವಿಸುತ್ತೇನೆ ಎಂದು ಪ್ರಾಮಾಣಿಕವಾಗಿ ತಿಳಿಸುತ್ತಾರೆ. ಇವರಿಗೆ ಖುಷಿಕೊಟ್ಟ ಪಾತ್ರಗಳೆಂದರೆ ಭಾಸವತಿಯ 'ವಿಲಕ್ಷಣ' ಸುಹಾಸಿನಿ ಪರಿಣಯದ 'ವಿಧೂರಥ', ಬೇಡರ ಕಣ್ಣಪ್ಪದ 'ಕಾಶಿಮಾಣಿ' ಪಾತ್ರಗಳು. ಇವುಗಳೇ ಇವರಿಗೆ ಖ್ಯಾತಿಯನ್ನು ಕೊಟ್ಟ ಪಾತ್ರಗಳೆಂಬುದನ್ನು ಗಮನಿಸಬೇಕು.

ಶ್ರೀ ಕುಂಜಾಲು ರಾಮಕೃಷ್ಣ ಅವರು ಹಾಸ್ಯ ರಸೋತ್ಪತ್ತಿಯ ಬಗ್ಗೆ ಸಾಕಷ್ಟು ಚಿಂತನೆ ಮಾಡಿದ್ದಾರೆ. ಒಬ್ಬ ಹಾಸ್ಯಗಾರನಾದವನ ಮನೋಧರ್ಮವು ಹಾಸ್ಯಕ್ಕೆ ಹೊಂದಿಕೊಂಡಿರಬೇಕು. ಹೆಚ್ಚಾಗಿ ಆತ ಘಟನೆಗಳನ್ನು ಆಶ್ರಯಿಸಿ ಹಾಸ್ಯ ಹೊಮ್ಮಿಸುತ್ತಾನೆ. ಪ್ರಸಂಗ ಪುಸ್ತಕದಲ್ಲಿ ಬಂದ ಅಂಶಗಳನ್ನು ಗ್ರಹಿಸಿ, ಕಲ್ಪನೆಯನ್ನು ಬೆಳೆಸಿ, ಹೇಗೆ ಹಾಸ್ಯವನ್ನು ಬಿಂಬಿಸಬಹುದೆಂದು ಯೋಚಿಸಬೇಕು. ಮಾನವನಲ್ಲಿ ಅಡಗಿರುವ ವಿಕಾರಗಳನ್ನು ಇಲ್ಲಿ ತೋರಿಸಿ ಆ ಮೂಲಕ ಜನಮನಕ್ಕೆ ಕನ್ನಡಿ ಹಿಡಿಯಬಹುದು. ಧರಿಸುವ ಪಾತ್ರದ ಔಚಿತ್ಯವನ್ನು ಅರಿತು, ಅಶ್ಲೀಲವಾಗದಂತೆ ಹಾಸ್ಯವನ್ನು ತೋರ್ಪಡಿಸಬೇಕು. ಹಾಸ್ಯ ಕೇವಲ ಹಾಸ್ಯಕ್ಕಾಗಿ ಬಾರದೇ ಅದರ ಹಿಂದಿರುವ ಸತ್ಯವನ್ನು

ಬಿಂಬಿಸಲು, ಸಮಾಜದ ವಕ್ರತೆಯನ್ನು ತೋರ್ಪಡಿಸಲು ಸಹಕಾರಿಯಾಗಬೇಕು ಎಂಬುದು ಅವರ ದೃಷ್ಟಿಕೋನ. ಇದಕ್ಕೇ ಅವರು ಹಾಸ್ಯ ಮಾಡಿದ ಬೇಡರ ಕಣ್ಣಪ್ಪದ 'ಕಾಶಿಮಾಣಿ' ಪಾತ್ರವನ್ನೇ ಉದಾಹರಿಸುತ್ತಾರೆ. ಅಲ್ಲಿ ಬರುವ ಕಾಶಿಮಾಣಿ ಇರುವುದು ಅಂಧಶ್ರದ್ಧೆಯ, ಮೂಢ ಆಚರಣೆಗೆ ಕಟ್ಟುಬಿದ್ದ ಸಮಾಜದಲ್ಲಿ. ತಂದೆಗೆ ಹೆದರಿ ಬಾಳುವ ಆತನ ವ್ಯಕ್ತಿತ್ವವೂ ಜೊಳ್ಳು, ಅಷ್ಟೇ ಆತ ದಡ್ಡನೂ ಹೌದು. ಇಂತಹ ವಿಲಕ್ಷಣ ಪಾತ್ರ ಹಾಸ್ಯಕ್ಕೆ ಉತ್ತಮ ಸರಕು. ಹಾಗೇ ಆ ಮೂಲಕ ನಮ್ಮ ರೂಢಮೂಲ ಸಮಾಜವನ್ನು ಬಡಿದೆಬ್ಬಿಸಲು ಸಹಾಯಕ. ಆದುದರಿಂದಲೇ ಆ ಪಾತ್ರಕ್ಕೆ ಮುಖವರ್ಣಿಕೆ ಬಳಿದು ಬರುವುದು. ಎರಡು ಕಣ್ಣಲ್ಲಿ ದೃಷ್ಟಿ ಇಲ್ಲದ ಹಾಗೆ ಪ್ರೇಕ್ಷಕರಿಗೆ ತೋರಿಸುವುದು, ವಕ್ರತೆಯನ್ನು ತೋರಿಸುವುದು, ಕುಣಿತದಲ್ಲೂ ವಿಕಾರ ತರುವುದು. ಇವೆಲ್ಲವುಗಳ ಮೂಲಕ ಹಾಸ್ಯಗಾರ ತನ್ನ ಉದ್ದೇಶ ತೀರಿಸಿಕೊಳ್ಳಲು ಸಾಧ್ಯ.

ಇನ್ನು ಭಾಷೆ ವಿಚಾರದಲ್ಲಿ ಕುಂಜಾಲು ರಾಮಕೃಷ್ಣಯ್ಯ ಸ್ಪಷ್ಟ ಅಭಿಪ್ರಾಯ ತಿಳಿಸಿದ್ದಾರೆ. ಉಳಿದ ಪಾತ್ರಗಳ ಭಾಷೆಗೂ, ಹಾಸ್ಯಗಾರನ ಭಾಷೆಗೂ ವ್ಯತ್ಯಾಸ ಇರಬೇಕು. ಪ್ರಸಂಗದಲ್ಲೇ ಕೆಲವು ಬಾರಿ ಅದನ್ನು ನಿರೂಪಿಸಲಾಗಿದೆ. 'ಅದನ್ನು ಬರೆದಂತ ಕವಿ ಹೆಡ್ಡನಲ್ಲ' ಹೆಚ್ಚಾಗಿ ಹಾಸ್ಯ ಪಾತ್ರಗಳೆಂದರೆ ದೂತ, ಕಾವಲುಗಾರ, ಕಿರಾತ, ವೃದ್ಧ ಬ್ರಾಹ್ಮಣ ಮುಂತಾದುವು. ಇವರಲ್ಲಿ ಕಿರಾತ ಹಾಗೂ ಕುರುಬರ ಕಾಳ ಮುಂತಾದ ಪಾತ್ರಗಳಲ್ಲಿ ಪ್ರಸಂಗ ಕರ್ತೃವೇ ಉತ್ತರ ಕರ್ನಾಟಕ ಭಾಷೆಯನ್ನು ಬಳಸಿದ್ದಾನೆ. ಇದು ಅವಲೋಕನಾರ್ಹ ವಿಚಾರ. ಅಲ್ಲಿಯೇ ಉತ್ತರ ಕರ್ನಾಟಕದ ಭಾಷೆ ಬಳಕೆ ಇರುವುದರಿಂದ ಕಷ್ಟವಾದರೂ ಚಿಂತೆ ಇಲ್ಲ ಅಭ್ಯಾಸ ಮಾಡಬೇಕು. ಇನ್ನು ಕಾವಲುಗಾರ, ದೂತ ಮುಂತಾದ ಪಾತ್ರಗಳಲ್ಲಿ ಸ್ವಲ್ಪ ಆಡುಭಾಷೆಯ ಬಳಕೆ ತಪ್ಪಲ್ಲ. ಈ ಬಗೆಯ ಪಾತ್ರಗಳು ಸಮಾಜವನ್ನು ಪ್ರತಿನಿಧಿಸುವುದರಿಂದ ಇದು ಔಚಿತ್ಯವನ್ನೇನೂ ಮೀರುವುದಿಲ್ಲ. ಅಲ್ಲದೆ ಹಾಸ್ಯಕ್ಕೂ ಒಳ್ಳೆಯ ಕಾರಣವಾಗುತ್ತದೆ.

ಹಾಸ್ಯಗಾರನಾದವನಿಗೆ ಔಚಿತ್ಯ ಪ್ರಜ್ಞೆ ಇರಬೇಕೆಂಬುದು ಈ ಹಾಸ್ಯಗಾರರ ಅಭಿಮತ. ನಾಲ್ಕು ಜನ ಪ್ರೇಕ್ಷಕರ ಚಪ್ಪಾಳೆಗೋಸ್ಕರ ದೂತ ರಾಜನನ್ನು ಮೀರಿಸುವುದು ಸರಿಯಲ್ಲ. ರಾಜ ರಾಜನೇ, ದೂತ ದೂತನೇ. ಹಾಸ್ಯ ಪಾತ್ರಧಾರಿ ಇದನ್ನು ಗಮನಿಸಬೇಕು. ಕೇವಲ ರಂಜನೆಗಾಗಿ ರಾಜನ ಪಾತ್ರವನ್ನೇ ಬೀಳುಗೆಳೆಯುವುದು ಸರಿಯಲ್ಲ. ಆದರೆ ಇಂದಿನ ಪ್ರೇಕ್ಷಕರಿಂದ ಕೆಲವು ಹಾಸ್ಯಗಾರರು ದಾರಿ ತಪ್ಪುತ್ತಾರೆ. ಇದರ ಬಗ್ಗೆ ಶ್ರೀಯುತರು ವಿಷಾದ ವ್ಯಕ್ತಪಡಿಸುತ್ತಾರೆ.

ಹಾಸ್ಯಗಾರನಾದವನಿಗೆ ಕೆಲವೇ ಪಾತ್ರಗಳು ಅವರದ್ದಾಗಿದೆ. ಅವುಗಳಲ್ಲೇ ಅವರು ತಮ್ಮ ಪ್ರತಿಭೆಯನ್ನು ತೋರಿಸಬೇಕಾಗುತ್ತದೆ. ಈ ಮಿತಿಯಲ್ಲೇ ಹಾಸ್ಯಗಾರನಾದವನಿಗೆ

ಕರ್ತವ್ಯ ನಿರ್ವಹಿಸಬೇಕಾಗುತ್ತದೆ. ಆದುದರಿಂದಲೇ ಹಾಸ್ಯಗಾರನ ಶಕ್ತಿಯ್ನನು ಅವಲಂಬಿಸಿ ಇಲ್ಲಿ ಪಾತ್ರಗಳು ಹೊರಬರುತ್ತವೆ. ಆದುದರಿಂದಲೇ ಜನ ಹಾಸ್ಯಗಾರ ಯಾರು? ಎಷ್ಟು ಹೊತ್ತಿಗೆ ಬರುತ್ತಾನೆ ಎಂಬುದನ್ನು ಲೆಕ್ಕ ಹಾಕುತ್ತಾರೆ.

ಶ್ರೀಯುತರ ದೃಷ್ಟಿಯಲ್ಲಿ ಹಾಸ್ಯಗಾರನಾದವನು ಹೊಸ ಕೊಡುಗೆ ನೀಡಲು ಸದಾ ಪ್ರಯತ್ನಿಸುತ್ತಿರಬೇಕಾಗುತ್ತದೆ. ಕೆಲವೊಮ್ಮೆ ಎದುರು ಪಾತ್ರಗಳ ದೌರ್ಬಲ್ಯವನ್ನು ಹಾಸ್ಯಕ್ಕೆ ವಸ್ತುವನ್ನಾಗಿಸುವ ಸಾಧ್ಯತೆ ಇದೆ. ಪೌರಾಣಿಕ ಪ್ರಸಂಗಗಳಲ್ಲಿ ರಾಜಕೀಯ ವಿಚಾರವನ್ನಾಗಲೀ ತಂದು ಹಾಸ್ಯ ಮಾಡ ಹೊರಡುವುದು ತಪ್ಪು, ಹಾಸ್ಯಗಾರನಲ್ಲಿ ಕೆಲವೊಂದು ಅಂಶಗಳು "ರಿಪಿಟೇಷನ್" ಮಾಡುವುದು ಅನಿವಾರ್ಯವಾಗುವ ಕಾರಣ ಪ್ರಸಂಗಗಳು ಬೇರೆ ಬೇರೆ ಆದರೂ ಸನ್ನಿವೇಶಗಳು ಕೆಲವು ಬಾರಿ ಒಂದೇ ಆಗಿರುವುದರಿಂದ ಈ ಬಗೆಯಲ್ಲಾಗುವುದು ಸಹಜ. ಉತ್ತಮ ಹಾಸ್ಯಗಾರನು ಹೇಗಿರಬೇಕು ಎನ್ನುವುದಕ್ಕೆ ಉತ್ತರವಾಗಿ "ಉತ್ತಮ" ಹಾಸ್ಯ ಪ್ರದರ್ಶಿತವಾಗಬೇಕಿದ್ದರೆ ಹಾಸ್ಯಗಾರನ ಜೊತೆಯಲ್ಲಿ ಉಳಿದವರ ಸಹಕಾರವೂ ಅಗತ್ಯ. ಹಿಮ್ಮೇಳದವರ, ಇದಿರು ಕಲಾವಿದರ ಸಹಕಾರವಿದ್ದಾಗ ಮಾತ್ರ ಹಾಸ್ಯೋತ್ಪತ್ತಿ ಸಾಧ್ಯ. ಆದಕಾರಣ ಉತ್ತಮ ಹಾಸ್ಯಗಾರನು ಹಿಮ್ಮೇಳದ ಸಹಾಯ ತೆಗೆದುಕೊಳ್ಳಬೇಕು. ಹಾಸ್ಯ ಹೊಮ್ಮಬಲ್ಲಂತಹ ನರ್ತನಕ್ಕೆ ಹಿಮ್ಮೇಳದವರು ಬಾಜಿಸಬೇಕು. ಅಭಿನಯದಲ್ಲಿ ಹಾಸ್ಯ ಹೊಮ್ಮುವ ಶಕ್ತಿ ಇರಬೇಕು. ಪ್ರಸಂಗಗಳಲ್ಲಿ ಹಾಸ್ಯ ಉತ್ಪತ್ತಿಗೆ ಅನುಕೂಲವಾಗುವ ಪದ್ಯಗಳಾಗುವುದು ಎನ್ನುವುದನ್ನು ತಿಳಿದಿರಬೇಕು, ಸಂದರ್ಭೋಚಿತ ರಂಗ ಪ್ರಜ್ಞೆಯನ್ನು ಆತ ವ್ಯಕ್ತಪಡಿಸಬೇಕು. ಕತೆ ಮುಂದೆ ನಡೆಯಲು ಅವಕಾಶವಾಗುವಂತೆ ಆತ ವ್ಯವಹರಿಸಬೇಕು, ಇವೆಲ್ಲಾ ಉತ್ತಮ ಹಾಸ್ಯಗಾರನಲ್ಲಿ ಇರಬೇಕಾದ ಅಂಶಗಳು ಎನ್ನುತ್ತಾರೆ.

ಯಕ್ಷಗಾನ ಇರುವವರೆಗೆ ಹಾಸ್ಯಗಾರನಿಗೆ ಭವಿಷ್ಯವಿದೆ ಎಂದು ಹೇಳುವ ಕುಂಜಾಲು ರಾಮಕೃಷ್ಣಯ್ಯ ಹಾಸ್ಯಗಾರನಲ್ಲಿ ಇರುವ ಕ್ರಿಯಾಶೀಲತೆ ಇದಕ್ಕೆ ಕಾರಣ ಎನ್ನುತ್ತಾರೆ. ಹಾಸ್ಯಗಾರನಾದವನು ಅತಿಗೆ ಹೋಗದೆ ಮಿತಿಯಲ್ಲೇ ಇದ್ದು ಜನರನ್ನು ರಂಜಿಸುತ್ತಾ ತಮ್ಮ ಕರ್ತವ್ಯಗಳನ್ನು ನಿರ್ವಹಿಸಬೇಕು ಎನ್ನುತ್ತಾರೆ.

■

ಖ್ಯಾತ ಮೃದಂಗ ವಾದಕ

ಹಿರಿಯಡ್ಕ ಗೋಪಾಲ ರಾವ್

ಯಕ್ಷಗಾನ ರಂಗಭೂಮಿಯಲ್ಲಿ ಹಿಮ್ಮೇಳಕ್ಕೆ ಹಿರಿದಾದ ಸ್ಥಾನವಿದೆ. ಹಿಮ್ಮೇಳದಲ್ಲಿರುವವರು ಇರುವುದು ವೇದಿಕೆಯ ಹಿಂಭಾಗದಲ್ಲಾದರೂ ಅವರು ಯೋಚಿಸುವುದು, ದುಡಿಯುವುದು ತಮ್ಮ ಮುಂದೆ ನಡೆಯುತ್ತಿರುವ ಪ್ರದರ್ಶನ ಕಳೆಕಟ್ಟುವುದರ ಬಗ್ಗೆಯೇ. ಈ ಕಾರ್ಯದಲ್ಲಿ ಭಾಗವತರಷ್ಟೇ ಮದ್ದಲೆಗಾರರಿಗೂ ಹೊಣೆ ಇದೆ. ಮೃದಂಗವಾದಕ ತನ್ನ ಪ್ರತಿಭಾವಿಲಾಸದೊಂದಿಗೆ ಪಾತ್ರಧಾರಿಯ ಸಾಮರ್ಥ್ಯಕ್ಕೆ ಅನುಗುಣವಾಗಿ ಭಾಗವತರೊಂದಿಗೆ ಸೇರಿಕೊಂಡು ಕುಣಿಸಬಲ್ಲ ಶಕ್ತಿ ಹೊಂದಿರಬೇಕಾಗುತ್ತದೆ. ಈ ನಿಟ್ಟಿನಲ್ಲಿ ಯಕ್ಷಗಾನ ರಂಗದಲ್ಲಿ ಸಮರ್ಥವಾಗಿ ದಕ್ಷವಾಗಿ ದುಡಿದು ನಿವೃತ್ತರಾಗಿರುವ, ಹಿರಿಯಡ್ಕ ಗೋಪಾಲರಾವ್ ಅವರು ಮುಖ್ಯರು. ತಮ್ಮ ಸುದೀರ್ಘ ಕಲಾ ಬದುಕಿನಲ್ಲಿ ಧೀಮಂತರ ಸಹಚರ್ಯವನ್ನು ಸದಾ ಹೊಂದಿರುವ ಈ ಪ್ರತಿಭಾವಂತರ ಅನುಭವದ ಗಣಿ ಬಹು ದೊಡ್ಡದು. ಅವರಲ್ಲಿ ಹುದುಗಿರುವ ಅಪೂರ್ವ ಭಂಡಾರ ಇಂದಿನ ಕಲಾಸಕ್ತರಿಗೆ ಅಮೂಲ್ಯವಾದದ್ದು. ಮದ್ದಲೆಯನ್ನು ಬಹು ಸಮರ್ಪಕವಾಗಿ ನುಡಿಸಿ ವಿದೇಶಿಯರ ಮನಸ್ಸನ್ನು ಸೂರೆಗೊಂಡ ಖ್ಯಾತಿ ಅವರದ್ದು.

ಕರ್ನಾಟಕ ರಾಜ್ಯ ಸರ್ಕಾರ ಶ್ರೀಯುತರಿಗೆ ಪ್ರಶಸ್ತಿಯನ್ನು ಹಾಗೂ ಮಾಸಾಶನವನ್ನು ಇತ್ತು ಗೌರವಿಸಿದೆ.

63 ವರ್ಷ ವಯಸ್ಸಿನ ಹಿರಿಯಡ್ಕ ಗೋಪಾಲರಾಯರು ಓದಿದ್ದು ಕೇವಲ ಏಳನೆಯ ತರಗತಿಯವರೆಗೆ ಮಾತ್ರ. ಹಿರಿಯಡ್ಕದ ಶೇಷಗಿರಿರಾವ್ ಮತ್ತು ಲಕ್ಷ್ಮೀ ಬಾಯಿಯವರಿಗೆ ಮಗನಾಗಿ ಜನಿಸಿದ ಇವರಿಗೆ ಬಾಲ್ಯದಿಂದಲೂ ಮದ್ದಲೆಯ ನಂಟು. ಇವರ ಅಜ್ಜ ಲಕ್ಷ್ಮಣಯ್ಯ ವೃತ್ತಿಯಲ್ಲಿ ವ್ಯಾಪಾರಸ್ಥರಾದರೂ ಚೌತಿಯ ಸಮಯದಲ್ಲಿ ನಡೆಯುತ್ತಿದ್ದ 'ತಾಳಮದ್ದಲೆ ಕೂಟ'ದಲ್ಲಿ ಮದ್ದಲೆ ಬಾರಿಸುತ್ತಿದ್ದರು. ತಂದೆಯವರಿಗೂ ಯಕ್ಷಗಾನದ ಗೀಳು, ಅಂದಿನ ಐಗಳ ಮಠದಲ್ಲಿ ಯಕ್ಷಗಾನವು ಒಂದು ಕಲಿಕೆಯ ಅಂಗ. ಹೀಗೆ ಇವರ ಬಾಲ್ಯದಲ್ಲಿ ಸುತ್ತಾ ಯಕ್ಷಗಾನದ ಪರಿಸರವೇ ಹೆಣೆಯಲ್ಪಟ್ಟಿತು.

1935ರಲ್ಲಿ ಹಿರಿಯಡ್ಕ ಮೇಳದ ತಿರುಗಾಟದಲ್ಲಿ ಇವರೂ ಸೇರಿಕೊಂಡರು. ಗೋಪಾಲರಾಯರಿಗೆ ನಾಗಪ್ಪ ಕಾಮತರು ಮೊದಲ ಮಾರ್ಗದರ್ಶಕರು, ಎರಡು ವರ್ಷಗಳ ಕಾಲ ವೇಷಧಾರಿಯಾಗಿ ಮೇಳದ ಅನುಭವವನ್ನು ಗಳಿಸಿದರು. ಆದರೆ ಅತ್ರಾಡಿಯಲ್ಲಿ ನಡೆದ ಒಂದು ಆಟದಲ್ಲಿ ಕಟ್ಟಿದ್ದ ಮುಂಡಾಸು ಉರುಳಿಹೋಯಿತು. ಅಂದಿನಿಂದ ವೇಷ ಕಟ್ಟುವುದನ್ನು ನಿಲ್ಲಿಸಿದರು. ಇದರಿಂದಾಗಿ ಮದ್ದಲೆಯ ಜೀವನ ಇವರಿಗೆ ಜೊತೆಯಾಯಿತು. ಮೂರು ವರ್ಷಗಳ ಕಾಲ ಹಿರಿಯಡ್ಕ ಮೇಳದಲ್ಲಿ ಒತ್ತು ಮದ್ದಲೆಗಾರರಾಗಿದ್ದು ವಾಸುದೇವ ಉಪ್ಪೂರರ ಮಾರ್ಗದರ್ಶನದಲ್ಲಿ ಮದ್ದಲೆ ನುಡಿಸಲು ಸಮರ್ಥರಾದರು. ಮುಂದೆ ಗಣಪತಿ ಪ್ರಭುಗಳು ಇವರನ್ನು ಪೆರ್ಡೂರು ಮೇಳಕ್ಕೆ ಕರೆದರು. ಅಲ್ಲಿ ಕೋಟ ಶ್ರೀನಿವಾಸ ನಾಯಕರು ಭಾಗವತರಾಗಿದ್ದರು. ಹಾಗೆ ಅಮೃತೇಶ್ವರಿ ಮೇಳದಲ್ಲಿ ಒಂದು ವರ್ಷವಿದ್ದು ಮುಂದೆ ಇಪ್ಪತ್ತು ವರ್ಷಗಳ ಕಾಲ ಮಂದರ್ತಿ ಮೇಳದಲ್ಲಿ ಸೇವೆ ಮಾಡಿದರು. ಈ ಕಾಲವನ್ನು 'ಬಡಗುತಿಟ್ಟಿನ ಸುವರ್ಣ ಯುಗವೆಂದು' ಕರೆದರೆ ತಪ್ಪಾಗಲಾರದು. ಯಕ್ಷಗಾನದ ಬೇರೆ ಬೇರೆ ಅಂಗಗಳಲ್ಲೂ ಶ್ರೇಷ್ಠರಾಗಿದ್ದವರು ಅಂದು ಒಂದೆಡೆ ಸೇರಿದ್ದರು. ಈ ಸಂದರ್ಭದಲ್ಲೇ ಪ್ರಯೋಗ ಪ್ರಿಯ ಶ್ರೀ ಶಿವರಾಮ ಕಾರಂತರು ಆ ರಂಗವನ್ನು ಪ್ರವೇಶಿಸಿದರು. ಇದೆಲ್ಲದರ ಫಲಿತವಾಗಿ ಯಕ್ಷಗಾನಕ್ಕೊಂದು ಮಾನ್ಯತೆ ಲಭಿಸಿತು.

ಗೋಪಾಲರಾವ್ ಅವರೊಂದಿಗೆ ಹೆಚ್ಚುಕಾಲ ಭಾಗವತರಾಗಿದ್ದವರೆಂದರೆ ಶೇಷಗಿರಿ ಭಾಗವತರು. ಇವರಲ್ಲದೆ ಶ್ರೀನಿವಾಸ ಉಪ್ಪೂರರು, ರಾಮಚಂದ್ರ ನಾವಡರು, ನಾರಾಯಣ ಉಪ್ಪೂರರು ಹೀಗೆ ಖ್ಯಾತಿವೆತ್ತ ಭಾಗವತರ ಕಂಠಕ್ಕೆ ಮದ್ದಲೆಯ ದನಿ ಸೇರಿಸಿದರು. 1968ರಲ್ಲಿ ಶ್ರೀ ಶಿವರಾಮ ಕಾರಂತರಿಂದಾಗಿ 'ಬ್ರಹ್ಮಾವರ ಯಕ್ಷಗಾನ ಕೇಂದ್ರ' ಪ್ರಾರಂಭವಾದಾಗ ಒಂದು ವರ್ಷ ಅಲ್ಲಿ ಇದ್ದು ಮುಂದೆ ಉಡುಪಿಯ ಯಕ್ಷಗಾನ

ಕಲಾಕೇಂದ್ರದಲ್ಲಿ 1969ರಿಂದ 1976ರ ವರೆಗೆ ಮದ್ದಲೆಯ ಗುರುವಾಗಿ ಸಾಕಷ್ಟು ಶಿಷ್ಯರಿಗೆ ತರಬೇತಿ ನೀಡಿದರು. 1976ರಲ್ಲಿ ಒಮ್ಮೆ ಹಾಗೂ 78ರಲ್ಲಿ ಇನ್ನೊಮ್ಮೆ ಹೀಗೆ ಎರಡು ಬಾರಿ ಅಮೇರಿಕ ಪ್ರವಾಸ ಕೈಗೊಂಡಿರುವ ಇವರು ಯಕ್ಷಗಾನ ಕಲೆಯ ಬಗ್ಗೆ ಸರಿಯಾದ ಮಾಹಿತಿ ನೀಡಬಲ್ಲ ಕೆಲವೇ ಹಿರಿಯ ಕಲಾವಿದರಲ್ಲಿ ಒಬ್ಬರಾಗಿದ್ದಾರೆ. ಈಗ ಹಿರಿಯಡ್ಕದ ತಮ್ಮ ಮನೆಯಲ್ಲಿ ನಿವೃತ್ತಿ ಜೀವನವನ್ನು ನಡೆಸುತ್ತಿದ್ದಾರೆ.

ತಾವು ವೃತ್ತಿಯನ್ನು ಆರಂಭಿಸಿದ ದಿನಗಳ ಮೇಳದ ಗತಿ ಸ್ಥಿತಿಯನ್ನು ಗೋಪಾಲರಾಯರು ವಿಶ್ಲೇಷಿಸುತ್ತಾ "ವರ್ಷದಲ್ಲಿ 5 ತಿಂಗಳೂ ಮೇಳದೊಂದಿಗೆ ತಿರುಗಾಟ, ಮೇಳದೊಡನೆ ಹೊರಟಾಗ ಮನೆಯ ಕಡೆ ಯೋಚನೆ ಇರುವುದಿಲ್ಲ. ಮೇಳದ ಪ್ರಪಂಚವೇ ಭಿನ್ನ. ರಾತ್ರಿ ಹೊತ್ತು ಎಚ್ಚರವಾಗಿದ್ದು ಪ್ರಸಂಗ ನಡೆಯುವುದನ್ನು ಅವಲೋಕಿಸುತ್ತಾ ಅದರಲ್ಲಿ ಭಾಗಿಯಾಗುತ್ತಾ ಆಟದಲ್ಲೇ ತಾದಾತ್ಮ್ಯವನ್ನು ಹೊಂದುವುದು. ಹಗಲೆಲ್ಲಾ ಸ್ನೇಹಿತರೊಂದಿಗೆ ಮಾತಾಡುತ್ತಾ ಎಂಟು ಹತ್ತು ಮೈಲು ನಡೆಯುವುದು, ನಡೆಯುವಾಗಲು ಆಟದ ಬಗ್ಗೆ ಮಾತನಾಡುತ್ತಾ ದೊಡ್ಡ ಕಲಾವಿದರನ್ನು ಆಶ್ರಯಿಸುತ್ತಾ ಮನಸ್ಸಿಗೆ ನೆಮ್ಮದಿಯನ್ನು ಪಡೆದುಕೊಳ್ಳುವುದು. ಅದು ಎಷ್ಟೇ ಕಷ್ಟವಿದ್ದರೂ ಈ ಕಲಾಭಿರುಚಿಯಿಂದಾಗಿ ಜೀವನದ ಕಷ್ಟಗಳನ್ನು ಮರೆಯುವುದು. ಅಂದು ಮೇಳದ ಕಲಾವಿದರ ಸ್ಥಿತಿ ಗತಿ ಅಂತಹ ಉತ್ತಮ ಮಟ್ಟದ್ದಾಗಿರಲಿಲ್ಲ. ವರ್ಷವೆಲ್ಲಾ ಸುಮಾರು ಒಂದು ನೂರು ಆಟಗಳನ್ನು ಆಡುತ್ತಿದ್ದರು. ಸಮರ್ಥ ಕಲಾವಿದನಿಗೆ 40 ಪ್ರಸಂಗಗಳು ಬಾಯಿಗೆ ಬರುತ್ತಿದ್ದವು. ಅಂದು ಐಗಳ ಮಠದಲ್ಲೂ ಹಲವು ಪ್ರಸಂಗಗಳನ್ನು ಹೇಳಿಕೊಡಲಾಗುತ್ತಿತ್ತು. ಇದರಿಂದಾಗಿ ಪ್ರೇಕ್ಷಕರಲ್ಲಿ ಕೆಲವರಾದರೂ ಕೂಡ ಯಕ್ಷಗಾನದ ಪ್ರಸಂಗಗಳ ಬಗ್ಗೆ ತಿಳಿದವರಾಗಿರುತ್ತಿದ್ದರು. ಅಂದಿನ ಕಲಾವಿದರ್‍ಯಾರು ದುಡ್ಡಿಗಾಗಿ ಮೇಳವನ್ನು ಆಶ್ರಯಿಸಿದವರಲ್ಲ. ಮನೆಯಲ್ಲಿ ವ್ಯವಸಾಯವಿದ್ದು ಬಿಡುವಿನ ಸಮಯದಲ್ಲಿ ಯಕ್ಷಗಾನವನ್ನು ತಮ್ಮ ಕಲಾಭಿವ್ಯಕ್ತಿಗೆ ಮಾಧ್ಯಮವನ್ನಾಗಿ ಮಾಡಿಕೊಂಡಿದ್ದರು. ಅಂದು ಇದ್ದ ಪ್ರಸಿದ್ಧ ಭಾಗವತರುಗಳಾದ ಶೇಷಗಿರಿ ಭಾಗವತರು. ಹೆರಂಜೆ ಶಿವರಾಮಯ್ಯ, ಶ್ರೀನಿವಾಸ ಉಪ್ಪೂರರು ಮುಂತಾದವರಿಗೆಲ್ಲಾ 30-40 ಪ್ರಸಂಗಗಳು ಬಾಯಿಗೆ ಬರುತ್ತಿದ್ದವು. ವೇಷಧಾರಿಗಳೂ ಕೂಡ ಈ ಪ್ರಸಂಗಗಳಲ್ಲಿ ಪಾತ್ರಗಳನ್ನು ತಮ್ಮ ಬಾಲ್ಯದಿಂದಲೂ ನೋಡಿ ಮುಂದೆ ಅದನ್ನೇ ಧರಿಸಿ ರಂಗದನುಭವ ಪಡೆದುಕೊಳ್ಳುತ್ತಿದ್ದರು. ಜನರೂ ಕೂಡ ಇವರ ಇತರ ಪಾತ್ರಗಳೊಂದಿಗೆ ಇಲ್ಲವೇ ಬೇರೆಯವರ ಪಾತ್ರದೊಂದಿಗೆ ತುಲನೆ ಮಾಡಿ ಇವರ ಕಲಾ ಸಾಮರ್ಥ್ಯಕ್ಕೆ ಬೆಲೆ ಕಟ್ಟುತ್ತಿದ್ದರು. ಆದ್ದರಿಂದಲೇ ಪ್ರದರ್ಶನ ದಾರಿ ತಪ್ಪುವ ಸಂಭವ ಕಡಿಮೆ ಇತ್ತು.

ಹಿರಿಯಡ್ಕ ಗೋಪಾಲ ರಾಯರು ಕುಣಿಸಿದ ಕಲಾವಿದರು ಯಕ್ಷಗಾನ ರಂಗದ ಅತಿರಥ ಮಹಾರಥರು, ಗಣಪತಿ ಪ್ರಭುಗಳು, ಬಡಾಕೆರೆ ರಾಮಪ್ಪ ಅಡಿಗ, ಹಾರಾಡಿ

ಅಣ್ಣಯ್ಯ, ಹಾರಾಡಿ ರಾಮಗಾಣಿಗ, ಹಾರಾಡಿ ಕೃಷ್ಣ ಗಾಣಿಗ, ಕೊರ್ಕ್ಕರ್ಣಿ ನರಸಿಂಹ ಕಾಮತ, ಮಾರ್ವಿ ರಾಮಕೃಷ್ಣ ಹೆಬ್ಬಾರರು, ವೀರಭದ್ರನಾಯಕರು ಹೀಗೆ ಒಂದೊಂದು ವಿಧದಲ್ಲೂ ಖ್ಯಾತಿಯ ಉತ್ತುಂಗವನ್ನು ಏರಿದ ಇವರುಗಳ ಕುಣಿತದ ಹೆಜ್ಜೆಗೆ ಮದ್ದಲೆಯ ದನಿಯನ್ನೂ ಕೂಡಿಸಿದ್ದಾರೆ. ಈ ಕಲಾವಿದರುಗಳಲ್ಲಿ ಗೋಪಾಲರಾಯರು ಹಲವು ಅಂಶಗಳನ್ನೂ ಮೆಚ್ಚಿದ್ದಾರೆ. ಗಣಪತಿ ಪ್ರಭುಗಳ ಶೃಂಗಾರ ಮತ್ತು ಭಕ್ತಿರಸ ಭರಿತ ಪಾತ್ರಗಳು, ಹಾರಾಡಿ ಕೃಷ್ಣ ಗಾಣಿಗರ ವೈವಿಧ್ಯಮಯ ಕುಣಿತ ಇವೆಲ್ಲಾ ಇವರ ಗಮನ ಸೆಳೆದಿವೆ. ಅಂದು ಬಡಗುತಿಟ್ಟಿನಲ್ಲಿ ಪ್ರಚಲಿತವಿದ್ದ ಮಟ್ಪಾಡಿ ಹಾಗೂ ಹಾರಾಡಿ ಶೈಲಿಯ ಕುಣಿತಗಳನ್ನು ಇವರು ಇಂದಿಗೂ ನೆನೆಯುತ್ತಾರೆ. ಇವರ ಮದ್ದಲೆಗಾರನ ಕಲಾಬದುಕಿನ ಸಮಯದಲ್ಲೇ ಅನೇಕ ಹೊಸತನಗಳು ಒಂದೊಂದಾಗಿ ಬಂದವು. ನಾಟಕದ ಪಾರ್ಟುಗಳನ್ನು ನೋಡಿ, ಪಾರ್ಟಿನ ವೇಷಗಳು ಯಕ್ಷಗಾನದಲ್ಲಿ ಇಳಿದವು. ಅಂದು ಉಚ್ಛ್ರಾಯ ಸ್ಥಿತಿಯಲ್ಲಿದ್ದ ಸೌಕೂರು ಮೇಳದಲ್ಲಿ ಮಾರ್ವಿ ಹೆಬ್ಬಾರರು ಮುಂತಾದವರಿಂದ ವೇಷಪರಿವರ್ತನೆಗಳಾದವು ಎನ್ನುತ್ತಾರೆ. ಹಿಂದಿನ ಕಲಾ ಜೀವನದ ಬಗ್ಗೆ ಇವರ ಅಭಿಪ್ರಾಯ ಇಂತಿದೆ – "ಹಿಂದೆ ಯಕ್ಷಗಾನ ಕಲಾವಿದನಾದವನು ಅಭ್ಯಾಸಕ್ಕೆ ಹೆಚ್ಚಿನ ಮಹತ್ವ ನೀಡುತ್ತಿದ್ದ. ಗುಂಪುಗಾರಿಕೆಯಾಗಲೀ, ಒಳ ಜಗಳವಾಗಲಿ ಇರುತ್ತಿರಲಿಲ್ಲ. ಸಮರ್ಥರ ಕೈ ಕೆಳಗೆ ಶಿಷ್ಯರಾಗುವುದನ್ನು ಬಹಳಷ್ಟು ಆಶಿಸುತ್ತಿದ್ದರು. ಇದ್ದ ಮೇಳಗಳೂ ಕಡಿಮೆ. ಪ್ರದರ್ಶನಗಳು ಹರಕೆಯಾಟವಾಗಿ ಆಡುತ್ತಿದ್ದರು. ಈ ಬಗೆಯ ವ್ಯವಸ್ಥೆಯಿಂದಾಗಿ ಕಲೆ ಉಳಿದುಕೊಂಡು ಬಂತು.

ಯಕ್ಷಗಾನದ ಬದುಕು ಇವರ ಪಾಲಿಗೆ ಗಾಢವಾದ ಪರಿಣಾಮ ಬೀರಿದೆ. ಹತ್ತು ಗಂಟೆಯ ಪ್ರದರ್ಶನದಲ್ಲಿ ತಾವೂ ಭಾಗಿಯಾಗುತ್ತಾ ತಾದಾತ್ಮ್ಯವನ್ನು ಹೊಂದಿಕೊಂಡು ಮನಃಶಾಂತಿಯನ್ನು ಹೊಂದುತ್ತಿದ್ದರು. ಅಂದಿನ ಕಾಲದ ರಾತ್ರಿ ಶಾಲೆಯಂತಿದ್ದ ಯಕ್ಷಗಾನ ಜನರ ಜೀವನವನ್ನು ನೇರ್ಪಡಿಸುವಲ್ಲಿ ಮಹತ್ತರ ಪ್ರಭಾವವನ್ನು ಹೊಂದಿತ್ತು ಎನ್ನುವುದನ್ನು ಶ್ರೀಯುತರು ಕಂಡುಕೊಂಡಿದ್ದರು. ಶ್ರೀಯುತರು 'ಸುಭದ್ರಾ ಕಲ್ಯಾಣ', 'ಕರ್ಣಾರ್ಜುನ ಕಾಳಗ', 'ಶಶಿಪ್ರಭ ಪರಿಣಯ', 'ಲವಕುಶರ ಕಾಳಗ'ಗಳನ್ನು ಹೆಚ್ಚು ಇಷ್ಟಪಡುತ್ತಾರೆ. 'ಬಭ್ರುವಾಹನ ಕಾಳಗ'ದ ಹಾಡುಗಳಿಗೆ ಮದ್ದಲೆ ಬಾರಿಸುವುದು ಅನುಕೂಲಕರ ಎಂಬುದು ಇವರ ಅನಿಸಿಕೆ. ಇವರು ಮೆಚ್ಚುವ ರಾಗಗಳೆಂದರೆ ಆನಂದ ಭೈರವಿ, ಮಧ್ಯಮಾವತಿ, ತೋಡಿ, ಕಲ್ಯಾಣಿ, ಪೂರ್ವಿ, ಭೈರವಿ ಇತ್ಯಾದಿಗಳು. ಇವರಿಗೆ ಆದರ್ಶವಾಗಿದ್ದ ಮದ್ದಲೆಗಾರರೆಂದರೆ ಗುಂಡುನಾಯಕರು. ಸುಬ್ಬರಾಯರು, ವಾಸುದೇವ ಉಪ್ಪೂರರು. ಅವರು ಮೆಚ್ಚಿಕೊಳ್ಳುವ ಇಂದಿನ ಮೃದಂಗವಾದಕರೆಂದರೆ ದುರ್ಗಪ್ಪ ಗುಡಿಗಾರ್, ಯಲ್ಲಾಪುರದ ಶಂಕರ ಭಾಗವತ ಮುಂತಾದವರು.

ಬಡುಗು ತಿಟ್ಟಿನಲ್ಲಿ ಹಾಡುವಾಗ ಅಕ್ಷರಕ್ಕೆ ಮುಕ್ತಾಯ ಮಾಡುವ ಸಂಪ್ರದಾಯ ತಪ್ಪುತ್ತಿರುವ ಬಗ್ಗೆ ಇವರಿಗೆ ಖೇದವಿದೆ. ಉತ್ತಮ "ಹಿಮ್ಮೇಳನದವರಿಗೆ ರಾಗ-ತಾಳ ನಿರ್ಣಯ ತಿಳಿದಿರಬೇಕು. ಕತೆಗಳನ್ನು ಮೇಳೈಸುವ ಪರಿ ಅರಿತಿರಬೇಕು. ಕಾಲಗತಿಯನ್ನು ಅನುಸರಿಸಿ, ಕತೆಯ ಓಟವನ್ನು ನಿರ್ಧರಿಸಬೇಕು. ಇವೆಲ್ಲಾ ಇದ್ದಾಗ ಸಾಮರ್ಥ್ಯ ಒದಗುತ್ತದೆ" ಎನ್ನುತ್ತಾರೆ. ಇಂದಿಗೂ ಗೋಪಾಲ ರಾಯರು ನಂಬಿರುವ ಸತ್ಯವೆಂದರೆ "ಕಲೆ ಬಹಳ ದೊಡ್ಡದು. ನಾವು ಬಹಳ ಸಣ್ಣವರು. ಹೊಸ ಪೀಳಿಗೆಗೆ ಹಳೆಯ ಅನುಭವವನ್ನು ಕೊಡುವ ಕಾರ್ಯ ನಿಲ್ಲಬಾರದು" ಎಂಬುದು. ಇಂದು ಎಲ್ಲಾ ಕಲಸು ಮೇಲೋಗರ ವಾಗುತ್ತಿರುವುದರ ಬಗ್ಗೆ ಕೆಲವು ಉತ್ತಮ ಅಂಶಗಳು ನಶಿಸುತ್ತಿರುವುದರ ಬಗ್ಗೆ ನೊಂದು ಮಿಡಿಯುವ ಅವರ ಮಾತುಗಳು ಇಂದಿನ ಸ್ಥಿತ್ಯಂತರ ಕಾಲದಲ್ಲಿ ಬಹು ಗಮನಾರ್ಹವಾದುದು.

ಉತ್ತಮ ಮೃದಂಗ ವಾದಕನಿಗಿರಬೇಕಾದ ಅರ್ಹತೆಯನ್ನು ಗೋಪಾಲ ರಾಯರು ಹೀಗೆ ಪಟ್ಟಿ ಮಾಡುತ್ತಾರೆ 1. ಆತನಿಗೆ ತಾಳ್ಮೆ ಇರಬೇಕು 2. ಆಟದ ಬಗ್ಗೆ ಜವಾಬ್ದಾರಿ ಇರಬೇಕು. 3. ಭಾಗವತರ ಸ್ವರವನ್ನು ಉಳಿಸುವುದರ ಬಗ್ಗೆ ಗಮನವಿರಬೇಕು. 4. ಹೊರಡುವ ನಾದ ಕೆಡದಂತೆ ನೋಡಿಕೊಳ್ಳಬೇಕು. 5. ತನ್ನ ಶಕ್ತಿ ಪ್ರದರ್ಶನಕ್ಕಿಂತ ಪ್ರದರ್ಶನದ ಒಟ್ಟು ಪರಿಣಾಮವೇ ಮುಖ್ಯವಾಗಿರಬೇಕು. ವೇಷಧಾರಿಯ ಸಾಮರ್ಥ್ಯವನ್ನು ಅರಿತು ಅದಕ್ಕೆ ತಕ್ಕಂತೆ ಕುಣಿಸುವ ಜಾಣ್ಮೆ ಇರಬೇಕು.

ಯಕ್ಷಗಾನ ಸಂಗೀತದ ಬಗ್ಗೆ ರಾಯರು ಮಾತನಾಡುತ್ತಾ ದಾಸರ ಪದ್ಯಕ್ಕೆ ಯಕ್ಷಗಾನ ಹಾಡುಗಳ ಹೊಂದಾಣಿಕೆ ಬಹಳಷ್ಟು ಇದೆ. ಶೋಭಾನೆ ಹಾಡು ಮತ್ತು ದಾಸರಪದಗಳ ಪ್ರಭಾವ ಇಲ್ಲಿ ಸಾಕಷ್ಟಿದೆ. ಇಲ್ಲಿನ ವೇಷ ಭೂಷಣಗಳಾಗಲೀ ನೃತ್ಯ ಸಂಪ್ರದಾಯವಾಗಲೀ, ಸ್ವಂತ ಮೂಲದಿಂದಲೇ ಹೊರಟು ಬಂದದ್ದಾಗಿ ಕಾಣಿಸುತ್ತದೆ. ನಮ್ಮಲ್ಲಿ ಬಳಕೆಯಲ್ಲಿರುವ ಮದ್ದಲೆ ಬೇರೆಲ್ಲೂ ದೊರೆಯುವುದಿಲ್ಲ. ಅಲ್ಲದೆ ಮದ್ದಲೆ ಬಾರಿಸುವಾಗಲೂ ಹಲವು ಬಾರಿ ಮದ್ದಲೆಯ ದುಡುಕುಗಳು ಬದಲಾಗುತ್ತಾ ಹೋಗುತ್ತದೆ. ಎನ್ನುತ್ತಾರಲ್ಲದೆ ಕೈ ತನ್ನ ಪಾಡಿಗೆ ಕೆಲಸ ಮಾಡುತ್ತಾ ಇರುವಾಗ ಸ್ವಯಂಚಾಲಿತವಾಗಿ ಪದ್ಯಕ್ಕೆ ಅನುಗುಣವಾಗಿ ಭಾವ ಸೃಷ್ಟಿ ಸಾಧ್ಯ ಎಂಬುದು ಇವರ ನಂಬಿಕೆ – "ಮದ್ದಲೆ ಬಾರಿಸುವವನು ದುಡುಕು ವಿಳಂಬಗಳನ್ನು ಅರಿತು ಬಾರಿಸಬೇಕು. ಯಾವ ಯಾವ ರಸಕ್ಕೆ ಎಷ್ಟು ದುಡುಕಿನಲ್ಲಿ ಬಾರಿಸಬೇಕು, ಯಾವ ಬಗೆಯಲ್ಲಿ ಬಾರಿಸಬೇಕು ಎನ್ನುವುದನ್ನು ಅನುಭವಿಸಿಯೇ ತಿಳಿಯಬೇಕು. ಮದ್ದಲೆಯವನ ಕೈಚಳಕ ತೋರಿಸಬೇಕಾದರೆ ಶೃಂಗಾರ ರಸದಲ್ಲಿ ತೋರಿಸಬಹುದು. ವೀರ ರಸದಲ್ಲಿ ದೊಡ್ಡ ಪೆಟ್ಟುಗಳ ಮೂಲಕ ಹೊಳಹನ್ನು ತೋರಿಸಬಹುದು. ಕರುಣ ರಸ ಬಂದಾಗ ವಿಳಂಬ ಗತಿಯನ್ನು ಅನುಸರಿಸಬೇಕು.

ನಿಧಾನವಾಗಿ ನಿಧಾನವಾಗಿ ಬಾರಿಸುತ್ತಾ ನಾದವೂ ಶಬ್ದವೂ ಕಡಿಮೆಯಾಗಿರಬೇಕು. ಮದ್ದಲೆಗೂ ಒಂದು ಭಾಷೆಯಿದೆ. ಆ ಭಾಷೆ ನುಡಿಯುವುದನ್ನು ಅರಿತಿದ್ದು ಸ್ಪಷ್ಟತೆಯ ಮುದ್ರೆಯನ್ನು ಒತ್ತಬೇಕು. ಪಾತ್ರಗಳಿಗೆ ಅನುಗುಣವಾಗಿಯೂ ಕುಣಿಸುವ ಪರಿಯನ್ನು ತಿಳಿದಿರಬೇಕು. ಪುರುಷ ವೇಷಕ್ಕೆ ಬೇರೆ, ಎರಡನೇ ವೇಷಕ್ಕೆ ಬೇರೆ, ಇತರೆ ವೇಷಕ್ಕೆ ಬೇರೆ, ಹೀಗೆ ಆಯಾಯ ಪಾತ್ರಕ್ಕೆ ಭಿನ್ನ ಭಿನ್ನವಾಗಿ ಕುಣಿಸಬೇಕು. ಪುರುಷ ವೇಷವನ್ನು ಕುಣಿಸುವಾಗ ಮಧ್ಯಮಗತಿಯಲ್ಲಿ ಬಾರಿಸಬೇಕು. ಎರಡನೆ ವೇಷವನ್ನು ಕುಣಿಸುವಾಗ ವಿಳಂಬವಾಗಿ ಘಾತ ಹೆಚ್ಚಿಸಿ, ನಾದ ಗಂಭೀರವಾಗುವಂತೆ ಬಾರಿಸಬೇಕು. ಉಳಿದ ಪಾತ್ರಕ್ಕೆ ಭಿನ್ನಗತಿಯಲ್ಲಿ ತೀವ್ರ ಪೆಟ್ಟಿನಿಂದ ಬಾರಿಸಬೇಕು. (ಕರ್ಣನನ್ನು ಕುಣಿಸುವಾಗ ಒಂದು ಬಗೆ, ಅಭಿಮನ್ಯು ಕುಣಿಸುವಾಗ ಇನ್ನೊಂದು ಬಗೆ, ಅರ್ಜುನನನ್ನು ಕುಣಿಸುವಾಗ ಮತ್ತೊಂದು ಬಗೆಯಲ್ಲಿ ಕುಣಿಸಬೇಕು) ಆಗ ಮದ್ದಲೆಯ ಪೆಟ್ಟಿನಿಂದಲೂ ರಸೋತ್ಪತ್ತಿಯಾಗುತ್ತದೆ. ಮದ್ದಲೆಯ ನಾದ ಸ್ಫೂರ್ತಿದಾಯಕವಾದುದು. ಬಾರಿಸುವವರ ಪೆಟ್ಟಿನ ವೈಖರಿಯಿಂದ ಪಾತ್ರಧಾರಿಗೆ ಸ್ಫೂರ್ತಿ ಲಭಿಸುತ್ತದೆ. ಪೆಟ್ಟಿನ ಮೂಲಕವೇ ಮದ್ದಲೆಯ ನಾದ ವ್ಯತ್ಯಾಸವಾಗುತ್ತದೆ. ಆ ನಾದಗಳೇ ಭಾವವನ್ನು ವ್ಯಂಜಿಸುತ್ತವೆ. ನಾದದ ಮೂಲ ಧರ್ಮವೇ ಭಾವ ವ್ಯಂಜನವೆಂಬುದನ್ನು ಮೃದಂಗವಾದಕ ಸದಾ ಅರಿತಿರಬೇಕು," ಎಂಬುದೇ ಇವರ ವಿಚಾರಧಾರೆಯಾಗಿದೆ.

ಡಾ. ಶಿವರಾಮ ಕಾರಂತರ ಸಹಚರ್ಯವನ್ನು ಹೆಚ್ಚು ಕಾಲ ಹೊಂದಿರುವ ರಾಯರು ಕಾರಂತರ ಬಗ್ಗೆ ಹೇಳುವ ಮಾತು ಹೀಗಿದೆ – "ಕಾರಂತರು ಯಕ್ಷಗಾನದ ಕ್ರಾಂತಿ ಪುರುಷರು. 1935ರಿಂದಲೂ ಯಕ್ಷಗಾನದ ನಿಕಟ ಸಂಪರ್ಕವನ್ನು ಹೊಂದಿ ತಮ್ಮ ಪ್ರಯೋಗ ಶೀಲತೆಯನ್ನು ಅಲ್ಲಿ ತೋರ್ಪಡಿಸಿದ್ದಾರೆ. ಅವರ ಮನಸ್ಸಿನ ಹಿತಕ್ಕಾಗಿ ಅವರು ಸಂಶೋಧನೆ ಮಾಡಿ ಹೊಸ ಪ್ರಯೋಗಗಳನ್ನು ಮಾಡಿದರು. ಅವರ ನೃತ್ಯರೂಪಕ ಅವರ ಒಂದು ಭಾವ ಕಲ್ಪನಾ ಸೃಷ್ಟಿ ಅದನ್ನು ಜನರ ದೃಷ್ಟಿಯಿಂದ ಅವರು ನೋಡುವುದಿಲ್ಲ. ಆದರೆ ಅವರ ಈ ಸಂಶೋಧನೆ, ಪರಿಶ್ರಮದಿಂದಲೇ ಯಕ್ಷಗಾನಕ್ಕೊಂದು ಸ್ಥಾನ ದೊರೆತಿದೆ ಎಂಬುದು ನಿರ್ವಿವಾದ. ಅವರು ಪ್ರಯೋಗ ಮಾಡಲು ಹೊರಟವರು. ಆ ಸಮಯದಲ್ಲಿ ಅವರಿಗೆ ಸೋಲಾದರೆ ಅದು ಸೋಲಲ್ಲ. ಪ್ರಯೋಗವೇ ಅವರ ಧ್ಯೇಯ. ಅವರ ಪ್ರಯೋಗಗಳಿಂದಲೇ ಯಕ್ಷಗಾನ ರಂಗದಲ್ಲೊಂದು ಕ್ರಾಂತಿಯಾಯಿತು. ಆದರೆ ಪ್ರಯೋಗಗಳ ಫಲಿತ ಇನ್ನೂ ರೂಪುಗೊಂಡಿಲ್ಲ. ಕಾರಂತರು ಮಾಡಿದ್ದು ಸಾಂಪ್ರದಾಯಕ್ಕಿಂತ ಭಿನ್ನವಾದದ್ದು. ಅದನ್ನು ಜನತೆಯ ಮೇಲೆ ಅವರು ಹೇರಲು ಹೊರಟಿಲ್ಲ. ಅವರ ಕೊಡುಗೆಗಳನ್ನು ಮಾತ್ರ ಮರೆಯಲು ಸಾಧ್ಯವಿಲ್ಲ. ಅವುಗಳಲ್ಲಿ ಹಾಡುವಿಕೆಯಲ್ಲಿ ಭಾವಪ್ರಜ್ಞೆ ಮೂಡಿಸಿದ್ದು, ವೇಷಗಾರಿಕೆಯಲ್ಲಿ ಬಣ್ಣ ಸಂಯೋಜನೆಗೆ ಆದ್ಯತೆ ಇತ್ತದ್ದು, ಕಲಾವಿದನಲ್ಲಿ ಕಲೆಯ ಬಗ್ಗಿನ ಶಿಸ್ತು ಬೆಳೆಯುವಂತೆ ಮಾಡಿದ್ದು,

ಕುಣಿತ ಸ್ವಭಾವಾಭಿವ್ಯಕ್ತಿಗೆ ಪೂರಕವಾಗುವಂತೆ ಮಾಡಿದ್ದು ಮುಂತಾದವುಗಳೆಲ್ಲಾ ಮುಖ್ಯವಾದವುಗಳು. ಈ ಕಲೆಯ ಬಗ್ಗೆ ಹೊರಗಿನವರ ಗಮನ ಸೆಳೆಯಲು ಕಾರಣರಾದದ್ದು ಮಾತ್ರವಲ್ಲ ಸರಕಾರದೊಂದಿಗೆ, ಅಕಾಡೆಮಿ ಮುಂತಾದ ಸಂಸ್ಥೆಗಳಲ್ಲಿ ಹೋರಾಡಿ ಈ ಕಲೆಗೊಂದು ಉತ್ತಮ ಸ್ಥಾನವನ್ನು ದೊರಕಿಸಿಕೊಟ್ಟಿದ್ದಾರೆ. ತಾವು ಶ್ರೀ ಕಾರಂತರಿಂದ ಕಲಾದೃಷ್ಟಿಯನ್ನು ಸುಧಾರಿಸುವಲ್ಲಿ ಪ್ರಯೋಜನ ಪಡೆದಿರುವುದನ್ನು ಸ್ಮರಿಸುವ ಗೋಪಾಲರಾಯರು ಕಾರಂತರ ಕಾರ್ಯವೈಖರಿಯನ್ನು ಮನಸಾರೆ ಹೊಗಳುತ್ತಾರೆ.

ಶ್ರೀಮತಿ ಮಾರ್ಥ ಆಸ್ಟಿನ್ ಅವರಿಗೆ ಯಕ್ಷಗಾನ ಶಿಕ್ಷಣವನ್ನು ನೀಡಿದ ರಾಯರು ಯಕ್ಷಗಾನದ ರಾಯಭಾರಿಯಾಗಿ ಎರಡು ಬಾರಿ ವಿದೇಶ ಪ್ರವಾಸ ಮಾಡಿದ್ದಾರೆ. ಮೊದಲಿಗೆ 1976ರಲ್ಲಿ ಶ್ರೀಮತಿ ಮಾರ್ಥಾ ಅವರೊಂದಿಗೆ ಹೋದ ಇವರು ಬರ್ ಕಲಿ ವಿಶ್ವವಿದ್ಯಾಲಯದಲ್ಲಿ ನೀಡಿದ ಪ್ರದರ್ಶನ ವಿಶೇಷ ಜನ ಮೆಚ್ಚುಗೆ ಗಳಿಸಿತು. ಅವರಿಗೆ ಆತ್ಮ ವಿಶ್ವಾಸವನ್ನು ದೊರಕಿಸಿಕೊಟ್ಟಿತು, ಅವರು ಬಾಲ ಗೋಪಾಲ, ಸ್ತ್ರೀವೇಷ, ಒಡ್ಡೋಲಗದ ಕೃಷ್ಣನ ವೇಷವನ್ನು ಪ್ರದರ್ಶಿಸಿ ಅಲ್ಲಿನ ರಸಿಕರಿಗೆ ರಾಯರ ಮದ್ದಲೆಯ ಕೈ ಚಳಕವನ್ನು ತೋರಿಸಿಕೊಟ್ಟರು. ಮುಂದೆ 1978ರಲ್ಲಿ ಮೇಳದೊಂದಿಗೆ ಹೋದಾಗ ಕಾರ್ನಿಗಿಹಾಲ್‌ನಲ್ಲಿ ರಾಯರು ಕೊಟ್ಟ ಪ್ರದರ್ಶನ ವಿಶೇಷವಾಗಿತ್ತು. ನ್ಯೂಯಾರ್ಕ್, ಜನುಕ, ಇಂಡಿಯಾನ, ಮಿಚಿಗನ್ ವಿಶ್ವವಿದ್ಯಾಲಯ, ಕ್ಯಾಲಿಫೋರ್ನಿಯಾ, ಓಕ್ ಲ್ಯಾಂಡ್ ಮುಂತಾದ ಕಡೆಗಳಲ್ಲಿ ಇವರ ಪ್ರದರ್ಶನಕ್ಕೆ ಅದ್ಭುತ ಸ್ವಾಗತ ದೊರೆಯಿತು. ಹೀಗೆ ಯಕ್ಷಗಾನದ ಹಿರಿಮೆಯನ್ನು ವಿದೇಶಗಳಲ್ಲಿ ಹಬ್ಬಿಸಿದ ಶ್ರೇಯಸ್ಸು ರಾಯರಿಗೆ ಸಲ್ಲುತ್ತದೆ. ಶ್ರೀಮತಿ ಮಾರ್ಥಾ ಆಸ್ಟಿನ್ ಬಗ್ಗೆ, ಅವರ ಸಂಶೋಧನೆಯ ಬಗ್ಗೆ ರಾಯರಿಗೆ ಅಪಾರ ಮೆಚ್ಚುಗೆ. ಕನ್ನಡ ಕಲಿತು, ಯಕ್ಷಗಾನದಲ್ಲಿ ಕುಣಿದು, ಸಂಪೂರ್ಣ ಈ ಕಲೆಯನ್ನು ತಮ್ಮದಾಗಿ ಮಾಡಿಕೊಂಡ ಮಾರ್ಥಾ ಅವರ ಅಧ್ಯಯನ ಕ್ರಮವನ್ನು ರಾಯರು ವಿಶೇಷವಾಗಿ ಹೊಗಳುತ್ತಾರೆ.

ಇಂದು ಯಕ್ಷಗಾನ ಕಲಬೆರಕೆಯಾಗುತ್ತಿರುವುದರ ಬಗ್ಗೆ ಈ ಹಿರಿಯ ಕಲಾವಿದರಲ್ಲಿ ಅಪಾರ ವೇದನೆ ಇದೆ. ಇದರಿಂದಾಗಿ ಇಂದು ಯಕ್ಷಗಾನ ಕಲೆಯ ಮಟ್ಟ ಇಳಿಯುತ್ತಿದೆ. ಹೀಗಾಗಲು ಪ್ರೇಕ್ಷಕರು, ಮೇಳದ ಯಜಮಾನರು, ಕಲಾವಿದರು ಕಾರಣ ಎನ್ನುತ್ತಾರೆ. ಜನ ಮೆಚ್ಚುತ್ತಾರೆ ಎಂಬ ಕಾರಣದಿಂದಲೇ ಬಳಕೆಗೆ ಬಂದ ವಿಕಾರಗಳ ಬಗ್ಗೆ ವಿರಾಗಗಳ ಬಗ್ಗೆ ಜಿಗುಪ್ಸೆ ಇದೆ. ಹಿಂದೆ ತಮ್ಮ ಹರೆಯದ ದಿನಗಳಲ್ಲಿ ಕೇವಲ ಜನರಂಜನೆಗಾಗಿಯೇ ಜೋಡಾಟಕ್ಕಾಗಿಯೇ ಮದ್ದಲೆ ಬಾರಿಸುವುದರಲ್ಲಿ ಕೆಲವು ವ್ಯತ್ಯಾಸ ಮಾಡಿದ್ದೇನೆ. ಚಿಕ್ಕ ಮದ್ದಲೆ ಬಾರಿಸುವ ಮೂಲಕ ವಿಳಂಬದ ಪೆಟ್ಟನ್ನು ಬಿಟ್ಟು ತೀವ್ರಗತಿಯ ಪೆಟ್ಟುಗಳನ್ನು ಬಾರಿಸಿದ್ದೇನೆ. ಏರು ಮದ್ದಲೆಗಾಗಿ ಹಾಗೂ ಜೋಡಾಟಕ್ಕಾಗಿ ಇದು ಬಂತು. ಆಗ

ಅದನ್ನು ಶೇಷಗಿರಿ ಭಾಗವತರು ವಿರೋಧಿಸಿದ್ದರು. ಈಗ ನನಗೆ ಅಂದು ಮಾಡಿದ್ದು ಸರಿಯಲ್ಲ, ಅನ್ನಿಸುತ್ತದೆ ಎಂದು ಪ್ರಾಮಾಣಿಕವಾಗಿ ನುಡಿಯುತ್ತಾ ಇಂದು ಆಗುವ 'ಸುಧಾರಣೆ'ಯ ಕೆಟ್ಟ ಪರಿಣಾಮ ಮುಂದೆ ವ್ಯಕ್ತವಾಗುತ್ತದೆ ಎನ್ನುತ್ತಾರೆ.

'ಈಚಿನ ದಿನಗಳಲ್ಲಿ ತೆಂಕು, ಬಡಗು, ತೀರಾಬಡಗುತಿಟ್ಟುಗಳ ಸಮ್ಮಿಶ್ರಣ ವಾಗುತ್ತಿರುವುದು ವ್ಯಸನಕರ' ಎನ್ನುವ ಇವರು ಆಯಾಯ ತಿಟ್ಟಿನಲ್ಲಿ ಅದರದೇ ಆದ ಉತ್ತಮ ಸತ್ವಗಳಿವೆ. ಅವು ಪೋಷಣೆಯಾಗುವುದರ ಬದಲು ಇಂದು ಹಾಳಾಗುತ್ತಿದೆ' ಎನ್ನುತ್ತಾರೆ. ಉದಾಹರಣೆಗೆ ಬಡಗಿನಲ್ಲಿ ಹೆಜ್ಜೆ ಹಾಕುವಲ್ಲಿನ ಗತ್ತು. ಕುಣಿತದ ವೇಗದಲ್ಲಿನ ಭಾವಭಿನಯ ಮುಖ್ಯವಾದುದು. ಆದರೆ ಇಂದಿನ ಪಾತ್ರಧಾರಿಗಳಲ್ಲಿ ಇದು ಕಾಣುತ್ತಿಲ್ಲ. ಇನ್ನೊಂದನ್ನು ಅನುಸರಿಸ ಹೊರಟದ್ದರಿಂದಲೇ ಇಂದು ಈ ಭಾಗದಲ್ಲಿ ಅಂತಹ ಸಮರ್ಥ ಕಲಾವಿದರನ್ನು ಕಾಣಲಾಗುತ್ತಿಲ್ಲ. ಇದಕ್ಕೆ ಕಾರಣ ನಮ್ಮ ಮೂಲ ಸತ್ವಗಳಾದ ವೇಗ, ಕುಣಿತದ ಕ್ರಮ ಮತ್ತು ಬಾರಿಸುವಿಕೆಯನ್ನು ಬಿಟ್ಟದ್ದೇ ಕಾರಣ ಎನ್ನುತ್ತಾರೆ. 'ನಮ್ಮ ಹಾಡುವಿಕೆ ಭಾವಯುಕ್ತವಾಗಿ ಶಬ್ದದ ಮೇಲೆ ಧ್ವನಿಕೊಡುವಂತಹದು.' ಅದನ್ನು ಬಿಟ್ಟು ಸಾಹಿತ್ಯಕ್ಕೊ, ಸಂಗೀತಕ್ಕೊ ಮನಸೋತು ಹಾಡುವುದು ತಪ್ಪು ಎನ್ನುತ್ತಾರೆ. ಇಂದಿನ ಉದಯೋನ್ಮುಖರಲ್ಲಿ ಶ್ರೀ ಕಾಳಿಂಗ ನಾವಡರು ರಾಗಬದ್ಧವಾಗಿ ಹಾಡಬಲ್ಲ ಸಮರ್ಥರು. ಅವರಿಗೆ ಉತ್ತಮ ಭವಿಷ್ಯವಿದೆ. ಆದರೆ ಜನ ತಮ್ಮ ಅತ್ಯಭಿಮಾನದಿಂದ ಅವರು ಸಂಪ್ರದಾಯದಿಂದ ದೂರಸರಿಯುವಂತೆ ಮಾಡುತ್ತಿದ್ದಾರೆ. ಅವರಿಗೆ ಹಳೇ ಪ್ರಸಂಗಗಳನ್ನು ಬಹಳಷ್ಟು ಸಮರ್ಪಕವಾಗಿ ಹಾಡಬಲ್ಲ ಶಕ್ತಿ ಇದೆ, ಎಂಬುದು ಇವರ ಅಭಿಮತ.

ಯಕ್ಷಗಾನ ಹವ್ಯಾಸಿಗಳ ಬಗ್ಗೆ ಅಪಾರ ಭರವಸೆ ಇಟ್ಟುಕೊಂಡಿರುವ ಇವರು ನಾಟಕ ರಂಗಭೂಮಿಯಲ್ಲಿ ನಡೆದಂತೆ ಇಲ್ಲೂ ಹವ್ಯಾಸಿಗಳಿಂದ ಬದಲಾವಣೆ ಬರಬಹುದು ಎಂಬ ಆಸೆಯನ್ನಿರಿಸಿಕೊಂಡಿದ್ದಾರೆ. ಯಕ್ಷಗಾನ ಕಲಾಕೇಂದ್ರಗಳ ಸಾಧನೆ ನಿರೀಕ್ಷಿಸಿದಷ್ಟಾಗದಿದ್ದರೂ ಇನ್ನಷ್ಟು ಕೇಂದ್ರಗಳ ಅಗತ್ಯ ಇದೆ. ಯಕ್ಷಗಾನವು ವಿಶ್ವವಿದ್ಯಾಲಯದಲ್ಲಿ ಕಲಿಕೆಯ ಒಂದು ಅಂಗವಾಗಲಿ ಎಂಬುದು ಇವರ ಹಾರೈಕೆ.

ಧಾರ್ಮಿಕ ಹಿನ್ನೆಲೆಯಲ್ಲಿ ಮೂಡಿ ಬಂದ ಈ ಕಲೆ ತಮ್ಮ ಬದುಕಿಗೊಂದು ಆನಂದವನ್ನು ಸದಾ ನೀಡಿದೆ ಎಂಬ ತೃಪ್ತಿ ಶ್ರೀಯುತರಿಗೆ. ಈ ಬಗೆಯ ಸಮಷ್ಟಿ ಕಲೆಯ ಕಲಾವಿದರಿಗೆ ಪ್ರಶಸ್ತಿ, ಪುರಸ್ಕಾರ ಕೊಡುವಾಗ ಆಯಾಯ ಪ್ರಕಾರಗಳಲ್ಲಿ ಸಿದ್ಧಿ ಹೊಂದಿದವರನ್ನು ಗಮನಿಸಿ ಕೊಡಬೇಕೆ ಹೊರತು, ಎರಡನೇ ವೇಷಧಾರಿಗೆ ಭಾಗವತರಿಗೆ ಮಾತ್ರ ಪ್ರಶಸ್ತಿ, ಮಾಸಾಶನ ಎಂಬ ಭಾವನೆ ತಪ್ಪಬೇಕು ಎನ್ನುತ್ತಾರೆ.

ಇಂದು ಕಲಾಭಿಮಾನಿಗಳು ಹೆಚ್ಚುತ್ತಿರುವುದು ಶ್ರೀಯುತರಿಗೆ ಸಂತೋಷ ಕೊಟ್ಟ

ಸಂಗತಿ, ಕಲಾವಿದರು, ಕಲಾಭಿಮಾನಿಗಳು, ಕಲಾಪೋಷಕರು ಈ ಕಲಾರಂಗದಲ್ಲಿ ನಡೆಯುತ್ತಿರುವ ದುರ್ಮಿಶ್ರಣವನ್ನು ವಿರೊಧಿಸಿ ಸಂಪ್ರದಾಯಬದ್ಧವಾದ ನಮ್ಮ ಕಲೆಯ ಹಿರಿಮೆಯನ್ನು ಗುರುತಿಸಿ ಬೆಳೆಸಿಕೊಳ್ಳುವ ಪ್ರವೃತ್ತಿಯನ್ನು ರೂಢಿಸಿಕೊಳ್ಳಲಿ ಎಂದು ಹಿರಿಯಡ್ಕ ಗೋಪಾಲರಾಯರು ಆಶಿಸುತ್ತಾ ಹಾರೈಸುತ್ತಾರೆ.

■

ಮದ್ದಲೆಯೊಂದಿಗೆ ಮಾತನಾಡುವ

ದುರ್ಗಪ್ಪ ಗುಡಿಗಾರ್

ಯಕ್ಷಗಾನ ಪ್ರದರ್ಶನ ವ್ಯವಸ್ಥೆಯಲ್ಲಿ ಹಿಮ್ಮೇಳಕ್ಕೆ ಬಹಳಷ್ಟು ಹೊಣೆ ಇದೆ. ಭಾಗವತರು, ಮದ್ದಲೆಯವರು, ಚಂಡೆಯವರು ಪರಸ್ಪರ ಪೂರಕವಾಗಿ ಕಲಾವಿದನ ಸಾಮರ್ಥ್ಯವನ್ನು ಅರಿತು ಕುಣಿಸಿದಾಗ ಈ 'ಸಾಮೂಹಿಕ' ಕಲೆ ಕಳೆಕಟ್ಟುವಂತಾಗುತ್ತದೆ. ಈ ದಿಸೆಯಲ್ಲಿ ಭಾಗವತರಷ್ಟೇ ಮದ್ದಲೆಯವರ ಜವಾಬ್ದಾರಿಯೂ ಇದೆ. ಮದ್ದಲೆಯವರ ಕಲಾ ಪರಿಣತಿಯು ಶ್ರೋತೃಗಳ ಹೃದಯದಲ್ಲೂ ಮಾರ್ದನಿಗುಡುತ್ತದೆ. ಶಕ್ತ ವಾದಕನ ವಾದನ ವೈಖರಿಗೆ ಕೇಳುವವನ ತಲೆದೂಗುತ್ತದೆ, ಕೈಯೂ ಬಾರಿಸುತ್ತದೆ. ಆ ಬಗೆಯಲ್ಲಿ ಬಾರಿಸಿ ಜನರ ಮನಸ್ಸನ್ನು ಸೂರೆಗೊಂಡ ಕೆಲವೇ ತರುಣ ಮೃದಂಗ ವಾದಕರಲ್ಲಿ ಶ್ರೀ ದುರ್ಗಪ್ಪ ಗುಡಿಗಾರರು ಮುಖ್ಯರು.

ಭಟ್ಕಳದ ಚೌತನಿಯ ಅಣ್ಣಪ್ಪ ಗುಡಿಗಾರ್ ಮತ್ತು ಕಮಲ ಎಂಬುವವರಿಗೆ ಮಗನಾಗಿ ಹುಟ್ಟಿದ ಶ್ರೀ ದುರ್ಗಪ್ಪ ಗುಡಿಗಾರರಿಗೆ ಈಗ ಮೂವತ್ತಾರು ವರ್ಷ– ಇವರು ಉಳಿದದ್ದೆಲ್ಲ ಹೊರಗೆ ಕಲಿತಿದ್ದು. ಬಾಲ್ಯದಿಂದಲೂ ಆಟ ಎಂದರೆ ಬಾಲಕನಿಗೆ ಬಲು ಖುಷಿ. ಇದನ್ನು ಗಮನಿಸಿದ ಭಟ್ಕಳದ ಶ್ರೀ ದೇವರಾಯ ಪೈಗಳು 'ಮಾರುತಿ ಪ್ರಸಾದಿತ ಯಕ್ಷಗಾನ ಮಂಡಲಿ'ಗೆ ಸೇರಿಸಿಕೊಂಡರು. ಪ್ರದರ್ಶನಗಳಲ್ಲಿ ಕೋಡಂಗಿ

ಕುಣಿತದಿಂದ ಪ್ರಾರಂಭಿಸಿ ಬಾಲಗೋಪಾಲ, ಪೀಠಿಕೆ ಸ್ತ್ರೀವೇಷ, ಒಡ್ಡೋಲಗದ ಇತರೇ ಪಾತ್ರ ಮಾಡಲು ಅನುವುಮಾಡಿದರು. ಮದ್ದಲೆಯ ಬಗ್ಗೆ ಆಸಕ್ತಿ ಇದ್ದ ಇವರಿಗೆ ಮೃದಂಗ ಬಾರಿಸಲೂ ಅವಕಾಶ ಕೊಟ್ಟರು. ಅದರಲ್ಲೂ ಸೈ ಎನಿಸಿದ್ದರಿಂದ ಇದೇ ಉತ್ತಮ ಎಂಬ ತೀರ್ಮಾನವಾಯಿತು. ಹೀಗೆ ಈ ಹವ್ಯಾಸಿ ಮೇಳದಲ್ಲಿ ಮೃದಂಗ ವಾದಕನಾಗಿ ಉಳಿಯುವಂತಾಯಿತು. ಆದರೆ ಜೀವನ ವೃತ್ತಿಗಾಗಿ ಶಿರ್ಸಿಗೆ ಹೋಗಿ ಮರದ ಕೆಲಸಕ್ಕೆ ಸೇರಿಕೊಂಡರು. ವೃತ್ತಿ ಬಡಗಿಯದ್ದಾದರೂ ಪ್ರವೃತ್ತಿ ಯಕ್ಷಗಾನದ್ದೇ ಆಗಿತ್ತು.

ಭಟ್ಕಳದಲ್ಲಿ ತಾಳಮದ್ದಲೆಯೊಂದು ನಡೆಯುತ್ತಿದ್ದಾಗ ಕಡತೋಕ ಆಗ ಈ 'ವನಸುಮ'ದ ಪ್ರತಿಭೆಯನ್ನು ಗುರುತಿಸಿದ ಅವರು, ಅಂದಿನಿಂದ ಎಲ್ಲೇ ತಾಳಮದ್ದಲೆ, ಯಕ್ಷಗಾನ ಪ್ರದರ್ಶನ ಆ ಭಾಗದಲ್ಲಿ ನಡೆಯುತ್ತಿದ್ದರೆ "ಮದ್ದಲೆ ದುರ್ಗಪ್ಪನೇ ಆದೀತು ಬರಲಿ" ಎಂದು ಕರೆಸುತ್ತಿದ್ದರು. ಇದರಿಂದ ಗುಡಿಗಾರರಿಗೆ ತಯಾರಿಯೂ ಆಯಿತು. ಜಿಲ್ಲೆಯಲ್ಲೆಲ್ಲಾ ಪ್ರಚಾರವೂ ದೊರೆಯಿತು.

ಅಂದಿನ ದಿನಗಳಲ್ಲಿ ಯಕ್ಷಗಾನ ಈ ಎಳೆಯನನ್ನು ಸೆಳೆಯುತ್ತಿತ್ತು. ಮರದ ಕೆಲಸಗಾರನಿಗೆ ಸಂಬಳವೂ ಕಡಿಮೆ ಎಂದು ಅನ್ನಿಸುತ್ತಿತ್ತು. ಇದೇ ಸಮಯದಲ್ಲಿ ಕೋಟ ಅಮೃತೇಶ್ವರಿ ಮೇಳದಲ್ಲಿ ಎರಡು ತಿಂಗಳ ಮಟ್ಟಿಗೆ ಚಂಡೆ ಬಾರಿಸುವನೊಬ್ಬನ ಅಗತ್ಯವಿತ್ತು. ದಿನಕ್ಕೆ ಮೂರು ರೂಪಾಯಿ ಸಂಬಳದ ಮೇಲೆ ಚಂಡೆವಾದಕನಾಗಿ ಸೇರಿಕೊಂಡರು. ಆಗ ಅಲ್ಲಿನ ಹಿಮ್ಮೇಳದಲ್ಲಿದ್ದ ಶ್ರೀ ರಾಮಚಂದ್ರ ನಾವಡರು ಹಾಗೂ ಶ್ರೀ ನಾಗೂರ ದೇವರಾಯರು ಅವರಿಗೆ ಮಾರ್ಗದರ್ಶಕರಾಗಿದ್ದರು. ಅಲ್ಲಿಂದ ಬಿಟ್ಟವರು ಪುನಃ ಶಿರ್ಸಿಗೆ ತೆರಳಿ ಕಾರ್ ಕ್ಲೀನರ್ ಕೆಲಸ ಮಾಡುತ್ತಾ ಡ್ರೈವಿಂಗ್ ಕೆಲಸ ಕಲಿತು ಡ್ರೈವರ್ ಆಗಿ ಎರಡು ವರ್ಷ ಕಳೆಯಬೇಕಾಯಿತು. ಆ ಸಂದರ್ಭದಲ್ಲಿ ಈ ತರುಣನನ್ನು ಮದ್ದಲೆ ಒಂದೇ ಸಮನೆ ಸೆಳೆಯುತ್ತಿತ್ತು. ಮಳೆಗಾಲದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆಯುತ್ತಿದ್ದ 'ಬೈಠಕ್' ತಾಳಮದ್ದಲೆಯಲ್ಲಿ ಭಾಗವಹಿಸುತ್ತಿದ್ದರು, ಆ ಸಂದರ್ಭದಲ್ಲೇ ಶ್ರೀ ನಾರಾಯಣ ಭಾಗವತರು, ಯಲ್ಲಾಪುರದ ಶ್ರೀ ಬಾಳಗದ್ದೆ ಭಾಗವತರೂ, ಶ್ರೀ ನೆಬ್ಬೂರರು ಇವರೆಲ್ಲರ ಸಂಪರ್ಕ ಬಂತು. ಒಮ್ಮೆ ಶ್ರೀ ಕೋವೆಸರ ಮಂಜುನಾಥ ಹೆಗಡೆಯವರು ಕಾನ್‌ಮೂಲೆಗೆ ಕರೆದುಕೊಂಡು ಹೋಗಿದ್ದರು. ಅಂದು ರಾತ್ರಿ ಬೆಳಗಿನ ತನಕ ಮದ್ದಲೆ ಬಾರಿಸಿದಾಗ ಬಲಗೈಯ ಅರ್ಧಭಾಗವೇ ಸ್ಪರ್ಶ ಜ್ಞಾನವನ್ನು ಕಳೆದುಕೊಂಡಿತು. ಆಗ ಮೂರು ತಾಲೂಕಿನ ಕಲಾಭಿಮಾನಿಗಳು ಈ ಎಳೆಯ ಬಡ ಕಲಾವಿದನಿಗಾಗಿ ಅಂದು ಸುಮಾರು ಮೂರು ಸಾವಿರ ರೂಪಾಯಿಗಳಷ್ಟು ಸಂಗ್ರಹಿಸಿ ಅವರನ್ನು ಮಣಿಪಾಲಕ್ಕೆ ಸೇರಿಸಿದರು. ಅಲ್ಲಿ ನಾಲ್ಕು ತಿಂಗಳ ಶುಶ್ರೂಷೆ ಮಾಡಿಸಿದರು.

ಆದರೂ ಕೈ ಸ್ವಾಧೀನಕ್ಕೆ ಬಾರದೇ ಹೋದಾಗ ಬದುಕಿಗೆ ನೆಲೆಯೊಂದು ಇರದ ದುರ್ಧರ ಸ್ಥಿತಿಯಲ್ಲಿ, ಇಡಗುಂಜಿ ಮೇಳದವರಲ್ಲಿ "ಸಂಗೀತಗಾರನಾಗಿ ಮಾಡಿ" ಎಂದು ಕೇಳಿಕೊಂಡು, ಅಲ್ಲೇ ಸಂಗೀತಗಾರರಾಗಿ ಉಳಿದರು. ಶ್ರೀ ದೇವರ ಪವಾಡವೋ ಎಂಬಂತೆ ಅಲ್ಲಿ ನಿಧಾನವಾಗಿ ಮದ್ದಲೆ ಬಾರಿಸುತ್ತಾ ಎರಡು ವರ್ಷಗಳಲ್ಲಿ ಎಂದಿನ ಮೃದಂಗವಾದಕನೇ ಆದರು. ಈ ಸಂದರ್ಭವನ್ನು ನೆನೆಸಿಕೊಳ್ಳುವಾಗ ಗುಡಿಗಾರರ ಕಣ್ಣೂ ಹನಿಯುತ್ತದೆ. ಆ ಕಷ್ಟ ಸಮಯದಲ್ಲಿ ನೆರವಾದವರ ಬಗ್ಗೆ ಕೃತಜ್ಞತೆ ಸೂಚಿಸುತ್ತಾ ಈ ಮಟ್ಟಕ್ಕೆ ಬರುತ್ತೇನೆ ಎಂಬ ಕಲ್ಪನೆಯೇ ಇರಲಿಲ್ಲ ಎನ್ನುತ್ತಾರೆ.

ಅನಂತರ ಶ್ರೀ ನಾರಾಯಣಪ್ಪ ಉಪ್ಪೂರರು ಮಳೆಗಾಲದಲ್ಲಿ ನಡೆಯುವ ಯಕ್ಷಗಾನ ಕೇಂದ್ರಕ್ಕೆ ತರಬೇತಿಗಾಗಿ ಸೇರಿಸಿಕೊಂಡರು. ಕ್ರಮೇಣ ಅವರು ಭಾಗವತರಾಗಿದ್ದ ಮೇಳವನ್ನೇ ಸೇರಿಕೊಂಡು ಅದೇ ಅಮೃತೇಶ್ವರಿ ಮೇಳದಲ್ಲಿ ಐದು ವರ್ಷದಿಂದಲೂ ಇದ್ದಾರೆ, ಉಪ್ಪೂರರನ್ನು ಕೃತಜ್ಞತೆಯಿಂದ ನಮಿಸುವ ಶ್ರೀ ಗುಡಿಗಾರರು "ಪದ್ಯದ ಭಾವಕ್ಕೆ ಅನುಗುಣವಾಗಿ ಹೇಗೆ ಮದ್ದಲೆ ನುಡಿಸಬೇಕು ಎಂದು ತಿದ್ದಿದವರೇ ಅವರು" ಎನ್ನುತ್ತಾರೆ.

ಸಹೋದ್ಯೋಗಿಗಳೊಂದಿಗೆ ಸದಾ ನಗುಮೊಗದಿಂದ ಕಲೆಯುತ್ತಾ ಎಲ್ಲರೊಂದಿಗೂ ಸ್ನೇಹಪರರಾಗಿರುವ ದುರ್ಗಪ್ಪ ಗುಡಿಗಾರರನ್ನು ಮೆಚ್ಚುವ ಅಭಿಮಾನಿಗಳು ಉತ್ತರ ಕನ್ನಡ ದಕ್ಷಿಣ ಕನ್ನಡದಲ್ಲಿ ಇದ್ದಾರೆ. ಕೆಲವರು ಎಡಗೈಯಲ್ಲಿ ಬಾರಿಸುತ್ತಾರೆ, ಎಂದು ಹೇಳುತ್ತಾರೆ. ಇದೆಲ್ಲಾ ಹೆಚ್ಚಾಗಿ ಗುಂಪನ್ನು ಅವಲಂಬಿಸಿದೆ ಎನ್ನುತ್ತಾರೆ. ಆರ್ಥಿಕವಾಗಿ ಬಹಳ ದುರ್ಬಲರಾಗಿರುವ ಶ್ರೀ ಗುಡಿಗಾರರಿಗೆ ಇದೊಂದೇ ವೃತ್ತಿ. ಇದು ಬಿಟ್ಟರೆ ಬಾಳುವುದು ಕಷ್ಟ. ಹಿಂದೆಲ್ಲಾ ಸಂಬಳ ಖರ್ಚಿಗೆ ಸಾಕಾಗುತ್ತಿರಲಿಲ್ಲ. ಮುಂದೆ ಸುಧಾರಿಸೀತು ಎಂಬ ಆಶಾಭಾವವಿದೆ. ಈಗಿನ ಹಿಮ್ಮೇಳದವರಿಗೆ ಪ್ರೋತ್ಸಾಹ ದೊರೆಯುತ್ತಿದೆ. ಈಗ ತುಂಬಾ ಸುಧಾರಿಸಿದೆ. ಹಿಮ್ಮೇಳದವರ ಪ್ರತಿಭೆಯನ್ನು ಪ್ರೇಕ್ಷಕರು ಗುರುತಿಸುತ್ತಾರೆ. ಅದಕ್ಕೆ ಅನುಗುಣವಾಗಿ ಮದ್ದಲೆಯವರಿಗೂ ಬೆಲೆ ಇದೆ. ಹಣದ ವಿಚಾರ ಒತ್ತಟ್ಟಿಗೆ ಇದ್ದರೆ ನಿಜವಾಗಿಯೂ ಈ ಕಲಾ ಬದುಕು ಸಂತೋಷದಾಯಕ ಎನ್ನುತ್ತಾರೆ. ನಾಲ್ಕು ಪದ್ಯ ಹೇಳಿಕೊಂಡು ಮೃದಂಗ ಬಾರಿಸುತ್ತಿದ್ದರೆ ಅದರಲ್ಲಿರುವ ಆನಂದ ಬೇರೆಲ್ಲೂ ಅವರಿಗೆ ದೊರೆಯದು. ಹಿಂದೆ ಕೈಸ್ಪರ್ಶ ಜ್ಞಾನ ಕಳೆದುಕೊಂಡಾಗ ನಾಲ್ಕು ತಿಂಗಳು ಪಟ್ಟ ವೇದನೆ ಅಷ್ಟಿಷ್ಟಲ್ಲ. "ಮೃದಂಗ ಬಾರಿಸದಿದ್ದರೆ ನನ್ನ ಗತಿಯೇನು ಎಂದೆನಿಸುತ್ತಿತ್ತು. ಈಗಲೂ ಇದು ಬಿಟ್ಟರೆ ಬದುಕುವುದೇ ಕಷ್ಟ" ಎನ್ನುತ್ತಾರೆ. ಸಂಪಾದನೆಗಾಗಿ ಮಾತ್ರವಲ್ಲ ಮನಃಶಾಂತಿಗಾಗಿ ಈ ಮದ್ದಲೆ ಅವರಿಗೆ ಬೇಕೆ ಬೇಕು.

ನಡೆಯುವ ಪ್ರದರ್ಶನದಿಂದ ಸಂತೋಷ ಪಡೆಯುವ ಈ ವಾದಕರು ಉತ್ತಮ

ವೇಷಧಾರಿಯ ಕುಣಿತ ತಾವು ನೋಡುತ್ತಾ ಸ್ವಯಂ ಸ್ಫೂರ್ತಿ ಹೊಂದುತ್ತಾರೆ. ಆದುದರಿಂದ ವಾದನ ಇನ್ನಷ್ಟು ಸೊಗಸಾಗುತ್ತದೆ ಎನ್ನುತ್ತಾರೆ.

"ಜುಂಜುಟಿ, ಆನಂದ ಭೈರವಿ, ಕಾಫಿ, ಮೋಹನ ನವರೋಜು ಇಂತಹ ರಾಗಗಳ ಮಟ್ಟು ನನಗೆ ಇಷ್ಟ" ಎನ್ನುವ ಇವರು ಹಳೆಯ ಪ್ರಸಂಗಗಳನ್ನು ಅದರಲ್ಲೂ ಗದಾಯುದ್ಧ, ಕರ್ಣಾರ್ಜುನ ಕಾಳಗ, ವಿಶ್ವಾಮಿತ್ರ ಮೇನಕ ಮುಂತಾದ ಹಳೆಯ ಪ್ರಸಂಗಗಳನ್ನು ಹೆಚ್ಚು ಬಯಸುತ್ತಾರೆ.

ಹಿಂದಿನ ವೇಷಧಾರಿಗಳಲ್ಲಿ ಗುರು ವೀರಭದ್ರ ನಾಯ್ಕ, ಉಡುಪಿ ಬಸವ, ಹೆರಂಜಾಲು ವೆಂಕಟರಮಣ, ಮೂರಗೋಳಿ ಗೋವಿಂದ ಸೆರೆಗಾರ, ಶಿವರಾಮ ಹೆಗಡೆ, ಮೂರೂರು ದೇವರ ಹೆಗಡೆ, ಇವರನ್ನು ಮೆಚ್ಚಿದರೆ, ಇಂದು ಮೆಚ್ಚುವುದು ಹೆಚ್ಚಾಗಿ ಚಿಟ್ಟಾಣಿ ರಾಮಚಂದ್ರ ಹೆಗಡೆ, ಕೆರೆಮನೆ ಮಹಾಬಲ ಹೆಗಡೆ, ಶಂಭು ಹೆಗಡೆ ಮುಂತಾದವರನ್ನು. ವೀರರಸ ಪ್ರಚುರ ಪಾತ್ರಗಳಾದ ಕೀಚಕ, ಭಸ್ಮಾಸುರ, ಕುಂಭಕರ್ಣ, ಇಂತಹ ಪಾತ್ರಗಳನ್ನು ಕುಣಿಸುವುದರಲ್ಲಿ ಇವರಿಗೆ ಹೆಚ್ಚು ಸುಖ ಸಿಗುತ್ತದೆ.

ಅತ್ಯಂತ ಪ್ರಾಮಾಣಿಕವಾಗಿ ಮಾತನಾಡುವ ಸ್ವಭಾವದ ಈ ದೈವದತ್ತ ಮೃದಂಗ ವಾದಕರನ್ನು ಅವರ ಅನುಭದ ವಿಚಾರದ ಬಗ್ಗೆ ಕೇಳಿದಾಗ ದೊರೆತ ವಿಚಾರಗಳು ಕಲಾಸಕ್ತರು ಅರಿಯಲು ಯೋಗ್ಯವಂತಹವುಗಳು.

ಶ್ರೀ ದುರ್ಗಪ್ಪ ಗುಡಿಗಾರರ ಅನುಭವದಂತೆ ಮೃದಂಗ ವಾದಕನಿಗೆ ಭಾಗವತರೊಟ್ಟಿಗೆ ಬಹಳ ಅಭ್ಯಾಸವಿರಬೇಕು. ಭಾಗವತ, ಮದ್ದಲೆಗಾರ, ಚಂಡೆಯವರು ಪರಸ್ಪರ ಮೇಳೈಸಿಕೊಂಡಿರಬೇಕು. ಭಾಗವತರು ಹೇಳುವ ಪದ್ಯ ಬಾಯಿಗೆ ಬರುವಂತಿರಬೇಕು. ಆ ಪದ್ಯದ ಭಾವ, ರಾಗ, ಗೊತ್ತಿರಬೇಕು. ಆತನಿಗೂ ಭಾಗವತರಷ್ಟೇ ಹೊಣೆ ಇದೆ.

ಮೃದಂಗ ವಾದನವೇ ಕೇಳಿಸಬೇಕೆಂತಿದ್ದರೆ ಅದಕ್ಕೆ ಕೆಲವು ಅವಕಾಶಗಳು ಇವೆ. ಸ್ತ್ರೀ ವೇಷದ ಪ್ರವೇಶವಿರುವಾಗ, ಇನ್ನೂ ಕೆಲವು ಬಾರಿ ವಿಶೇಷ ಚಂಡೆ ಇಲ್ಲದ ಸಂದರ್ಭದಲ್ಲಿ ಇಂತಹ ಅವಕಾಶಗಳು ದೊರೆಯುತ್ತವೆ. ಜನರ ಮೆಚ್ಚುಗೆ ಗಳಿಸಬೇಕಾದರೆ ನುಡಿಸುವ ಪದ್ಯದ ಸಾಹಿತ್ಯ ರಾಗ, ತಾಳ, ಲಯವಿನ್ಯಾಸದ ಅರಿವು ಹೊಂದಿ ನುಡಿಸಬೇಕು. ಚಂಡೆ ಇದ್ದಾಗ ನಾಜೂಕಿನ ಪೆಟ್ಟು ಬಾರಿಸಲು ಆಗುವುದಿಲ್ಲ. ಹೊಂದಾಣಿಕೆ ಇದ್ದು ರಸ ಪ್ರಚುರವಾಗುವಂತೆ ಬಾರಿಸಬೇಕು. ತಮ್ಮ ಪಾಲಿಗೆ ಸಮರ್ಥ ಮದ್ದಲೆಗಾರ ಗುರುವೇ ದೊರೆತಿಲ್ಲ ಎಂದು ಬೇಸರ ಪಡುವ ಇವರು ಮದ್ದಲೆಗಾರ ತಿಮ್ಮಪ್ಪ ನಾಯ್ಕರೊಂದಿಗೆ ಇರಬೇಕೆಂದು ಆಶಿಸಿದ್ದರು. ಆದರೆ ಅದು ಈಡೇರಲಿಲ್ಲ. ಭಾಗವತರೇ ತಮ್ಮ ಪಾಲಿಗೆ ಗುರುವಾಗುತ್ತಿದ್ದರು ಎನ್ನುತ್ತಾರೆ.

ಭಾಗವತರಿಗೂ ಮದ್ದಲೆಗಾರರಿಗೂ ಬಹಳ ವ್ಯತ್ಯಾಸವಿದೆ. "ಕೆಲವೊಮ್ಮೆ ಸಂದರ್ಭಕ್ಕೆ ಕಟ್ಟುಬಿದ್ದು ಭಾಗವತಿಕೆ ಮಾಡಿದ್ದರೂ ನನಗೆ ಸಂತೋಷ ಕೊಡುವುದು ಮೃದಂಗ ವಾದನದಲ್ಲೇ. ಭಾಗವತನಾಗಿ ನನಗೆ ಕಥೆ ನಡೆಸುವ ಅನುಭವ ಸಾಲದು" ಎಂದು ಒಪ್ಪಿಕೊಳ್ಳುವ ಇವರು ಭಾಗವತಿಕೆಯಿಂದ ಮೃದಂಗದ ಕಸುಬಿಗೆ ಸಹಾಯ ಎಂದು ಹೇಳುತ್ತಾರೆ.

ಇಲ್ಲಿ ಬೇರೆಲ್ಲಾ ವೃತ್ತಿಗಿಂತ ಹೆಚ್ಚು ಶ್ರಮವಾದರೂ ಆನಂದದಾಯಕ ಅಲ್ಲದೆ ಇತ್ತೀಚಿನ ಪ್ರದರ್ಶನ ವ್ಯವಸ್ಥೆಯಿಂದ ಸಂಪ್ರದಾಯ ಕಡಿಮೆ ಆದರೂ ಆರ್ಥಿಕವಾಗಿ ಅನುಕೂಲವಾಗಿದೆ. ಇದರಿಂದ ನಮ್ಮ ಯಕ್ಷಗಾನ ಪರಂಪರೆ ಹಾಳಾಗಿದೆ ಎಂಬ ವ್ಯಥೆಯೂ ಇದೆ ಇವರಿಗೆ.

ಶ್ರೀ ಹಿರಿಯಡ್ಕ ಗೋಪಾಲರಾಯರ ಬಗ್ಗೆ ಗುಡಿಗಾರರಿಗೆ ಗೌರವವಿದೆ. ಒಮ್ಮೆ ಮದ್ದಲೆಗಾರ ಶ್ರೀ ತಿಮ್ಮಪ್ಪ ನಾಯ್ಕರೊಂದಿಗೆ ಸ್ಪರ್ಧೆ ನಡೆದು ಅಂದಿನ ಅವರ ವಾದನ ವೈಖರಿಯನ್ನು ಮನಸಾರೆ ಮೆಚ್ಚಿದ್ದೇನೆ ಎನ್ನುತ್ತಾರೆ. ಅವರ ಮೃದಂಗ ವಾದನದಲ್ಲಿ ನಾಜೂಕು, ಸಾಹಿತ್ಯ, ಯಾವ ಪದ್ಯಕ್ಕೆ ಹೇಗೆ ಬಾರಿಸಬೇಕು ಎಂಬ ಸೂಕ್ಷ್ಮ ಜ್ಞಾನವನ್ನು ಗಮನಿಸಿದೆ ಎನ್ನುವ ಶ್ರೀಯುತರ ಇತರ ಮೆಚ್ಚಿನ ವಾದಕರೆಂದರೆ ಶ್ರೀಕರ್ಕಿ ಪ್ರಭಾಕರ ಭಂಡಾರಿ, ಬಲ್ಲಾಳರು, ಶ್ರೀನಿವಾಸ ಆಚಾರಿ ಮುಂತಾದವರು.

ವೇಷಧಾರಿಗಳನ್ನು ಕುಣಿಸಬಲ್ಲ ಕಲೆಗಾರಿಕೆಯ ಬಗ್ಗೆ ಮಾತನಾಡುತ್ತಾ ಭೀಮ, ಕೀಚಕ ಮುಂತಾದ ಪಾತ್ರಗಳ ಪ್ರವೇಶಕ್ಕೆ ದೊಡ್ಡ ರೀತಿಯಲ್ಲಿ ಹೆಜ್ಜೆ ಹಾಕುವಂತೆ ಮದ್ದಲೆ ಪೆಟ್ಟು ಬಾರಿಸಬೇಕು. ಅದೇ ಸುಧನ್ವ, ಕೃಷ್ಣ ಮುಂತಾದ ಪಾತ್ರಗಳಿಗೆ ಕಿರು ಹೆಜ್ಜೆಗೆ ಅನುಗುಣವಾಗಿ ನುಡಿಸಬೇಕು. ರಂಗಸ್ಥಳದ ಪರಿಜ್ಞಾನ, ಪಾತ್ರಾ ಪಾತ್ರ ವಿವೇಚನೆ ಮದ್ದಲೆಯವರಿಗೆ ಇರಬೇಕು. ಅಲ್ಲದೆ ವೇಷಧಾರಿಗೆ ಕುಣಿತ ಎಷ್ಟು ಬರುತ್ತದೆ ಎಂಬ ಅರಿವನ್ನು ಹೊಂದಿದ್ದು ಕುಣಿಸಬೇಕು. ಪ್ರದರ್ಶನ ಉತ್ತಮವಾಗುವುದನ್ನು ಗಮನಿಸಬೇಕೆ ಹೊರತು ಮದ್ದಲೆಯವರ ಕೈ ಚಳಕ, ಭಾಗವತರ ಹಾಡುಗಾರಿಕೆಯ ಪ್ರದರ್ಶನವೇ ಮುಖ್ಯವಾಗಿರಬಾರದು. ಅಲ್ಲದೆ ಒಮ್ಮೊಮ್ಮೆ ಸಮರ್ಥ ವೇಷಧಾರಿಯ ಕುಣಿತದಿಂದ ಸ್ಫೂರ್ತಿಯನ್ನು ಪಡೆದಿದ್ದೇನೆ ಎಂದು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತಾರೆ.

ಹೀಗೆ ಶ್ರೀ ದುರ್ಗಪ್ಪ ಗುಡಿಗಾರರು ಅನುಭವವನ್ನು ಅಸ್ತಿಭಾರವಾಗಿ ಮಾಡಿಕೊಂಡು ತಮ್ಮ ಕಲಾ ಬದುಕನಲ್ಲಿ ಎಲ್ಲರಿಂದಲೂ 'ಸೈ' ಎನ್ನಿಸಿಕೊಂಡಿದ್ದಾರೆ. ಮದ್ದಲೆಯೊಂದಿಗೆ ಮಾತನಾಡುವ ಶ್ರೀ ಗುಡಿಗಾರರೆಂದೇ ಖ್ಯಾತಿ ಪಡೆದಿದ್ದಾರೆ.

■

ಏಕವ್ಯಕ್ತಿ ಯಕ್ಷಗಾನದ

ಮಂಟಪ ಪ್ರಭಾಕರ ಉಪಾಧ್ಯ

ಯಕ್ಷಗಾನ ರಂಗದಲ್ಲಿ ಪುರುಷ ವೇಷದಷ್ಟೇ ಸ್ತ್ರೀವೇಷವೂ ಪ್ರಧಾನವಾದದ್ದೇ ಸರಿ. ಸಾಂಪ್ರದಾಯಿಕ ಕಲೆಗಳಲ್ಲಿ ಪುರುಷರೇ ಸ್ತ್ರೀವೇಷವನ್ನು ಧರಿಸುವುದು ಸರ್ವೇಸಾಮಾನ್ಯ. ಯಕ್ಷಗಾನದಲ್ಲೂ ಇದೇ ಪರಿಪಾಠವಿದೆ. ಹಿಂದೆಲ್ಲ ಬಾಲಕಲಾವಿದರಾಗಿ ಬಯಲಾಟದ ಮೇಳಕ್ಕೆ ಸೇರಿಕೊಂಡವರು ಕೋಡಂಗಿಯಾಗಿ, ಬಾಲಗೋಪಾಲರಾಗಿ ಮತ್ತೆ ಪೀಠಿಕೆ ಸ್ತ್ರೀವೇಷಧಾರಿಗಳಾಗಿ 'ಪದೋನ್ನತಿ' ಗಳಿಸುತ್ತಿದ್ದರು. ಮುಂದೆ ಪುಂಡುವೇಷಧಾರಿಯಾಗಿ ಮತ್ತೆ ಎರಡನೇ ವೇಷಧಾರಿಯಾಗಿ 'ಬಡ್ತಿ' ಪಡೆಯುತ್ತಿದ್ದರು. ಕೆಲವೇ ಕೆಲವು ಕಲಾವಿದರು ತಮ್ಮ ಕಲಾಜೀವನದುದ್ದಕ್ಕೂ 'ಸ್ತ್ರೀ' ಪಾತ್ರಧಾರಿಯಾಗಿಯೇ ಉಳಿದು ಖ್ಯಾತಿ ಪಡೆದಿದ್ದಾರೆ. ಇದಕ್ಕಾಗಿ ನಿರಂತರ ಪರಿಶ್ರಮದಿಂದ ದೇಹದ ಅಂಗಸೌಷ್ಠವ ಕೆಡದಂತೆ ನೋಡಿಕೊಳ್ಳುತ್ತಾರೆ. ಹೀಗೆ ಸ್ತ್ರೀಪಾತ್ರಗಳ ಎರಕದಲ್ಲೇ ಮಿಂಚಿದ ಕಲಾವಿದರುಗಳಲ್ಲಿ ಪ್ರಮುಖರಾದವರೆಂದರೆ ದಿ. ಹಾರಾಡಿ ನಾರಾಯಣ ಗಾಣಿಗ, ದಿ. ಕೆರೆಮನೆ ಗಜಾನನ ಹೆಗಡೆ, ಕೋಟ ವೈಕುಂಠ, ಅರಾಟೆ ಮಂಜುನಾಥ, ಕೋಳ್ಯೂರು ರಾಮಚಂದ್ರರಾವ್, ಎಂ.ವಿ. ನ್ಯಾಕ್, ಪಾತಾಳ ವೆಂಕಟರಮಣ ಭಟ್, ರಾಮನಾಯರಿ, ದಯಾನಂದ ನಾಗೂರು, ಶಿವಕುಮಾರ್ ಬೇಗಾರ್, ಮಂಟಪ ಪ್ರಭಾಕರ ಉಪಾಧ್ಯ ಮುಂತಾದವರು.

ಮಂಟಪ ಪ್ರಭಾಕರ ಉಪಾಧ್ಯರ ವಂಶಸ್ಥರು ಮದುವೆ ಮನೆಯ ಮಂಟಪ ಕಟ್ಟುವುದರಲ್ಲಿ ಹೆಸರು ಗಳಿಸಿದವರು. ಇವರ ಅಜ್ಜನ ಸಹೋದರರಾದ ಶ್ರೀನಿವಾಸ ಉಪಾಧ್ಯರು ಚಿತ್ರರಚನೆಯಲ್ಲಿ ಖ್ಯಾತಿ ಪಡೆದವರು. ಇವರ ಅಜ್ಜ ಮಂಟಪ ರಾಮ ಉಪಾಧ್ಯರು ವೃತ್ತಿಯಲ್ಲಿ ಅಂಗಡಿ ಮಾಲಿಕರಾದರೂ ಪ್ರಯೋಗಶೀಲ ಮನಸ್ಸಿನವರಾಗಿದ್ದು ಹೊಸ ವಸ್ತುಗಳ ಆವಿಷ್ಕಾರದಲ್ಲಿ ಸದಾ ನಿರತರು. ಸಮಾಜಮುಖಿ ಚಟುವಟಿಕೆಗೆ ಖ್ಯಾತಿಗೊಂಡವರು. ಅವರ ಮಗ ಚಂದ್ರಶೇಖರ ಉಪಾಧ್ಯ ಹಾಗೂ ಜಾನಕಿಯವರ ಮೊದಲ ಪುತ್ರರಾಗಿ ಪ್ರಭಾಕರ ಉಪಾಧ್ಯರು 3-10-1957ರಲ್ಲಿ ಜನಿಸಿದರು. ಪಡುಕೆರೆ ಗ್ರಾಮದ ಗ್ರಾಮೀಣ ವಾತಾವರಣದಲ್ಲಿ ಬೆಳೆದು, ಕೋಟದ ವಿವೇಕ ಹೈಸ್ಕೂಲ್‌ನಲ್ಲಿ ಪ್ರೌಢಶಾಲೆಯ ಶಿಕ್ಷಣವನ್ನು ಮುಗಿಸಿದರು. ಯಕ್ಷಗಾನದ ಸೆಳೆತವಿದ್ದ ಪ್ರಭಾಕರರಿಗೆ ಆ ಕಾಲದಲ್ಲಿ ಬಡಗುತಿಟ್ಟಿನ ಜನಾಕರ್ಷಣೆಯ ಮೇಳವಾಗಿದ್ದ ಸಾಲಿಗ್ರಾಮ ಮೇಳದ ಆಟಗಳು ಸೆಳೆದವು. ಅದರಲ್ಲೂ ಕೆರೆಮನೆ ಗಜಾನನ ಹೆಗಡೆಯವರ ಸ್ತ್ರೀಪಾತ್ರವಂತೂ ಇನ್ನಿಲ್ಲದ ಪ್ರಭಾವ ಬೀರಿತು. ಗಜಾನನ ಹೆಗಡೆಯವರ ಕಲಾಭಿವ್ಯಕ್ತಿಯಿಂದಾಗಿಯೇ ತಾನು ಯಕ್ಷಗಾನಕ್ಕೆ ಬಂದೆ ಎಂಬುದನ್ನು ಸದಾ ನೆನಪಿಸಿಕೊಳ್ಳುತ್ತಿರುತ್ತಾರೆ. ಉಡುಪಿಯಲ್ಲಿರುವ ಯಕ್ಷಗಾನ ತರಬೇತಿ ಕೇಂದ್ರಕ್ಕೆ 1975ರಲ್ಲಿ ಸೇರಿಕೊಂಡರು. ಅಲ್ಲಿ ಗುರುಗಳಾಗಿದ್ದ ನೀಲಾವರ ರಾಮಕೃಷ್ಣಯ್ಯನವರು ಇವರ ಕಲಾಪ್ರತಿಭೆಯನ್ನು 'ಬೆಳೆಯುವ ಸಿರಿ ಮೊಳಕೆಯಲ್ಲಿ' ಕಂಡು ಮೆಚ್ಚಿಗೆ ಮಾತನ್ನಾಡುತ್ತಿದ್ದರು. 1976ರಲ್ಲಿ ಕಮಲಶಿಲೆ ಮೇಳ ಕೆರೆಮನೆ ಮಹಾಬಲ ಹೆಗಡೆಯವರ ಸಂಚಾಲಕತ್ವ ಮತ್ತು ಮಾರ್ಗದರ್ಶನದಲ್ಲಿ 'ಕಾಲಮಿತಿ ಪ್ರದರ್ಶನ ಪ್ರಾರಂಭಿಸಿತು. ಕೆರೆಮನೆ ನರಸಿಂಹ ಹೆಗಡೆಯವರು 19ರ ವಯಸ್ಸಿನ ಪ್ರಭಾಕರರನ್ನು ಹುಡುಕಿ ಮೇಳಕ್ಕೆ ಸೇರುವಂತೆ ಮಾಡಿದರು. ಅಲ್ಲಿ ಪ್ರಭಾಕರ ಉಪಾಧ್ಯರು ಮುಖ್ಯ ಸ್ತ್ರೀಪಾತ್ರಧಾರಿಯಾಗಿ ಮಿಂಚಿದರು. ಚಂದ್ರಹಾಸದ 'ವಿಷಯೆ' ಪಾತ್ರವೇ ಇವರ ಮೊದಲ ಯಕ್ಷಜೀವನದ ಪಾತ್ರವಾಯಿತು. ಉಳಿದವರಂತೆ ಮೇಳದ ಬದುಕಿನ ವಿಚಾರವೇನೂ ತಿಳಿದಿರದಿದ್ದ ಪ್ರಭಾಕರ ಉಪಾಧ್ಯರನ್ನು ಅಲ್ಲಿದ್ದ ಕೃಷ್ಣ ಯಾಜಿ ಬಳ್ಕೂರು, ಇಡಗುಂಜಿ ಗಣಪತಿ ಯಾಜಿ, ನರಸಿಂಹ ಹೆಗಡೆ ಕೆರೆಮನೆ ಮುಂತಾದವರು ಧೈರ್ಯತುಂಬಿ ಬೆಂಬಲಿಸಿದರು. ಕಲಾ ಜೀವನಕ್ಕೆ ಮಹಾಬಲ ಹೆಗಡೆಯವರಂತಹ ಹಿರಿಯರ ಮಾರ್ಗದರ್ಶನ ಲಭಿಸಿತು. ಕಮಲಶಿಲೆ ಮೇಳ ನಿಂತಿದ್ದರಿಂದ ಮುಂದಿನ ವರ್ಷ ಪೆರ್ಡೂರು ಮೇಳಕ್ಕೆ ಸೇರಿಕೊಂಡರು. ಅಲ್ಲಿ ಭಾಗವತ ಗುಂಡ್ಮಿ ಕಾಳಿಂಗ ನಾವಡರು ಗೆಳೆಯರಾದರು. ಅವರ ರಚನೆಯ 'ವಿಜಯಶ್ರೀ' ಪ್ರಸಂಗದ 'ವಿಜಯಶ್ರೀ' ಯಾಗಿ ಮಿಂಚಿದರು. ಮುಂದಿನ ವರ್ಷ ಇಡಗುಂಜಿ ಮೇಳವು ಇವರನ್ನು ಆಹ್ವಾನಿಸಿತು. ಒಂದು ಪ್ರಜ್ಞಾವಂತ ಪ್ರೇಕ್ಷಕ ವರ್ಗವನ್ನು ಹೊಂದಿದ್ದ ಆ ಮೇಳಕ್ಕೆ ಸೇರಿಕೊಂಡರು. ಅಲ್ಲಿಯವರೆಗೆ ಆ ಮೇಳದಲ್ಲಿ ಸ್ತ್ರೀ ವೇಷಧಾರಿಯಾಗಿ

ಖ್ಯಾತಿ ಹೊಂದಿದ್ದ ಕೆರೆಮನೆ ಗಜಾನನ ಹೆಗಡೆಯವರು ಅಕಾಲಿಕವಾಗಿ ಮರಣ ಹೊಂದಿದ್ದರು. ಅಂತಹ ಪ್ರತಿಭಾವಂತ ಕಲಾವಿದರ ಕೊರತೆಯನ್ನು ಸಮರ್ಥವಾಗಿ ತುಂಬುವುದು ಮಂಟಪರಿಗೆ ಸವಾಲಿನದ್ದಾಗಿತ್ತು. ತಮ್ಮ ಅಭಿಜಾತ ಪ್ರತಿಭೆಯಿಂದ ಮಂಟಪರು ಅಲ್ಲಿಯೂ ಮಿಂಚಿದರು. ಕೆರೆಮನೆ ಶಂಭು ಹೆಗಡೆಯವರ ಮಾರ್ಗದರ್ಶನ, ನೆಬ್ಬೂರು ನಾರಾಯಣ ಭಾಗವತರ ಸಲಹೆ ಸೂಚನೆಗಳು ಸಹಕಾರಿಯಾದವು. ಬ್ರಹ್ಮಕಪಾಲ, ಸತ್ಯ ಹರಿಶ್ಚಂದ್ರ, ಕೃಷ್ಣ ಸಂಧಾನ, ನಳದಮಯಂತಿ, ಶ್ವೇತ ಕುಮಾರ, ಸುಹಾಸಿನಿ ಮುಂತಾದ ಪ್ರಸಂಗಗಳಲ್ಲಿ ಬರುವ ಸ್ತ್ರೀ ಪಾತ್ರಗಳ ಮೂಲಕ ಪ್ರಭಾಕರ ಉಪಾಧ್ಯರು ಅಸಂಖ್ಯ ಅಭಿಮಾನಿಗಳನ್ನು, ಅವರ ಪ್ರೀತ್ಯಾದರಗಳನ್ನು ಗಳಿಸಿದರು. ಆದರೆ ಎರಡನೇ ತಿರುಗಾಟದ ನಂತರ ಮೇಳದ ವೃತ್ತಿಜೀವನ ಮನೋಧರ್ಮಕ್ಕೆ ಸರಿಹೊಂದದೇ ಆಗಲೇ ಮನೆತನಕ್ಕೆ ಖ್ಯಾತಿ ತಂದುಕೊಟ್ಟಿದ್ದ 'ಐಸ್‌ಕ್ರಿಮ್' ಉದ್ಯಮದಲ್ಲಿ ತೊಡಗಿಸಿಕೊಂಡರು. ಮೇಳದ ವೃತ್ತಿಜೀವನಕ್ಕೆ ವಿದಾಯ ಹೇಳಿದರು. ಮುಂದೆ ಬೆಂಗಳೂರಿಗೆ ಬಂದು ನೆಲೆಸಿ ಮೆಜೆಸ್ಟಿಕ್‌ನಲ್ಲಿ ತಮ್ಮದೇ 'ಮಂಟಪ ಐಸ್‌ಕ್ರಿಂ' ಘಟಕ ತೆಗೆದರು. ಅದರಲ್ಲಿ ಯಶಸ್ಸು ಹೊಂದಿದರು. ಇವತ್ತಿಗೂ ಬೆಂಗಳೂರಿಗರಿಗೆ 'ಮಂಟಪ ಐಸ್‌ಕ್ರಿಂ' ಎಂಬುದು ಆಕರ್ಷಣೆಯ ಕೇಂದ್ರ.

ವೃತ್ತಿ ಬದಲಾದರೂ ಪ್ರವೃತ್ತಿಯನ್ನು ಮಂಟಪರು ಬದಲಿಸಲಿಲ್ಲ. ವೃತ್ತಿಯೊಂದಿಗೆ ಭರತನಾಟ್ಯವನ್ನು ಕಲಿತರು, 1980ರಿಂದ 1990ರವರೆಗೆ ಅತಿಥಿ ಕಲಾವಿದರಾಗಿ ಯಕ್ಷಗಾನದಲ್ಲಿ ಭಾಗವಹಿಸಿದರು. ಕಲಾಪ್ರದರ್ಶನದಲ್ಲಿ ಯಾವೊಂದೂ ಸಂಭಾವನೆ ತೆಗೆದುಕೊಳ್ಳುವುದಿಲ್ಲ ಎಂಬ ದೃಢನಿರ್ಧಾರ ತಳೆದರು. ಹಣದೊಂದಿಗೆ ಕಲೆಯನ್ನು ತಳುಕುಹಾಕಲಿಲ್ಲ ಇದೇ ಅವರ ಹೆಗ್ಗಳಿಕೆ. 1990ರಲ್ಲಿ ಬಚ್ಚಗಾರು ಮೇಳವು ಚಿಟ್ಟಾಣಿ ರಾಮಚಂದ್ರ ಹೆಗಡೆಯವರ ಕಲಾ ನೇತೃತ್ವದಲ್ಲಿ ಪ್ರಾರಂಭಗೊಂಡಿತು. ಹೊರಗಿನವರ ಒತ್ತಾಸೆಯಿಂದ ಹಾಗೂ ಕಲಾಭಿವ್ಯಕ್ತಿಯ ಆಂತರಿಕ ಹಂಬಲದಿಂದ ಮೇಳದ ಐವತ್ತು ಆಟಗಳಿಗೆ 'ಗೌರವ' ಕಲಾವಿದನಾಗಿ ಬರಲು ಒಪ್ಪಿಕೊಂಡರು. ಇಲ್ಲೂ ಕೂಡ ಸಂಭಾವನೆ ಸ್ವೀಕರಿಸುವುದಿಲ್ಲ ಎಂಬುದೇ ಅವರ ನಿರ್ಧಾರವಾಗಿತ್ತು. ಮೊದಲ ಆಟದಲ್ಲೇ ಚಿಟ್ಟಾಣಿ ಹಾಗೂ ಮಂಟಪರ ಜೋಡಿ ಒಂದು ಅದ್ಭುತ ಭ್ರಮಾಲೋಕವನ್ನು ಸೃಷ್ಟಿಸಿತು. ಚಿಟ್ಟಾಣಿ ರಾಮಚಂದ್ರ ಹೆಗಡೆಯಂತಹ ಒಬ್ಬ ಅಭಿಜಾತ ಪ್ರತಿಭಾವಂತ ಕಲಾವಿದರ ಹೆಗಲೆಣೆಯಾಗಿ ಕುಣಿದು ಮಂಟಪರು ತಮ್ಮ ಕಲಾಪ್ರತಿಭೆಯನ್ನು ಮೆರೆದರು, ಖ್ಯಾತರಾದರು. ಭೀಷ್ಮ ವಿಜಯ, ಚಿತ್ರಾಕ್ಷಿ ಪರಿಣಯ, ಭಸ್ಮಾಸುರ ಮೋಹಿನಿ, ಮೊದಲಾದ ಪ್ರಸಂಗಗಳು ಬಟ್ಟಗಾರು ಮೇಳದ 'ಹಿಟ್' ಪ್ರಸಂಗಗಳಾಗಿದ್ದವು. ಭರತನಾಟ್ಯದ ಕಲಿಕೆ ಇವರ ಯಕ್ಷಗಾನ ಕುಣಿತಕ್ಕೆ ಇನ್ನಷ್ಟು ಶಿಸ್ತನ್ನು, ಮೆರುಗನ್ನು ನೀಡಿತು. ಮಂಟಪ ಪ್ರಭಾಕರರಿಗೆ ಈ ಮೇಳದ ಆಟಗಳು 'ತಾರಾಮೌಲ್ಯ' ವನ್ನು ಗಳಿಸಿಕೊಟ್ಟವು. ಎರಡು

ವರ್ಷದ ತಿರುಗಾಟದಲ್ಲಿ ಅಪಾರ ಅಭಿಮಾನಿ ಬಳಗವನ್ನು ಹೊಂದಿದರು. ಆದರೂ 'ತಿರುಗಾಟ'ದ ಗುಂಗು ಹಿಡಿಸಲಿಲ್ಲ ಮತ್ತೆ ಮೂರು ನಾಲ್ಕು ವರ್ಷ ತಿರುಗಾಟಕ್ಕೆ ಹೋಗಲಿಲ್ಲ. ಆದರೂ ಅತಿಥಿ ಕಲಾವಿದರಾಗಿ ಭಾಗವಹಿಸಿ ಯಕ್ಷಗಾನದ ನಂಟನ್ನು ಉಳಿಸಿಕೊಂಡಿದ್ದರು.

ಮಂಟಪ ಪ್ರಭಾಕರ ಉಪಾಧ್ಯರ ಮುಂದಿನ ಕಲಾ ಪಯಣ ಅತ್ಯಂತ ಕಠಿಣ ಹಾಗೂ ಯಶಸ್ವಿಯಾಗಿದ್ದು ಅವರ ಕೀರ್ತಿಯನ್ನು ಅಜರಾಮರಗೊಳಿಸಿದೆ. ಇದರಿಂದಾಗಿಯೇ ಅವರು "ಏಕವ್ಯಕ್ತಿ ಮಂಟಪರು" ಎಂಬ ಅಭಿಧಾನಕ್ಕೆ ಪಾತ್ರರಾದರು. ಒಬ್ಬ ಕಲಾವಿದನ ಆಂತರ್ಯದಲ್ಲಿ ಶಕ್ತಿ ಇದ್ದರೆ, ಅದಕ್ಕೆ ತಕ್ಕ ಮಾರ್ಗದರ್ಶನ ದೊರೆತರೆ ಯಾವ ಮಟ್ಟಕ್ಕೂ ಏರಬಲ್ಲರೆಂಬುದಕ್ಕೆ ಜ್ವಲಂತ ನಿದರ್ಶನವಾದರು. ಒಮ್ಮೆ 'ಕಾವ್ಯಚಿತ್ರ ಯಕ್ಷ ನೃತ್ಯ'ದಲ್ಲಿ ಪರಿಚಿತರಾದ ಶತಾವಧಾನಿ ಡಾ. ಆರ್. ಗಣೇಶ್ ಅವರ ಕಲ್ಪನೆಯ ಕೂಸಿಗೆ ಇವರು ಕುಲಾವಿ ತೊಡಿಸಿದರು. ಮಂಟಪದ ಆಸಕ್ತಿ, ಸಾಮರ್ಥ್ಯವನ್ನು ಪ್ರದರ್ಶನದಲ್ಲಿ ಕಂಡ ಶತಾವಧಾನಿ ಗಣೇಶರು ಹೊಸದೊಂದು ವಿಚಾರವನ್ನು ತಿಳಿಸಿದರು. ಅದೇ 'ಏಕವ್ಯಕ್ತಿ ಯಕ್ಷಗಾನ'. ಕಥಕ್, ಕೂಚುಪುಡಿ, ಮೋಹಿನಿ ಅಟ್ಟಂಗಳಲ್ಲಿ ಇರುವ ಏಕವ್ಯಕ್ತಿ ನೃತ್ಯವನ್ನು ಯಕ್ಷಗಾನಕ್ಕೂ ಅಳವಡಿಸಿ ಹೊಸ ಆವಿಷ್ಕಾರ ಒಂದನ್ನು ತಂದು ಪ್ರದರ್ಶಿಸಬೇಕೆಂಬ ಹಂಬಲದಲ್ಲಿದ್ದರು. ಅವರ ರಚನೆಯಾದ 'ಭಾಮಿನಿ' ಎಂಬ ಏಕವ್ಯಕ್ತಿ ಯಕ್ಷಗಾನ ಪ್ರಸಂಗದ ರೂಪರೇಷೆಗಳನ್ನೂ ಹೇಳಿ ಅದರಲ್ಲಿ ಪಾಲ್ಗೊಳ್ಳುವಂತೆ ಮಂಟಪರಲ್ಲಿ ಕೇಳಿಕೊಂಡರು. 2000ನೇ ಇಸವಿ ಮಾರ್ಚ್‌ನಲ್ಲಿ ವಿದ್ಯುಕ್ತವಾಗಿ 'ಭಾಮಿನಿ' ಪ್ರಸಂಗವು ಮಂಟಪರ ಮೂಲಕ ಲೋಕಾರ್ಪಣೆಗೊಂಡಿತು. ಅದುವರೆಗೆ ಇದ್ದ 'ಗ್ಲಾಮರ್' ವೇಷದಿಂದ ಹೊರಬಂದು ರಸಸೃಷ್ಟಿಯ ಹೊಸ ನೆಲೆಯೊಂದನ್ನು ಮಂಟಪರು ಕಂಡು ಕೊಂಡರು. ಮುಂದೆ ಡಾ. ಆರ್. ಗಣೇಶ್ ಅವರ ನಿರ್ದೇಶನದಲ್ಲಿ ಶ್ರೀ ಕೃಷ್ಣಾರ್ಪಣ, ಯಕ್ಷದರ್ಪಣ, ಜಾನಕಿಜೀವನ, ಯಕ್ಷಕದಂಬ, ಯಕ್ಷ ನವೋದಯಗಳಂತಹ ಏಕವ್ಯಕ್ತಿ ಯಕ್ಷಗಾನದಲ್ಲಿ ತಮ್ಮ ಪ್ರತಿಭಾವಿಲಾಸವನ್ನು ನಿರಂತರವಾಗಿ ಪ್ರದರ್ಶಿಸುತ್ತಾ ಬಂದಿದ್ದಾರೆ. ಅವರ ಏಕವ್ಯಕ್ತಿ ಪ್ರದರ್ಶನ 1400 ರ ಗಡಿಯನ್ನು ದಾಟಿವೆ. ದಿನಾಂಕ 2-04-2010ರಲ್ಲಿ ಮೂಡುಬಿದರೆಯ ವಿದ್ಯಾಗಿರಿಯಲ್ಲಿ ನಡೆದ 1000ನೇ ಪ್ರಯೋಗವು ಐತಿಹಾಸಿಕ ದಾಖಲೆಯಾಗಿದೆ. ಇದೆ ಬಗೆಯಾಗಿ 'ನಡುಮನೆಯಲ್ಲಿ ಯಕ್ಷನಾಟ್ಯ' ಎಂಬ ಪರಿಕಲ್ಪನೆಯಲ್ಲಿ ಯಕ್ಷಗಾನವನ್ನು ಮನೆಯ ಒಳಾಂಗಣಕ್ಕೆ ಕೊಂಡುಹೋಗಿದ್ದಾರೆ. 'ಯುಗಳ ಯಕ್ಷಗಾನ' ಯೆಂಬ ಇನ್ನೊಂದು ಪರಿಕಲ್ಪನೆಯಲ್ಲಿ ಅವರೊಂದಿಗೆ ಕೊಂಡದಕುಳಿ ರಾಮಚಂದ್ರ ಹೆಗಡೆ, ಡಾ. ಸುಂದರಿ ಸಂತಾನಂ, ಚಪ್ಪರ ಮನೆ ಶ್ರೀಧರ ಹೆಗಡೆ ಮುಂತಾದವರು ಭಾಗವಹಿಸಿದ್ದಾರೆ. ವಿಜಯವಿಲಾಸ, ನಳದಮಯಂತಿ, ಮಂಥರೆ ಮುಂತಾದ ಕಥಾನಕಗಳು 150ಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡಿವೆ. ಹೀಗೆ ಯಕ್ಷಗಾನ

ರಂಗದಲ್ಲಿ ತಮ್ಮ ವಿಶಿಷ್ಟತೆಯ ಮೂಲಕ ಮನೆಮಾತಾಗಿರುವ ಮಂಟಪರ ಈಚಿನ ಸಂವಾದಗಳಲ್ಲಿ ಆಧ್ಯಾತ್ಮಿಕ ಚಿಂತಕನೊಬ್ಬನ ಪರಿಚಯವಾಗುತ್ತದೆ. ಮಂಟಪರು ಈಗ ಮಾಗಿದ್ದಾರೆ. ಅವರ ಮಾತಿನಲ್ಲಿ ಅದು ವ್ಯಕ್ತವಾಗುತ್ತದೆ.

ಪ್ರ : ಏಕವ್ಯಕ್ತಿ ಪ್ರದರ್ಶನಕ್ಕೂ ಯಕ್ಷಗಾನದ ಪಾತ್ರದ ಅಭಿನಯಕ್ಕೂ ಭಿನ್ನತೆ ಇದೆಯೇ? ಪ್ರಸಂಗದ ಹಿನ್ನೆಲೆಯಲ್ಲಿ ವಿವರಿಸಬಹುದೇ?

ಉ : ಏಕವ್ಯಕ್ತಿ ಯಕ್ಷಗಾನವೆಂದರೆ ಎದುರು ಪಾತ್ರ ಅಲ್ಲಿ ಇಲ್ಲದೆಯೇ ಆ ಪಾತ್ರದ ಅಭಿನಯವನ್ನು ತನ್ನ ಪಾತ್ರದ ಒಳಗೆ ಮೂಡುವ ಪ್ರತಿಕ್ರಿಯೆಯನ್ನು ಅಭಿವ್ಯಕ್ತಿಸುವ ಮೂಲಕ ತೋರಿಸುವ ತಂತ್ರಗಾರಿಕೆ ಇದೆ. ಆದರೆ ಯಕ್ಷಗಾನದ ಅಭಿನಯದಲ್ಲಿ ಹಾಗಿಲ್ಲ.

ಪ್ರ : ಯಕ್ಷಗಾನ ರಂಗದಲ್ಲಿ 'ಅಭಿಮಾನಿಗಳ ಕಣ್ಮಣಿ' ಯಾಗಿದ್ದ ನಿಮಗೆ 'ಭಾಮಿನಿ' ಏಕವ್ಯಕ್ತಿ ಯಕ್ಷಗಾನದ ಮೂಲಕ ಪರಿವರ್ತನೆಗೊಂಡಾಗ ಇದ್ದ ಮನಸ್ಥಿತಿ ಮತ್ತು ಅದರ ಹಿನ್ನೆಲೆ ತಿಳಿಸಿ

ಉ : ಬಚ್ಚಗಾರು ಮೇಳದಲ್ಲಿ ಅತಿಥಿ ಕಲಾವಿದನಾಗಿದ್ದಾಗ ನನ್ನ ಅಭಿಮಾನಿ ಬಳಗ ದೊಡ್ಡದಿತ್ತು. ಆದರೆ ಮನಸ್ಸಿನ ಒಳಗೆ ಅಸಮಾಧಾನವಿತ್ತು. ಮೇಳದೊಂದಿಗಿನ ತಿರುಗಾಟ ನನಗೆ ಹೊಂದುತ್ತಿರಲಿಲ್ಲ. ಶತಾವಧಾನಿ ಆರ್. ಗಣೇಶರ ಒತ್ತಾಸೆಯಿಂದ ಅವರ ಪ್ರಯೋಗಶಾಲೆಯ ಶಿಲೆಯಾಗಿ ಪರಿವರ್ತನೆಗೊಂಡೆ. ಕಲೆಯ ಆಂತರ್ಯವನ್ನು ಗಣೇಶರು ನನಗೆ ತೆರೆದು ತೋರಿದರು. ಬೇರೆ ವೇಷಗಳೇ ಇಲ್ಲದ ಒಂದೇ ವ್ಯಕ್ತಿಯಿಂದ ಎದುರು ಪಾತ್ರದ ಪ್ರತಿಕ್ರಿಯಾತ್ಮಕವಾದ ಅಭಿನಯದಿಂದಲೇ ಮನದಾಳವನ್ನು ತೋರಿಸಿ 'ಭಾಮಿನಿ'ಯಾಗಿಯೇ ಎರಡು ಗಂಟೆಗಳ ಕಾಲ ಕುಣಿಯುವುದು ಬಹಳ ಸವಾಲಿನದ್ದು. ಮೊದಮೊದಲು 'ಭಾಮಿನಿ'ಯೊಂದಿಗೆ ನಾನು ಕುಣಿಯಲು ತಡವರಿಸಿದೆ. ಕೊನೆಗೆ 'ಭಾಮಿನಿ'ಯ ಗೆಲುವಿನಲ್ಲಿ ಆರ್. ಗಣೇಶರು ಗೆದ್ದಿದ್ದರು. ಕುಣಿಯುವಲ್ಲಿ ನಾನು ಗೆದ್ದಿದ್ದೆ.

ಪ್ರ : ಏಕವ್ಯಕ್ತಿ ಯಕ್ಷಗಾನ ಬಂದ ಹೊಸದರಲ್ಲಿ ಯಕ್ಷಗಾನ ಪ್ರೇಕ್ಷಕರನ್ನು ಮುಟ್ಟುವ ನಿಮ್ಮ ಪ್ರಯತ್ನ ಹೇಗಿತ್ತು?

ಉ : 'ಏಕವ್ಯಕ್ತಿ' ಪ್ರೇಕ್ಷಕರಿಗೆ ಇಷ್ಟವಾಗುತ್ತೋ ಇಲ್ಲವೋ ಎಂಬ ಅಳುಕಿತ್ತು. ಯಕ್ಷಗಾನ ಆಸಕ್ತರನ್ನು ಸೆಳೆಯಲೆಂದೇ ಡಾ. ಆರ್. ಗಣೇಶ ಅವರಿಗೆ ಇಷ್ಟವಿಲ್ಲದಿದ್ದರೂ ಯಕ್ಷಗಾನದ ಗೌರವ ಸೂಚಕ ಚಿಹ್ನೆಯಾದ ಕೇದಗೆ

ಮುಂದಲೆಯನ್ನು ನಮ್ಮ ಬ್ರೋಚರ್ಸ್ ಗಳಲ್ಲಿ ಹಾಗೂ ವೇದಿಕೆಯಲ್ಲಿ ಬಳಸಿಕೊಂಡಿದ್ದೆ. ಸುಂದರ ಕಲೆಯನ್ನು ಔಚಿತ್ಯಪೂರ್ಣವಾಗಿ ರಸವತ್ತಾಗಿ ಕಾಣಿಸುವುದೇ ದೊಡ್ಡದು ಎಂಬ ಆರ್ ಗಣೇಶರ ಮಾರ್ಗದರ್ಶನದಲ್ಲಿ ನನ್ನ ಔಚಿತ್ಯ ಪ್ರಜ್ಞೆ ಹೆಚ್ಚಿತು. ಯಕ್ಷಗಾನ ಪ್ರೇಕ್ಷಕರನ್ನು 'ಏಕವ್ಯಕ್ತಿ' ಮುಟ್ಟಬೇಕೆಂಬ ದೃಷ್ಟಿಯಿಂದ ಯಕ್ಷಗಾನದಲ್ಲಿ ಮರೆಯಾಗುತ್ತಿರುವ ಪೂರ್ವರಂಗ, ಸಭಾಲಕ್ಷಣದ ಕೆಲವು ಪಟ್ಟುಗಳನ್ನು, ಭೂವಂದನೆ, ಸಭಾವಂದನೆ, ಪೀಠಿಕಾಸ್ತ್ರೀವೇಷ, ದಶಾವತಾರ ಮುಖ್ಯ ಸ್ತ್ರೀ ವೇಷದ ಕೆಲವು ಪದ್ಯಗಳನ್ನು ಹೀಗೆ ವೈವಿಧ್ಯಮಯ ಪದ್ಯಗಳನ್ನು ಆಯ್ದು 'ಯಕ್ಷದರ್ಪಣ' ಸಿದ್ಧಗೊಂಡಿತು. ಇದು ಯಕ್ಷಗಾನ ಆಸಕ್ತರ ಗಮನ ಸೆಳೆದಿದೆ.

ಪ್ರ : ಸ್ತ್ರೀ ಪಾತ್ರವನ್ನು ನಿಮ್ಮ ಕಲಾಜೀವನಕ್ಕೆ ಆಯ್ಕೆ ಮಾಡಿಕೊಳ್ಳಲು ಕಾರಣವೇನು? ಮತ್ತು ಅದನ್ನೇ ಪರಿಪೋಷಣೆ ಮಾಡುವಲ್ಲಿ ನಿಮ್ಮ ದೃಷ್ಟಿ ಸೃಷ್ಟಿಗಳನ್ನು ವಿವರಿಸಿ.

ಉ : ಚಿಕ್ಕವರಿದ್ದಾಗ ಉತ್ತಮ ಅಂಗ ಸೌಷ್ಠವ ಇರುವವರು ಸ್ತ್ರೀ ಪಾತ್ರದ ಮೂಲಕವೇ ರಂಗಸ್ಥಳದಲ್ಲಿ ಕಾಣಿಸಿಕೊಳ್ಳುತ್ತಾರೆ. ವಯಸ್ಸಾದಂತೆ ಅಲ್ಲೇ ಉಳಿಯುವುದು ಕಲೆಗಾರಿಕೆಯ ಸವಾಲಾಗುತ್ತದೆ. ಗಂಡಿನ ಸಾಮರ್ಥ್ಯವನ್ನು ಅಲ್ಲಿ ಮರೆಯಬೇಕು. ನಿಜ ಬದುಕಿನಲ್ಲಿ ಹಾಗೂ ಕಲಾ ಬದುಕಿನಲ್ಲಿ ಬೇರೆ ಬೇರೆಯಾಗಿ ಕಾಣಿಸಿಕೊಳ್ಳಬೇಕಾಗುತ್ತದೆ. ಉತ್ತಮ ಅಂಗಸೌಷ್ಠವವನ್ನು ದೀರ್ಘಕಾಲ ಉಳಿಸಿಕೊಳ್ಳುವುದೇ ಅಲ್ಲದೆ, ಹೆಣ್ಣಿನ ಸೂಕ್ಷ್ಮತೆಯ ಅರಿವು ಇರಬೇಕಾಗುತ್ತದೆ. ಗಂಡು ವೇಷದ ಪಾತ್ರಧಾರಿಗಳಿಗೆ ವೇಷಭೂಷಣದ ಅನುಕೂಲವಿರುತ್ತದೆ. ಕುಣಿತವೂ ಜಾಸ್ತಿ ಇರುತ್ತದೆ. ಹೆಣ್ಣು ಪಾತ್ರಧಾರಿಗಳಿಗೆ ಈ ಅನುಕೂಲಗಳಿಲ್ಲ. ಆತನ ಕುಣಿತ ಲಾಸ್ಯಮಯವಾಗಿದ್ದು ಹೃದಯಕ್ಕೆ ಮುಟ್ಟುವಂತಿರಬೇಕು. ಇದು ಸವಾಲಿನ ಕೆಲಸ. ಅದಕ್ಕಾಗಿ ಪ್ರಾರಂಭದಿಂದ ಅದನ್ನೇ ನೆಚ್ಚಿಕೊಂಡೆ. ಕೊನೆಯವರೆಗೂ ಸ್ತ್ರೀಪಾತ್ರಧಾರಿಯಾಗಿ ಉಳಿಯಬೇಕೆಂದು ಬಯಸಿದೆ. ನಾನು ಸ್ತ್ರೀ ಪಾತ್ರ ವಹಿಸಲು ಪ್ರಾರಂಭಿಸಿದಂದಿನಿಂದ ಬೆಳೆಯುತ್ತಾ ಬಂದಿದ್ದೇನೆ. ಸೀರೆ ಉಡುವ ಕ್ರಮದಲ್ಲಿ, ಆಭರಣ ಧರಿಸುವ ವಿಧಾನದಲ್ಲಿ ಶಿರೋಭೂಷಣ ತೊಡುವ ರೀತಿಯಲ್ಲಿ, ಆಹಾಯಕಗಳಲ್ಲಿ ಹೆಚ್ಚಿನ ಬದಲಾವಣೆ ಮಾಡಿಕೊಂಡಿದ್ದೇನೆ. ಅಭಿನಯ, ಕುಣಿತದಲ್ಲಿ ಕೆಲವೊಂದು ಮಾರ್ಪಾಡು ಮಾಡಿಕೊಂಡಿದ್ದೇನೆ. ಇದನ್ನು ಜನತೆ ಹಾಗೂ ಉಳಿದ

ಕಲಾವಿದರು ಮೆಚ್ಚಿಕೊಂಡಿದ್ದಾರೆ. ವೃತ್ತಿ ಮೇಳಗಳ ಪ್ರಸಂಗಗಳಲ್ಲಿ ಈಗ ಸ್ತ್ರೀ ವೇಷಕ್ಕೆ ಸಾಕಷ್ಟು ಅವಕಾಶವಿದೆ. ನನ್ನ ಆಂಗಿಕವಾದ ಕಲಾಶಕ್ತಿ ರಸೋತ್ಪತ್ತಿಗೆ ಕಾರಣವಾಗುವ ಭಾವೋತ್ಕರ್ಷಗಳೆಲ್ಲಾ ಸ್ತ್ರೀ ಪಾತ್ರಕ್ಕೆ ಹೆಚ್ಚು ಹೊಂದುತ್ತದೆ.

ಪ್ರ : ನಿಮ್ಮ ಏಕವ್ಯಕ್ತಿ ಯಕ್ಷಗಾನದ ಬಗ್ಗೆ ಯಕ್ಷಗಾನದ ಹೊರಗಿನವರ ಅಭಿಪ್ರಾಯಗಳೇನು?

ಉ : ಯಕ್ಷಗಾನದ ಆಸಕ್ತರೆಲ್ಲರೂ ಈ ಪ್ರದರ್ಶನವನ್ನು ಮೆಚ್ಚಿಕೊಂಡಷ್ಟೇ ಬೇರೆಯವರೂ ಮೆಚ್ಚಿದ್ದಾರೆ. ಅನೇಕ ಸಂಗೀತಗಾರರು, ನೃತ್ಯಪಟುಗಳು, ಅಧಿಕಾರಿ ವರ್ಗದವರು, ಸಾಹಿತಿಗಳು ಅನೇಕ ಸಂದರ್ಭದಲ್ಲಿ ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ. ಸಾಹಿತಿಗಳಾದ ಡಾ. ಅನಂತ ಮೂರ್ತಿ, ಡಾ. ಹೆಚ್.ಎಸ್. ವೆಂಕಟೇಶಮೂರ್ತಿ, ಕೆ.ಇ. ರಾಧಾಕೃಷ್ಣ, ನೃತ್ಯರಂಗದ ಡಾ. ಪದ್ಮಾ ಸುಬ್ರಹ್ಮಣ್ಯಂ, ನಿರುಪಮಾ ರಾಜೇಂದ್ರ, ಶಮಾ ಸಂಜಯ, ಅನುರಾಧ, ಖ್ಯಾತ ಸಂಗೀತಗಾರರಾದ ಡಾ. ವಿದ್ಯಾಭೂಷಣರು, ಚಿತ್ರನಟ ಡಾ. ವಿಷ್ಣುವರ್ಧನ್, ಶ್ರೀನಾಥ್, ಶಿವರಾಂ, ಸಿಂಹ, ಚಿಂತಕರಾದ ವೀಣಾ ಬನ್ನಂಜೆ, ಬನ್ನಂಜೆ ಗೋವಿಂದಾಚಾರ್ಯ ಮುಂತಾದವರೆಲ್ಲ ಪ್ರಶಂಸಿಸಿದ್ದಾರೆ.

ಎಲ್ಲಕ್ಕಿಂತ ಮಿಗಿಲಾಗಿ ಒಮ್ಮೆ ಕೂಚುಪುಡಿ ಗ್ರಾಮದಲ್ಲಿ ನಡೆದ ಕಲಾ ಉತ್ಸವದಲ್ಲಿ ಶ್ರೀ ಕೃಷ್ಣಮೂರ್ತಿ ತುಂಗ ಹಾಗೂ ನಾನು ಯಕ್ಷಗಾನವನ್ನು ಪ್ರತಿನಿಧಿಸಿದ್ದೆವು. ಅಲ್ಲಿ 'ವಿಜಯವಿಲಾಸ'ವನ್ನು ಆಯ್ದುಕೊಂಡೆವು. ಕೂಚುಪುಡಿಯ ಪ್ರಸಿದ್ಧ ವಿದ್ವಾಂಸರೂ, ಪದ್ಮಶ್ರೀ ಪುರಸ್ಕೃತ ವೇದಾಂತ ಸತ್ಯನಾರಾಯಣ ಶರ್ಮ ಅವರ ಸಮ್ಮುಖದಲ್ಲಿ ವಿಶೇಷವಾಗಿ ಪ್ರದರ್ಶಿಸುವ ಅವಕಾಶ ಲಭಿಸಿತು. ಅವರು ಕಣ್ ತುಂಬ ನೋಡಿದ್ದಲ್ಲದೇ, ಅವರ ಕೈಯಿಂದಲೇ ನಮಗೆ ಕನಕಪುಷ್ಪಾಭಿಷೇಕ ಮಾಡಿದ್ದು ಯಕ್ಷಗಾನಕ್ಕೆ ಸಂದ ಗೌರವವಾಗಿದೆ. ಇದು ಮರೆಯಲಾರದ ಘಟನೆ.

ಪ್ರ : ಯಕ್ಷಗಾನ ರಂಗದ ಉಳಿದ ಕಲಾವಿದರ ಒಡನಾಟದ ಬಗ್ಗೆ ಹೇಳಬಹುದಾ? ನಿಮಗೆ ಆದರ್ಶ ಕಲಾವಿದರಾದವರು ಯಾರು?

ಉ : ನನ್ನ ಕಲಾಸಕ್ತಿಗೆ ಗುರಿಯನ್ನು ನಿರ್ಣಯಿಸಿದ ಅದೃಶ್ಯ ಗುರುವೆಂದರೆ ಕೆರೆಮನೆ ಗಜಾನನ ಹೆಗಡೆಯವರು. ಅವರು ನನಗೆ ಭೌತಿಕವಾಗಿ

ಗುರುವಲ್ಲದಿದ್ದರೂ ಭಾವನಾತ್ಮಕವಾಗಿ ಗುರುಗಳೇ. ಮೊದಲೇ ಹೇಳಿದಂತೆ ಸಾಲಿಗ್ರಾಮ ಮೇಳದಲ್ಲಿದ್ದಾಗ ಕೆರೆಮನೆ ತ್ರಿಮೂರ್ತಿಗಳಾದ ಕೆರೆಮನೆ ಮಹಾಬಲ ಹೆಗಡೆ, ಕೆರೆಮನೆ ಶಂಭು ಹೆಗಡೆ, ಕೆರೆಮನೆ ಗಜಾನನ ಹೆಗಡೆಯವರ 'ಭಾಸವತಿ' ಪಾತ್ರವಂತೂ ನನ್ ಮನಃಪಟಲದಲ್ಲಿ ಅಚ್ಚಳಿಯದೇ ಉಳಿದಿದೆ. ಅದೇ ರೀತಿ 'ಪತಿವ್ರತಾ ಮಹಾತ್ಮೆ'ಯ ಸುಶೀಲೆ ಪಾತ್ರ ಕೂಡ. ಕಮಲಶಿಲೆ ಮೇಳದಲ್ಲಿದ್ದಾಗ ಮಹಾಬಲ ಹೆಗಡೆಯವರು ಅನೇಕ ರೀತಿಯ ಮಾರ್ಗದರ್ಶನ ಮಾಡಿದವರು. ಶಂಭು ಹೆಗಡೆಯವರು, ನೆಬ್ಬೂರು ನಾರಾಯಣ ಭಾಗವತರು ಇಡಗುಂಜಿ ಮೇಳದಲ್ಲಿದ್ದಾಗ ಒಂದು ಬಗೆಯಲ್ಲಿ ಮಾದರಿಯಾಗಿದ್ದರು. ಇನ್ನು ಬಚ್ಚಗಾರು ಮೇಳದಲ್ಲಿದ್ದಾಗ ಚಿಟ್ಟಾಣಿಯವರೊಂದಿಗಿನ ಪ್ರದರ್ಶನ ಮರೆಯಲಾರದ್ದು. ಅವರೊಬ್ಬ ಪ್ರತಿಭಾವಂತ ಕಲಾವಿದ. ಎದಿರು ಪಾತ್ರಕ್ಕೆ ಸಾಕಷ್ಟು ಅವಕಾಶ ನೀಡುವ ಉದಾತ್ತ ಮನಸ್ಸಿನವರು. ಯಕ್ಷಗಾನ ಕಲಾವಿದರುಗಳಲ್ಲಿ ನಾನು ಮೆಚ್ಚಿಕೊಂಡಿರುವವರಲ್ಲಿ ಕೊಂಡದಕುಳಿ ರಾಮಚಂದ್ರ ಹೆಗಡೆ, ಬಳ್ಕೂರು ಕೃಷ್ಣ ಯಾಜಿ, ಚಪ್ಪರಮನೆ ಶ್ರೀಧರ ಹೆಗಡೆ ಮುಂತಾದವರು ಮುಖ್ಯರು.

ಪ್ರ : ಕಲಾ ಬದುಕು ಹಾಗೂ ನಿಜದ ಬದುಕಿನ ಬಗ್ಗೆ ನಿಮ್ಮ ಚಿಂತನೆ ಯಾವುದು?

ಉ : ಇಂದ್ರಿಯಾನುಭವವನ್ನು ಮೀರಿದ ಸಂತೋಷಕ್ಕಾಗಿ ಅರಿವಿಲ್ಲದೆಯೇ ಕಲಾರಂಗವನ್ನು ಪ್ರವೇಶಿಸಿದ್ದೆ. ಕಲೆ ಆನಂದಕ್ಕಾದೀತು, ಬದುಕಿಗಲ್ಲ ಎಂಬ ಸತ್ಯವನ್ನರಿತು ಮೇಳದಿಂದ ದೂರವಾದೆ. ಬದುಕಿಗೆ ದುಡಿಯಬೇಕು, ಸಂಪಾದಿಸಬೇಕು, ಅಂತೆಯೇ ದುಡಿದೆ. ವ್ಯವಸ್ಥೆಯಾಯಿತು. ಅದನ್ನೂ ಮೀರಿದ ಆನಂದದ ಅತೃಪ್ತಿ ಇತ್ತು ಹಾಗಾಗಿ ಮತ್ತೆ ಮತ್ತೆ ರಂಗಕ್ಕೆ ಬಂದೆ. ಕಲೆಯ ಭ್ರಮೆ ಮತ್ತು ತಾರಾ ಮೌಲ್ಯಗಳು ಅಹಂಕಾರವನ್ನು ಹೆಚ್ಚಿಸಿ ನನ್ನೊಳಗಿನ ಆನಂದಕ್ಕೆ ಅಡ್ಡಿಯಾಗಿತ್ತು. ಅಂತಹ ಸಂದರ್ಭದಲ್ಲಿ ಶತಾವಧಾನಿ ಗಣೇಶರ ಮಾರ್ಗದರ್ಶನ ನನ್ನೊಳಗಿನ ಅಹಂ, ಭ್ರಮೆ ಕಳಚಿತು. ಇಂದ್ರಿಯಾನುಭವ ಮೀರಿದ ಆನಂದವನ್ನು ಬದುಕಿನಲ್ಲಿ ಹುಡುಕಬಹುದು ಎಂಬ ಸತ್ಯ ಕಂಡುಕೊಂಡೆ. ಈ ಕಲೆ ನಿರಂತರವಾಗಿ ಇರುವುದು, ನಾನು ಇದರಲ್ಲಿ ಕ್ಷಣಿಕ ಕಾಲ ವಿರಮಿಸುವ ಪ್ರವಾಸಿ ಎಂಬುದು ತಿಳಿದಿದೆ. ಆದ್ದರಿಂದ ತಾವರೆ ಎಲೆಯ ಮೇಲಿನ ನೀರಿನಂತೆ ಇರಬೇಕು ಎಂದುಕೊಂಡಿದ್ದೇನೆ.

ಮಂಟಪ ಪ್ರಭಾಕರ ಉಪಾಧ್ಯರ ಮಾತುಗಳಲ್ಲಿ ಸಂತೃಪ್ತ ಕಲಾವಿದನ, ಬದುಕಿನಲ್ಲೂ ಸಮಾಧಾನಚಿತ್ತ ಹೊಂದಿದ ವ್ಯಕ್ತಿಯನ್ನು ಕಾಣಬಹುದು. ಕಲೆಯಲ್ಲಿ ಮಾತ್ರವಲ್ಲದೆ ಬದುಕಿನಲ್ಲಿಯೂ ಮಾಗಿದವರು 'ಮಂಟಪರು'.

■

ರಂಗಸ್ಥಳದ ರಾಜ

ಬಳ್ಕೂರು ಕೃಷ್ಣಯಾಜಿ

ಬೆಳೆಯಬೇಕೆಂಬ ಒಳತುಡಿತ ಇದ್ದು, ಅದಕ್ಕಾಗಿ ನಿಷ್ಠೆಯಿಂದ ದುಡಿದರೆ ಪರಿಪೂರ್ಣ ಕಲಾವಿದ ರೂಪುಗೊಳ್ಳಲು ಸಾಧ್ಯ ಎಂಬುದಕ್ಕೆ ಬಳ್ಕೂರು ಕೃಷ್ಣ ಯಾಜಿಯವರು ಒಂದು ಉತ್ತಮ ನಿದರ್ಶನ. ಕೃಷ್ಣ ಯಾಜಿಯವರು ಜನಿಸಿದ್ದು 1956ರ ಡಿಸೆಂಬರ್ 4 ರಂದು. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಬಳ್ಕೂರಿನಲ್ಲಿ, ಅಲ್ಲಿನ ಶ್ರೀಮಂತ ಕೃಷಿಕರಾದ ವಿಷ್ಣು ಯಾಜಿ ಹಾಗೂ ಮಂಕಾಳಿಯವರ ಎಂಟನೆಯ ಮಗನಾಗಿ ಜನಿಸಿದ ಕೃಷ್ಣಯಾಜಿಯವರು ಹುಟ್ಟಿದಾಗ ಅಗರ್ಭ ಶ್ರೀಮಂತರು. ಆದರೆ ಹತ್ತೇ ವರ್ಷಗಳಲ್ಲಿ ಒಕ್ಕಲು ಮಸೂದೆಯಿಂದ ಮನೆತನದ ವಶದಲ್ಲಿದ್ದ 108 ಎಕರೆ ಕೃಷಿಭೂಮಿಯಲ್ಲಿ ನೂರು ಎಕರೆ ಉಳುವವರ ಪಾಲಾಯಿತು. ದೊಡ್ಡ ಕುಟುಂಬಕ್ಕೆ ಉಳಿದಿದ್ದ ಜಮೀನಿನಲ್ಲಿ ಸಂಸಾರ ನಿರ್ವಹಿಸುವುದೇ ಕಷ್ಟವಾಯಿತು. ಆಗ ಬದುಕಿಗಾಗಿ ಬೇರೆದಾರಿ ಹುಡುಕಬೇಕಾಗಿಬಂತು. ಇಡಗುಂಜಿ ಹೈಸ್ಕೂಲ್ ನಲ್ಲಿ ಓದುತ್ತಿದ್ದಾಗ 'ಮಾಗಧ'ನ ಪಾತ್ರವನ್ನು ಮಾಡಿ ಎಲ್ಲರ ಮೆಚ್ಚುಗೆಗಳಿಸಿದ್ದೇ 'ಯಕ್ಷಗಾನ'ದ ಕಡೆ ಹೊರಳಲು ಕಾರಣವಾಯಿತು. ಎಸ್.ಎಸ್.ಎಲ್.ಸಿ. ಮುಗಿಸಿದ್ದ ಅವರು ಆ ಕಾಲಕ್ಕೆ ಯಕ್ಷಗಾನರಂಗದ ದಿಗ್ಗಜರಾಗಿದ್ದ ಕೆರೆಮನೆ ಮಹಾಬಲ ಹೆಗಡೆಯವರಲ್ಲಿ ತೆರಳಿ ಸಲಹೆ ಕೇಳುತ್ತಾರೆ.

ಬದುಕಿಗಾಗಿ, ಸಂಪಾದನೆಗಾಗಿ 'ಯಕ್ಷಗಾನ'ವಲ್ಲ ಕಲೆಯನ್ನು ಕಲಿತು ಅದರಿಂದ ಆನಂದ ಪಡೆಯಲು ಯಕ್ಷಗಾನವನ್ನು ಆಶ್ರಯಿಸಬೇಕೆಂಬ ಸೂಚನೆ ಪಡೆಯುತ್ತಾರೆ. ಅದನ್ನೇ ನಂಬಿದ, ಅದನ್ನೇ ಆದರ್ಶವಾಗಿಟ್ಟುಕೊಂಡ ಯಾಜಿ ಮತ್ತೆ ಹಿಂದೆ ಸರಿಯಲಿಲ್ಲ. ಕಲಿಯುವುದನ್ನೇ 'ದಿವ್ಯಮಂತ್ರ'ವಾಗಿ ಮಾಡಿಕೊಂಡರು, ಸಂಪೂರ್ಣವಾಗಿ ತಿಳಿಯಬೇಕೆಂಬ ತಹತಹಿಕೆಯಿಂದ ಸದಾ ತುಡಿಯುತ್ತಿರುವ ಕೃಷ್ಣಯಾಜಿಯವರು ಇಂದು ಯಕ್ಷಗಾನದ ಎಲ್ಲಾ ರಂಗದಲ್ಲೂ ನುರಿತಿದ್ದಾರೆ. ಕೆರೆಮನೆ ಶಿವರಾಮ ಹೆಗಡೆ, ಮೂರೂರು ದೇವರು ಹೆಗಡೆ ಹಾಗೂ ಕೆರೆಮನೆ ಮಹಾಬಲ ಹೆಗಡೆಯವರ ಕಲೆಗಾರಿಕೆಯ ಅಂಶಗಳು ಬಳ್ಕೂರರಲ್ಲಿ ಮೇಳೈಸಿವೆ.

ಬಳ್ಕೂರು ಕೃಷ್ಣಯಾಜಿಯವರ ವೃತ್ತಿಜೀವನದ ಪಯಣ ಪ್ರಾರಂಭವಾದದ್ದು ಇಡಗುಂಜಿ ಮೇಳದಿಂದ. ಅಲ್ಲಿಗೆ ಸೇರಿಕೊಂಡಾಗ ಇವರಿಗೆ ಮಾರ್ಗದರ್ಶಕರಾಗಿದ್ದವರು ಕೆರೆಮನೆ ಮಹಾಬಲ ಹೆಗಡೆ, ಕೆರೆಮನೆ ಶಂಭು ಹೆಗಡೆ, ನೆಬ್ಬೂರು ನಾರಾಯಣ ಭಾಗವತ ಮುಂತಾದ ಹಿರಿಯರು. ಮಹಾಬಲ ಹೆಗಡೆಯವರ ನಡೆ, ಗತ್ತು, ಗಾಂಭೀರ್ಯಗಳೆಲ್ಲ ಇವರಿಗೆ ಆದರ್ಶವಾದವು. ಒಂದು ರೀತಿಯಲ್ಲಿ ಮಹಾಬಲ ಹೆಗಡೆಯವರ "ಉತ್ತರಾಧಿಕಾರಿ" ಎಂದರೂ ತಪ್ಪಾಗಲಾರದು. ಅವರಂತೆ ಇವರು ಕೂಡ ತಾರಾಮೌಲ್ಯ ಗಳಿಸಿದ ಕಲಾವಿದರು. ಸತತ ಶ್ರಮ ಹಾಗೂ ಸೂಕ್ಷ್ಮ ಒಳನೋಟದಿಂದ ಅವರೊಬ್ಬ ಮೇರು ಕಲಾವಿದರಾದರು. ಬೆಂಗಳೂರಿನಲ್ಲಿ ಮೂರು ದಶಕಗಳಿಗಿಂತಲೂ ಹೆಚ್ಚು ಕಾಲ ಅನೇಕ ಉತ್ತಮ ಪಾತ್ರಗಳನ್ನು ನಿರ್ವಹಣೆ ಮಾಡಿ, ಅದರಲ್ಲಿ ಅವರದೇ ಆದ ಛಾಪನ್ನು ಹಾಕಿದ್ದರಿಂದ ಅಪಾರ ಅಭಿಮಾನಿ ಬಳಗವನ್ನು ಹೊಂದಿದ್ದಾರೆ. ಅವರಿಗೆ ಅರವತ್ತು ತುಂಬಿದ (2016) ಸಂದರ್ಭದಲ್ಲಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಸಮಾರಂಭದಲ್ಲಿ ಅಪಾರ ಅಭಿಮಾನಿಗಳು ಸೇರಿ ಸಂಭ್ರಮಿಸಿದ್ದರು. ಅಭಿಮಾನಿಗಳ ಮಹಾಪೂರವೇ ಅಲ್ಲಿ ಸೇರಿತ್ತು.

ನಲವತ್ತೊಂದು ವರ್ಷಗಳ ದೀರ್ಘ ಯಶಸ್ವಿ ವೃತ್ತಿಜೀವನವನ್ನು ನಡೆಸಿರುವ ಕೃಷ್ಣಯಾಜಿಯವರು ಇಡಗುಂಜಿ ಮೇಳದಲ್ಲಿ 6 ವರ್ಷ, ಕಮಲಶಿಲೆ ಮೇಳದಲ್ಲಿ 1 ವರ್ಷ, ಅಮೃತೇಶ್ವರಿ ಮೇಳದಲ್ಲಿ 1 ವರ್ಷ, ಶಿರಸಿಯ ಪಂಚಲಿಂಗೇಶ್ವರ ಮೇಳದಲ್ಲಿ 4 ವರ್ಷ, ಸೇವೆ ಸಲ್ಲಿಸಿದ್ದಾರೆ. ಗುರು ಪ್ರಸಾದಿತ ಯಕ್ಷಗಾನ ಮಂಡಳಿ ಸಾಲಿಗ್ರಾಮದಲ್ಲಿ ಎರಡು ದಶಕಗಳಷ್ಟು (29 ವರ್ಷ) ಕಾಲ ಮುಖ್ಯ ಪಾತ್ರಧಾರಿ ಹಾಗೂ ಎದಿರುಪಾತ್ರಧಾರಿಯಾಗಿ ಆ ಮೇಳಕ್ಕೊಂದು ಪ್ರಮುಖ ಅಸ್ತಿಭಾರವನ್ನು ಹಾಕಿದವರು. ಈಗ ಸಂತೃಪ್ತವಾದ ನಿವೃತ್ತಿ ಜೀವನವನ್ನು ನಡೆಸುತ್ತಿದ್ದಾರೆ. ಹಾಗೆಂದು ಅವರು ಸುಮ್ಮನೆ ಕುಳಿತಿಲ್ಲ. ತಮ್ಮ ಗೆಳೆಯರನ್ನು ಸೇರಿಸಿಕೊಂಡು 'ಯಾಜಿ ಯಕ್ಷ ಮಿತ್ರ ಮಂಡಳಿ'ಯನ್ನು ಸ್ಥಾಪಿಸಿ (2007) ಅನೇಕ ಸಾಂಸ್ಕೃತಿಕ ಬದ್ಧತೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಬಳ್ಕೂರು ಕೃಷ್ಣಯಾಜಿಯವರ ವೇಷಗಾರಿಕೆಯೇ ವಿಶೇಷವಾದದ್ದು. ಅದೊಂದು ಹೂಕುಸುಮವಿದ್ದಂತೆ. ಎಲ್ಲದರಲ್ಲೂ ಒಂದು ಒಪ್ಪ ಓರಣ. ಅವರ ಮಾತು, ಕುಣಿತ, ಅಭಿನಯವೆಲ್ಲಾ ಹೇಗೆ ಅಚ್ಚುಕಟ್ಟು ಹಾಗೆ ಅವರ ವೇಷಗಾರಿಕೆ ಕೂಡ. ಸಾಲಿಗ್ರಾಮ ಮೇಳದಲ್ಲಿದ್ದಷ್ಟು ಕಾಲ ಅವರದ್ದು ಎರಡನೇ ವೇಷ. ಅದಕ್ಕೆ ತಕ್ಕ ಗಂಡುಧ್ವನಿ ಅವರದ್ದು. ಅವರ ನಾಯಕ ಪಾತ್ರದಷ್ಟೇ ಖಳನಾಯಕನ ಪಾತ್ರವೂ ಮನಸೆಳೆಯುವಂತಹದ್ದು. ಅವರಿಗೆ ಹೆಸರು ತಂದುಕೊಟ್ಟಿರುವ ಪಾತ್ರವೆಂದರೆ ಭೀಷ್ಮವಿಜಯದ 'ಬೀಷ್ಮ'. ಆ ಪಾತ್ರದ ಧಿರೋದ್ಧಾತತೆಯನ್ನು ಅನೇಕ ಘಟನೆಗಳ ಮೂಲಕ ಧೀಮಂತವಾಗಿ ರಂಗದಲ್ಲಿ ಪಡಿಮೂಡಿಸುತ್ತಾರೆ. ಇಡೀ ರಂಗಸ್ಥಳವನ್ನು ತುಂಬಿಕೊಳ್ಳುವ ಶಕ್ತಿ ಯಾಜಿ ಅವರಿಗೆ ಇದೆ. ಸಾಲಿಗ್ರಾಮ ಮೇಳದಲ್ಲಿದ್ದಾಗ 'ಅಜಯ ವಿಜಯ' 'ರಾಜನರ್ತಕಿ' 'ಚಿತ್ರಾವತಿ' 'ನಾಗಶ್ರೀ' ಮುಂತಾದ ಪ್ರಸಂಗಗಳಲ್ಲಿನ ಮುಖ್ಯ ಪಾತ್ರಗಳನ್ನು ಮಾಡಿ "ರೈಸಿ"ದ್ದಾರೆ. ನಾಗಶ್ರೀ ಯಲ್ಲಿನ 'ಶಿಥಿಲ' ಪಾತ್ರ ಹೆಸರು ತಂದಿದೆ. ಅಭಿನಯ ಕಲೆ ಯಾಜಿಯವರಿಗೆ ಒಲಿದಿದೆ. ಅವರ ನಿಲುವು, ಹಾವಭಾವ, ಗತ್ತುಗಾರಿಕೆ, ಕುಣಿತದ ವಿಧಾನ, ರಂಗದಲ್ಲಿ ನಡೆದಾಡುವ ಬಗೆ, ಪಾತ್ರಕ್ಕೆ ಸರಿ ಹೊಂದುವಂತೆ ಸ್ವರದಲ್ಲಿನ ಏರಿಳಿತದಿಂದ ಕೂಡಿದ ಸಂಭಾಷಣೆ, ಚಿಕ್ಕದಾದರೂ ಚೊಕ್ಕದಾದ ಮಾತುಗಾರಿಕೆ, ಮನಮುಟ್ಟುವ ಕಲಾಭಿವ್ಯಕ್ತಿ ಇವೆಲ್ಲ 'ಯಾಜಿ ಸ್ಟೈಲ್' ಆಗಿ ಬ್ರಾಂಡ್ ಆಗಿದೆ. ಯಾವುದೇ ಪಾತ್ರವನ್ನಾದರೂ ಲೀಲಾಜಾಲವಾಗಿ ಮಾಡಬಲ್ಲರು 'ಯಾಜಿ ಅರವತ್ತು' ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಅವರೊಂದಿಗೆ ಸಂವಾದಿಸಿದಾಗ ಯಕ್ಷಗಾನ ಕಲೆಯ ಕುರಿತ ಚಿಂತನೆ, ಅವರ ಜೀವನದ, ಬದುಕಿನ ದೃಷ್ಟಿಕೋನ ಹೀಗೆ ವ್ಯಕ್ತವಾಗಿದೆ.

ಇಂದು ಯಕ್ಷಗಾನ ಉಳಿದು ಬೆಳೆಯಬೇಕಾದರೆ ಕಲಾವಿದರಾದವರು ಕಲಿಕೆಯ ಬಗ್ಗೆ ಗಮನ ಹರಿಸಬೇಕು ಎನ್ನುತ್ತಾರೆ. ಹಿಂದೆ ಇದ್ದಂತೆ ಈಗ ವೃತ್ತಿಮೇಳಗಳು ಇಲ್ಲ. ಈ ಕಾರಣ ಕಲೆ ಕೈಹಿಡಿಯಬೇಕಾದರೆ ಶ್ರಮಪೂರ್ಣ ಕಲಿಕೆಬೇಕು. ಈ ಬಗ್ಗೆ ತಮಗೆ ಹಿಂದೆ ಮಹಾಬಲ ಹೆಗಡೆಯವರು ಹೇಳಿದ ಮಾತನ್ನು ಜ್ಞಾಪಿಸಿಕೊಳ್ಳುತ್ತಾರೆ. ತಾನು ಬೆಳೆಯಲು ಅದೇ ಕಾರಣ ಎನ್ನುತ್ತಾರೆ. ಕೇವಲ ಒಂದೆರಡು ವರ್ಷದಲ್ಲೇ ತಾನೊಬ್ಬ ದೊಡ್ಡ ಪಾತ್ರಧಾರಿಯಾಗಬೇಕೆಂದು ಬಯಸುವುದು ತಪ್ಪು ಎಂಬುದು ಅವರ ದೃಢನಿಲುವು. ಪರಂಪರೆಯ ಬಗ್ಗೆ ಗೌರವ ಇರಬೇಕು. ಹಿರಿಯ ಕಲಾವಿದರು ಹೇಗೆ ಪಾತ್ರ ನಿರ್ವಹಣೆ ಮಾಡಿದ್ದಾರೆ ಎಂಬುದನ್ನು ನೋಡುತ್ತಿರಬೇಕು. ಮುಂದೆ ಆ ಪಾತ್ರಕ್ಕೆ ಕಲಾವಿದ ತನ್ನ ಕೊಡುಗೆಯನ್ನು ನೀಡಬೇಕು ಆಗ ಅದು ಅವನ ವಶವಾಗುತ್ತದೆ ಎಂಬ ಗುಟ್ಟನ್ನು ಬಿಚ್ಚಿಡುತ್ತಾರೆ. ಆದ್ದರಿಂದಲೇ ಅವರ ಭೀಷ್ಮ, ಅರ್ಜುನ, ಶಂತನು, ಶ್ರೀರಾಮ, ಕೃಷ್ಣ, ರಾವಣ, ಕೌರವ, ಕೀಚಕ, ಮಾಗಧ, ಋತುಪರ್ಣ, ದುಷ್ಟಬುದ್ಧಿ ಮೊದಲಾದ ಪಾತ್ರಗಳಲ್ಲಿ

ಕೃಷ್ಣಯಾಜಿಯವರ ಸ್ವಂತ ಛಾಪುಇದೆ. ಅಲ್ಲಿ ಅವರದೇ ಆದ ಒಂದು ನಡೆ ಇದೆ. ಇಂದಿಗೂ ಜನತೆ ಅವರ ಪಾತ್ರವನ್ನು ನೆನೆಯುತ್ತಿರಲು ಅದೇ ಕಾರಣವಾಗಿದೆ.

ತಮ್ಮ ನಿವೃತ್ತ ಜೀವನದ ಬಗ್ಗೆ ಮಾತನಾಡುತ್ತಾ, ತಾನು ವೃತ್ತಿ ಮೇಳದಿಂದ ನಿವೃತ್ತಿಯಾಗಿದ್ದೇನೆಯೇ ಹೊರತು ಪಾತ್ರಗಾರಿಕೆಯಿಂದ ಅಲ್ಲ ಎನ್ನುತ್ತಾರೆ. ಈಗಲೂ ಅವರು ಅತಿಥಿ ಕಲಾವಿದರಾಗಿ ಯಕ್ಷಗಾನದಲ್ಲಿ ಭಾಗವಹಿಸುತ್ತಿದ್ದಾರೆ. ಅವರ 'ಯಾಜಿ ಯಕ್ಷ ಮಿತ್ರ ಮಂಡಳಿ'ಯ ಕಾಲಮಿತಿಯ ಪ್ರದರ್ಶನವನ್ನು ನಡೆಸುತ್ತಿದೆ. ಅದರಲ್ಲಿ ಅವರು ಪರಂಪರಾಗತ ಕಲಾ ಸೌಂದರ್ಯವನ್ನು ಉಳಿಸುವಲ್ಲಿ ಶ್ರಮ ವಹಿಸುತ್ತಿದ್ದಾರೆ. ಪ್ರಚಲಿತವಲ್ಲದ ಪುರಾಣ ಪ್ರಸಂಗಗಳನ್ನು ಬೆಳಕಿಗೆ ತರಲು ಶ್ರಮಿಸುತ್ತಿದ್ದಾರೆ.

'ಯಾಜಿ ಯಕ್ಷ ಮಿತ್ರ ಮಂಡಳಿ'ಯು ಪುರಾಣ ಪ್ರಸಂಗಗಳನ್ನು ಆಯ್ದು ಪ್ರದರ್ಶನ ನೀಡಿ 'ಕಲೌಚಿತ್ಯ' ವೇ ಪ್ರದರ್ಶನದ ಮುಖ್ಯ ಆಸ್ತಿ ಎನ್ನುತ್ತಾರೆ. ರಂಗದಲ್ಲಿ ಎಂದು ಕಲೆಗೆ ಭಂಗವಾಗದಂತೆ ನೋಡಿಕೊಳ್ಳುತ್ತಾರೆ. ಅವರಿಗೆ ರಂಗವನ್ನು ನಡೆಸಿಕೊಂಡು ಹೋಗುವ ಸ್ವಯಂ ಶಕ್ತಿ ಇದೆ. ಅದು ಈ 'ಕಾಲಮಿತಿ' ಪ್ರದರ್ಶನದಲ್ಲಿ ಕಂಡುಬರುತ್ತದೆ. ಕೃಷ್ಣಯಾಜಿಯವರಿಗೆ ತಾನು 'ಯಕ್ಷಗಾನ' ದಿಂದ ಗಳಿಸಿದ್ದೇನೆ. ಬೆಳೆದಿದ್ದೇನೆ. ಆದ್ದರಿಂದ ಯಕ್ಷಗಾನ ರಂಗಕ್ಕೆ ವಾಪಸು ಕೊಡಬೇಕು ಅದನ್ನು ಬೆಳೆಸಬೇಕು ಎಂಬ ಭಾವವಿದೆ. ಅವರ ಮಾತುಗಳಲ್ಲಿ ಇದು ಢಾಳಾಗಿ ವ್ಯಕ್ತವಾಗುತ್ತದೆ. ಅದಕ್ಕಾಗಿಯೇ ಈ ಸಂಸ್ಥೆಯ ಮೂಲಕ ಕಲಾವಿದರಿಗೆ ನಿಧಿ ಸಮರ್ಪಣೆ, ಅನಾರೋಗ್ಯ ಪೀಡಿತ ಕಲಾವಿದರಿಗೆ ಸಹಾಯ ಹಸ್ತವಾಗಿ ಹಣನೀಡಿಕೆ, ಕಡು ಬಡ ಕಲಾ ಕುಟುಂಬಕ್ಕೆ ಆರ್ಥಿಕ ಸಹಾಯ ಮುಂತಾದ ಸಮಾಜ ಮುಖಿ ಕಾರ್ಯಗಳಲ್ಲಿ ಕೃಷ್ಣ ಯಾಜಿಯವರು ತೊಡಗಿಕೊಂಡಿದ್ದಾರೆ. ಈ ಕಲೆ ಸಮರ್ಥರಿಂದ ಮುಂದುವರಿಯಬೇಕು. ಅದಕ್ಕೆ ಯೋಗ್ಯ ಕಲಾವಿದರನ್ನು ಹುಡುಕಿ ಗೌರವಿಸಿದರೆ ಅವರು ದಾರಿ ತಪ್ಪುವುದಿಲ್ಲ ಎನ್ನುತ್ತಾರೆ. 'ಯಾಜಿ ಯಕ್ಷಮಿತ್ರ ಪ್ರಶಸ್ತಿ' ಎಂಬ ಪ್ರಶಸ್ತಿಯನ್ನು ಪ್ರತಿ ವರ್ಷ ಒಬ್ಬ ಸಮರ್ಥ ಕಲಾವಿದರಿಗೆ ನೀಡಿ ಗೌರವಿಸುತ್ತಿದ್ದಾರೆ. ಈ ಮೂಲಕ ಪರಂಪರೆ ಉಳಿಯಲು ಸಾಧ್ಯವಾಗುತ್ತದೆ ಎಂದು ನಂಬಿದ್ದಾರೆ.

ವೃತ್ತಿ ಮೇಳದಲ್ಲಿದ್ದಾಗ, ಹೊಸ ಪ್ರಸಂಗಗಳಲ್ಲಿ ಬರುವ ಕಾಲ್ಪನಿಕ ಪಾತ್ರಗಳಲ್ಲಿ ಭಾಗವಹಿಸಿದ್ದರೂ, ತನಗೆ ತೃಪ್ತಿ ಕೊಡುವುದು ಪೌರಾಣಿಕ ಪಾತ್ರಗಳೇ ಎನ್ನುತ್ತಾರೆ. ಅಲ್ಲಿ ವೃತ್ತಿ ಮೇಳಗಳ ಶಿಸ್ತಿಗೆ ಅನುಗುಣವಾಗಿ ವರ್ತಿಸಬೇಕಾಗುತ್ತದೆ. ಆದರೆ ತನಗೆ ತೃಪ್ತಿ ಬರುವುದು ಭೀಷ್ಮ, ಕೃಷ್ಣ, ಸುಧನ್ವ, ಕೀಚಕ ಮುಂತಾದ ಪಾತ್ರಗಳನ್ನು ನಿರ್ವಹಿಸಿದಾಗಲೇ ಎಂಬುದು ಅವರ ದೃಢ ನಂಬಿಕೆ. ತಾನು ಹದಿನೆಂಟನೆಯ ವಯಸ್ಸಿನಲ್ಲಿ ರಂಗ ಪ್ರವೇಶಿಸಿದೆ. ಅಂದಿನಿಂದ ಇಂದಿನವರೆಗೂ ಆದ ಬದಲಾವಣೆಯನ್ನು ನೋಡುತ್ತಿದ್ದೇನೆ.

ಯಕ್ಷಗಾನ ನೋಡುವವರ ಸಂಖ್ಯೆ ಹೆಚ್ಚಿದೆ. ಆದರೆ ಹಿಂದೆ ಇದ್ದಂತಹ ಕಲಾಸಕ್ತ ಪ್ರೇಕ್ಷಕರು ಕಡಿಮೆಯಾಗುತ್ತಿದ್ದಾರೆ ಎನ್ನುತ್ತಾರೆ. ತನ್ನ ಗುರುಗಳಾದ ರಾಷ್ಟ್ರಪ್ರಶಸ್ತಿ ವಿಜೇತ ದಿ.ಕೆರೆಮನೆ ಮಹಾಬಲಹೆಗಡೆಯವರನ್ನು ಹಾಗೂ ಯಕ್ಷಗಾನ ರಂಗಕ್ಕೆ ಧುಮುಕಲು ಪ್ರೇರಿತರಾದ ಚಿಕ್ಕಪ್ಪ ರಾಮಚಂದ್ರ ಯಾಜಿಯವರನ್ನು ಕೃತಜ್ಞತೆಯಿಂದ ನೆನೆಸುವ ಕೃಷ್ಣಯಾಜಿಯವರು ತಂದೆತಾಯಿ ಹಾಗೂ ಸಹೋದರ ಸಹೋದರಿಯರು ನನ್ನ ಈ ಕಲಾಜೀವನಕ್ಕೆ ಸದಾ ಪ್ರೋತ್ಸಾಹಿಸುತ್ತಿದ್ದರು ಎನ್ನುತ್ತಾರೆ. ಚಿಟ್ಟಾಣಿ ರಾಮಚಂದ್ರ ಹೆಗಡೆ, ಕೆರೆಮನೆ ಶಂಭು ಹೆಗಡೆ, ಮಂಟಪ ಪ್ರಭಾಕರ ಉಪಾಧ್ಯ ಮುಂತಾದ ಕಲಾವಿದರೊಂದಿಗಿನ ಒಡನಾಟವನ್ನು ಆಪ್ತತೆಯಿಂದ ನೆನೆಯುತ್ತಾರೆ.

ಬೆಂಗಳೂರಿನಲ್ಲಿ ನಡೆದ 'ಯಾಜಿ ಅರವತ್ತು' ಕಾರ್ಯಕ್ರಮದಲ್ಲಿನ 'ಚಕ್ರವ್ಯೂಹ' ಪ್ರಸಂಗದಲ್ಲಿ ಕೃಷ್ಣಯಾಜಿಯವರ ಮೊಮ್ಮಗ ಅಭಿಷೇಕ ಅಡಿ ಅಭಿಮನ್ಯುವಾಗಿ ಪಾತ್ರವಹಿಸಿದ್ದು 'ಅಜ್ಜನಿಗೆ' ಸಂತೋಷ ತಂದಿತ್ತು. ತನ್ನ ಮೊಮ್ಮಗ ತಾನು ಕುಣಿದ ಕಲಾಕ್ಷೇತ್ರದ ವೇದಿಕೆಯಲ್ಲಿ ಯಕ್ಷಗಾನ ವೇಷಹಾಕಿದನಲ್ಲಾ! ಎಂಬತೃಪ್ತಿಯ ಭಾವ ಅವರ ಮಾತುಗಳಲ್ಲಿ ಹೊರಸೂಸುತ್ತಿತ್ತು. ಆತನ ಚುರುಕು ನಡೆಯನ್ನು, ಹದವರಿತ ಕುಣಿತವನ್ನು ಸೊಗಸಾದ ಹಾವಭಾವಗಳನ್ನು ವೇದಿಕೆಯ ಪಕ್ಕದಲ್ಲಿ ನಿಂತು ನೋಡಿ ಸವಿಯುತ್ತಿದ್ದರು. "ತನ್ನ ಮೊಮ್ಮಗ ತನ್ನೊಂದಿಗೆ ಕುಣಿಯುತ್ತಿದ್ದಾನೆ, ಪ್ರದರ್ಶನದಲ್ಲಿ ಭಾಗವಹಿಸುತ್ತಿದ್ದಾನೆ" ಎಂಬ ಹಿಗ್ಗು ಅವರಲ್ಲಿದೆ. ಹಾಗೆ ನೋಡ ಹೋದರೆ ಕೃಷ್ಣ ಯಾಜಿಯವರದ್ದು ಸುಖಿ ಸಂಸಾರ. ಅವರ ಪತ್ನಿ ಶಾಂತಿ, ರೂಪ ಮತ್ತು ದೀಪ ಎಂಬ ಇಬ್ಬರು ಹೆಣ್ಣಮಕ್ಕಳು. ಆರೋಗ್ಯದ ಸಮಸ್ಯೆ ಇದ್ದರೂ 'ಕಾಲಮಿತಿ'ಯಲ್ಲಿ ಭಾಗವಹಿಸಲು ತೊಂದರೆ ಇಲ್ಲ ಎನ್ನುತ್ತಾರೆ. ಅವರ ದೃಷ್ಟಿಯಲ್ಲಿ ಮಹಾಬಲ ಹೆಗಡೆಯವರು ಹೇಳುವಂತೆ ಯಕ್ಷಗಾನ ಕಾಲಮಿತಿಗೆ ಒಳಪಡುವುದು ಅನಿವಾರ್ಯ. 'ಆಗಲೇ ಅಚ್ಚುಕಟ್ಟಾದ ಮಾತು, ಕುಣಿತ, ಅಭಿನಯ ಎಲ್ಲವೂ ರಂಗದಲ್ಲಿ ಸಾಧ್ಯ' ಎನ್ನುತ್ತಾರೆ. ಇವರಿಗೆ ಭೀಷ್ಮ ಪರ್ವ, ಗದಾಯುದ್ಧ, ಕರ್ಣಾರ್ಜುನ ಕಾಳಗ, ಕೃಷ್ಣ ಸಂಧಾನ, ನಳದಮಯಂತಿ, ಶ್ರೀರಾಮ ನಿರ್ಯಾಣ, ಮಾಗಧ ವಧೆ, ವಿರಾಟ ಪರ್ವ, ಚಂದ್ರಹಾಸ ಚರಿತೆ ಮುಂತಾದವು ಇಷ್ಟವಾದ ಪ್ರಸಂಗಗಳಾಗಿವೆ. ಸಾತ್ವಿಕ ಪಾತ್ರಗಳೆಂದರೆ ಇವರಿಗೆ ಆದರ, ಶೃಂಗಾರ ರಸಾಭಿವ್ಯಕ್ತಿಯಕಡೆಗೆ ಇವರ ಒಲವು.

ಬಳ್ಕೂರು ಕೃಷ್ಣಯಾಜಿಯವರಿಗೆ ಪೇಜಾವರ ಶ್ರೀ ಪಾದರಿಂದ 'ರಾಮವಿಠಲ ಪ್ರಶಸ್ತಿ' ಲಭಿಸಿದೆ. ಸ್ವರ್ಣವಲ್ಲಿ ಶ್ರೀಗಳಿಂದ 'ಯಕ್ಷಕಲಾ ತಿಲಕ' ಪ್ರಶಸ್ತಿ ಲಭಿಸಿದೆ. ಹೊರ ರಾಜ್ಯಗಳು ಮಾತ್ರವಲ್ಲದೆ ವಿದೇಶಗಳಲ್ಲಿ ನಡೆದ ಯಕ್ಷಗಾನ ಪ್ರದರ್ಶನಗಳಲ್ಲಿ ಭಾಗಿಯಾಗಿದ್ದಾರೆ ಅಂತೆಯೇ ಅನೇಕ ಸಂಘಸಂಸ್ಥೆಗಳು ಇವರ ಕಲಾಸೇವೆಯನ್ನು

ಮೆಚ್ಚಿಗೌರವಿಸಿವೆ. ಶತಾವಧಾನಿ ಆರ್. ಗಣೇಶರಿಂದ 'ಕಲಾದರ್ಶ' ಎಂಬ ಬಿರುದು, ಹೈಕೋರ್ಟ್ ನ್ಯಾಯಾಧೀಶರುಗಳಿಂದ 'ರಂಗಸ್ಥಳದ ರಾಜ'ನೆಂಬ ಬಿರುದು ಇವರಿಗೆ ಲಭಿಸಿದೆ. 'ಮಣೂರು ಮಯ್ಯ ಯಕ್ಷ ಕಲಾ ಪ್ರತಿಷ್ಠಾನ', ಯಕ್ಷ ಕಲಾ ರಂಜನಿ, ಕಲಾದರ್ಶಿನಿ ಮುಂತಾದ ಸಂಸ್ಥೆಗಳು ಬೆಂಗಳೂರಿನಲ್ಲಿ ಗೌರವಿಸಿವೆ. ಪ್ರತಿಷ್ಠಿತ ಡಾ. ಶಿವರಾಮ ಕಾರಂತ ಪ್ರಶಸ್ತಿ ಇವರಿಗೆ ಲಭಿಸಿದೆ. ಸಾತ್ವಿಕ, ಶೃಂಗಾರ ಪಾತ್ರಗಳಲ್ಲಿ ಮಿಂಚುವ ಕೃಷ್ಣ ಯಾಜಿಯವರು ಅಭಿಜಾತ ಕಲಾವಿದರಾಗಿದ್ದಾರೆ. ಪರಂಪರೆಯನ್ನು ಉಳಿಸಿ ಬೆಳೆಸುವಲ್ಲಿ ಅವರ ಕೊಡುಗೆ ಅಪಾರ.

■

ಪ್ರಜ್ಞಾವಂತ ಕಲಾವಿದ

ತಾರಾನಾಥ ವರ್ಕಾಡಿ

ಯಕ್ಷಗಾನದ ಹೆಚ್ಚಿನ ಕಲಾವಿದರು ಯಕ್ಷಗಾನ ಕಲೆಗೆ ಮಾತ್ರ ಬದ್ಧರಾಗಿದ್ದು ಬೇರೆ ವಿಚಾರದ ಕಡೆಗೆ ಗಮನಹರಿಸುವುದೇ ಇಲ್ಲ. ಆದರೆ ಇದಕ್ಕೆ ಅಪವಾದವಾಗಿ ಇರುವವರು ತೆಂಕುತಿಟ್ಟಿನ ಪ್ರಸಿದ್ಧ ಕಲಾವಿದರಾದ ಶ್ರೀ ತಾರಾನಾಥ ವರ್ಕಾಡಿಯವರು. ಯಕ್ಷಗಾನದ ಖ್ಯಾತ ಕಲಾವಿದರಾಗಿ ಮಾತ್ರವಲ್ಲದೆ ತಾಳಮದ್ದಲೆಯ ಅರ್ಥಧಾರಿಯಾಗಿ, ಪತ್ರಕರ್ತರಾಗಿ, ಕವಿಯಾಗಿ, ಕತೆಗಾರರಾಗಿ, ವೈಚಾರಿಕ ಲೇಖಕರಾಗಿ ಎಲ್ಲಕ್ಕಿಂತ ಮುಖ್ಯವಾಗಿ ಪ್ರಸಂಗಕಾರರಾಗಿ ಪ್ರಸಿದ್ಧರಾದವರು ವರ್ಕಾಡಿಯವರು. ಕನ್ನಡದಲ್ಲಿ ಮಾತ್ರವಲ್ಲದೆ ತುಳುಭಾಷೆಯಲ್ಲೂ ಕೃಷಿ ಮಾಡಿ ಕೇರಳ ತುಳು ಅಕಾಡೆಮಿ ಪ್ರಶಸ್ತಿ ಗಳಿಸಿದವರು. ವೃತ್ತಿ ಯಕ್ಷಗಾನ ರಂಗಭೂಮಿಯಲ್ಲಿ 34 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿ ಅಲ್ಲಿಂದ ನಿವೃತ್ತಿ ಹೊಂದಿ, ಕಳೆದ ಏಳು ವರ್ಷಗಳಿಂದ 'ಬಲ್ಲಿರೇನಯ್ಯ' ಎಂಬ ಯಕ್ಷಗಾನ ಮಾಸಪತ್ರಿಕೆಯೊಂದರ ಸಂಪಾದಕರಾಗಿ ನಾಡಿನ ಉದ್ದಗಲಕ್ಕೆ ಹೆಸರು ಮಾಡಿದ್ದಾರೆ.

ಪ್ರ : ಬೆಂಗಳೂರಿನಲ್ಲಿ ಯಕ್ಷಗಾನ ಚಟುವಟಿಕೆಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಮಂಗಳೂರಿನ ಪುರಭವನದಂತೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ ಯಕ್ಷಗಾನದ ಖಾಯಂ ಕಲ್ಯಾಣ ಮಂಟಪ. ತಮ್ಮ ಹಣದ ಅವಶ್ಯಕತೆಗೆ ಕಲಾವಿದರು ನಡೆಸುವ ಸಹಾಯಾರ್ಥ ಪ್ರದರ್ಶನಗಳಿಂದ ಹಿಡಿದು ದೊಡ್ಡ ದೊಡ್ಡ ಶ್ರೀಮಂತರ ಕಾರ್ಯಕ್ರಮಗಳ ತನಕ ಅನೇಕ ವೈವಿಧ್ಯಮಯ ಕಾರ್ಯಕ್ರಮಗಳಾಗುವ ಇಲ್ಲಿನ ಪ್ರತಿಷ್ಠಿತ ರಂಗ ಮಂದಿರ ಕಲಾ ಕಾರ್ಯಕ್ರಮಗಳಿಗೆ ಅತ್ಯಂತ ಪ್ರಶಸ್ತ ತಾಣ. ಹೆಚ್ಚಾಗಿ ನಾಟಕಗಳೇ ನಡೆಯುತ್ತಿದ್ದ ಈ ರಂಗಮಂದಿರ ಇಂದು ಯಕ್ಷಗಾನದ ಪ್ರಸಿದ್ಧ ಪ್ರೇಕ್ಷಕ ಮಂದಿರವಾಗಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಐವತ್ತು ವರ್ಷಗಳನ್ನು ಪೂರೈಸಿರುವ ಈ ಕಲಾಕ್ಷೇತ್ರಕ್ಕೆ ಕಲಾವಿದರೆಲ್ಲರ ಪರವಾಗಿ ನಮ್ಮ ಮನದಾಳದ ಅಭಿನಂದನೆಗಳು.

ಬೆಂಗಳೂರಿನ ಹೋಟೆಲ್ ಉದ್ಯಮಿಗಳು, ನೌಕರರು ಯಕ್ಷಗಾನ ಕಲಾವಿದರ ಅಭಿಮಾನಿಗಳಾಗಿದ್ದಾರೆ. ನಾನು ಅನೇಕ ಬಾರಿ ಇಲ್ಲಿ ತಾಳಮದ್ದಲೆಯ ಅರ್ಥಧಾರಿಯಾಗಿ; ಪಾತ್ರಧಾರಿಯಾಗಿ ಭಾಗವಹಿಸಿದ್ದೇನೆ. ಈಗೀಗ ತೆಂಕುತಿಟ್ಟಿನ ಯಕ್ಷಗಾನ ಪ್ರದರ್ಶನ ಹೆಚ್ಚುತ್ತಿರುವುದು ಆಶಾದಾಯಕ ಬದಲಾವಣೆಯಾಗಿದೆ. ಯಕ್ಷಗಾನ ಬಯಲಾಟ ಅಕಾಡೆಮಿಯ ಸದಸ್ಯನಾಗಿ ಬೆಂಗಳೂರಿನ ಅನೇಕ ಯಕ್ಷಗಾನ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಇಲ್ಲಿನವರ ಪ್ರೀತಿ ಅಭಿಮಾನಗಳನ್ನು ಮೆಚ್ಚಿಕೊಂಡಿದ್ದೇನೆ.

ಪ್ರ : ಅರ್ಥಧಾರಿಯಾಗಿಯೂ ಖ್ಯಾತಿಗಳಿಸಿರುವ ನೀವು ಹೇಗೆ ಅರ್ಥಗಾರಿಕೆಗೆ ಸಿದ್ಧರಾಗುತ್ತೀರಿ? ತಾಳಮದ್ದಲೆಯ ಅನುಭವಗಳನ್ನು ತಿಳಿಸಿ.

ಉ : ಮೊದಲಿನಿಂದಲೂ ಓದುವುದು ನನಗೆ ಇಷ್ಟದ ವಿಷಯ. ಅನೇಕ ಪುರಾಣ ಕೃತಿಗಳನ್ನು ಓದುತ್ತಿರುತ್ತೇನೆ. ಅದೇ ರೀತಿ ಹೊಸ ವಿಚಾರಗಳನ್ನು ಹೇಳುವ ಪುಸ್ತಕ ಓದುತ್ತೇನೆ. ಅಲ್ಲದೆ ಹಿಂದಿನ ಅಗ್ರಮಾನ್ಯ ಅರ್ಥಧಾರಿಗಳ ಮಾತನ್ನು ಕೇಳಿಸಿಕೊಂಡಾಗ ಅದನ್ನು ಮನಸಿನಲ್ಲಿ ಇಟ್ಟುಕೊಂಡು ಟಿಪ್ಪಣಿ ಮಾಡಿಕೊಳ್ಳುತ್ತೇನೆ. ಅರ್ಥಗಾರಿಕೆ ಸಂದರ್ಭದಲ್ಲಿ ಇವುಗಳನ್ನು ಉಪಯೋಗಿಸುತ್ತೇನೆ. ಕುಂಬಳೆ ಸುಂದರರಾವ್, ಕೆ. ಗೋವಿಂದ ಭಟ್, ಪ್ರಭಾಕರ ಜೋಷಿ, ವಾಸುದೇವ ಸಾಮಗ, ವಾಸುದೇವರಂಗಾಭಟ್, ಜಬ್ಬಾರ್ ಸುಮೊ ಮುಂತಾದವರ ಜೊತೆಯಲ್ಲಿ ಅರ್ಥ ಹೇಳಿದ್ದೇನೆ. ಕೃಷ್ಣ ಸಂಧಾನದ ವಿದುರನಾಗಿ,

ವಾಲಿವಧೆಯ ರಾಮನಾಗಿ, ಸುಧನ್ವ ಕಾಳಗದ ಸುಧನ್ವನಾಗಿ ಅರ್ಥ ಹೇಳುವಲ್ಲಿ ನಾನೇ ಸ್ವಯಂ ಸಂತೋಷಗೊಂಡಿದ್ದೇನೆ. ವೀರೇಂದ್ರ ಹೆಗ್ಗಡೆಯವರ 'ಚೆನ್ನುಡಿ', ಸುಖಬೋಧಾನಂದರ 'ಮನಸ್ಸೇ ರಿಲ್ಯಾಕ್ಸ್', ಜಗದಾತ್ಮಾನಂದಾಜಿಯವರ 'ಬದುಕಲು ಕಲಿಯಿರಿ' ಗೋವಿಂದಾಚಾರ್ಯರ 'ನಂದಾದೀಪ' ಒಡಿಯುರು ಸ್ವಾಮೀಜಿಯವರ 'ಜ್ಞಾನ ಗಂಗೆ' ಪೆರ್ಲ ಕೃಷ್ಣ ಭಟ್‌ರ 'ಶಲಾಕೆ' ದೇರಾಜೆಯವರ ಪುಸ್ತಕಗಳು ಮುಂತಾದ ಕೃತಿಗಳಿಂದ ನಾನು ಉಪಕೃತನಾಗಿದ್ದೇನೆ.

ಪ್ರ : ಧರ್ಮಸ್ಥಳ ಮೇಳದ ಕಲಾವಿದರಾಗಿ ಹಾಗೂ ಪ್ರದರ್ಶನಗಳ ಪಾತ್ರಧಾರಿಯಾಗಿ ನೀವು ಕಂಡುಕೊಂಡ ಅನುಭವಗಳಾವುವು?

ಉ : ನನ್ನ ಯಕ್ಷಗಾನ ವೃತ್ತಿ ಜೀವನಕ್ಕೆ ಆಶ್ರಯದಾತರಾದದ್ದು ಶ್ರೀಕ್ಷೇತ್ರಧರ್ಮಸ್ಥಳ ಮೇಳ. ಅಲ್ಲಿನ ಮುಖ್ಯಸ್ಥರಾದ ಶ್ರೀ ಹರ್ಷೇಂದ್ರ ಕುಮಾರ್ ಅವರನ್ನು ಹಾಗೂ ಶ್ರೀಕ್ಷೇತ್ರದ ಧರ್ಮಾಧಿಕಾರಿಯಾಗಿರುವ ಶ್ರೀ ವೀರೇಂದ್ರ ಹೆಗ್ಗಡೆಯವರ ಪ್ರೋತ್ಸಾಹ ನನಗೆ ಸದಾ ಲಭಿಸಿದೆ. ಕಲಾವಿದರ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಪರಂಪರೆ ಅಲ್ಲಿದೆ ಅಲ್ಲಿ ನನ್ನೊಂದಿಗೆ ಸಹಕಲಾವಿದರಾಗಿ ಮಾರ್ಗದರ್ಶಕರಂತೆ ಇದ್ದವರು ಕುಂಬಳೆ ಸುಂದರ್ ರಾವ್, ಸೂರಿಕುಮೇರು ಗೋವಿಂದ ಭಟ್ ಹಾಗೂ ನಯನ ಕುಮಾರ್ ಅವರು. ತೆಂಕುತಿಟ್ಟಿನ ಕಲಾವಿದರನ್ನು ಸಂಘಟಿಸಿ ಪ್ರವಾಸಿ ತಂಡವನ್ನು ರಚಿಸಿ ಪ್ರದರ್ಶನಕ್ಕೆ ವ್ಯವಸ್ಥೆ ಮಾಡುತ್ತಿದ್ದ ನಯನ ಕುಮಾರ್ ಹಾಗೂ ಶ್ರೀಧರ ಭಂಡಾರಿ ಅವರ ತಂಡದ ತಿರುಗಾಟದಲ್ಲೂ ಭಾಗವಹಿಸಿದ್ದೇನೆ. ರಾವಣ ವಧೆಯ ರಾಮ, ಸುಧನ್ವ ಕಾಳಗದ ಸುಧನ್ವ, 'ರಂಭಾ ರೂಪ ರೇಖೆಯಲ್ಲಿ ವೀರಮಾಣಿ, ಇಂದ್ರಜಿತು ಕಾಳಗದಲ್ಲಿ ರಾಮ, ಕೃಷ್ಣಲೀಲೆಯ ವಸುದೇವ, ವಿಶ್ವಾಮಿತ್ರ ಮೇನಕೆಯಲ್ಲಿ ಮನ್ಮಥ, ಪಾರಿಜಾತದಲ್ಲಿ ಕೃಷ್ಣ, ಶ್ವೇತಕುಮಾರ ಚರಿತೆಯಲ್ಲಿ ಶ್ವೇತಕುಮಾರ, ಮೇಧಿನಿ ನಿರ್ಮಾಣದಲ್ಲಿ ಧೂಮ್ರಾಕ್ಷನಾಗಿ ಅಭಿನಯಿಸುವ ಮೂಲಕ ವೈವಿಧ್ಯಮಯ ಪಾತ್ರಗಳನ್ನು ಮಾಡಿದ ತೃಪ್ತಿ ನನಗೆ ಇದೆ. ಪಾತ್ರದ ಸಂಭಾಷಣೆಯನ್ನು ವಿಸ್ತರಿಸುವ ನನ್ನ ಕಲಾಗಾರಿಕೆಯನ್ನು ಜನರು ಮೆಚ್ಚಿಕೊಂಡಿದ್ದಾರೆ. ಕುಣಿತಕ್ಕಿಂತ ಸಂಭಾಷಣೆಯ ಸಂಪನ್ನತೆಯ ಬಗ್ಗೆ ನನಗೆ ಒಲವು ಹೆಚ್ಚು.

ಪ್ರ : ಪ್ರಸಂಗ ರಚನೆಯನ್ನು ಮಾಡಿರುವ ನೀವು ಆ ಕುರಿತು ವಿವರಿಸಬಹುದೇ?

ಉ : ಮೊದಲಿನಿಂದಲೂ ಓದುವ ಗೀಳಿತ್ತು. ಯಕ್ಷಗಾನ ಕ್ಷೇತ್ರವನ್ನೂ ಆರಿಸಿಕೊಂಡದ್ದರಿಂದ ಡಾ. ಎನ್. ನಾರಾಯಣ ಶೆಟ್ಟಿಯವರಲ್ಲಿ ಛಂದಸ್ಸಿನ ಬಗ್ಗೆ, ಪ್ರಸಂಗ ರಚನೆಯ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿದೆ. ಇದರ ಫಲವಾಗಿ ಯಕ್ಷಗಾನ ಪ್ರಸಂಗಗಳ ರಚನೆಗೆ ಮೊದಲಿಟ್ಟೆ. ಆಸ್ತಿಕ ಪರ್ವ ಶ್ರೀರಾಮ ಕಾರುಣ್ಯ, ಶಿಲ್ಪ ಕೌಶಲ, ಒಡಿಯೂರು ಕ್ಷೇತ್ರ ಮಹಾತ್ಮೆ, ಪಾದಪ್ರತೀಕ್ಷಾ, ತಪೋನಂದನ, ಶ್ವೇತ ಪಂಚಕ, ಪುಷ್ಪ ಪೂರ್ಣಿಮಾ ಮುಂತಾದವು ತುಳುವಿನಲ್ಲಿ ನಾನು ಬರೆದ ಪರಕೆದ ಪಿಂಗಾರ, ಸಿಂಧೂರ ತೇಜ, ಗೋಕರ್ಣಿ, ಪೂಜೆರ ತುಳಸಿ, ಅಗೋಳಿ ಮಂಜಣಿ, ಬ್ರಹ್ಮ ಬೈದರ್, ಕುಂಕುಮದ ಪರಕೆ ಮುಂತಾದವು ಸಾಕಷ್ಟು ಪ್ರದರ್ಶನಗಳನ್ನು ಕಂಡಿವೆ. ಡಾ. ನಾರಾಯಣ ಶೆಟ್ಟಿಯವರ ಜೀವನ ಸಾಧನೆಗೆ ಸಂಬಂಧಪಟ್ಟ ಕೃತಿಯಾದ 'ಅಭಿನವ ನಾಗವರ್ಮ' ಸಾಹಿತ್ಯಕ ವಲಯದಲ್ಲಿ ಗಮನ ಸೆಳೆದಿದೆ. ಯಾವುದೇ ಭಾಷೆಯ ಪ್ರಸಂಗವಾದರೂ ಅಲ್ಲಿ ಒಂದು ಜೀವನಕ್ಕೆ ಸಂದೇಶ ಇರಬೇಕು ಉತ್ತಮ ಮೌಲ್ಯ ಪ್ರತಿಪಾದನೆ ಇರಬೇಕು. ಆಗ ಪ್ರಸಂಗ ರಚನೆ ಸಾರ್ಥಕವಾಗುತ್ತದೆ ಎಂದುಕೊಂಡಿದ್ದೇನೆ.

ಪ್ರ : 'ಬಲ್ಲಿರೇನಯ್ಯ' ಯಕ್ಷಗಾನ ಮಾಸಪತ್ರಿಕೆಯನ್ನು ಕಳೇದ ಏಳು ವರ್ಷಗಳಿಂದ ಪ್ರಕಟಿಸಿಕೊಂಡು ಬಂದಿದ್ದೀರಿ. ಆ ಬಗ್ಗೆ ನಿಮ್ಮ ಅನಿಸಿಕೆ ತಿಳಿಸಿ.

ಉ : ಮೊದಲಿನಿಂದಲೂ ಪತ್ರಿಕೋದ್ಯಮ ನನ್ನ ಇಷ್ಟದ ವಿಷಯ. ಉದಯವಾಣಿಗೆ ನನ್ನ ಲೇಖನಗಳನ್ನು ಕಳಿಸುತ್ತಿದ್ದೆ. ಅವರು ಅಂಕಣ ರೂಪದಲ್ಲಿ ಪ್ರಕಟಿಸುತ್ತಿದ್ದದ್ದು ನಾನೂರಕ್ಕೂ ಹೆಚ್ಚು ಬರಹಗಳನ್ನು ಬರೆದಿದ್ದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಯಕ್ಷಗಾನದ ಸುದ್ದಿಯನ್ನು ಹಾಗೂ ವಿಚಾರಗಳನ್ನು ತಿಳಿಸುವ ಪತ್ರಿಕೆಯಾದ 'ಬಲ್ಲಿರೇನಯ್ಯ' ಪ್ರಕಟಣೆ ಪ್ರಾರಂಭಿಸಿದೆ. ಇದಕ್ಕೆ ಅನೇಕ ಯಕ್ಷಗಾನ ವಿದ್ವಾಂಸರು, ಕಲಾವಿದರು, ಅಭಿಮಾನಿಗಳು ಪ್ರೋತ್ಸಾಹ ನೀಡಿದರು. ನನ್ನ ಮಡದಿ ಡಾ॥ ಪ್ರೇಮಲೀಲಾ, ಮಗಳು ಆಜ್ಞಾಸೋಹಂ ಸಹಕರಿಸುತ್ತಿದ್ದಾರೆ. ನನ್ನ ಬರವಣಿಗೆಗೆ ಒತ್ತಾಸೆಯಾದವರು ಭಾಸ್ಕರ ರೈ ಕುಕ್ಕವಳ್ಳಿ, ಮಿಥುನ್ ಉಡುಪ, ಕೋರ್ಗಿ ವೆಂಕಟೇಶ ಉಪಾಧ್ಯಾಯ ಮುಂತಾದವರು. ಶತಾವಧಾನಿ ಆರ್ ಗಣೇಶ್, ಟಿ. ಶ್ಯಾಮ್ ಭಟ್ ಮುಂತಾದವರು ನನ್ನನ್ನು ಸದಾ ಪ್ರೋತ್ಸಾಹಿಸುತ್ತಿದ್ದಾರೆ. ಈ ಪತ್ರಿಕೆ ಯಕ್ಷಗಾನ ರಂಗದಲ್ಲಿ ಹೆಚ್ಚು ಪ್ರಸಾರಗೊಳ್ಳುತ್ತಿರುವುದು ಮತ್ತು ಅದರ ಮುದ್ರಣ ಮತ್ತು

ವಿನ್ಯಾಸ ಅದ್ವಿತೀಯ ಎಂದು ಜನರು ಕೊಂಡಾಡುವುದು ನನಗೆ ಸಮಾಧಾನ ತಂದಿದೆ.

ಪ್ರ : ಇಂದಿನ ಕಲಾವಿದರ ಬಗ್ಗೆ ನಿಮ್ಮ ಅನಿಸಿಕೆಗಳೇನು?

ಉ : ಯಕ್ಷಗಾನ ಕಲಾವಿದರಾದವರು ತರಬೇತಿಯ ಬಗ್ಗೆ ಹೆಚ್ಚು ಗಮನ ಕೊಡಬೇಕು. ಹಿರಿಯ ಕಲಾವಿದರ ಪ್ರದರ್ಶನಗಳನ್ನು ನೋಡಿ ಈ ಕಲೆಯ ಒಳಗನ್ನು ತಿಳಿದುಕೊಳ್ಳಬೇಕು. ಅದೇ ರೀತಿ ಸಾಹಿತ್ಯ ಕೃತಿಗಳನ್ನು ಓದಿ, ಪುರಾಣದ ವಿಚಾರಗಳನ್ನು ಕಥೆಗಳನ್ನು ತಿಳಿದುಕೊಳ್ಳಬೇಕು. ಆಗ ಉತ್ತಮ ಸಂಭಾಷಣೆ ನೀಡಲು ಸಾಧ್ಯ.

ತಾರಾನಾಥ ವರ್ಕಾಡಿಯವರಿಗೆ ಅನೇಕ ಪ್ರಶಸ್ತಿಗಳು, ಸಮ್ಮಾನಗಳು ಲಭಿಸಿವೆ. ಕೇರಳ ಸರ್ಕಾರದ ತುಳು ಅಕಾಡೆಮಿ ಪ್ರಶಸ್ತಿ, ಕಾಂತಾವರ ಪ್ರಶಸ್ತಿ, ಜಯರಾಮ ಶೆಟ್ಟಿ ಪ್ರಶಸ್ತಿ, ಮುಂಬೈ, ದೆಹಲಿ, ಬೆಂಗಳೂರಿನ ಅನೇಕ ಸಂಸ್ಥೆಗಳ ಸಮ್ಮಾನಗಳು ಲಭಿಸಿವೆ. ಉಡುಪಿಯ ಶ್ರೀಕೃಷ್ಣ ಮಠ, ಎಡನೀರು ಶ್ರೀಮಠ, ಸುತ್ತೂರು ಮಠ, ರಾಮಚಂದ್ರಪುರ ಮಠ, ಒಡಿಯೂರು ಮಠ ಮುಂತಾದ ಅಸಂಖ್ಯ ಮಠಮಾನ್ಯಗಳು ಇವರನ್ನು ಗೌರವಿಸಿವೆ. ಇವರ ಅಂಕಣ ಬರಹಗಳ ಸಂಕಲನವಾದ 'ಕಬ್ಬಿನಕೋಲು' ಕೃತಿ ವಿದ್ವಜ್ಜನರ ಮನ್ನಣೆಗೆ ಪಾತ್ರವಾಗಿದೆ. ಧರ್ಮಸ್ಥಳದ ಕಲಾಕೇಂದ್ರದಲ್ಲಿ ನಾಟ್ಯಗುರುವಾಗಿ ನಾಲ್ಕು ವರ್ಷಗಳ ಕಾಲ ಸೇವೆ ನೀಡಿದ ಹೆಗ್ಗಳಿಕೆ ಇವರದು. ಪುರಾಣದ ಬಾಲಕರು, ನದಿಗಳ ಕಥೆಗಳು ಮುಂತಾದ ವೈವಿಧ್ಯಮಯವಾದ ಲೇಖನಗಳ ಸರಣಿ ಅಪಾರ ಜನಮನ್ನಣೆಗಳಿಸಿವೆ. ಒಬ್ಬ ಪ್ರಜ್ಞಾವಂತ ಯಕ್ಷಗಾನ ಕಲಾವಿದ ಎಂಬ ಹೆಗ್ಗಳಿಕೆಯಿಂದ ಜನತೆ ತಾರಾನಾಥ ವರ್ಕಾಡಿಯವರನ್ನು ಗುರುತಿಸುತ್ತಾರೆ. ಅವರ ಸಂಪಾದಕತ್ವದಲ್ಲಿ ಹೊರಬರುತ್ತಿರುವ 'ಬಲ್ಲಿರೇನಯ್ಯ' ಎಂಬ ಯಕ್ಷಗಾನ ಕುರಿತಾದ ಮಾಸಪತ್ರಿಕೆ ಎಲ್ಲ ವಲಯದ ಜನರನ್ನು ಆಕರ್ಷಿಸುತ್ತಿದೆ. ಅಲ್ಲಿ ಅವರು ಯಕ್ಷಗಾನ ಪ್ರದರ್ಶನಗಳ ಕುರಿತಾದ ವರದಿಗಳೊಂದಿಗೆ ಅನೇಕ ಉತ್ತಮ ಅಂಶಗಳನ್ನು ಪ್ರಕಟಿಸುತ್ತಿದ್ದಾರೆ. ಡಾ॥ ಎಂ ಪ್ರಭಾಕರ ಜೋಷಿ ಯವರಂತ ಸಮರ್ಥ ಹಾಗೂ ಹಿರಿಯ ವಿದ್ವಾಂಸರಿಂದ ಪುರಾಣ ವಿಚಾರಗಳ ಬಗ್ಗೆ ತಿಳಿವು ನೀಡುತ್ತಿದ್ದಾರೆ. ಹಿರಿಯ ಕಲಾವಿದರ ಬದುಕನ್ನು ಹಾಗೂ ಅವರೊಂದಿಗೆ ನಡೆಸಿದ ಸಂದರ್ಶನಗಳನ್ನು ಪ್ರಕಟಿಸುವ ಮೂಲಕ ಪತ್ರಿಕೆ ಒಂದು ಸಾರ್ವಕಾಲಿಕ ದಾಖಲೆಯಾಗುವಂತೆ ನೋಡಿಕೊಳ್ಳುತ್ತಿದ್ದಾರೆ. 'ಬಲ್ಲಿರೇನಯ್ಯ'ದ ಮುದ್ರಣ ಹಾಗೂ ವಿನ್ಯಾಸ ಅತ್ಯಂತ ಮೇಲ್ಮಟ್ಟದ್ದಾಗಿದೆ. ಯಕ್ಷಗಾನ ರಂಗದಲ್ಲಿ ಇದ್ದಾಗ ತಾವು ತೋರುತ್ತಿರುವ ಕಲಾಭಿರುಚಿಯನ್ನು ಹಾಗೂ ಯಕ್ಷಗಾನದ ಮೇಲಿನ ಪ್ರೀತಿಯನ್ನು ಪತ್ರಿಕೋದ್ಯಮದಲ್ಲೂ ಮುಂದುವರಿಸುತ್ತಿರುವುದು ಮೆಚ್ಚಬೇಕಾದ ಸಂಗತಿ.

■

ಸಮೀಕ್ಷೆ

ಪ್ರತಿಯೊಂದು ಸಮುದಾಯಕ್ಕೂ ಅದರದೇ ಆದ ವಿಶಿಷ್ಟತೆಯಿಂದ ಕೂಡಿದ ಕಲಾ ಸಂಪ್ರದಾಯಗಳು ಕಂಡು ಬರುತ್ತವೆ. ಮಾನವ ತನ್ನ ಆಸೆ, ಹಂಬಲ, ಸಿಟ್ಟು ಸೆಡವು, ನೋವು ನಲಿವುಗಳನ್ನೆಲ್ಲ ಈ ಕಲಾ ಮಾಧ್ಯಮಗಳ ಮೂಲಕ ಅಭಿವ್ಯಕ್ತಿಸುತ್ತಾ ಬಂದಿದ್ದಾನೆ. ಒಟ್ಟು ಜನಾಂಗ ಕಂಡುಕೊಂಡ ಮೌಲ್ಯ ವಿವೇಕಗಳು, ಗಳಿಸಿದ ಅನುಭವ ವಿಶೇಷಗಳು, ಸಾಮೂಹಿಕ ಜೀವನದ ಒಳ ನೋಟಗಳು ಕೂಡ ಇಲ್ಲಿ ವ್ಯಕ್ತವಾಗುತ್ತವೆ. ಭಾರತದ ದಕ್ಷಿಣಾ ಪಥದಲ್ಲಿ ನೆಲೆಸಿರುವ ದ್ರಾವಿಡವರ್ಗದ ಒಂದು ಸೀಳಾದ ಕನ್ನಡಿಗರು ಪರಂಪರಾಗತವಾದ ಕಲಾ ಸಂಪ್ರದಾಯಗಳನ್ನು ಪೋಷಿಸಿಕೊಂಡು ಬಂದವರು. ಯಕ್ಷಗಾನ ಕನ್ನಡಿಗರ ಹೆಮ್ಮೆಯ ಕಲೆಗಳಲ್ಲಿ ಒಂದು. ಈ ಕಲಾ ಪ್ರಕಾರದಲ್ಲಿ ಕರ್ನಾಟಕ ಸಂಸ್ಕೃತಿಯ ಪಡಿನೆಳಲನ್ನು ಕಾಣಬಹುದು.

ಮೂಲತಃ ದೇಸಿಶೈಲಿಯ ಕಲೆಯಾದ ಯಕ್ಷಗಾನ ಇಲ್ಲಿನ ಜನಪದರ ಉತ್ಕೃಷ್ಟ ಸೃಜನ ಶೀಲತೆಗೆ ಸಾಕ್ಷಿ. ಯಕ್ಷಗಾನದ ಪ್ರಾಚೀನತೆಯನ್ನು ಕುಣಿತ, ವೇಷಗಾರಿಕೆ, ಹಾಡಿನ ಮಟ್ಟುಗಳು ಎತ್ತಿ ಹಿಡಿಯುತ್ತವೆ. ಕಲಾವಿದರ ಸತ್ವ ಸಾಮರ್ಥ್ಯವನ್ನು ಸಮರ್ಪಕವಾಗಿ ದುಡಿಸಬಲ್ಲ ಈ ಕಲೆ ಕಾಲದಿಂದ ಕಾಲಕ್ಕೆ ಬೆಳೆದು ಬಂದಿದೆ. ಮೂಲತಃ ಆರಾಧನೆಯ ಒಂದು ಅಂಗವಾಗಿ ನೆಲೆನಿಂತ ಯಕ್ಷಗಾನ ಇಂದು ದೇಸಿಶೈಲಿಯಿಂದ

ಮಾರ್ಗದೆಡೆಗೆ ಹೊರಳುತ್ತಿದೆ. ಸಾಹಿತ್ಯ, ಸಂಗೀತ, ನರ್ತನ, ಬಣ್ಣಗಾರಿಕೆಗಳೆಂಬ ನಾಲ್ಕು ಅಂಗಗಳಿಂದ ಕೂಡಿರುವ ಈ ಕಲಾ ಪ್ರಕಾರದಲ್ಲಿ ಸಾಹಿತ್ಯದ ದೃಷ್ಟಿಯಿಂದ ಒಂದು ನಿರ್ದಿಷ್ಟತೆ ಲಭಿಸಿದ್ದು ಕರ್ನಾಟಕ ಸಂಸ್ಕೃತಿಯ ಪುನರುತ್ಥಾನಕ್ಕೆ ಕಾರಣವಾದ ವಿಜಯನಗರ ಸಾಮ್ರಾಜ್ಯದ ಉಚ್ಛ್ರಾಯ ಕಾಲದಲ್ಲಿ. ಅದೇ ಸಂದರ್ಭದಲ್ಲಿ ಕಾಣಿಸಿಕೊಂಡ ದಾಸಸಾಹಿತ್ಯದ ಪ್ರಭಾವಕ್ಕೂ ಒಳಗಾಗಿ ಯಕ್ಷಗಾನವು ಒಂದು ಭಕ್ತಿ ಸಾಹಿತ್ಯ ಪ್ರಕಾರವಾಯಿತು. ಆ ಕಾಲದ ಅನೇಕ ದಾಸರು ಯಕ್ಷಗಾನ ಕೃತಿಗಳನ್ನು ರಚಿಸಿದ ಉಲ್ಲೇಖವೇ ಈ ಮಾತಿಗೆ ಸಮರ್ಥನೆಯಾಗಿದೆ. ಜಾನಪದೀಯವಾಗಿದ್ದ ಈ ಕಲೆಯ ಕುಣಿತ. ಹಾಡುಗಾರಿಕೆ, ವೇಷಗಾರಿಕೆಗಳನ್ನು ಭಕ್ತಿ ಸಾಹಿತ್ಯ ಪ್ರಸಾರಕ್ಕೆ ಅಳವಡಿಸಿಕೊಂಡಂತೆ ಕಾಣಿಸುತ್ತದೆ. ಇವತ್ತು ಲಭ್ಯವಿರುವ ಹಳೆಯ ಪ್ರಸಂಗಗಳು ಧಾರ್ಮಿಕ ಉದ್ದೇಶದಿಂದಲೇ ಪ್ರೇರಿತವಾದಂತಿವೆ. ಯಕ್ಷಗಾನ ಮೇಳಗಳಿಗೆ ದೇವಸ್ಥಾನಗಳು ಆಶ್ರಯ ನೀಡಿರುವುದು ಹಾಗೂ ಜನತೆ ಹರಕೆಹೊತ್ತು ಆಟ ಆಡಿಸುವುದು ಮತ್ತು ಪ್ರದರ್ಶನದ ವಿಧಿ ವಿಧಾನಗಳು ಧಾರ್ಮಿಕ ಉದ್ದೇಶಗಳನ್ನು ಸಾರುತ್ತವೆ.

ಈ ಶತಮಾನದ ಆರಂಭದ ದಶಕಗಳಲ್ಲಿ ಕರ್ನಾಟಕದ ಉದ್ದಗಲಕ್ಕೂ ವೃತ್ತಿ ರಂಗಭೂಮಿಗಳು ಉಚ್ಛ್ರಾಯವಾಗಿದ್ದವು. ಈಚಿನ ವರ್ಷಗಳಲ್ಲಿ ಚಲನ ಚಿತ್ರಗಳು ಆ ಸ್ಥಾನವನ್ನು ತುಂಬಿವೆ. ಹವ್ಯಾಸಿ ರಂಗಭೂಮಿಯು ಇಂದು ಚಟುವಟಿಕೆಯಿಂದ ಕೂಡಿದೆ. ಯಕ್ಷಗಾನ ಈ ಎಲ್ಲಾ ಕಾಲದಲ್ಲೂ ಕರಾವಳಿ ಹಾಗೂ ಮಲೆನಾಡಿನಲ್ಲಿ ಉಳಿದುಕೊಂಡು ಬಂದಿದೆ. ಈ ಶತಮಾನದ ಯಕ್ಷಗಾನ ರಂಗಭೂಮಿಯಲ್ಲಿ ಸ್ಪಷ್ಟವಾಗಿ ಬಿರುಕು ಕಾಣಿಸುತ್ತಿದೆ.

ಬಯಲಾಟ ಸಂಪ್ರದಾಯದಲ್ಲಿ, ಧಾರ್ಮಿಕ ಉದ್ದೇಶದಿಂದ ಪ್ರದರ್ಶಿತವಾಗುತ್ತಿದ್ದ ಮೊದಲ ಕಾಲದ ಯಕ್ಷಗಾನಗಳು ಈಗಿನ ವ್ಯಾಪಾರಿ ಧೋರಣೆಯಿಂದ ಟೆಂಟ್ ವ್ಯವಸ್ಥೆಯ ಮೂಲಕ ಪ್ರಸ್ತುತವಾಗುವ ಬಗೆಯಿಂದ ಸಂಪೂರ್ಣ ಭಿನ್ನವಾಗಿವೆ. ಜನತೆಯ ಬದಲಾದ ಜೀವನ ಶೈಲಿ, ಚಿಂತನ ವಿಚಾರ, ಉಳಿದ ಮಾಧ್ಯಮಗಳ ಪ್ರಭಾವ, ಕಲಾವಿದರ ಬದುಕಿನಲ್ಲಾದ ಏರು ಪೇರು, ಹೆಚ್ಚುತ್ತಿರುವ ವ್ಯಾಪಾರೀ ಮನೋಭಾವ, ಅಭಿರುಚಿಯ ಪಲ್ಲಟಗಳೆಲ್ಲ ಯಕ್ಷಗಾನದ ಸ್ಥಿತ್ಯಂತರಕ್ಕೆ ಕಾರಣವಾಗಿವೆ.

ಯಕ್ಷಗಾನ ರಂಗಭೂಮಿ ಹೀಗೆ ಬದಲಾವಣೆಗೆ ಮೈಯೊಡ್ಡುತ್ತಿರುವುದು ಇದೇ ಮೊದಲ ಬಾರಿ ಎಂದೇನೂ ಅಲ್ಲ. ಪ್ರಸಂಗಗಳ ಐತಿಹಾಸಿಕ ಅಧ್ಯಯನದಿಂದ ಈ ರಂಗಭೂಮಿಯ ಬೆಳವಣಿಗೆಯ ಹೆಜ್ಜೆ ಗುರುತುಗಳನ್ನು ಗುರುತಿಸಲು ಸಾಧ್ಯ. ಮೊದಲ ಕಾಲದ ಪ್ರಸಂಗಗಳಲ್ಲಿ ಕಥಾ ನಿರೂಪಣೆಯಷ್ಟೇ ಮುಖ್ಯ. ಮುಂದೆ ನಾಟಕೀಯ ಅಂಶಗಳ ಪ್ರಾಧಾನ್ಯ ಪ್ರಸಂಗಗಳಲ್ಲೀ ಕಾಣಿಸುತ್ತವೆ. ಜನಾಕರ್ಷಣೆಗೆ ಅಗತ್ಯವಾದ ಹಾಸ್ಯದ ಅಂಶಗಳು ಹೆಚ್ಚಿದ್ದು ಕಳೆದ ಶತಮಾನದ ಅಂತ್ಯದಲ್ಲಿ. ಈ ಶತಮಾನದ

ಮೊದಲ ದಶಕಗಳಲ್ಲಿ ಸೃಷ್ಟಿಯಾದ ಪ್ರಸಂಗಗಳಲ್ಲಿ ಜಲಕೇಳಿ, ಬೇಟೆ, ವನವಿಹಾರವೆಲ್ಲ ಕಂಡು ಬರುತ್ತವೆ. ಈಚಿನ 30-40 ವರ್ಷಗಳಲ್ಲೇ ಅತಿ ಹೆಚ್ಚು ಬದಲಾವಣೆಗಳು ಗೋಚರಿಸುತ್ತವೆ. ಅಂತೆಯೇ ಯಕ್ಷಗಾನ ಹೆಚ್ಚು ಹೆಚ್ಚು ಜನ ಸಂಮುಖವಾಗುತ್ತಿದೆ. ಈ ಪ್ರವೃತ್ತಿಯನ್ನು ಅನಿವಾರ್ಯ ಬೆಳವಣಿಗೆ ಎಂದು ಸ್ವಾಗತಿಸುವಷ್ಟೇ ಜನರು ಮೂಲ ಸ್ವರೂಪಕ್ಕೆ ಧಕ್ಕೆ ತರುತ್ತಿದೆ. ನಾಶದ ಹಾದಿ ಎಂದು ವಿರೋಧಿಸುತ್ತಾರೆ. ಯಕ್ಷಗಾನದ ಬಗ್ಗೆ ಇವತ್ತು ಆಡುವ ಮಾತುಗಳೆಲ್ಲ ವಿವಾದಾತ್ಮಕವಾಗುತ್ತಿವೆ. ಈ ಬಗೆಯ ಪರಿಸ್ಥಿತಿಯಲ್ಲಿ ಯಕ್ಷಗಾನ ರಂಗದ ಒಳಗೇ ಇರುವವರ ಮಾತಿಗೆ ಹೆಚ್ಚಿನ ಬೆಲೆ ಇದೆ. ಇದುವರೆಗೆ ಇಲ್ಲಿನಕಲಾವಿದರು ತಮ್ಮ ಅಭಿಪ್ರಾಯಗಳನ್ನು ಮುಂದಿಟ್ಟಿದ್ದಾರೆ. ಅದನ್ನು ವರ್ಗೀಕರಿಸಿ, ಕ್ರೋಢೀಕರಿಸುವ ಮೂಲಕ ಈ ರಂಗದ ಈಚಿನ ಒಲವು ನಿಲುವುಗಳನ್ನು ವಿಶ್ಲೇಷಿಸಲು ಸಾಧ್ಯ. ಇಲ್ಲಿನ ಯಕ್ಷಗಾನ ಕಲಾವಿದರಲ್ಲಿ ಹೆಚ್ಚಿನವರು ಕಳೆದ ನಲವತ್ತು ವರ್ಷಗಳಿಂದಲೂ ಈ ರಂಗದಲ್ಲಿ ಸಕ್ರಿಯವಾಗಿದ್ದವರು, ಅಲ್ಲದೆ ಹಳೆಯ ಪರಂಪರೆಯಲ್ಲಿ ನುರಿತವರಾಗಿಯೂ ಹೊಸ ವ್ಯವಸ್ಥೆಯಲ್ಲಿ ಪ್ರದರ್ಶನವೀಯುವವರೂ ಆಗಿದ್ದಾರೆ. ಹಿಮ್ಮೇಳವನ್ನು ಪ್ರತಿನಿಧಿಸುವ ಭಾಗವತರು, ಮೃದಂಗ ವಾದಕರೂ, ಅರ್ಥಧಾರಿಗಳು, ವೇಷಧಾರಿಗಳಲ್ಲಿ ಪುರುಷ (ಪುಂಡು) ಸ್ತ್ರೀ, ಹಾಸ್ಯ ಹಾಗೂ ಪ್ರಧಾನ ವೇಷದವರೆಲ್ಲ ಇಲ್ಲಿ ಒಂದೆಡೆ ಅಭಿಪ್ರಾಯ ನೀಡಿದ್ದಾರೆ. ಈ ರಂಗದ ಬದಲಾವಣೆಯೊಂದಿಗೆ ತಾವೂ ಬೆಳೆಯುತ್ತಾ ಬಂದ ಸ್ಥಿತ್ಯಂತರದ ಬಗ್ಗೆ ಅಧಿಕೃತವಾಗಿ ಮಾತನಾಡಬಲ್ಲ, ಯಕ್ಷಗಾನದ ಭವಿಷ್ಯದ ಬಗ್ಗೆ ಖಚಿತವಾಗಿ ಊಹಿಸಬಲ್ಲ, ಈ ಕಲೆಯ ಒಳ ಹೊರಗನ್ನು ಸಮಸ್ತವಾಗಿ ಅರಿಯಬಲ್ಲ ಹಿರಿಯ ಕಲಾವಿದರು ತಮ್ಮ ಅನುಭವವನ್ನು ಇಲ್ಲಿ ತೋಡಿಕೊಂಡಿದ್ದಾರೆ.

ಟೆಂಟ್ ಮೇಳಗಳು:

ಯಕ್ಷಗಾನ ರಂಗಭೂಮಿಯ ಬಾಹ್ಯ ಸ್ವರೂಪದಲ್ಲಾದ ಬದಲಾವಣೆಗಳಲ್ಲಿ ಎದ್ದು ಕಾಣುವುದೆಂದರೆ ಅದರ ಪ್ರದರ್ಶನ ವ್ಯವಸ್ಥೆಯಲ್ಲಾದ ಮಾರ್ಪಾಡು. ಹಿಂದೆಲ್ಲಾ ದೇವಸ್ಥಾನಗಳನ್ನು ಆಶ್ರಯಿಸಿ ಯಕ್ಷಗಾನ ಮೇಳಗಳು ಇರುತ್ತಿದ್ದವು. ಧರ್ಮಸ್ಥಳ, ಕಟೀಲು, ಮಂದರ್ತಿ, ಕೊಲ್ಲೂರು, ಅಮೃತೇಶ್ವರಿ, ಇಚ್ಲಂಪಾಡಿ, ಗುಂಡಬಾಳ ಮುಂತಾದ ಮೇಳಗಳು ಹರಕೆಯಾಟಗಳನ್ನೇ ಆಡುತ್ತಿದ್ದವು. ಪ್ರಸಿದ್ಧ ಕಲಾವಿದರೆಲ್ಲಾ ಈ ಮೇಳಗಳಲ್ಲೇ ಹಂಚಿ ಹೋಗಿದ್ದರು. ಈಗ ಪರಿಸ್ಥಿತಿ ಬೇರೆಯಾಗಿದೆ. ತೆಂಕು, ಬಡಗು, ಉತ್ತರ ಕನ್ನಡದಲ್ಲಿ ಟೆಂಟ್ ಮೇಳಗಳದ್ದೇ ಈಗ ಪ್ರಾಬಲ್ಯ. ಇವುಗಳೇ ಜನಾಕರ್ಷಣೆಯ ಕೇಂದ್ರವಾಗಿವೆ. ಕೆಲವು ದೇವಸ್ಥಾನವನ್ನು ಹೊರತುಪಡಿಸಿಯೂ ಅಸ್ತಿತ್ವದಲ್ಲಿವೆ. ಯಕ್ಷಗಾನ ಪ್ರದರ್ಶನವು ಕಲಾರಾಧನೆಯ ಒಂದು ಬಗೆ ಎಂಬುದು ಹೋಗಿ ಬಂಡವಾಳ ಹಾಕಿ ಹಣ ತೆಗೆಯುವ ಉದ್ಯಮವಾಗಿದೆ. ಪ್ರೇಕ್ಷಕರಿಗೆ ಆರಾಮ ಆಸನ, ಕಲಾವಿದರನ್ನು ಸಾಗಿಸಲು ವಾಹನ

ವ್ಯವಸ್ಥೆ, ಟಿಕೇಟಿನ ಮೂಲಕವೇ ಪ್ರವೇಶ, ನೂತನ ಬಗೆಯ ಪ್ರಚಾರದ ಅಬ್ಬರ ಇವೆಲ್ಲಾ ಈ ವ್ಯವಸ್ಥೆಯಿಂದ ಹುಟ್ಟಿಕೊಂಡವು. ಇದರ ಫಲವಾಗಿ ಮೊಟಕಾದ ಸಭಾಲಕ್ಷಣ, ತಾರಾ ಮೌಲ್ಯಕ್ಕಾಗಿ ಮೇಲಾಟ, ಉತ್ತಮ ಕಲಾವಿದರಿಗಾಗಿ ಪರದಾಟ ಇವೆಲ್ಲ ಮೊದಲಾದವು. ಕಲಾವಿದರ ಆರ್ಥಿಕ ವ್ಯವಸ್ಥೆ ಸುಧಾರಿಸಿತು. ಬಯಲಾಟ ಪ್ರದರ್ಶನಕ್ಕಾಗಿ ಯಾರ್‍ಯಾರದೋ ಕೈ ಕಾಲು ಕಟ್ಟುವ ಅವಸ್ಥೆ ಯಜಮಾನರುಗಳಿಗೆ ತಪ್ಪಿತು. ಕೇವಲ ರಾತ್ರಿ ಬೆಳಗು ಮಾಡುವುದು ಮುಖ್ಯವಾಗದೇ ನಿಮಿಷ ನಿಮಿಷವು ಜನಾಕರ್ಷಕವಾಗುವಂತೆ ಮಾಡುವ ಯೋಜನೆಗಳು ಹೆಚ್ಚಿದವು.

ಇಂತಹ ಬದಲಾವಣೆಯನ್ನು ಕುರಿತು ಪ್ರಶ್ನಿಸಿದಾಗ ಇಲ್ಲಿನ ಕಲಾವಿದರಲ್ಲಿ ಮಿಶ್ರ ಪ್ರತಿಕ್ರಿಯೆಗಳು ವ್ಯಕ್ತವಾಗಿವೆ. ಹೆಚ್ಚಿನವರು ಈ ನೂತನ ವ್ಯವಸ್ಥೆಯಿಂದ ಆರ್ಥಿಕವಾಗಿ ಲಾಭ ಪಡೆದವರು, ಪ್ರಚಾರ, ಪ್ರಸಾರಗಳಿಂದ ತಾರಾ ಮೌಲ್ಯಗಳಿಸಿದವರೂ ಇವರಲ್ಲಿ ಇದ್ದಾರೆ. ಉಪ್ಪೂರ, ಶೇಣಿ, ಶಂಕರನಾರಾಯಣ ಸಾಮಗ, ದಾಮೋದರ ಮಂಡೆಚ್ಚ, ಕಡತೋಕ, ಕೋಳ್ಯೂರು, ರಾಮದಾಸ ಸಾಮಗ ಮುಂತಾದವರೆಲ್ಲ ಟೆಂಟ್ ವ್ಯವಸ್ಥೆಯನ್ನು ಸಮರ್ಥಿಸುತ್ತಾರೆ. ಮೇಳದ ವ್ಯವಸ್ಥಾಪಕರೂ ಆಗಿದ್ದ ಕಲಾವಿದ ಕೆರೆಮನೆ ಶಂಭು ಹೆಗಡೆ ಈ ಬಗೆಯ ಮೇಳಗಳ ಸಂಖ್ಯೆ ಕಡಿಮೆಯಾಗಬೇಕೆಂದು ಆಗ್ರಹಿಸುತ್ತಾರೆ. ಕಲಾವಿದರಲ್ಲಿನ ಮೇಲಾಟ, ವ್ಯಾಪಾರಿ ಧೋರಣೆಯಿಂದ ಹುಟ್ಟಿಕೊಂಡ ಗಿಮಿಕ್ ಗಳನ್ನು ಮಹಾಬಲ ಹೆಗಡೆ ವಿರೋಧಿಸುತ್ತಾರೆ. ಈ ನೂತನ ವ್ಯವಸ್ಥೆಯಿಂದ ತಮಗೆಲ್ಲ ಆರ್ಥಿಕವಾಗಿ ಲಾಭವಾಗಿದೆ ಎಂಬುದನ್ನು ಇಲ್ಲಿನ ಎಲ್ಲಾ ಕಲಾವಿದರು (ಕೀರಿಕ್ಕಾಡು, ಹಿರಿಯಡ್ಕ, ವೀರಭದ್ರ ನಾಯಕ, ರಾಮಚಂದ್ರ ನಾವಡರನ್ನು ಹೊರತು ಪಡಿಸಿ) ಒಪ್ಪಿಕೊಂಡಿದ್ದಾರೆ. ಬಯಲಾಟಗಳ ಕಾಲದಲ್ಲಿದ್ದಂತೆ ಆರು ಏಳು ಮೈಲಿಗಳಷ್ಟು ನಡೆಯಬೇಕಾದ ತ್ರಾಸವಾಗಲಿ, ತಿರುಗಾಟದ ಕೊನೆಯಲ್ಲಿ ಅದೂ ಕೆಲವೊಮ್ಮೆ ಕೈಗೆ ಬರುತ್ತಿದ್ದ ಪುಡಿಗಾಸಾಗಲೀ ಈಗ ಇಲ್ಲ. ವಾಹನ ಸೌಕರ್ಯ ಆಕರ್ಷಕವಾದ ಸಂಬಳ ಬರುತ್ತಿದೆ. ಇವೆಲ್ಲ ಬಾಹ್ಯ ಸ್ವರೂಪದಲ್ಲಾದ ಬದಲಾವಣೆಗಳು. ಇದನ್ನೆಲ್ಲಾ ಸ್ವಾಗತಿಸುವ ಕಲಾವಿದರು ಅಂತರ್ಯದಲ್ಲಾಗುತ್ತಿರುವ ಮಾರ್ಪಾಟುಗಳನ್ನು, ಯಜಮಾನರುಗಳ ಧೋರಣೆಯನ್ನು ಕಟುವಾಗಿ ವಿರೋಧಿಸುತ್ತಾರೆ. ಟೆಂಟ್ ವ್ಯವಸ್ಥೆಯಿಂದ ನೋಡುವ ಕಣ್ಣುಗಳು ಹೆಚ್ಚಿದವು. ಆದರೆ ಕಲೆಯನ್ನು ಆಸ್ವಾದಿಸುವ ಹೃದಯಗಳು ಕಡಿಮೆಯಾದವು ಎಂಬುದು ಇಲ್ಲಿನ ಹಿರಿಯರ ಅಭಿಮತವಾಗಿವೆ.

ಸಭಾಲಕ್ಷಣ

ಚೌಕಿಯಲ್ಲಿ ಗಣಪತಿ ಪೂಜೆಯಾದ ನಂತರ ಭಾಗವತರು ಕೋಡಂಗಿಗಳನ್ನು ರಂಗದಲ್ಲಿ ಕುಣಿಸುತ್ತಾರೆ. ಹೊಸದಾಗಿ ಮೇಳಕ್ಕೆ ಸೇರಿದ ಎಳೆಯರು ಕೋಡಂಗಿಯಾಗಿ

ಅನೇಕ ಬಗೆಯ ಕುಣಿತವನ್ನು ಕುಣಿದು ತೋರಿಸುತ್ತಾರೆ. ಹಿಮ್ಮೇಳದಲ್ಲಿ ಒತ್ತು ಮದ್ದಲೆಗಾರ ಹಾಗೂ ಸಂಗೀತಗಾರನ ನಿರ್ದೇಶನವಿರುತ್ತದೆ. ಇದಾದ ನಂತರ ಸ್ವಲ್ಪ ತರಬೇತಾದ ಬಾಲ ಕಲಾವಿದರು ಬಾಲ ಗೋಪಾಲರಾಗಿ ಕುಣಿಯುತ್ತಾರೆ. ಮುಂದೆ ಇನ್ನಷ್ಟು ನುರಿತ ಇಬ್ಬರು ಸ್ತ್ರೀ ವೇಷಧರಿಸಿ ರಂಗದಲ್ಲಿ ನರ್ತಿಸಿ, ಲಾಸ್ಯವನ್ನು ಒಡಮೂಡಿಸುತ್ತಾರೆ. ಸಂಗೀತಗಾರ ರಾಧಾಕೃಷ್ಣರಿಗೆ ಸಂಬಂಧಿಸಿದ ಮೂರು ನಾಲ್ಕು ದಾಸರ ಕೀರ್ತನೆಗಳನು ಹಾಡುತ್ತಾನೆ. ಅದಕ್ಕೆ ತಕ್ಕಂತೆ ಇವರು ಹಾವ ಭಾವದೊಂದಿಗೆ ನರ್ತಿಸುತ್ತಾರೆ. ಯಕ್ಷಗಾನದಲ್ಲಿ ಇಂತಹ ಭಾಗವನ್ನೇ "ಸಭಾವಂದನೆ" ಎಂದು ಕರೆಯುತ್ತಾ ಬಂದಿದ್ದಾರೆ. ಪಾರಂಪರಿಕವಾದ ಯಕ್ಷಗಾನದಲ್ಲಿ ಪೂರ್ವಪೀಠಿಕೆಯಂತಿರುವ 'ಸಭಾವಂದನೆ' ಅಥವಾ 'ಸಭಾಲಕ್ಷಣ'ಕ್ಕೆ ಮುಖ್ಯ ಸ್ಥಾನವಿದೆ. ಸುಮಾರು ರಾತ್ರಿ ಎಂಟು ಗಂಟೆಗೆ ಪ್ರಾರಂಭಿಸಿ ಎರಡು ಎರಡೂವರೆ ಗಂಟೆಗಳಷ್ಟು ದೀರ್ಘವಾಗಿ ನಡೆಯುವ ಈ ಸಭಾಲಕ್ಷಣವು ಯಕ್ಷಗಾನಕ್ಕೆ ಎರಡು ರೀತಿಯಿಂದ ನೆರವನ್ನೀಯುತ್ತದೆ. ಎಳೆಯ ಕಲಾವಿದರಿಗೆ ಸೂಕ್ತ ತರಬೇತಿಯನ್ನು ರಂಗದಲ್ಲೇ ಒದಗಿಸುವುದರೊಂದಿಗೆ ಪ್ರೇಕ್ಷಕನನ್ನು ಒಂದು ಬಗೆಯ ಪೂರ್ವ ಸಿದ್ಧತೆಗೆ ಒಳಪಡಿಸುತ್ತದೆ. ಈ ಸಭಾಲಕ್ಷಣದಿಂದ ಅನೇಕ ಬಗೆಯ ನರ್ತನ ಸಂಪ್ರದಾಯಗಳು ಎಳೆಯ ಕಲಾವಿದರಲ್ಲಿ ಉಳಿದು ಬರಲು ಸಾಧ್ಯವಾಗಿದೆ.

ಟೆಂಟ್ ವ್ಯವಸ್ಥೆ ಬಂದದ್ದರಿಂದ ಹೆಚ್ಚು ಆಘಾತವಾದದ್ದು ಈ 'ಸಭಾಲಕ್ಷಣ'ದ ಭಾಗಕ್ಕೆ. ಹಣಕೊಡುವ ಪ್ರೇಕ್ಷಕರನ್ನು ಗಮನದಲ್ಲಿರಿಸಿಕೊಂಡ ಈ ಮೇಳಗಳಿಗೆ 'ಸಭಾಲಕ್ಷಣ' ಅಗತ್ಯ ಎನಿಸಲಿಲ್ಲ. ಮೊದಲಿನ ವರ್ಷಗಳಲ್ಲಿ ಒಂದೆರಡು ಮೇಳಗಳು ಸಂಪೂರ್ಣವಾಗಿ ಇವನ್ನು ಬಿಟ್ಟು ಆಕರ್ಷಣೆಗಾಗಿ ಕೆಲವು ತಿರುಗಾಟಗಳಲ್ಲಿ ಸ್ತ್ರೀಯರ ಡ್ಯಾನ್ಸ್‌ನ್ನು ಬಳಸಿದ್ದು ಉಂಟು. ಈಚೆಗೆ ಯಾವ ಮೇಳಗಳೂ ಈ ಬಗೆಯ ಅಸಾಂಗತ್ಯವನ್ನು ಪ್ರದರ್ಶಿಸುತ್ತಿಲ್ಲ. ಹೆಚ್ಚಿನ ಮೇಳಗಳಲ್ಲಿ ಹ್ರಸ್ವಗೊಳಿಸಿದ. ಶಾಸ್ತ್ರಕ್ಕೆಂಬತ್ತಿರುವ ಸಭಾಲಕ್ಷಣಗಳು ಅಸ್ತಿತ್ವದಲ್ಲಿವೆ. ಇಲ್ಲಿನ ಸಂಧರ್ಶನಗಳಲ್ಲಿ ಹಿರಿಯ ಕಲಾವಿದರೆಲ್ಲ ಸಭಾಲಕ್ಷಣದ ಅಗತ್ಯವನ್ನು ವಿವರಿಸಿದ್ದಾರೆ. ಅದು ಮುಂದುವರಿಯಬೇಕೆಂದು ಆಗ್ರಹಿಸುತ್ತಾ ಅದರ ಶೈಕ್ಷಣಿಕ ಮಹತ್ವವನ್ನು ತಿಳಿಸಿದ್ದಾರೆ. ಈ ಕಾರಣ ಸಭಾಲಕ್ಷಣವನ್ನು ಉಳಿಸಿಕೊಂಡು ಅದೂ ಪ್ರೇಕ್ಷಕರ ಆಕರ್ಷಣೆಗೆ ಗುರಿಯಾಗುವಂತೆ ಮಾಡಬಲ್ಲ ಬಗೆ ಹೇಗೆ ಎಂಬ ಬಗ್ಗೆ ಚಿಂತಿಸಬೇಕಾಗಿದೆ.

ಶಿಕ್ಷಣ ವ್ಯವಸ್ಥೆ

ಕಳೆದ ಇಪ್ಪತ್ತು ಮೂವತ್ತು ವರ್ಷಗಳವರೆಗೆ ಯಕ್ಷಗಾನದಲ್ಲಿ ಅಂತರ್ಗತವಾದ ಶಿಕ್ಷಣ ವ್ಯವಸ್ಥೆಯೊಂದು ಇದ್ದಿತ್ತು. ಹತ್ತು ಹನ್ನೆರಡು ವರ್ಷ ವಯಸ್ಸಿನವರಾಗಿದ್ದಾಗ ಮೇಳ ಸೇರಿಕೊಂಡ ಬಾಲಕರು ಸಭಾವಂದನೆ ಭಾಗಗಳಲ್ಲಿ ಭಾಗವಹಿಸುವುದರೊಂದಿಗೆ

ನೃತ್ಯಗತಿಯ ಪ್ರಾಥಮಿಕ ಅಂಶಗಳನ್ನು ಅಭ್ಯಾಸ ಮಾಡಿಕೊಳ್ಳುತ್ತಾರೆ. ರಾತ್ರಿಯೆಲ್ಲಾ ಎಚ್ಚರವಾಗಿದ್ದು ಹಿರಿಯ ಕಲಾವಿದರ ಕುಣಿತ, ಹಾವ ಭಾವ, ಮಾತುಗಾರಿಕೆ, ವೇಷಗಾರಿಕೆ, ಹೆಜ್ಜೆಗಾರಿಕೆಗಳನ್ನೆಲ್ಲಾ ತೀರಾ ಹತ್ತಿರದಿಂದಲೇ ನೋಡುತ್ತಿರುತ್ತಾರೆ.. ಹಗಲು ಹೊತ್ತಿನಲ್ಲಿ ಒಂದೂರಿನಿಂದ ಇನ್ನೊಂದೂರಿಗೆ ಪ್ರಯಾಣ ಮಾಡುವಾಗ ಕಲಾವಿದರ ಮಾತುಕತೆಗಳಲ್ಲಿ ಬೆರೆತು ಅನೇಕ ಸೂಕ್ಷ್ಮ ವಿಚಾರಗಳನ್ನು ಮನನಮಾಡಿಕೊಳ್ಳಲು ಸಾಧ್ಯ. ವೇಷ ಮಾಡುವುದರಲ್ಲೂ ಬಾಲಗೋಪಾಲ, ಸ್ತ್ರೀವೇಷ, ಎರಡನೇ ವೇಷ ಹೀಗೆ ಒಂದೊಂದೇ ಹೆಜ್ಜೆ ಮುಂದಿಟ್ಟು ಪ್ರಪೂರ್ಣ ಕಲಾವಿದರಾಗುವ ಅವಕಾಶವಿದೆ. ಈ ಸಂಪ್ರದಾಯ ಇಂದು ಬಹಳಷ್ಟು ಕಡಿಮೆಯಾಗಿದೆ. ಟೆಂಟ್ ಮೇಳಗಳಲ್ಲಿ ಈ ಬಗ್ಗೆ ಅವಕಾಶವೂ ವಿರಳ. ಅಲ್ಲದೆ ಹಾಗೇ ಸೇರುವ ಎಳೆಯ ಕಲಾವಿದರೂ ಕಡಿಮೆ, ಈಚೆಗೆ ತರಬೇತಿ ಕೇಂದ್ರಗಳು, ಕಲಾಕೇಂದ್ರಗಳು ಹುಟ್ಟಿಕೊಂಡಿವೆ. ಉಡುಪಿ, ಹಂಗಾರಕಟ್ಟೆ, ಧರ್ಮಸ್ಥಳ, ಕರ್ಕಿ, ತಾಳಗುಪ್ಪ ಮುಂತಾದ ಕಡೆಯಲ್ಲಿ ಎಳೆಯರು ತರಬೇತುಗೊಳ್ಳುತ್ತಿದ್ದಾರೆ. ಉಡುಪಿಯದಂತೂ ಪೂರ್ಣಪ್ರಮಾಣದ, ಸ್ಟೈಫಂಡರಿ ವ್ಯವಸ್ಥೆಯ ಕಲಾಕೇಂದ್ರವಾಗಿದೆ. ಕಳೆದ ಹನ್ನೆರಡು ವರ್ಷಗಳಲ್ಲಿ ಇಲ್ಲಿ ತರಬೇತಾದ ಹಲವರು ಇಂದು ಅನೇಕ ವೃತ್ತಿ ಮೇಳಗಳ ಸಂಪತ್ತಾಗಿದ್ದಾರೆ. ಕೇಂದ್ರದ ನಿರ್ದೇಶಕರಾಗಿರುವ ಪ್ರೊ॥ ಕು.ಶಿ. ಹರಿದಾಸ ಭಟ್ಟರ ನೇತೃತ್ವದಲ್ಲಿ ಡಾ॥ ಶಿವರಾಮ ಕಾರಂತರ ಮಾರ್ಗದರ್ಶನದಲ್ಲಿ ಈ ಸಂಸ್ಥೆ ಅಂತರರಾಷ್ಟ್ರೀಯ ಖ್ಯಾತಿಯನ್ನು ಗಳಿಸಿಕೊಂಡಿದೆ. ಹಿಂದೆ ಗುರು ವೀರಭದ್ರ ನಾಯಕ, ಹಿರಿಯಡ್ಕ ಗೋಪಾಲರಾವ್, ನೀಲಾವರ ರಾಮಕೃಷ್ಣಯ್ಯ, ಈಗ ಮಣೂರು ಮಹಾಬಲ ಕಾರಂತ ಮುಂತಾದವರು ಗುರುಗಳಾಗಿ ಇಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಉಳಿದ ಕೇಂದ್ರಗಳು ಮಳೆಗಾಲದಲ್ಲಿ ಮಾತ್ರ ಕಾರ್ಯ ನಿರ್ವಹಿಸುವಂತಹವು.

ಉಪ್ಪೂರ, ಕಡತೋಕ, ರಾಮಚಂದ್ರ ನಾವಡ, ಶಂಕರನಾರಾಯಣ ಸಾಮಗ, ಕೋಳ್ಯೂರು ಮುಂತಾದವರು ಈ ಕೇಂದ್ರಗಳ ಅಗತ್ಯವನ್ನು ಸಮರ್ಥಿಸುತ್ತಾರೆ. ಆದರೆ ಇವುಗಳಿಂದ ಸಂಪೂರ್ಣ ತರಬೇತಿ ಸಾಧ್ಯವಿಲ್ಲ, ಎಂಬುದೂ ಇವರ ಅಭಿಪ್ರಾಯವಾಗಿದೆ. ಕುಂಬಳೆ, ನಾರಾಯಣ ಭಟ್, ಶೇಣಿ, ಮಂಡೆಚ್ಚರು ಈ ಬಗೆಯ ಕೇಂದ್ರಗಳಿಂದ ಶುದ್ಧ ಯಕ್ಷಗಾನದ ಬಗ್ಗೆ ಅಭಿರುಚಿಯುಳ್ಳ ಪ್ರೇಕ್ಷಕರ ಸಂಖ್ಯೆ ಹೆಚ್ಚಬಲ್ಲದು ಎನ್ನುತ್ತಾರೆ. ಸ್ವಯಂ ಪ್ರತಿಭೆ, ಕಠಿಣ ಶ್ರಮದಿಂದಲೇ ಮಿಂಚಬೇಕಾದ ಯಕ್ಷಗಾನ ರಂಗಸ್ಥಳದಲ್ಲಿ ಬರೇ ಪುಸ್ತಕದ ಓದಿನ ವಿಚಾರ ಸಹಕರಿಸುವುದಿಲ್ಲ ಎಂಬುದು ಇವರ ಅಭಿಮತ. ರಂಗದಲ್ಲಿ ಪಡೆಯುವ ಅನುಭವವೇ ದೊಡ್ಡದು ಎನ್ನುವ ಇವರು ಅದಕ್ಕಾಗಿ ಎಳೆಯ ಕಲಾವಿದರು ಮೇಳಗಳನ್ನೇ ಸೇರಿ ಅನುಭವ ಪಡೆಯಬೇಕು ಎನ್ನುತ್ತಾರೆ. ತರಬೇತಿ ಕೇಂದ್ರಗಳಲ್ಲಿ ಒಂದು ತಿಟ್ಟಿನ ಅನುಭವ ಪಡೆದು ಮುಂದೆ ಇನ್ನೊಂದು ತಿಟ್ಟಿನ ಮೇಳವನ್ನು ಸೇರುವ ಪ್ರವೃತ್ತಿಯನ್ನು ಕೋಳ್ಯೂರು ರಾಮಚಂದ್ರ ರಾವ್ ವಿರೋಧಿಸಿದ್ದಾರೆ.

ಕಾಲಮಿತಿ

ಯಕ್ಷಗಾನ ಪ್ರದರ್ಶನ ರಾತ್ರಿ ಎಂಟು ಒಂಬತ್ತು ಗಂಟೆಗೆ ಪ್ರಾರಂಭವಾಗಿ ಮಾರನೇ ದಿನ ಬೆಳಿಗ್ಗೆ ಸೂರ್ಯೋದಯದವರೆಗೆ ನಡೆಯುವ ಕ್ರಮ ಮಾತ್ರ ಇಂದಿಗೂ ತಪ್ಪಿಲ್ಲ. ಬಯಲಾಟದ ಮೇಳವಿರಲಿ, ಟೆಂಟ್ ಇರಲಿ ರಾತ್ರಿಯಿಡೀ ನೋಡಲು ಪ್ರೇಕ್ಷಕರು ಸಿದ್ಧರಾಗಿಯೇ ಬರುತ್ತಾರೆ. ಈ ಕ್ರಮ ಉಳಿದು ಬರಲು ಸಂಚಾರ ವ್ಯವಸ್ಥೆಯ ಅಭಾವವೂ ಪೂರಕವಾಗಿದೆ. ಈಚೆಗೆ ಅಲ್ಲಲ್ಲಿ ನಡೆಯುತ್ತಿರುವ ಹವ್ಯಾಸಿಗಳ ಪ್ರದರ್ಶನಗಳು, ಕೆಲವು ವಿಶೇಷ ಪ್ರದರ್ಶನಗಳು ಮೂರು ಗಂಟೆಯ ಕಾಲಮಿತಿಗೆ ಒಳಪಡುವುದೂ ಇವೆ. ಎಂಟು ಹತ್ತು ವರ್ಷಗಳ ಕೆಳಗೆ ಕೆರೆಮನೆ ಮಹಾಬಲಹೆಗಡೆಯವರ ಸಂಚಾಲಕತ್ವದಲ್ಲಿ ಕಮಲಶಿಲೆಮೇಳ ಒಂದು ತಿರುಗಾಟದಲ್ಲಿ 'ಕಾಲಮಿತಿ' ಪ್ರದರ್ಶನಗಳನ್ನು ಅಳವಡಿಸಿತ್ತು. ಮುಂದೆ ಅದುಬೆಳೆದು ಬರಲಿಲ್ಲ. ಶ್ರೀ ಮಹಾಬಲ ಹೆಗಡೆಯವರಿಗೆ ಮಾತ್ರ ಈ ಬಗೆಯ ಪ್ರದರ್ಶನಗಳೇ. 'ಖಾಯಂ' ಆಗುತ್ತವೆ ಎಂಬ ನಂಬಿಕೆಯಿದೆ. ಯಾವಾಗಲೂ ರಸಾವಿಷ್ಕಾರವಾಗಲು ದೀರ್ಘ ಅವಧಿ ಬೇಕಿಲ್ಲ ಎನ್ನುವ ಅವರು ಈ 'ರಾತ್ರಿ ಬೆಳಗು', ಮಾಡುವ ಪ್ರದರ್ಶನಗಳು ರೇಜಿಗೆಯನ್ನುಂಟು ಮಾಡುತ್ತದೆ ಎನ್ನುತ್ತಾರೆ. ಹೆಚ್ಚುತ್ತಿರುವ ನಗರೀಕರಣ, ಕಡಿಮೆಯಾಗುತ್ತಿರುವ ಕಲಾವಿದರ ದೇಹ ಸಾಮರ್ಥ್ಯ ಅವರ ಮಾತಿಗೆ ಹಿನ್ನೆಲೆಯಾಗಿದೆ. ಆದರೆ ಹಿರಿಯಡ್ಕ ಗೋಪಾಲ ರಾವ್, ರಾಮಚಂದ್ರ ನಾವಡ ರಂತಹ ಹಿರಿಯರು 'ಕಾಲಮಿತಿ' ಪ್ರದರ್ಶನಗಳನ್ನ ತಳ್ಳಿ ಹಾಕುತ್ತಾ, ಹಾಗೇನಾದರೂ ಆದರೆ ಬೆಳಗಿನ ಜಾವಕ್ಕೆ ವಿಶೇಷವಾದ ಕೆಲವು ರಾಗ ಸಂಪತ್ತುಗಳು ನಶಿಸುತ್ತವೆ ಎನ್ನುತ್ತಾರೆ. ಹವ್ಯಾಸಿ, ಮಟ್ಟದಲ್ಲಿ ಮಾತ್ರ ಈ ಬಗೆಯ 'ಕಿರು ಪ್ರದರ್ಶನ'ಗಳು ಉಳಿಯಬಹುದು ಎಂಬುದು ಕೋಳ್ಯೂರು ಹಾಗೂ ಕಡತೋಕರ ಅಭಿಪ್ರಾಯ.

ಹವ್ಯಾಸಿ ಯಕ್ಷಗಾನ

ಬಹಳಷ್ಟು ವರ್ಷಗಳಿಂದ ಯಕ್ಷಗಾನ ವೃತ್ತಿಯಾಗಿ ಕಾಣಿಸಿಕೊಂಡಿರುವುದು ಹೆಚ್ಚಾಗಿ ದಕ್ಷಿಣ ಕನ್ನಡದಲ್ಲೇ, ಮಲೆನಾಡು ಹಾಗೂ ಉತ್ತರ ಕನ್ನಡದಲ್ಲಿ ಹವ್ಯಾಸಿಗಳು ಮೊದಲಿನಿಂದಲೂ ಕೆಲವು ಊರಿನವರು ಒಟ್ಟಾಗಿ ಸೇರಿ ಸ್ವಲ್ಪ ಕಾಲ ಯಕ್ಷಗಾನವನ್ನು ಅಭ್ಯಾಸ ಮಾಡಿ ಆಸುಪಾಸುಗಳೆಲ್ಲ ಹತ್ತೆಂಟು ಪ್ರದರ್ಶನಗಳನ್ನು ಆಡುತ್ತಿದ್ದರು. ಇವೇ ಮುಂದೆ ವೃತ್ತಿ ಮೇಳದ ಅಸ್ತಿತ್ವಕ್ಕೆ ಕಾರಣವಾದದ್ದು ಉಂಟು. ಈಚಿನ ವರ್ಷಗಳಲ್ಲಿ ಮಲೆನಾಡು ಹಾಗೂ ಕರಾವಳಿಗಳೆಲ್ಲೆಡೆಯಲ್ಲೂ ವಿದ್ಯಾವಂತರು ಈ ಕಲೆಗೆ ಮಾರು ಹೋಗಿ ಹವ್ಯಾಸಿ ಸಂಘಗಳನ್ನು ಕಟ್ಟಿಕೊಂಡು ಯಕ್ಷಗಾನ ಕಲಿಯುತ್ತಿದ್ದಾರೆ. ವರ್ಷಕ್ಕೊಮ್ಮೆ ಪ್ರದರ್ಶನ, ಕೆಲವೆಡೆ ನಡೆಯುವ ಸ್ಪರ್ಧೆಗೆ ತಯಾರಿ, ವೃತ್ತಿ ಮೇಳಗಳ ಪ್ರದರ್ಶನ

ವ್ಯವಸ್ಥೆಗೆ ಸಹಕಾರ, ಹಿರಿಯ ಕಲಾವಿದರ ಸನ್ಮಾನ, ಅಶಕ್ತ ಕಲಾವಿದರಿಗೆ ಧನ ಸಮರ್ಪಣೆ ಮುಂತಾದವು ಹವ್ಯಾಸಿಗಳ ಚಟುವಟಿಕೆಗಳು. ಕೆಲವು ಹವ್ಯಾಸಿಗಳು ವೃತ್ತಿ ರಂಗಭೂಮಿಯ ಅತಿಥಿ ಕಲಾವಿದರಾಗಿ ಭಾಗವಹಿಸುವುದೂ ಉಂಟು. ಹವ್ಯಾಸಿ ರಂಗ ಕುರಿತು ಇಲ್ಲಿನ ಕಲಾವಿದರು ತಮ್ಮ ಮಿಶ್ರ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದ್ದಾರೆ.

ಕಡತೋಕರು ಹವ್ಯಾಸಿಗಳಿಂದ ಹೆಚ್ಚಿಗೆ ಏನೂ ನಿರೀಕ್ಷಿಸುವಂತಿಲ್ಲ ಎನ್ನುತ್ತಾರೆ. ಮಂಡೆಚ್ಚರು, ಶೇಣಿಯವರು ಹವ್ಯಾಸಿಗಳು ವೃತ್ತಿ ಕಲಾವಿದರೊಂದಿಗೆ ಸೇರಿ ಭಾಗವಹಿಸುವುದರಿಂದ ಪ್ರದರ್ಶನಗಳು ಕೆಡುವ ಸಾಧ್ಯತೆ ಇದೆ ಎನ್ನುತ್ತಾರೆ. ಶ್ರಮ ಬಯಸುವ ಈ ಕಲೆಯಲ್ಲಿ ಹವ್ಯಾಸಿಗಳ ಪಾತ್ರ ಅಲ್ಪ ಎಂಬುದು ಕೋಳ್ಯೂರರ ಅಭಿಪ್ರಾಯ. ಉಪ್ಪೂರ, ಕುಂಬಳೆ ಮುಂತಾದವರು ಹವ್ಯಾಸಿಗಳ ಕಾರ್ಯ ಸಾಧನೆಗಳನ್ನು ಶ್ಲಾಘಿಸುತ್ತಾರೆ. ಹವ್ಯಾಸಿಗಳ ನಿರಂತರ ಚಟುವಟಿಕೆಯಿಂದ ಯಕ್ಷಗಾನದಲ್ಲಿ ಆಸಕ್ತಿ ಹೊಂದಿದವರ ಸಂಖ್ಯೆ ಹೆಚ್ಚಿದೆ ಎಂಬುದು ಕುಂಬಳೆಯವರ ಅನಿಸಿಕೆ. ಆದರೆ ಬಹಳಷ್ಟು ಅಭ್ಯಾಸ, ದೇಹ ಸಾಮರ್ಥ್ಯ, ರಂಗದ ಅನುಭವ ಬಯಸುವ ಯಕ್ಷಗಾನದಲ್ಲಿ ಹವ್ಯಾಸಿಗಳ ಪಾತ್ರ ಕನ್ನಡ ನಾಟಕ ರಂಗಭೂಮಿಯಲ್ಲಿರುವಂತೆ ಪ್ರಧಾನವಾಗಲಾರದು ಎಂಬುದೇ ಹೆಚ್ಚಿನವರ ಅಭಿಮತ.

ಯಕ್ಷಗಾನ ಅಕಾಡೆಮಿ:

ಯಕ್ಷಗಾನದಂತಹ ಪಾರಂಪರಿಕ ಕಲೆ ಉಳಿಯಲು ಮತ್ತು ನಿರ್ದಿಷ್ಟ ಪ್ರಮಾಣದಲ್ಲಿ ಆರೋಗ್ಯಕರವಾಗಿ ಬೆಳೆಯಲು ಅಕಾಡೆಮಿಯಂತಹ ಸಂಸ್ಥೆಯೊಂದರ ಸ್ಥಾಪನೆಯಾಗಬೇಕೆಂಬ ಕೂಗು ಮೂರು ನಾಲ್ಕು ದಶಕಗಳ ಹಿಂದೆಯೆ ಎದ್ದಿತ್ತು. ಅದರ ಫಲವಾಗಿ ಕರ್ನಾಟಕ ಸರಕಾರ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯನ್ನು ಸ್ಥಾಪಿಸಿದೆ. ಈ ಅಕಾಡೆಮಿ ಅಲ್ಲಲ್ಲಿ ಗೋಷ್ಠಿ, ವಿಚಾರ ಸಂಕಿರಣಗಳನ್ನು ನಡೆಸಲು ಧನಸಹಾಯ, ಹಿರಿಯ ಕಲಾವಿದರಿಗೆ ಪ್ರಶಸ್ತಿ ಗೌರವಧನ, ಅಶಕ್ತ ಕಲಾವಿದರಿಗೆ ಮಾಸಾಶನ ಮುಂತಾದವುಗಳನ್ನು ನೀಡುತ್ತಿದೆ. ಹೊರನಾಡುಗಳಲ್ಲಿ ಈ ಕಲೆಯ ಪ್ರಸಾರ, ಪುಸ್ತಕ ಪ್ರಕಟಣೆ ಮುಂತಾದುವನ್ನು ಹಮ್ಮಿಕೊಂಡಿದೆ. ಈ ರಂಗಕ್ಕೆ ಸಂಬಂಧಿಸಿದ ಪ್ರಮುಖರು ಅಲ್ಲಿ ಸದಸ್ಯರಾಗಿದ್ದಾರೆ. ಇಲ್ಲಿ ಸಂದರ್ಶನಗೊಂಡವರಲ್ಲಿ ಕೆರೆಮನೆ ಶಂಭು ಹೆಗಡೆ ಹಾಗೂ ದಾಮೋದರ ಮಂಡೆಚ್ಚರು ಅದರ ಸದಸ್ಯರಾಗಿದ್ದವರು.

ಇಲ್ಲಿನ ಸಂದರ್ಶನಗಳಲ್ಲಿ ಹೆಚ್ಚಿನ ಕಲಾವಿದರು ಅಕಾಡೆಮಿ ಕಾರ್ಯ ನಿರ್ವಹಣೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಮಹಾಬಲ ಹೆಗಡೆ, ಕಡತೋಕ, ಕುಂಜಾಲು, ನಾರಾಯಣ ಭಟ್, ಕೋಟ ವೈಕುಂಠರೆಲ್ಲ ಪ್ರಶಸ್ತಿ, ಮಾಸಾಶನಗಳಿಗೆ ಕಲಾವಿದರನ್ನ ಆಯ್ಕೆ ಮಾಡುವ ವಿಧಾನ ಸರಿಯಿಲ್ಲ ಎನ್ನುತ್ತಾರೆ. ಅಕಾಡೆಮಿಯ ಸದಸ್ಯರ ನೇಮಕಾತಿಗಳು

ರಾಜಕೀಯವಾಗಿವೆ, ಗೊಂದಲದಿಂದ ಕೂಡಿವೆ ಎಂಬ ಅಭಿಪ್ರಾಯವಿದೆ. ಶಂಭು ಹೆಗಡೆ ಹಾಗೂ ಮಂಡೆಚ್ಚರು ಅಕಾಡೆಮಿಗೆ ಇರುವ ಮಿತಿಯನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ, ಆರ್ಥಿಕವಾಗಿ ಇರುವ ತೊಡಕುಗಳನ್ನು, ಜಾನಪದದೊಂದಿಗೆ ಸೇರಿಕೊಂಡಿರುವುದರಿಂದ ಉಂಟಾಗಿರುವಸಮಸ್ಯೆಗಳನ್ನು ಅವರು ವಿವರಿಸಿದ್ದಾರೆ. ಕುಂಬಳೆ, ಕೋಳ್ಯೂರು, ಹಿರಿಯಡ್ಕ, ಶೇಣಿ ಮುಂತಾದವರು ಯಕ್ಷಗಾನಕ್ಕೆ ಪ್ರತ್ಯೇಕವಾದ ಸಂಸ್ಥೆ ಬೇಕು ಎನ್ನುತ್ತಾರೆ. ಕೇರಳದ ಕಥಕ್ಕಳಿಯಲ್ಲಿರುವಂತೆ ಪ್ರದರ್ಶನಗಳಿಗೆ ನಿಯಂತ್ರಣವಿರಬೇಕೆಂದೂ, ಕಲಾವಿದರ ಅರ್ಹತೆಗಳ ಅಭಿವ್ಯಕ್ತಿಗೆ ನಿಬಂಧನೆಗಳಿರಬೇಕೆಂದೂ ಈ ಕಾರ್ಯಗಳನ್ನು ಅಕಾಡೆಮಿ ನಿರ್ವಹಿಸಬೇಕೆಂದೂ ಕೋಳ್ಯೂರರು ಅಭಿಪ್ರಾಯಿಸಿದ್ದಾರೆ. ಈಗಿರುವ ವ್ಯಾಪಾರಿ ಧೋರಣೆಗಳನ್ನು ಕಡಿಮೆ ಮಾಡಲು ನಿಬಂಧನೆಗಳನ್ನು ತರುವುದರೊಂದಿಗೆ ಎಳೆಯ ಕಲಾವಿದರಿಗೆ ತರಬೇತಿ ಕಮ್ಮಟಗಳನ್ನ ನಡೆಸಬೇಕೆಂದು ಸಾಮಗ ಸಹೋದರರು ಆಶಿಸಿದ್ದಾರೆ. ಹೀಗೆ ಯಕ್ಷಗಾನಕ್ಕೊಂದು ಪ್ರತ್ಯೇಕ ಅಕಾಡೆಮಿ ಬೇಕೆಂಬುದು ಮತ್ತು ಅದೂ ಹೆಚ್ಚು ಜವಾಬ್ದಾರಿಯಿಂದ ಕೆಲಸ ನಡೆಸಬೇಕೆಂಬುದೂ ಇಲ್ಲಿನ ಕಲಾವಿದರ ಒಟ್ಟು ಅಭಿಪ್ರಾಯ.

ಶಿಬಿರ-ಗೋಷ್ಠಿ :

ಯಕ್ಷಗಾನ ರಂಗದ ಸದ್ಯದ ಪರಿಸ್ಥಿತಿಯ ಕುರಿತು ಇಂದು ಅಲ್ಲಲ್ಲಿ ಉಪನ್ಯಾಸ ಶಿಬಿರ, ಗೋಷ್ಠಿಗಳು ನಡೆಯುತ್ತಿವೆ. ಪ್ರಾಯೋಗಿಕ ಕಮ್ಮಟಗಳು, ಉಳಿದ ಕಲೆಯೊಂದಿಗೆ ಇರುವ ಸಂಬಂಧಗಳ ಕುರಿತು ಜಿಜ್ಞಾಸೆಗಳು ಕಂಡು ಬರುತ್ತಿರುವುದು ಈಚಿನ ವರ್ಷಗಳಲ್ಲೇ. ಹಿಂದೆಲ್ಲ ಈ ಬಗೆಯ ಕಾರ್ಯಗಳು ನಡೆಯುತ್ತಿರಲಿಲ್ಲ. ಇಂತಹ ಕೆಲಸಗಳ ಬಗ್ಗೆ ಹೆಚ್ಚಿನ ಕಲಾವಿದರಲ್ಲಿ ಅವಜ್ಞೆ ಇದೆ. ಕೆಲವರಿಗೆ ಇವುಗಳ ಸಾರ್ಥಕತೆಯ ಬಗ್ಗೆ ಅನುಮಾನವಿದೆ. ವೃತ್ತಿ ಕಲಾವಿದರು ಸಕ್ರಿಯವಾಗಿ ಭಾಗವಹಿಸದ ಈ ಬಗೆಯ ಕಮ್ಮಟಗಳು, ಸಂಕಿರಣಗಳು ಎಷ್ಟು ನಡೆದರೂ ವ್ಯರ್ಥ ಎಂಬುದು ಕೋಟವೈಕುಂಠ ಹಾಗೂ ನಾವಡರ ಅಭಿಪ್ರಾಯ.

ಯಕ್ಷಗಾನ ಇಂದು ಕೇವಲ ವೃತ್ತಿ ರಂಗಭೂಮಿಗಷ್ಟೇ ಸೀಮಿತವಾಗಿಲ್ಲ. ಹವ್ಯಾಸಿಗಳೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಮಂಗಳೂರು ವಿಶ್ವವಿದ್ಯಾಲಯ ಕಳೆದ ವರ್ಷದಿಂದ ಕನ್ನಡ ಕಲಿಕೆಯಲ್ಲಿ ಪ್ರಸಂಗಸಾಹಿತ್ಯವನ್ನು ಅಳವಡಿಸಿದೆ. ಯಕ್ಷಗಾನ ಕಲೆಯನ್ನೇ ಒಂದು ಪಠ್ಯದ ವಿಷಯವಾಗಿಸಬೇಕೆಂಬ ಆಗ್ರಹವಿದೆ. ಆ ಬಗ್ಗೆ ಚರ್ಚೆಯೂ ನಡೆಯುತ್ತಿದೆ. ಹೀಗೆ ಹೊಸ ಆಯಾಮಗಳನ್ನು ಗಳಿಸಿಕೊಳ್ಳುತ್ತಿರುವ ದಿನಗಳಲ್ಲಿ ಈ ಬಗೆಯ ಕಾರ್ಯಕ್ರಮಗಳಿಗೆ ಹೆಚ್ಚಿನ ಬೆಲೆ ಇದೆ. ಅಂತೆಯೇ ವೃತ್ತಿ ಕಲಾವಿದರು ಹೆಚ್ಚು

ತೊಡಗಿಸಿಕೊಳ್ಳುವ ಮೂಲಕವೇ ಶಿಬಿರ ಗೋಷ್ಠಿ, ಸಂಕಿರಣಗಳು ಸಾರ್ಥಕವಾಗುವಂತೆ ನೋಡಿಕೊಳ್ಳಬೇಕು.

ಯಕ್ಷಗಾನ ವಿಮರ್ಶೆ:

ನಾಟಕ, ಸಿನೆಮಾಗಳಿಗಿರುವಂತೆ ಇಂದು ಯಕ್ಷಗಾನ ಪ್ರದರ್ಶನಗಳ ಬಗ್ಗೂ ಅಲ್ಲಲ್ಲಿ ವಿಮರ್ಶೆ ನಡೆಯುತ್ತಿದೆ. ಈ ವಿಮರ್ಶೆಗಳು ಹೆಚ್ಚಾಗಿ ಅಕಾಡೆಮಿಕ್ ವಲಯದಿಂದ, ನಾಟಕ, ಸಿನೆಮಾಗಳ ಮಾದರಿಯಲ್ಲೇ ಬರುತ್ತಿವೆ, ನಾರಾಯಣ ಭಟ್, ಶೇಣಿ, ರಾಮದಾಸ ಸಾಮಗರು ಈ ಬಗೆಯ ವಿಮರ್ಶೆಗಳಿಂದ ಉಪಯೋಗವಿಲ್ಲ ಎನ್ನುತ್ತಿದ್ದಾರೆ. ಹೆಚ್ಚಿನ ಕಲಾವಿದರು ಅವಿದ್ಯಾವಂತರಾಗಿರುವುದು ಅಲ್ಲದೆ ಈ ಬಗೆಯ ವಿಮರ್ಶೆಗಳನ್ನು ಓದಿ, ತಿದ್ದಿಕೊಳ್ಳಬಹುದಾದ ಶಿಸ್ತು ಇವರಿಗೆ ರೂಢಿಯಿಲ್ಲವಾದ್ದರಿಂದ ಇಂತಹ ವಿಮರ್ಶೆಗಳ ಪರಿಣಾಮ ಕಲಾರಂಗದ ಮೇಲೆ ಆಗಿಲ್ಲ ಎನ್ನುತ್ತಾರೆ. ಆದರೆ ವಿದ್ಯಾವಂತ ಪ್ರೇಕ್ಷಕ ಏನನ್ನು ಬಯಸುತ್ತಾನೆ ಎಂಬುದನ್ನು ತಿಳಿದುಕೊಳ್ಳಲು ಮತ್ತು ಮುಂಬರುವ ಯುವ ಕಲಾವಿದರಿಗೆ ಮಾರ್ಗದರ್ಶನವಾಗಲು ವಿಮರ್ಶೆಗಳ ಅಗತ್ಯವಿದೆ. ಆದರೆ ಯಕ್ಷಗಾನದಲ್ಲಿ ಹಿಂದಿನಿಂದಲೂ ಪಾರಂಪರಿಕವಾದ ವಿಮರ್ಶಾ ದೃಷ್ಟಿಯೊಂದಿದೆ. ಹಳ್ಳಿಯ ಅನೇಕ ಹಿರಿಯರು ಆ ಬಗೆಯಲ್ಲಿ ನುರಿತವರಾಗಿದ್ದಾರೆ. ಅವರ ಮಾತುಗಳಿಗೆ ಹಿರಿಯ ಕಲಾವಿದರನೇಕರು ಬೆಲೆ ಕೊಡುತ್ತಾರೆ. ಅದೇ ಮಾದರಿಯಲ್ಲಿ ವಿಮರ್ಶೆಗಳು ಬಂದರೆ ಉಪಯುಕ್ತವಾದೀತು ಎಂಬುದೇ ಹೆಚ್ಚಿನವರ ಅಭಿಮತ.

ಯಕ್ಷಗಾನಕ್ಕೊಬ್ಬ ನಿರ್ದೇಶಕ :

ಹವ್ಯಾಸಿ ನಾಟಕಗಳಲ್ಲಿ ಹಾಗೂ ಚಲನಚಿತ್ರ ಮಾಧ್ಯಮಗಳಲ್ಲಿ ನಿರ್ದೇಶಕನ ಮಹತ್ವವನ್ನು ಕಂಡ ಈ ವಿಮರ್ಶಕರು, ಕಲಾಸಕ್ತರು ಯಕ್ಷಗಾನಕ್ಕೂ ಒಬ್ಬ ನಿರ್ದೇಶಕ ಬೇಕೆಂಬ ಕೂಗನ್ನು ಎಬ್ಬಿಸಿದ್ದಾರೆ. ವ್ಯಾಪಾರೀಧೋರಣೆ ಹಾಗೂ ಅಭ್ಯಾಸಗಳ ಕೊರತೆಯಿಂದ ದಿಕ್ಕು ತಪ್ಪುತ್ತಿರುವ ಯಕ್ಷಗಾನಕ್ಕೆ ನುರಿತ ಹಿರಿಯ ಕಲಾವಿದನ ನಿರ್ದೇಶನ ದೊರೆತರೆ ಸುಧಾರಣೆಯಾದೀತೆಂಬ ಹಂಬಲವೇ ಈ ಕೂಗಿನ ಹಿನ್ನೆಲೆಯಾಗಿದೆ. ಮಕ್ಕಳ ಮೇಳ, ಸ್ತ್ರೀಯರ ಯಕ್ಷಗಾನ, ಹವ್ಯಾಸಿ ಕಲಾವಿದರ ಪ್ರದರ್ಶನಗಳಿಗೆಲ್ಲ ಇಂದು ನಿರ್ದೇಶಕರು ಇದ್ದಾರೆ. ಅದೇ ರೀತಿ ಡಾ॥ ಶಿವರಾಮಕಾರಂತರ "ಯಕ್ಷರಂಗಕ್ಕೆ" ಅವರೇ ನಿರ್ದೇಶಕರಾಗಿದ್ದಾರೆ. ಒಂದೆರಡು ಮೇಳಗಳು ವ್ಯವಸ್ಥಾಪಕರನ್ನೇ ನಿರ್ದೇಶಕರೆಂದು ಕರೆದು ಕೊಂಡದ್ದು ಇವೆ. ಉಳಿದಂತೆ ನಿರ್ದೇಶಕರು ಎಲ್ಲೂ ಕಾಣಿಸುವುದಿಲ್ಲ. ಈ ಸ್ಥಿತಿಯಲ್ಲಿ ಇಲ್ಲಿನ ಕಲಾವಿದರ ಮುಂದೆ ನಿರ್ದೇಶಕ ಬೇಕೆ? ಬೇಡವೆ? ಎಂಬ ಪ್ರಶ್ನೆಯನ್ನಿಟ್ಟಾಗ ಪರ ವಿರೋಧ ಅಭಿಪ್ರಾಯಗಳು ಬಂದಿವೆ. ಇಂದಿನ ಯಕ್ಷಗಾನಗಳಲ್ಲಿ ಕಾಣುತ್ತಿರುವ ಅಭಾಸಗಳನ್ನು ತೊಡೆದುಹಾಕಲು ಕಲಾವಿದರಲ್ಲಿ

ಸಮನ್ವಯವನ್ನು ಉಂಟು ಮಾಡಲು ಪ್ರದರ್ಶನಕ್ಕೊಂದು ಪೂರ್ವ ನಿಶ್ಚಿತ ಸ್ವರೂಪ ಲಭಿಸಲು ಪ್ರತಿಮೇಳಕ್ಕೂ ಒಬ್ಬ ನಿರ್ದೇಶಕನ ಅಗತ್ಯವಿದೆ ಎಂಬುದು ಕೆರೆಮನೆ ಮಹಾಬಲ ಹೆಗಡೆ, ಕೆರೆಮನೆ ಶಂಭು ಹೆಗಡೆ, ಕುಂಬಳೆ ಸುಂದರ ರಾವ್, ನಾರಣಪ್ಪ ಉಪ್ಪೂರ, ಕೋಳ್ಯೂರು ರಾಮಚಂದ್ರ ರಾವ್ ಮುಂತಾದವರ ಅಭಿಪ್ರಾಯ. ಈ ನಿರ್ದೇಶಕ ಪದ ಕೇವಲ ಹೆಸರಿಗಾಗಿ ಇರದೇ ಆತ ಯಕ್ಷಗಾನದ ಎಲ್ಲಾ ಅಂಗಗಳಲ್ಲೂ ಸಿದ್ಧ ಹಸ್ತನಾಗಿರಬೇಕು. ಅದೇ ರೀತಿ ಉಳಿದೆಲ್ಲಾ ಕಲಾವಿದರಿಗೆ ಹಿರಿಯನಾಗಿ ನಡೆದು ನುಡಿದು ಉಳಿದವರು ತನ್ನ ಮಾತನ್ನು ನಡೆಸುವಂತೆ ನೋಡಿಕೊಳ್ಳಬೇಕು. ಹಿಂದೆ ಭಾಗವತನಾಗಿಯೋ, ಮುಖ್ಯ ವೇಷಧಾರಿಯಾಗಿಯೋ, ಇದ್ದು ನಿವೃತ್ತಿ ಹೊಂದಿ ಅಥವಾ ನಿವೃತ್ತಿಯ ಅಂಚಿನಲ್ಲಿದ್ದರೆ ಹೆಚ್ಚು ಉಚಿತ, ಕಲಾವಿದರ ಒಳಗೆ ಇರುವ ಅನಗತ್ಯ ಪೈಪೋಟಿಯನ್ನು ನಿಲ್ಲಿಸುವ ಸಾಮರ್ಥ್ಯವುಳ್ಳವನು, ಕಥಾ ಸಂಯೋಜನೆಯನ್ನು ಸಮರ್ಪಕವಾಗಿ ಕೊಂಡೊಯ್ಯಬಲ್ಲವನೂ, ರಾಗದ ಶಿಸ್ತನ್ನು ಕಾಪಾಡಬಲ್ಲವನು, ಸದಭಿರುಚಿಯವನೂ ಆಗಿರಬೇಕೆಂಬುದು ಇವರೆಲ್ಲರ ಆಶಯವಾಗಿದೆ.

ಈ ಅಭಿಪ್ರಾಯಗಳನ್ನು ಮಂಡೆಚ್ಚ, ರಾಮಚಂದ್ರ ನಾವಡ ಮುಂತಾದವರು ವಿರೋಧಿಸುತ್ತಾರೆ. ನಿರ್ದೇಶಕನೊಬ್ಬ ಬಂದ ಮಾತ್ರಕ್ಕೆ ಇವತ್ತಿನ ಗೊಂದಲಗಳು ನಿವಾರಣೆಯಾಗುತ್ತದೆ ಎಂಬ ಗ್ಯಾರಂಟಿ ಇಲ್ಲ ಎನ್ನುವ ಇವರು ಭಾಗವತನೇ ಯಕ್ಷಗಾನದ ನಿರ್ದೇಶಕ ಎನ್ನುತ್ತಾರೆ. ಪ್ರದರ್ಶನದ ನಿಯಂತ್ರಣ ಭಾಗವತನ ಕೈಯಲ್ಲಿ ಇರುವಾಗ ಇನ್ನೊಬ್ಬರ ಮಧ್ಯಪ್ರವೇಶ ಅನಗತ್ಯ ಎನ್ನುವ ಮಂಡೆಚ್ಚರು ಭಾಗವತನ ಹೊಣೆಗಾರಿಕೆ ಸ್ಪಷ್ಟಪಡಿಸುವ ಮೂಲಕ ಇವತ್ತಿನ ಸಮಸ್ಯೆಗಳನ್ನು ನಿವಾರಿಸಲು ಸಾಧ್ಯ ಎಂದಿದ್ದಾರೆ. ಹೊಸ ನಿರ್ದೇಶಕನ ಆಗಮನ ಈ ಪ್ರಕಾರದಲ್ಲಿ ಅಂತರ್ಗತವಾಗಿರುವ ಕಲಾವಿದರ ಸ್ವಾತಂತ್ರಕ್ಕೆ ಧಕ್ಕೆ ತಂದೀತೆಂಬ ಅನುಮಾನವಿದೆ, ಹಿರಿಯ ಕಲಾವಿದರೆಲ್ಲರೂ ಇಂದಿನ ದಿಢೀರ್ ಪ್ರವೃತ್ತಿಯನ್ನು ವಿರೋಧಿಸುತ್ತಾರೆ. ತರಬೇತಿಯ ಕೊರತೆ. ರಂಗಾನುಭವದ ಅಭಾವವೇ ಎಲ್ಲಾ ಸಮಸ್ಯೆಗಳಿಗೂ ಕಾರಣ ಎಂಬುದು ಭಾಗವತರುಗಳ ಅಭಿಪ್ರಾಯ. ವ್ಯಾಪಾರೀಧೋರಣೆ ಇರುವವರೆಗೆ ನಿರ್ದೇಶಕರ ಆಗಮನವಾಗುವುದಿಲ್ಲ, ಯಜಮಾನರುಗಳು ಇದನ್ನು ಒಪ್ಪಲಾರರು ಎಂಬುದು ನಾರಾಯಣಭಟ್ಟರ ಅನಿಸಿಕೆ. ಯಕ್ಷಗಾನ ಹಾಳಾಗಲು ಮೇಳದ ಒಡೆಯರೇ ಕಾರಣ ಎಂಬುದು ಮಾತಿನ ಮತಿತಾರ್ಥ. ಮೇಳದ ಒಡೆಯರೂ ಆಗಿರುವ ಶಂಭು ಹೆಗಡೆ ಕಲಾವಿದರ ಬಗ್ಗೆ ನಡೆಯುತ್ತಿರುವ ಪೈಪೋಟಿಯನ್ನು ಪ್ರಸ್ತಾಪಿಸಿದ್ದಾರೆ. ಸಮರ್ಥ ಕಲಾವಿದರ ಕೊರತೆ ಪ್ರದರ್ಶನಗಳ ವೈಫಲ್ಯಕ್ಕೆ ಕಾರಣ ಎನ್ನುವ ಅವರು ಈಗ ಇರುವ ಮೇಳಗಳ ಸಂಖ್ಯೆ ಕಡಿಮೆಯಾಗಬೇಕು ಎನ್ನುತ್ತಾರೆ. ಸದ್ಯದ ಪರಿಸ್ಥಿತಿಯಲ್ಲಂತೂ ವೃತ್ತಿ ರಂಗಭೂಮಿಗೆ ನಿರ್ದೇಶಕರ ಆಗಮನದ ನಿರೀಕ್ಷೆ ಇಲ್ಲ.

ನೂತನ ಪ್ರಸಂಗಗಳು:

ಇವತ್ತು ಪ್ರದರ್ಶನವಾಗುತ್ತಿರುವ ನೂತನ ಪ್ರಸಂಗಗಳ ಬಗ್ಗೆ ಎಲ್ಲೆಡೆಯಲ್ಲೂ ವ್ಯಾಪಕ ಅಸಮಾಧಾನವಿದೆ. ಆದರೂ ಈ ಪ್ರಸಂಗಗಳು ವರ್ಷವಿಡೀ ಜಯಭೇರಿ ಬಾರಿಸುತ್ತವೆ. ಈ ಶತಮಾನದ ಮೊದಲ ಮೂರು ನಾಲ್ಕು ದಶಕಗಳವರೆಗೆ ರಚಿತವಾಗುತ್ತಿರುವ ಪ್ರಸಂಗಗಳೆಲ್ಲಾ ಪೌರಾಣಿಕ ಆಧಾರದ ಮೇಲೆ ರಚಿತವಾಗಿ ಪೌರಾಣಿಕ ವಾತಾವರಣವನ್ನು ಪ್ರದರ್ಶನದಲ್ಲಿ ಸೃಷ್ಟಿಸುತ್ತಿದ್ದವು. ಯಕ್ಷಗಾನದ ಜಾಯಮಾನಕ್ಕೆ ಅವು ಸರಿ ಹೊಂದುತ್ತಿದ್ದವು. ಟೆಂಟ್ ಮೇಳಗಳು ಪ್ರಾರಂಭವಾದ ಮೊದಲ ಕಾಲದಲ್ಲಿ ಇವೇ ಪ್ರಸಂಗಗಳನ್ನು ಆಡುತ್ತಿದ್ದರು. ಹೊಸ ಬಗೆಯ ಪ್ರಸಂಗಗಳು ಜನಾಕರ್ಷಣೆ ಪಡೆಯುವುದನ್ನು ಗಮನಿಸಿದ ಒಡೆಯರು ವರ್ಷಕ್ಕೊಂದರಂತೆ ನೂತನ ಪ್ರಸಂಗಗಳ ಅನ್ವೇಷಣೆಗೆ ಹೊರಟರು. ಈ ನೂತನ ಪ್ರಸಂಗಗಳು ಯಾವುದೇ ಪುರಾಣದ ನೆಲೆಗಟ್ಟನ್ನು ಹೊಂದಿಲ್ಲದ ಕಾಲ್ಪನಿಕ ಕಟ್ಟುಕತೆಗಳು. ಹೆಚ್ಚಾಗಿ ಸಿನೀಮಯ ಘಟನೆಗಳನ್ನು ರಂಜನೀಯ ಅಂಶಗಳನ್ನು ಹೊಂದಿವೆ. ಇವುಗಳಲ್ಲಿ ಕೆಲವಂತೂ ಒಂದೇ ತಿರುಗಾಟದಲ್ಲಿ ನೂರು ಪ್ರದರ್ಶನಗಳ ದಾಖಲೆಯನ್ನು ಸ್ಥಾಪಿಸಿವೆ. ಒಟ್ಟಿನಲ್ಲಿ ಗಲ್ಲಾ ಪೆಟ್ಟಿಗೆ ತುಂಬುವ ಚಲನ ಚಿತ್ರಗಳಿಗೆ ಇವು ಸಮಾನಾಂತರವಾಗಿವೆ. ಕಲಾತ್ಮಕ ಕಾಳಜಿ ಉಳ್ಳ ಆಸಕ್ತರು, ಕಲಾವಿದರು ಈ ಪ್ರವೃತ್ತಿಯನ್ನು ವಿರೋಧಿಸುತ್ತಾರೆ. ಬದುಕಿಗೆ ಮಾದರಿಯಾಗಬಲ್ಲ ಸದ್ವಿಚಾರ, ಜೀವನ ವಿವೇಕ, ಕಲಾತ್ಮಕತೆಯ ಪ್ರದರ್ಶನಕ್ಕೆ ಅವಕಾಶ ಹೊಸ ಪ್ರಸಂಗಗಳಲ್ಲಿ ಇಲ್ಲ. ಕೆಲವು ನೂತನ ಪ್ರಸಂಗಗಳಂತೂ ಮೇಳದ ಕಲಾವಿದರನ್ನು ಗಮನದಲ್ಲಿರಿಸಿ ಅವರ ವಿಶೇಷತೆ ವ್ಯಕ್ತವಾಗುವ ಘಟನೆ ತಂದು ಪ್ರಸಂಗ ರಚಿಸುವುದನ್ನು ಉಪ್ಪೂರ, ರಾಮಚಂದ್ರ ನಾವಡ, ಮಹಾಬಲ ಹೆಗಡೆ, ನಾರಾಯಣ ಭಟ್, ಕುಂಜಾಲು ಮುಂತಾದವರು ಪ್ರಸ್ತಾಪಿಸಿದ್ದಾರೆ. ಪೌರಾಣಿಕ ಆವರಣವನ್ನು ಭಂಗಮಾಡುವ ಹೊಸ ಪ್ರಸಂಗಗಳ ಆಯುಷ್ಯ ಹೆಚ್ಚಾಗಿ ಕೇವಲ ಒಂದು ತಿರುಗಾಟಕ್ಕೆ ಸೀಮಿತ. ವೈವಿಧ್ಯಮಯ ವೇಷಗಾರಿಕೆಗೆ ಅವಕಾಶವಿಲ್ಲದೇ ಇರುವ ಈ ಪ್ರಸಂಗಗಳು ಒಂದು ಇನ್ನೊಂದರ ಪಡಿಯಚ್ಚಿನಂತೆ ಕಾಣಿಸುತ್ತವೆ. ಇಲ್ಲಿ ಸಂದರ್ಶಿತರಾದವರಲ್ಲಿ 60ಕ್ಕೂ ಹೆಚ್ಚು ಪ್ರಸಂಗಗಳನ್ನು ರಚಿಸಿರುವ ಕೀರಿಕ್ಕಾಡು ಮಾಸ್ತರ್ ವಿಷ್ಣುಭಟ್ ಹಾಗೂ ಜನಪ್ರಿಯ ಪ್ರಸಂಗಗಳನ್ನು ರಚಿಸಿರುವ ಕಡತೋಕ, ಕಾಳಿಂಗ ನಾವಡರೇ ಮೊದಲಾದವರು ಹೊಸ ಪ್ರಸಂಗಗಳೆಲ್ಲವೂ ಈ ಮಾದರಿಯಲ್ಲಿ ಇಲ್ಲ ಎನ್ನುತ್ತಾರೆ. ನೂತನ ಪ್ರಸಂಗಕಾರರಲ್ಲಿ ಅಮೃತಸೋಮೇಶ್ವರ, ರಾಘವ ನಂಬಿಯಾರ್ ಮುಂತಾದವರ ಸಾಹಿತ್ಯಾಂಶವನ್ನು ಕುಂಬಳೆಯವರು ಶ್ಲಾಘಿಸಿದ್ದಾರೆ. ಹೊಸ ಬಗೆಯ ಪ್ರಸಂಗಗಳನ್ನು ಜನತೆ ಬಯಸುವುದರಿಂದ ಪ್ರದರ್ಶಿಸುವುದರಲ್ಲಿ ತಪ್ಪೇನು ಇಲ್ಲ ಎಂಬುದು ರಾಮದಾಸ ಸಾಮಗರ ಅಭಿಪ್ರಾಯ.

ಬಯಲಾಟದ ಮೇಳಗಳು ಅಲ್ಲಲ್ಲಿ ಹೊಸ ಪ್ರಸಂಗಗಳನ್ನೋ ಕ್ಷೇತ್ರ ಮಹಾತ್ಮೆಗಳನ್ನೋ ಆಡುತ್ತಿರುವುದು ಗಮನಾರ್ಹ. ಹಳೆಯ ಪ್ರಸಂಗಗಳು ಇಷ್ಟು ದೀರ್ಘ ಕಾಲ ಬದುಕಿ ಬಂದಿದ್ದರೂ ಈಗ ಮೂಲೆಗೆ ಸರಿಯುತ್ತಿರುವುದಕ್ಕೆ ಪ್ರೇಕ್ಷಕ, ಕಲಾವಿದ ವ್ಯವಸ್ಥಾಪಕರೆಲ್ಲರೂ ಕಾರಣರಾಗಿದ್ದಾರೆ. ಕೆಲವೊಂದು ಪ್ರಸಿದ್ಧ ಪಾತ್ರಧಾರಿಗಳು ಹಳೆಯ ಪ್ರಸಂಗಗಳಲ್ಲಿ ಕೆಲವಕ್ಕೆ ತಮ್ಮದೇ ಆದ ಛಾಪನ್ನು ಒತ್ತಿ ಹೋಗಿದ್ದಾರೆ. ಅವರುಗಳು ಇಲ್ಲವಾಗಿರುವುದೂ ಇಂದಿನ ಈ ನಿರ್ಲಕ್ಷಕ್ಕೆ ಕಾರಣವಾಗಿರಬಹುದು.

ತುಳು ಪ್ರಸಂಗಗಳು:

ಇವತ್ತಿನ ತೆಂಕುತಿಟ್ಟಿನ ಹೆಚ್ಚಿನ ಮೇಳಗಳು ತುಳುವಿನಲ್ಲಿ ಪ್ರದರ್ಶನ ನಡೆಸುತ್ತಿವೆ. ಬಹಳ ಹಿಂದೆಯೇ ಸಂಕಯ್ಯ ಭಾಗವತ ತುಳು ಪಂಚವಟಿ ಬರೆದಿದ್ದರೂ ಗರಿಷ್ಠ ಪ್ರಮಾಣದಲ್ಲಿ ತುಳು ಪ್ರದರ್ಶನಗಳು ನಡೆಯುತ್ತಿರುವುದು ಈಚಿನ ವರ್ಷಗಳಲ್ಲಿ ಮೊದಲ ವರ್ಷಗಳಲ್ಲಿ ಕನ್ನಡ ಪದ್ಯ, ತುಳು ಅರ್ಥವಿರುತ್ತಿತ್ತು. ಕೆಲವೊಮ್ಮೆ ರಾಜರು, ದೇವತೆಗಳು ಕನ್ನಡದಲ್ಲೂ, ಸಾಮಾನ್ಯ ಪಾತ್ರಗಳು ತುಳುವಿನಲ್ಲೂ ಸಂಭಾಷಿಸುತ್ತಿದ್ದರು. ಈಗ ಎಲ್ಲವೂ ತುಳುವಿನಲ್ಲೇ ನಡೆಯುತ್ತಿದೆ. ಕೆಲವು ಪ್ರಸಂಗಗಳಂತೂ ತುಳುನಾಡು ಹಾಗೂ ಬೊಂಬಾಯಿಯಲ್ಲಿ ಜಯಭೇರಿ ಬಾರಿಸಿವೆ. ಕೋಟಿ ಚೆನ್ನಯ್ಯ, ಸೊರ್ಕುದ ಸಿರಿಗೆಂಡೆ, ಬಂಗಾರ್ದ ಸಿರಿಮುಡಿ, ಕಾನದ ತನಿಯೆ, ಬೊಳ್ಳೆದ ಗಿಂಡಿ, ಪರಕೆದ ಗಗ್ಗರ, ಸತ್ಯದಪ್ಪೆ ಚೆನ್ನಮ್ಮ, ಮುಂತಾದ ಪ್ರಸಂಗಗಳನ್ನು ಜನತೆ ಬಹಳ ಮೆಚ್ಚಿಕೊಂಡಿದ್ದಾರೆ. ಹೆಚ್ಚಾಗಿ ತುಳುನಾಡಿನ ಅರಸು ಬಲ್ಲಾಳರ, ಕಟ್ಟಾಳುಗಳ, ದೈವಗಳ ಕಥೆಯೇ ವಸ್ತುವಾಗಿರುವುದು ಇಲ್ಲಿನ ವಿಶೇಷ. ಇವತ್ತಿನ ತುಳುಪ್ರಸಂಗಗಳ ಪ್ರದರ್ಶನಗಳ ಬಗ್ಗೆ, ಅಲ್ಲಿನ ಸಂಭಾಷಣೆಯ ಶೀಲ ಅಶ್ಲೀಲತೆಗಳ ಬಗ್ಗೆ ಸಾಕಷ್ಟು ವಾದ ವಿವಾದವಿದೆ.

ಇವತ್ತಿನ ತುಳು ಪ್ರಸಂಗಗಳಲ್ಲಿನ ಭಾಷೆಯ ಬಳಕೆಯ ಬಗ್ಗೆ ಶೇಣಿ ಗೋಪಾಕೃಷ್ಣ ಭಟ್, ನಾರಾಯಣ ಭಟ್ ಮುಂತಾದವರಿಗೆ ಅಸಮಾಧಾನವಿದೆ. ಆಡುಭಾಷೆಯಾದ ತುಳುವಿನ, ಕೆಳದರ್ಜೆಯ ಮಾತುಗಳನ್ನು ಪೌರಾಣಿಕ ಪಾತ್ರಗಳ ಬಾಯಿಂದ ಬರುವಾಗ ಆವರಣ ಭಂಗವಾಗುತ್ತದೆ ಎನ್ನುವ ಇವರು ಜನರನ್ನು ರಂಜಿಸಲು ತೀರಾ ಅಶ್ಲೀಲಪದ ಬಳಸುವುದನ್ನು ವಿರೋಧಿಸುತ್ತಾರೆ. ತುಳುವಿಗೊಂದು ಗ್ರಂಥಸ್ಥ ಸ್ವರೂಪ ಬರುವವರೆಗೆ ಈ ಭಾಷೆಯ ಬಳಕೆ ಸಲ್ಲದು ಎಂಬುದು ಇವರ ಅಭಿಪ್ರಾಯ. ಆದರೆ ತೆಂಕುತಿಟ್ಟಿನ ಇನ್ನೋರ್ವ ಪ್ರಸಿದ್ಧ ಕಲಾವಿದರಾದ ರಾಮದಾಸ ಸಾಮಗರು ತುಳು ಪ್ರದರ್ಶನಗಳನ್ನು ಸಂತೋಷದಿಂದ ಸ್ವಾಗತಿಸುತ್ತಾರೆ. ಜನತೆಯೊಂದಿಗೆ ಈ ಪ್ರದರ್ಶನಗಳು ಬಳಸಿಕೊಂಡ ನೇರ ಸಂಬಂಧ ಅವರಿಗೆ ಸಂತೋಷ ತಂದಿದೆ. ತುಳು ಪ್ರಸಂಗಗಳು ಪ್ರಾದೇಶಿಕತೆಯನ್ನು ಪ್ರತಿಬಿಂಬಿಸುತ್ತವೆ ಎನ್ನುವ ಸಾಮಗರು ಅಶ್ಲೀಲತೆ ತುಳುವಿನಲ್ಲಿ ಮಾತ್ರವಲ್ಲ ಕನ್ನಡ

ಪ್ರದರ್ಶನಗಳಲ್ಲೂ ಇವೆ ಎನ್ನುತ್ತಾರೆ. ಕಲಾಸಕ್ತರೆಲ್ಲರೂ ಇಂದು ತುಳುವಿನ ಪರ ಹಾಗೂ ವಿರೋಧ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಸಾಮಾಜಿಕತೆಯನ್ನು ಹೆಚ್ಚು ಪ್ರಸ್ತುತಪಡಿಸುವ ತುಳು ಪ್ರಸಂಗಗಳು ಕಲಾತ್ಮಕ ಅಂಶಗಳನ್ನು ಮೈಗೂಡಿಸಿಕೊಳ್ಳುವತ್ತ ಹೆಚ್ಚು ಗಮನ ಕೊಡಬೇಕಾಗಿದೆ.

ಧಾರ್ಮಿಕತೆ – ಸಾಮಾಜಿಕತೆ:

ನೂತನ ಪ್ರಸಂಗಗಳ ಸೃಷ್ಟಿ ಹೆಚ್ಚುತ್ತಾ ಬಂದಂತೆ ಯಕ್ಷಗಾನದ ವಸ್ತುವು ಹೇಗಿರಬೇಕೆಂಬ ಬಗ್ಗೆ ಚರ್ಚೆಯೂ ನಡೆಯುತ್ತಿದೆ. ಬಯಲಾಟದ ಕಾಲದಲ್ಲಿ ಪ್ರಸಂಗಗಳ ವಸ್ತುಗಳು ರಾಮಾಯಣ, ಭಾಗವತ, ಭಾರತ ಮುಂತಾದವುಗಳ ಆಧಾರದ ಮೇಲೆ ರಚಿತವಾಗುತ್ತಿದ್ದವು. ಅಲ್ಲದೆ ಹರಕೆಯ ರೂಪದಲ್ಲಿ ಆಡುತ್ತಿದ್ದ ಆಟಗಳಲ್ಲಿ ಧಾರ್ಮಿಕತೆ ಅನಿವಾರ್ಯವಾಗಿತ್ತು. ನೀತಿಬೋಧೆ, ದೈವ ದೇವರುಗಳ ಹಿರಿಮೆ, ಧರ್ಮಕ್ಕೆ ಪ್ರಾಶಸ್ತ್ಯ ಇರುವ ಕಥಾನಕಗಳೇ ಮುಖ್ಯವಾಗಿದ್ದವು. ಇಂದು ಜನಜೀವನದಲ್ಲೂ ಧಾರ್ಮಿಕ ನಂಬಿಕೆಗಳು ಸಡಿಲವಾದ್ದರಿಂದ, ವ್ಯಾಪಾರೀ ಪ್ರವೃತ್ತಿಯೂ ಹೆಚ್ಚಿದ್ದರಿಂದ ಧಾರ್ಮಿಕತೆ ಕಡಿಮೆಯಾಗುತ್ತಾ ಬಂತು. ಇದರೊಂದಿಗೆ ಯಕ್ಷಗಾನದಲ್ಲಿ ಸಾಮಾಜಿಕ ವಿಚಾರಗಳನ್ನು, ಸಮಸ್ಯೆಗಳನ್ನು ಪರೋಕ್ಷವಾಗಿ ತುರುಕುವ ಪ್ರವೃತ್ತಿಯೂ ಹೆಚ್ಚಾಯಿತು. ಇವತ್ತಿನ ಪ್ರಸಂಗ–ಪ್ರದರ್ಶನಗಳಲ್ಲಿ ಸಾಮಾಜಿಕ ಅಂಶಗಳು ಹೆಚ್ಚುತ್ತಿವೆ ಎಂಬುದು ಕಲಾವಿದರ ಅಭಿಪ್ರಾಯ. ಶಂಕರನಾರಾಯಣ ಸಾಮಗ, ನಾರಣಪ್ಪ ಉಪ್ಪೂರ, ರಾಮಚಂದ್ರ ನಾವಡ ಮುಂತಾದ ಹಿರಿಯ ಕಲಾವಿದರೆಲ್ಲರೂ ಯಕ್ಷಗಾನ ನೀತಿಬೋಧೆಯಿಂದ ಕೂಡಿರಬೇಕೆಂದು ಸಮರ್ಥಿಸುತ್ತಾರೆ. ಯಕ್ಷಗಾನವು ಧಾರ್ಮಿಕ ಚೌಕಟ್ಟಿನಲ್ಲಿಯೇ ಮುಂದುವರಿಯಬೇಕೆಂಬುದು ಇಲ್ಲಿನವರ ಆಶಯವಾಗಿದೆ.

ಹಳೆಯ ಪ್ರಸಂಗಗಳಲ್ಲಿ ಸಾಮಾಜಿಕತೆ ಇಲ್ಲವೇ ಇಲ್ಲ ಎನ್ನುವಂತಿಲ್ಲ. ಪರೋಕ್ಷವಾಗಿ ಸಾಮಾಜಿಕ ವಿಚಾರಗಳು ಪ್ರಸಂಗಗಳಲ್ಲಿ ಆ ಮೂಲಕ ಪ್ರದರ್ಶನಗಳಲ್ಲಿ ವ್ಯಕ್ತವಾಗುತ್ತಿದ್ದವು. ಪೌರಾಣಿಕ ವಾತಾವರಣದ ನಡುವೆ ಬರುವ ಹಾಸ್ಯಗಾರರು ಸಾಮಾಜಿಕ ವಿಚಾರಗಳನ್ನು ಮುಂದಿಡುವ ಮೂಲಕ ಆ ಲೋಕಕ್ಕೂ ಈ ಲೋಕಕ್ಕೂ ಸೇತುವೆಯನ್ನು ನಿರ್ಮಿಸುತ್ತಿದ್ದರು. ಹಾಸ್ಯಗಾರನ ಮಾತುಗಳು ನಗುವಿನ ಅಲೆಯನ್ನು ಎಬ್ಬಿಸುವುದರೊಂದಿಗೆ ಇವತ್ತಿನ ವಿಚಾರಗಳನ್ನು ಎತ್ತುತ್ತಿತ್ತು. ಆದರೆ ಇವತ್ತು ಎಲ್ಲಾ ಪಾತ್ರಗಳು ಒಂದಿಲ್ಲೊಂದು ರೀತಿಯಿಂದ ಸಾಮಾಜಿಕ ವಿಚಾರಗಳನ್ನು ತರುತ್ತಿದ್ದಾರೆ. ಇದರಿಂದ ಒಟ್ಟು ಪೌರಾಣಿಕ ಆವರಣಕ್ಕೆ ಭಂಗವಾಗುತ್ತಿದೆ. ಹೊಸ ಪ್ರಸಂಗಗಳ ರಚನೆಯಲ್ಲಿ ಇವತ್ತಿನ ಸಮಸ್ಯೆಗಳು ಸಾಕಷ್ಟು ಬಂದಿವೆ. ಎಲ್ಲಾ ಪಾತ್ರಗಳು ಹಾಸ್ಯದ ಮಾತುಗಳನ್ನು ಆಡಲು ಅವಕಾಶ ಕಲ್ಪಿಸಲಾಗಿದೆ. ಇದರಿಂದಾಗಿ ಹಾಸ್ಯಗಾರನ ಸ್ಥಿತಿ ಬಹಳ ಕಷ್ಟವಾಗಿದೆ ಎನ್ನುತ್ತಾರೆ. ನಾರಾಯಣ

ಭಟ್ಟರು. ಹೀಗೆ ಯಕ್ಷಗಾನದಲ್ಲಿ ಯಾವುದು ಪ್ರಧಾನವಾಗಬೇಕೆಂಬ ಬಗ್ಗೆ ವಿಚಾರಗಳು ಅಲ್ಲಲ್ಲಿ ಪ್ರಸ್ತಾಪಿತವಾಗುತ್ತಿದೆ.

ತಿಟ್ಟುಗಳು :

ಶೈಲಿಯ ದೃಷ್ಟಿಯಿಂದ ಕರಾವಳಿಯಲ್ಲಿ ಪ್ರದರ್ಶನಗೊಳ್ಳುತ್ತಿರುವ ಯಕ್ಷಗಾನದಲ್ಲಿ ಮುಖ್ಯವಾಗಿ ಮೂರು ಪ್ರಭೇದಗಳಿವೆ. ಉಡುಪಿಯಿಂದ ದಕ್ಷಿಣಕ್ಕೆ ಕಾಸರಗೋಡಿನವರೆಗಿನ ಮೇಳಗಳು ಪ್ರದರ್ಶಿಸುತ್ತಿರುವುದನ್ನು ತೆಂಕುತಿಟ್ಟೆಂತಲೂ ಉಡುಪಿಯಿಂದ ಉತ್ತರಕ್ಕಿರುವ ಜಿಲ್ಲೆಯ ಉಳಿದ ಭಾಗದ ಮೇಳಗಳು ಆಡುವ ಆಟವನ್ನು ಬಡಗು ತಿಟ್ಟಿನದೆಂತಲೂ ಕರೆಯುತ್ತಾರೆ, ಹೆಚ್ಚಾಗಿ ಬಡಗು ತಿಟ್ಟನ್ನು ಹೋಲುವ ಉತ್ತರ ಕನ್ನಡ ಜಿಲ್ಲೆಯ ಕಲಾವಿದರ ಯಕ್ಷಗಾನಗಳನ್ನು ಬಡಾ ಬಡಗು ತಿಟ್ಟಿನ ಶೈಲಿ ಎಂದು ಗುರುತಿಸುತ್ತಾರೆ. ಈ ಮೂರು ಶೈಲಿಗಳು ಒಂದು ಬಗೆಯ ವ್ಯವಸ್ತೆಯಿಂದ ರಚನೆಯಾದವೇ ಹೊರತು ಕಟ್ಟುನಿಟ್ಟಿನ ಭೌಗೋಳಿಕ ಆಧಾರದಿಂದ ಉಂಟಾದವು ಅಲ್ಲ. ಪ್ರೇಕ್ಷಕರಲ್ಲಿ ತಿಟ್ಟಿನ ಬಗ್ಗೆ ಭೇದವಿಲ್ಲ. ಬಡಗಿನವರು ತೆಂಕಿನಲ್ಲೂ, ತೆಂಕಿನವರು ಬಡಗಿನಲ್ಲೂ ಪ್ರದರ್ಶನವೀಯುತ್ತಿದ್ದಾರೆ. ಅದೇ ರೀತಿ ಕಲಾವಿದರು ಕೂಡ ತಿಟ್ಟುಗಳನ್ನು ಬದಲಾಯಿಸುತ್ತಿರುವುದು ಸಾಮಾನ್ಯವಾಗಿದೆ. ಕುಣಿತ, ಹಾಡುಗಾರಿಕೆ, ವೇಷಗಾರಿಕೆಯ ತಂತ್ರಗಳಲ್ಲಿ ಮಾತ್ರ ವ್ಯತ್ಯಾಸವಿದೆಯೇ ಹೊರತು ಆಧರಿಸಿರುವ ಪ್ರಸಂಗದಲ್ಲಾಗಲೀ, ಆಡುವ ಮಾತಿನಲ್ಲಾಗಲೀ ವ್ಯತ್ಯಾಸಗಳೇನೂ ಇಲ್ಲ. ಮೂವತ್ತು ನಲವತ್ತು ವರ್ಷಗಳ ಕೆಳಗೆ ಸಂಪರ್ಕ ಸೌಕರ್ಯ ಇಲ್ಲದೆ ಆಯಾಯ ಭಾಗದ ತಿಟ್ಟುಗಳು ಆಯಾಯ ಪ್ರದೇಶದಲ್ಲೇ ಪ್ರದರ್ಶಿತವಾಗುತ್ತಿದ್ದುದು ಸಂಪೂರ್ಣ ಪ್ರತ್ಯೇಕ ಶೈಲಿಯಾಗಲು ಕಾರಣವಾಗಿರಬೇಕು. ಇವತ್ತು ಈ ರೀತಿ ನಿರ್ಬಂಧವಿಲ್ಲ. ಅದೇ ರೀತಿ ಮಳೆಗಾಲದ ಆಟಗಳಲ್ಲಂತೂ ಎರಡೂ ತಿಟ್ಟಿನ ಕಲಾವಿದರ ಸೇರ್ಪಡೆಯಾಗುತ್ತಿದೆ. ಈ ಬಗೆಯ ವ್ಯವಸ್ಥೆಯನ್ನು ಸ್ವಾಗತಿಸುವ ಕಲಾವಿದರೂ ಇದ್ದಾರೆ.

ಉಪ್ಪೂರ, ಕಡತೋಕರು ಈ ಬಗ್ಗೆ ತಿಟ್ಟುಗಳ ಸಮನ್ವಯದಿಂದ ಯಕ್ಷಗಾನ ಪರಿಪೂರ್ಣವಾಗಿದೆ ಎನ್ನುತ್ತಾರೆ. ತೆಂಕಿನ ವೈಶಿಷ್ಟ್ಯವಾದ ಮಾತುಗಾರಿಕೆ, ಬಡಗಿನ ಖ್ಯಾತಿಯ ಕುಣಿತ, ತೀರಾ ಬಡಗಿನ ವಿಶಿಷ್ಟತೆಯಾದ ಅಭಿನಯ ಒಂದೆಡೆ ಸಮನ್ವಯವಾಗಲು ಸಾಧ್ಯವಾಗಿದೆ ಎಂಬುದು ಇವರ ಅಭಿಪ್ರಾಯ. ಕೋಟ ವೈಕುಂಠ, ಕುಂಜಾಲು ರಾಮಕೃಷ್ಣಯ್ಯ ತಿಟ್ಟುಗಳ ವ್ಯತ್ಯಾಸ ಅಂತಹ ಗುರುತರವೇನಲ್ಲ ಎನ್ನುತ್ತಾರೆ. ಆದರೆ ಕೋಳ್ಯೂರರು ಇದನ್ನು ವಿರೋಧಿಸುತ್ತಾರೆ. ಪ್ರತಿಯೊಂದು ತಿಟ್ಟಿಗೂ ಇರುವ ವೈಶಿಷ್ಟ್ಯಗಳನ್ನು ಅದೇ ವಾತಾವರಣದಲ್ಲಿ ಉಳಿಸಿಕೊಂಡು ಬರಬೇಕೆಂದು ಆಗ್ರಹಿಸುತ್ತಾರೆ. ತೆಂಕಿನ ಕುಣಿತ, ವೇಷಭೂಷಣವೆಲ್ಲ ವೀರರಸ ಪ್ರಧಾನವಾದದ್ದು, ಅದೇ ಬಡಗಿನ

ಕುಣಿತದಲ್ಲಿ ಲಾಸ್ಯ ಹಾಗೂ ಅಭಿನಯ ಪ್ರಾಧಾನ್ಯ. ಇವುಗಳು ಹಾಗೇ ಉಳಿಯಬೇಕು, ಸಮನ್ವಯದಿಂದ ಆಭಾಸವಾದೀತು ಎಂಬುದು ಇವರ ಅಭಿಪ್ರಾಯ. ಕುಂಬಳೆಯವರು ಈ ಬಗೆಯ ಸಮನ್ವಯ ಹೊರಗಿನಿಂದ ಆಗಬೇಕೇ ಹೊರತು ರಂಗದ ಒಳಗಿನ ಕಲಾವಿದರಿಂದ ಆಗಲಾರದ್ದು ಎನ್ನುತ್ತಾರೆ. ತಿಟ್ಟುಗಳ ಸಾಂಪ್ರದಾಯಿಕತೆ, ವೈಶಿಷ್ಟ್ಯ ಉಳಿದು ಬರಬೇಕೆಂಬ ಕಳಕಳೀ ಎಲ್ಲಾ ಕಲಾವಿದರಲ್ಲೂ ಇದೆ. ಅದೇ ಬಗೆಯಲ್ಲಿ ಹಳೆಯ ಬಗೆಯ ವೇಷಗಾರಿಕೆ, ಕುಣಿತದ ಶೈಲಿ, ಮಾಯವಾಗುತ್ತಿರುವುದರ ಬಗ್ಗೆ ವ್ಯಸನವೂ ಇದೆ.

ಜಾನಪದ-ಶಾಸ್ತ್ರೀಯ:

ಯಕ್ಷಗಾನ ಕಲೆ ಜಾನಪದೀಯವೇ? ಶಾಸ್ತ್ರೀಯವೆ? ಎಂಬ ಚರ್ಚೆ ಕಳೆದ ಇಪ್ಪತ್ತು ವರ್ಷಗಳಿಂದ ನಡೆಯುತ್ತಾ ಬಂದಿದೆ. ವಿದ್ವಾಂಸರುಗಳು ಸಾಕಷ್ಟು ವಾದ ವಿವಾದ ನಡೆಸಿದ್ದಾರೆ: ಸಭಾ ಲಕ್ಷಣದ ಕ್ರಮಬದ್ಧ ಸಂಪ್ರದಾಯಗಳು, ಶಾಸ್ತ್ರೀಯ ರಾಗತಾಳಗಳು, ಶ್ರಮಪೂರ್ಣ ವೇಷಗಾರಿಕೆ ಇವೆಲ್ಲ ಇರುವುದರಿಂದ ಇದು ಶಾಸ್ತ್ರೋಕ್ತ ಎಂದು ಭಾವಿಸುವ ಕಲಾವಿದರಿದ್ದಾರೆ. ಇಲ್ಲಿನ ಅಚ್ಚುಕಟ್ಟು ವ್ಯವಸ್ಥೆ, ವಿಧಿ ವಿಧಾನಗಳೇ ಅವರು ಕೊಡುವ ಸಮರ್ಥನೆಗಳಾಗಿವೆ. ಕೆಲವರು ಜಾನಪದವೆಂದರೆ ಗ್ರಾಮ್ಯ, ಪಾಮರರದ್ದು ಎಂಬ ಭಾವನೆ ತಳೆದಂತಿದೆ. ಶಂಕರ ನಾರಾಯಣ ಸಾಮಗ, ಮಂಡೆಚ್ಚರು ಯಕ್ಷಗಾನ ಜನರ ಉದ್ಧಾರಕ್ಕೆ ಇರುವ ಶಾಸ್ತ್ರೀಯ ಕಲೆ ಎಂದು ಬಗೆದಿದ್ದಾರೆ. ಉಪ್ಪೂರ, ಕುಂಜಾಲು, ಮಹಾಬಲ ಹೆಗಡೆ ಮುಂತಾದವರು ಜಾನಪದ ಚೌಕಟ್ಟಿನಲ್ಲಿ ಒಡಮೂಡಿದ ಜನರಿಗಾಗಿರುವ ಕಲೆ ಎನ್ನುತ್ತಾರೆ. ಕೆರೆಮನೆ ಶಂಭು ಹೆಗಡೆಯವರು ಪರಂಪರಾಗತವಾದ ಕಲಿಕೆ ಪ್ರಧಾನವಾಗಿರುವ ಪಾರಂಪರಿಕ ಕಲೆಯೆಂದು ಪರಿಗಣಿಸಿದ್ದಾರೆ. ದೇಶೀಯವಾದ ಈ ಕಲಾ ಸಂಪ್ರದಾಯದಲ್ಲಿ ಪರಂಪರೆಯಿಂದ ಬಂದಿರುವ ಅಂಶಗಳೊಂದಿಗೆ ಜನಪದರ ಕಲ್ಪನಾ ವಿಲಾಸಗಳು ಕಾಲದಿಂದ ಕಾಲಕ್ಕೆ ಸೇರ್ಪಡೆಯಾಗಿ ಬಂದಿವೆ. ರಾಮಚಂದ್ರ ನಾವಡರು ಯಕ್ಷಗಾನದ ಮೂಲ ಹೂವಿನ ಕೋಲಿನಿಂದ ಆಗಿರಬಹುದು ಎಂದು ಊಹಿಸಿದ್ದಾರೆ. ಹಿಂದಿನ ಪ್ರದರ್ಶನಗಳಿಗೆ ಹೋಲಿಸಿದರೆ ಈಗ ಯಕ್ಷಗಾನ ಹೆಚ್ಚು ಮಾರ್ಗಶೈಲಿಗೆ ಹೊರಳುತ್ತಿದೆ ಎಂಬುದು ಕೆಲವರ ಅನಿಸಿಕೆ. ನೂತನ ರಂಗಸ್ಥಳ ನಿರ್ಮಾಣ, ಬೆಳಕು ವ್ಯವಸ್ಥೆಯಲ್ಲಿನ ಮಾರ್ಪಾಡು, ಧ್ವನಿವರ್ಧಕ ಸೌಲಭ್ಯ ಇತ್ಯಾದಿ ಬದಲಾವಣೆಗಳೊಂದಿಗೆ ಬಳಸುವ ಬಣ್ಣಗಳಲ್ಲಿ, ಉಡುವ ಬಟ್ಟೆಗಳಲ್ಲಿ, ತೊಡುವ ಆಭರಣಗಳಲ್ಲಿ ಮಾರ್ಪಾಡುಗಳಾಗಿವೆ. ಇವು ಜನಪದೀಯ ಕಲೆಗೆ ಮಾರಕ ಎನ್ನುವವರೂ, ಜೀವಂತಿಕೆಗೆ, ಚಲನಶೀಲತೆ ಅಗತ್ಯ ಎನ್ನುವವರೂ ಇದ್ದಾರೆ.

ತಾಳಮದ್ದಲೆ :

ಯಕ್ಷಗಾನದ ಒಂದು ಪ್ರಕಾರವಾದ ತಾಳಮದ್ದಲೆ ಕರಾವಳಿ ಹಾಗೂ ಮಲೆನಾಡಿನಲ್ಲಿ ಜೀವಂತವಾಗಿದೆ. ಹೆಚ್ಚಾಗಿ ಮಳೆಗಾಲದಲ್ಲಿ ನಡೆಯುವ ತಾಳಮದ್ದಲೆಯಲ್ಲಿ ಅರ್ಥಧಾರಿಗಳಿಗೇ ಅಗ್ರಸ್ಥಾನ. ಯಕ್ಷಗಾನ ಪ್ರಸಂಗವನ್ನೇ ಆಧರಿಸಿ ಪ್ರಸ್ತುತವಾಗುವ ಈ ಪ್ರಕಾರದಲ್ಲಿ ಕುಣಿತ, ವೇಷಗಾರಿಕೆ, ಅಭಿನಯಗಳಿರುವುದಿಲ್ಲ. ಮಾತೇ ಇಲ್ಲಿ ಪ್ರಾಧಾನ್ಯ. ಭಾಗವಹಿಸುವ ಕಲಾವಿದರು ಒಂದೆಡೆ ಕಲೆಯುತ್ತಾರೆ. ಅವರವರಲ್ಲೇ ಪಾತ್ರಗಳ ಹಂಚಿಕೆಯಾಗುತ್ತದೆ. ಭಾಗವತನು ಹಾಡಿದ ಹಾಡಿನ ಅರ್ಥವನ್ನು ವಿಸ್ತರಿಸಿ ಶ್ರೋತೃಗಳ ಮುಂದೆ ಇಡುತ್ತಾರೆ. ಹಿಂದೆ ಹಾಡಿಗಷ್ಟೇ ಅರ್ಥ ಇದ್ದದ್ದು ಹೋಗಿ ವಾದ-ವಿವಾದ ನಡೆಸುವ ರಂಗವಾಯಿತು. ಈ ರಂಗಕ್ಕೆ ಹರಿದಾಸರುಗಳ ಆಗಮನದಿಂದ ತಾಳಮದ್ದಲೆ ಇನ್ನಷ್ಟು ಜನಪ್ರಿಯವಾಯಿತು. ಇದರಿಂದ ಪಾತ್ರದ ಶೀಲ ಸ್ವಭಾವಗಳು ಸ್ಫುಟವಾಗಲು ಪ್ರಾರಂಭವಾದವು. ಈಚೆಗೆ ಹರಿದಾಸರುಗಳಂತೆ ಅನೇಕ ಬಗೆಯ ವಿದ್ವಾಂಸರುಗಳು ಈ ರಂಗವನ್ನು ಪ್ರವೇಶಿಸಿದ್ದಾರೆ. ಇದರಿಂದಾಗಿ ಸಾಹಿತ್ಯಕ ಮೌಲ್ಯಗಳು ತಾಳಮದ್ದಲೆಗಳಲ್ಲಿ ಹಿರಿದಾಗುತ್ತಿವೆ. ಹವ್ಯಾಸಿಗಳ ಪಾತ್ರವಂತೂ ಇಲ್ಲಿ ವಿಶೇಷವಾಗಿದೆ.

ಇವತ್ತು ತಾಳಮದ್ದಲೆಯ ಅರ್ಥಗಾರಿಕೆ ಹೇಗಿರಬೇಕೆಂಬ ಬಗ್ಗೆ ಚರ್ಚೆ ನಡೆಯುತ್ತಿದೆ. ಈ ಬಗ್ಗೆ ವಿಚಾರ ಸಂಕಿರಣಗಳು, ಗೋಷ್ಠಿ, ವಿಶ್ಲೇಷಣೆಗಳು ನಡೆಯುತ್ತಿವೆ. ಇಲ್ಲಿ ಸಂದರ್ಶನಗೊಂಡವರು ಹಿರಿಯ ಅರ್ಥಧಾರಿಗಳಾದ ಕೀರಿಕ್ಕಾಡು ಮಾಸ್ತರ್ ವಿಷ್ಣುಭಟ್, ಸಾಮಗ ಸಹೋದರರು, ಶೇಣಿ, ಕುಂಬಳೆ, ಕೋಳ್ಯೂರರು ಇದ್ದಾರೆ. ಇವರೆಲ್ಲರೂ ತಮ್ಮ ವೈಶಿಷ್ಟ್ಯಮಯ ಅರ್ಥಗಾರಿಕೆಯ ಮೂಲಕ ತಮ್ಮದೇ ಆದ ಛಾಪನ್ನು ಕೊಟ್ಟವರು. ಅರ್ಥಗಾರಿಕೆ ಪ್ರಸಂಗದ ಪದ್ಯಗಳ ಒಳ ಅರ್ಥಗಳನ್ನು ಸ್ಫುರಿಸುವಂತಿರಬೇಕು. ಕೇವಲ ವಾದಕ್ಕಾಗಿ ಮಾತುಗಳು ಬಾರದೆ ಪಾತ್ರಗಳ ಸ್ವಭಾವವನ್ನು ಬಿತ್ತರಿಸುವಂತೆ, ಕಥಾನಕದ ಒಟ್ಟು ಶಿಲ್ಪಕ್ಕೆ ಪೂರಕವಾಗುವಂತೆ ಇರಬೇಕೆಂಬುದು ಇವರೆಲ್ಲರ ಅಭಿಪ್ರಾಯವಾಗಿದೆ. ಇವರಲ್ಲಿ ಕೆಲವರು ತಾಳಮದ್ದಲೆಯಿಂದ ಯಕ್ಷಗಾನ ಬಯಲಾಟಕ್ಕೆ ಪ್ರವೇಶಿಸಿದವರಾಗಿದ್ದಾರೆ. ತಾಳಮದ್ದಲೆಗೆ ಉಜ್ವಲ ಭವಿಷ್ಯವಿದೆ ಎಂದು ಕೀರಿಕ್ಕಾಡು ಅವರು ಅಭಿಪ್ರಾಯಿಸಿದ್ದಾರೆ. ಕೀರಿಕ್ಕಾಡು ಅವರು ಅನೇಕ ಕೂಟಗಳಲ್ಲಿ ಮಿಂಚಿದವರು. ಅದೇ ರೀತಿ ಅನೇಕ ಶಿಷ್ಯರನ್ನು ಈ ರಂಗಕ್ಕೆ ತಂದವರು. ಇವತ್ತಿನ ದಿನ ಪ್ರಭಾಕರ ಜೋಷಿ, ಮುಳಿಯ ಮಹಾಬಲ ಭಟ್, ಪೆರ್ಲ ಕೃಷ್ಣ ಭಟ್, ಅಂಬಾತನಯ ಮುದ್ರಾಡಿ, ರಮಾನಂದ ಬನಾರಿ ಮುಂತಾದವರ ಮುಂತಾದವರು ಹವ್ಯಾಸಿ ಅರ್ಥಧಾಗರಿಗಳಾಗಿ ಮೆರೆಯುತ್ತಿದ್ದಾರೆ. ಪ್ರಸಂಗ ಕೃತಿಯೊಂದರ ಸಮಗ್ರ ಆಶಯವನ್ನು ಕೂಟದಲ್ಲಿ ಬಿಂಬಿಸಬೇಕೆಂಬ ಪ್ರಜ್ಞೆ ಮೊಳೆತಾಗ ಮಾತ್ರ ತಾಳಮದ್ದಲೆ ಸಾರ್ಥಕವಾಗಬಲ್ಲದು.

ಹಿರಿಯ ಅರ್ಥಧಾರಿಗಳಾಗಿ ಖ್ಯಾತಿಗೊಂಡಿದ್ದ ದಿ. ನಾರಾಯಣ ಕಿಲ್ಲೆ, ಪೊಳಲಿ ಶಂಕರ ನಾರಾಯಣ ಶಾಸ್ತ್ರಿ, ಅರ್ಕುಳ ಸುಬ್ರಾಯಾಚಾರ್, ವೆಂಕಪ್ಪ ಶೆಟ್ಟಿ ಮುಂತಾದ ಗಣ್ಯರನ್ನು ಇಲ್ಲಿನಕಲಾವಿದರು ಗೌರವದಿಂದ ನೆನೆದಿದ್ದಾರೆ.

ಕಾರಂತರು-ಯಕ್ಷಗಾನ :

ಕನ್ನಡದ ಖ್ಯಾತ ಸಾಹಿತಿ ಡಾ॥ ಶಿವರಾಮ ಕಾರಂತರು ಯಕ್ಷಗಾನ ರಂಗವನ್ನು ಪ್ರವೇಶಿಸಿ ನಲ್ವತ್ತು-ನಲವತ್ತೈದು ವರ್ಷಗಳೇ ಸಂದಿವೆ. ಈ ರಂಗದಲ್ಲಿ ಅವರು ನಡೆಸಿದ ನಿರಂತರ ಪ್ರಯೋಗ ಹಾಗೂ ಮಾಡಿದ ಸಾಧನೆಗಳಿಂದ ಯಕ್ಷಗಾನಕ್ಕಿಂದು ಅಂತಾರಾಷ್ಟ್ರೀಯ ಮನ್ನಣೆ ದೊರೆತಿದೆ. ಕಾರಂತರು ಪಟ್ಟ ಶ್ರಮ ಸಾಧಾರಣದ್ದೇನೂ ಅಲ್ಲ. ಮೊದಲ ಹತ್ತಿಪ್ಪತ್ತು ವರ್ಷಗಳ ಕಾಲ ಇಲ್ಲಿನ ಕಲಾವಿದರೊಂದಿಗೆ ತಾವೂ ಸೇರಿಕೊಂಡರು. ಯಕ್ಷಗಾನದ ಉಗಮ, ವಿಕಾಸ, ನೆಲೆಬೆಲೆಗಳ ಬಗ್ಗೆ ತಮ್ಮ ಪ್ರಾಮಾಣಿಕ ವಿಶ್ಲೇಷಣೆಯನ್ನು ಮುಂದಿಟ್ಟರು. ಅನೇಕ ಪ್ರಸಂಗ ಕೃತಿಗಳನ್ನು, ಕೃತಿಕಾರರನ್ನು ಮೊದಲ ಬಾರಿಗೆ ಪರಿಚಯಿಸಿದರು. ಅವರ ಸಾಹಸ ಹಾಗೂ ನಿಷ್ಠೆಯ ಫಲವಾಗಿ ಕನ್ನಡ ಸಾರಸ್ವತ ಲೋಕಕ್ಕೆ "ಯಕ್ಷಗಾನ ಬಯಲಾಟ" ದಂತಹ ಸಂಶೋಧನಾ ಪೂರ್ಣ ವಿದ್ವತ್ ಕೃತಿ ಲಭ್ಯವಾಯಿತು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಈ ಕೃತಿ ಗಳಿಸಿಕೊಟ್ಟಿತು. ಪಾರ್ತಿಸುಬ್ಬನ ದೇಶ ಕಾಲ ವಿಚಾರವಾಗಿ ಇವರು ಮಂಡಿಸಿದ ವಾದ ಸಾಕಷ್ಟು ಚರ್ಚೆಗೆ ಕಾರಣವಾಯಿತು. ರಾಮಾಯಣ ಪ್ರಸಂಗಗಳ ಕವಿಯ ಸ್ಥಳ ವಿಚಾರ ತಪ್ಪಾದರೂ ರಚನೆಯ ಕಾಲಕ್ಕೆ ಸಂಬಂಧಿಸಿದ ಅವರ ಊಹೆ ಇಂದು ನಿಜವಾಗಿದೆ. ಕಾರಂತರು ಪ್ರಯೋಗ ನಡೆಸಿದ ಕಾಲವನ್ನು ಬಡಗು ತಿಟ್ಟಿನ ಸುವರ್ಣಯುಗವೆನ್ನಬಹುದು. ಆ ಸಂದರ್ಭದಲ್ಲೇ ಅವರು ಅನೇಕ ಜನ ಯುವ ಕಲಾವಿದರಿಗೆ ತರಬೇತಿ ಕೊಟ್ಟರು. ಕುಣಿತ ಹಾಗೂ ಅಭಿನಯದಲ್ಲಿ ಪದ್ಯದ ಭಾವವನ್ನು ಮಿಂಚಿಸಬೇಕಾದ ಬಗೆಯನ್ನು ಹಾಡುವಿಕೆಯಲ್ಲಿ ಭಾವನೆಗಳನ್ನು ಮೇಳೈಸುವ ಪರಿಯನ್ನು ತೋರಿಸಿಕೊಟ್ಟರು. ಇದರಿಂದ ಅನೇಕ ಬಡಗು ತಿಟ್ಟಿನ ಕಲಾವಿದರು ಸೂಕ್ಷ್ಮಜ್ಞರಾದರು. ಹೊಸ ವಿಚಾರಗಳಿಂದ ಶ್ರೀಮಂತರಾದರು. ಇಲ್ಲಿ ಸಂದರ್ಶಿತರಾದವರಲ್ಲಿ ನಾರಣಪ್ಪ ಉಪ್ಪೂರ, ರಾಮಚಂದ್ರ ನಾವಡ, ಗೋಪಾಲ ರಾವ್, ಕೋಟ ವೈಕುಂಠ, ಮಹಾಬಲ ಹೆಗಡೆ ಮುಂತಾದವರೆಲ್ಲ ಕಾರಂತರಿಂದ ಪ್ರತ್ಯಕ್ಷ ತರಬೇತಿ ಪಡೆದವರು. ಕಾಳಿಂಗ ನಾವಡರು ಪರೋಕ್ಷವಾಗಿ ಉಪಕೃತರಾದವರು. ಇವರೆಲ್ಲರೂ ಕಾರಂತರ ಮಾರ್ಗದರ್ಶನಕ್ಕೆ ಋಣಿಗಳಾಗಿದ್ದಾರೆ. ಅವರ ಮಾರ್ಗದರ್ಶನದಿಂದ ಅನುಕೂಲವಾಯಿತೆಂದು ತಿಳಿಸಿದ್ದಾರೆ.

ಹಿರಿಯಡ್ಕ ಗೋಪಾಲ ರಾವ್ ಕಾರಂತರೊಂದಿಗೆ ಸಾಕಷ್ಟು ಕಾಲ ಒಡನಾಡಿದವರು. ಕಾರಂತರ ಶಿಷ್ಯೆಯಾಗಿ ಯಕ್ಷಗಾನದ ಬಗ್ಗೆ ಸಂಶೋಧನೆ ನಡೆಸಿದ ಶ್ರೀಮತಿ ಮಾರ್ಥಾ

ಆಸ್ಟಿನ್ ಅವರಿಗೆ ಈ ಕಲೆಯನ್ನು ಇವರೇ ಕಲಿಸಿಕೊಟ್ಟರು. "ಅದ್ವಿತೀಯ ಕಲಾಕಾರರಾದ ಕಾರಂತರ ಪ್ರಯೋಗಗಳು ಇನ್ನೂ ಈ ರಂಗದಲ್ಲಿ ನಿಶ್ಚಿತ ಫಲವನ್ನು ನೀಡಿಲ್ಲ" ಎಂಬುದೇ ಗೋಪಾಲ ರಾಯರ ಅಭಿಪ್ರಾಯವಾಗಿದೆ. ಡಾ॥ ಕಾರಂತರಿಂದಲೇ ಯಕ್ಷಗಾನ ಇಂದು ವಿಶ್ವಮಾನ್ಯವಾಯಿತು ಎಂಬುದನ್ನು ತೆಂಕುತಿಟ್ಟಿನ ಕಲಾವಿದರೂ ಒಪ್ಪಿಕೊಳ್ಳುತ್ತಾರೆ. ಕಾರಂತರ ಪ್ರತಿಭೆ ಯಕ್ಷಗಾನಕ್ಕೆ ದೊರೆತದ್ದು ಭಾಗ್ಯ ಎಂಬುದೇ ಒಟ್ಟಾರೆ ಅಭಿಪ್ರಾಯವಾಗಿದೆ. ಸಂಶೋಧಕರಾಗಿ ಬಂದ ಕಾರಂತರು ಯಕ್ಷಗಾನದ ಸುಧಾರಕರಾದರು, ಅರವತ್ತರ ದಶಕದಲ್ಲಿ ಪ್ರಾರಂಭಿಸಿದ ಅವರ "ಬ್ಯಾಲೆ" ಮಾದರಿಯ ಯಕ್ಷರಂಗ ಪ್ರದರ್ಶನಗಳು ಅನೇಕರ ಟೀಕೆಗೆ ಗುರಿಯಾದವು. ಕನ್ನಡಿಗರಲ್ಲದವರಿಗೂ ಈ ಕಲೆಯ ಸವಿ ದೊರಕಬೇಕೆಂಬ ಬಯಕೆ ಹಾಗೂ ಸಂಗೀತ, ಕುಣಿತ, ಅಭಿನಯಗಳ ಮೂಲಕವೇ ಕಲೆಯ ಸಾಕ್ಷಾತ್ಕಾರ ಸಾಧ್ಯ ಮಾಡಿಸಬೇಕೆಂಬ ಛಲವೇ ಅವರನ್ನು ಈ ಪ್ರಯೋಗಕ್ಕೆ ಎಳೆಸಿತು. ಆ ಕಾಲದಲ್ಲಿ ಬಡಗುತಿಟ್ಟು ಹೆಚ್ಚು ಸಂಪ್ರದಾಯಕ್ಕೆ ಅಂಟಿಕೊಳ್ಳಲು ಕಾರಂತರ ಪ್ರಯೋಗಗಳು ಪರೋಕ್ಷವಾಗಿ ಕಾರಣವಾದವು. ಕಾರಂತರು "ಯಕ್ಷರಂಗ"ದ ಮೂಲಕ ನೃತ್ಯ ಗತಿಯ ವೈಶಿಷ್ಟ್ಯವನ್ನು, ಬಣ್ಣಗಾರಿಕೆಯ ಹಿರಿಮೆಯನ್ನು ಹಾಗೂ ವೇಷಗಾರಿಕೆಯ ಹಿನ್ನೆಲೆಯನ್ನು ಕಲಾಸಕ್ತರಿಗೆ ಪರಿಚಯಿಸಿದರು. ಸಾಂಪ್ರದಾಯಿಕ ವಿಶೇಷತೆಯನ್ನು ವಿಶ್ಲೇಷಣಾತ್ಮಕ ದೃಷ್ಟಿಯಿಂದ ಚರ್ಚಿಸಿದರು. ಯಕ್ಷಗಾನದಲ್ಲಿ ಮಾತುಗಾರಿಕೆಯೊಂದೇ ದೊಡ್ಡದು ಎಂಬ ಭಾವನೆ ಬರುವುದನ್ನು ತಡೆಗಟ್ಟಲು ಪ್ರಯತ್ನಿಸಿದರು. ಇದೆಲ್ಲದರ ಫಲವಾಗಿ ವಿದ್ಯಾವಂತರಲ್ಲಿ, ಹವ್ಯಾಸಿಗಳಲ್ಲಿ ಈ ಕಲೆಯ ಬಗೆಗೆ ಎಚ್ಚರ, ಜಾಗೃತಿ ಬರುವಂತಾಯಿತು. ಕನ್ನಡಿಗರೆಲ್ಲರಿಗೂ ಯಕ್ಷಗಾನ ಕರ್ನಾಟಕದ ಹೆಮ್ಮೆಯ ಕಲೆ ಎಂಬ ಭಾವನೆ ಉದಿಸಲು ಕಾರಂತರು ಕಾರಣರಾದರು. ಈಗ ಉಡುಪಿಯ ಯಕ್ಷಗಾನ ಕಲಾಕೇಂದ್ರದ ಮೇಳಕ್ಕೆ ನಿರ್ದೇಶಕರಾಗಿ ಯಕ್ಷಗಾನದ ಶುದ್ಧ ಸ್ವರೂಪದ ಪ್ರದರ್ಶನಕ್ಕೆ ಡಾ॥ ಕಾರಂತರು ಶ್ರಮಿಸುತ್ತಿದ್ದಾರೆ.

ಒಟ್ಟಿನಲ್ಲಿ ಯಕ್ಷಗಾನ ಕಲೆ ಇಂದು ಸಂಕೀರ್ಣ ರೂಪವನ್ನು ಪಡೆದುಕೊಳ್ಳುತ್ತಿದೆ. ಒಂದೆಡೆ ವ್ಯಾಪಾರೀ ಧೋರಣೆಯಿಂದ ಕಮರ್ಷಿಯಲ್ ಚಿತ್ರದ ವಿಕೃತ ನಕಲಾಗುತ್ತಿದೆ. ಕೆಲವು ಮೇಳಗಳ ಕೆಲವು ಪ್ರದರ್ಶನಗಳನ್ನು ನೋಡಿದಾಗ ಈ ಭಾವನೆ ಉದಿಸುವುದು ಸಹಜ, ಆದರೆ ಇಷ್ಟೇ ಪ್ರಮಾಣದಲ್ಲಿ ಇದಕ್ಕೆ ವಿರೋಧವೂ ವ್ಯಕ್ತವಾಗುತ್ತಿದೆ. ವಿದ್ಯಾವಂತ ಕಲಾಸಕ್ತರ ಸಂಖ್ಯೆ ಹೆಚ್ಚಿದೆ. ಹವ್ಯಾಸಿಗಳು ಈ ಕಲೆಯಲ್ಲಿ ಶುಚಿರುಚಿಯನ್ನು ಬಯಸುತ್ತಿದ್ದಾರೆ. ಕಲಾವಿದರಲ್ಲೂ ಪರಂಪರೆಯ ಬಗ್ಗೆ ಗೌರವವಿದೆ. ಬಯಲಾಟದ ಮೇಳಗಳು ಇನ್ನೂ ಜೀವಂತವಿವೆ. ಹರಕೆಯ ಆಟಗಳನ್ನು ಆಡುತ್ತಿವೆ. ಕಲಾವಿದರಲ್ಲಿ ತಾರಾಮೌಲ್ಯಕ್ಕಾಗಿರುವ ಪೈಪೋಟಿ ಆರೋಗ್ಯ ಪೂರ್ಣವಾಗಬೇಕಾದ ಅಗತ್ಯವಿದೆ. ಈ ಬಗ್ಗೆ ಆಸಕ್ತರು ಹಿರಿಯ ಕಲಾವಿದರಿಗೆ ಮನವರಿಕೆ ಮಾಡಬೇಕಾದ ಕಾಲ ಬಂದಿದೆ.

ಸರಕಾರವೂ ಕೂಡ ಈ ಪಾರಂಪರಿಕ ಕಲೆಯ ಉಳಿವಿಗೆ ಚಿಂತಿಸಬೇಕು. ಕೆಲವೊಮ್ಮೆ ರಚನಾತ್ಮಕ ಯೋಜನೆಗಳನ್ನು ರೂಪಿಸಬೇಕು. ಕೇವಲ ಮಾಸಾಶನ, ಪ್ರಶಸ್ತಿಗಳಷ್ಟಕ್ಕೆ ಸರಕಾರದ ಕಾರ್ಯ ಸೀಮಿತವಾಗಬಾರದು.

ಯಕ್ಷಗಾನ ಕರ್ನಾಟಕದ ಎಲ್ಲಾ ಜನತೆಯ ಹೆಮ್ಮೆಯ ಕಲೆ. ಇದು ಅತ್ತ ಮ್ಯೂಸಿಯಂ ಸ್ವತ್ತಾಗದಂತೆಯೂ. ಇತ್ತ ವ್ಯಾಪಾರೀ ಸರಕಾಗದಂತೆಯೂ ನೋಡಿಕೊಳ್ಳುವುದು ಎಲ್ಲಾ ಜನರ ಹೊಣೆ, ಅದರಲ್ಲೂ ಯಕ್ಷಗಾನದಲ್ಲಿ ದುಡಿಯುತ್ತಿರುವವರ ಹಾಗೂ ಆಸಕ್ತರ ಹೊಣೆಗಾರಿಕೆ ಹೆಚ್ಚಿನದು. ಕಲೆ ಜನ ಜೀವನದ ಪ್ರತಿಬಿಂಬ, ನಮ್ಮ ಜೀವನದೃಷ್ಟಿ ಶುದ್ಧವಾದಷ್ಟು ನಮ್ಮ ಕಲೆ ಶುದ್ಧವಾಗಬಲ್ಲದು. ನಮ್ಮ ಹಿರಿಯರ ಶ್ರೀಮಂತ ಬದುಕು ಯಕ್ಷಗಾನವನ್ನು ಶ್ರೀಮಂತ ಕಲೆಯಾಗಿಸಿದೆ. ಅದು ಮುಂದುವರಿಯುವಂತೆ ನೋಡಿಕೊಳ್ಳುವ ಹೊಣೆ ನಮ್ಮದಾಗಿದೆ. ಮುಂದಿನ ಪೀಳಿಗೆಗೂ ಈ ಶ್ರೀಮಂತ ಕಲೆ ಮುಂದುವರಿಯುವಂತೆ ನೋಡಿಕೊಳ್ಳುವುದೇ ಎಲ್ಲಾ ಯಕ್ಷಗಾನದ ಅಭಿಮಾನಿಗಳ ಕರ್ತವ್ಯ.

■

ಮರುವಿಚಾರ ಮತ್ತು ಮರುಸಮೀಕ್ಷೆ

'ಯಕ್ಷದರ್ಶನ'ದ ಮೊದಲ ಮುದ್ರಣವಾಗಿ ಮೂವತ್ತೈದು ವರ್ಷಗಳು ಸಂದಿವೆ. ಆಗ ಪರಿಚಯಿಸಲ್ಪಟ್ಟ ಮತ್ತು ಸಂದರ್ಶನ ನೀಡಿದ ಹೆಚ್ಚಿನ ಕಲಾವಿದರು ಇಂದಿಲ್ಲ. ಎರಡನೆಯ ಮುದ್ರಣದ ಈ ಸಂದರ್ಭದಲ್ಲಿ ಕಲಾವಿದರ ಕಲಾ ಬದುಕಿನ ಮುಂದಿನ ದಿನಗಳನ್ನು ಪರಿಚಯಿಸುವುದು ಹಾಗೂ ಅವರ ಬಾಳಿನಲ್ಲಿ ನಡೆದ ಘಟನೆಗಳನ್ನು ತಿಳಿಸುವುದು ಅಗತ್ಯ. ಹಿಂದೆ ಅವರು ತಿಳಿಸಿದ ವಿಚಾರಗಳು ಈಗಿನ ದಿನಮಾನದಲ್ಲಿ ಪಡಿಮೂಡಿದ ಬಗ್ಗೆ ವಿವರಿಸುವುದು ಕೂಡ ಮುಖ್ಯ. ಆದಕಾರಣ ಪರಿವಿಡಿಯಲ್ಲಿ ಬಂದ ಕ್ರಮದಲ್ಲೇ ಪ್ರತಿಯೊಬ್ಬ ಕಲಾವಿದರ ಕುರಿತ ವಿಚಾರಗಳನ್ನು ಇಲ್ಲಿ ಕೊಡಲಾಗಿದೆ. ಸಮೀಕ್ಷೆ ನಡೆದು ಮೂರುವರೆ ದಶಕಗಳೇ ಗತಿಸಿರುವುದರಿಂದ ಇಂದಿನ 'ಬದಲಾದ ಕಾಲ' ದ ಯಕ್ಷಗಾನ ರಂಗದಲ್ಲಿನ ಸ್ಥಿತಿಗತಿಗಳ ಕುರಿತು ಮತ್ತು ಕಲಾವಿದರ ಚಿಂತನೆಗಳು ಮರುಹುಟ್ಟು ಪಡೆದದ್ದರ ಸಮೀಕ್ಷೆಯನ್ನು ಇಲ್ಲಿ ನಡೆಸಲಾಗಿದೆ. ಈ ಮೂಲಕ ಪರಿಷ್ಕೃತ ಮುದ್ರಣಕ್ಕೆ ಸಮಗ್ರತೆಯೊಂದನ್ನು ತರಲು ಪ್ರಯತ್ನಿಸಲಾಗಿದೆ.

1. ನಾರಣಪ್ಪ ಉಪ್ಪೂರು

ದೈಹಿಕವಾಗಿ ನಾರಣಪ್ಪ ಉಪ್ಪೂರರು ಇಂದು ಯಕ್ಷಗಾನದಲ್ಲಿ ಇಲ್ಲವಾದರೂ ಅವರ ನೆನಪುಗಳು ಇಂದಿಗೂ ಈ ರಂಗದಲ್ಲಿ ಜೀವಂತವಾಗಿದೆ. ಅವರ ನೆನಪಿಗಾಗಿ

ಉಪ್ಪೂರ ಶಿಷ್ಯರು, ಅಭಿಮಾನಿಗಳು, ಕುಟುಂಬವರ್ಗದವರು ಸಾಕಷ್ಟು ಕಾರ್ಯಗಳನ್ನು ನಡೆಸಿದ್ದಾರೆ. 1998ರಲ್ಲಿ ಉಡುಪಿ ಯಕ್ಷಗಾನ ಕಲಾರಂಗದವರು ಉಪ್ಪೂರರ ಹೆಸರಿನಲ್ಲಿ ಪ್ರಶಸ್ತಿಯೊಂದನ್ನು ಸ್ಥಾಪಿಸಿ ಪ್ರತಿವರ್ಷ ಒಬ್ಬ ಕಲಾಸಾಧಕರಿಗೆ ಪ್ರಶಸ್ತಿ ನೀಡಿ ಗೌರವಿಸುತ್ತಿದ್ದಾರೆ. 1998ರಲ್ಲೇ ಯಕ್ಷಗಾನಕವಿ, ವಿದ್ವಾಂಸ ಹಾಗೂ ಸಂಶೋಧಕರಾದ ಡಾ॥ ಶ್ರೀಧರ ಉಪ್ಪೂರರು ಕಿರುಹೊತ್ತಿಗೆಯನ್ನು ಅವರ ಕುರಿತು ಬರೆದಿದ್ದಾರೆ. "ಭಾಗವತ ನಾರ್ಣಪ್ಪ ಉಪ್ಪೂರ" ಎಂಬ ಈ ಕೃತಿಯನ್ನು ದಿಗಂತ ಸಾಹಿತ್ಯದವರು ಪ್ರಕಟಿಸಿದ್ದಾರೆ. ಖ್ಯಾತ ಲೇಖಕರು, ಪತ್ರಕರ್ತರೂ ಆಗಿರುವ ನಾಗರಾಜ ಮತ್ತಿಗಾರರು 2016ರಲ್ಲಿ 'ಪ್ರಾಚಾರ್ಯ ಪಥ' ಎಂಬ ಕೃತಿಯನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಇದರಲ್ಲಿ ಉಪ್ಪೂರರ ಶಿಷ್ಯರು, ಅಭಿಮಾನಿಗಳು ಗುರುಗಳನ್ನ ನೆನಪು ಮಾಡಿಕೊಂಡು ಲೇಖನಗಳನ್ನು ಬರೆದಿದ್ದಾರೆ. 2017ರಲ್ಲಿ ಕೋಟ ಅಮೃತೇಶ್ವರಿ ದೇವಸ್ಥಾನದ ಮೇಳದವರು ಉಪ್ಪೂರರ ಹೆಸರಿನಲ್ಲಿ ಯಕ್ಷಗಾನ ಕಲಾವಿದರೊಬ್ಬರಿಗೆ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. 2017ರಲ್ಲಿ 'ಯಕ್ಷಗಾನ ಅಧ್ಯಯನ' ಕೃತಿ ಮರು ಮುದ್ರಣಗೊಂಡಿದೆ. 2018ನೇ ಇಸವಿಯಲ್ಲಿ ಭಾಗವತ ನಾರ್ಣಪ್ಪ ಉಪ್ಪೂರರ ಜನ್ಮ ಶತಮಾನೋತ್ಸವ ವರ್ಷ. ಇದರ ಅಂಗವಾಗಿ ಹದಿನೈದು ಕಡೆಗಳಲ್ಲಿ ಸರಣಿ ಕಾರ್ಯಕ್ರಮಗಳು ನಡೆದವು. ಮುಖ್ಯ ಸಮಾರಂಭದಲ್ಲಿ 'ಶತಸ್ಮೃತಿ' ಎಂಬ ನೂರರ ನೆನಪಿನ ಕೃತಿಯೊಂದು ಡಾ. ಶ್ರೀಧರ ಉಪ್ಪೂರರ ಸಂಪಾದಕತ್ವದಲ್ಲಿ ಲೋಕಾರ್ಪಣೆಗೊಳಿಸಲಾಯಿತು. ಇಲ್ಲಿ ಮುಖ್ಯವಾದ ಐದು ವಿಭಾಗಗಳಲ್ಲಿ ನೂರು ಲೇಖನಗಳು ಹರಡಿವೆ. ಅಭಿಮಾನದ ಲೇಖನಗಳು, ಅಭಿಜ್ಞಾನದ ಲೇಖನಗಳು, ಆತ್ಮೀಯ ಲೇಖನಗಳು, ಅನುಬಂಧದ ಲೇಖನಗಳು, ಅವಲೋಕನದ ಲೇಖನಗಳೆಂಬ ಪರಿಯಲ್ಲಿ ಉಪ್ಪೂರರ ಸಮಗ್ರ ವ್ಯಕ್ತಿಚಿತ್ರಣ ಹಾಗೂ ಮೇರುಸಾಧನೆಯ ಪರಿಚಯವಾಗುತ್ತದೆ. ಇದಲ್ಲದೆ ಆಧುನಿಕ ತಂತ್ರಜ್ಞಾನದಿಂದಾಗಿ 'ಗುರುಶಿಷ್ಯರು' 'ದೊಂದಿಬೆಳಕು' 'ಯಕ್ಷಗಾನ ಉತ್ಥಾನ' ಮುಂತಾದ ವಾಟ್ಸಫ್ ಬಳಗಗಳ ಮೂಲಕ ಉಪ್ಪೂರರ ಹಾಡುಗಾರಿಕೆ ದಿನವೂ ಅಭಿಮಾನಿಗಳ ಕಿವಿಗಳಿಗೆ ಸೇರುತ್ತಿದೆ. ಹೀಗೆ ನಾರ್ಣಪ್ಪ ಉಪ್ಪೂರರು ತಮ್ಮ ಭಾಗವತಿಕೆ ಮೂಲಕ ಅಜರಾಮರರಾಗಿದ್ದಾರೆ.

2. ರಾಮಚಂದ್ರ ನಾವಡ

ರಾಮಚಂದ್ರನಾವಡರ ಇಂಪಿನ ಕಂಠವನ್ನು ಬಡಗುತಿಟ್ಟಿನ ಜನ ಯಾವಾಗಲೂ ಆಪ್ತತೆಯಿಂದ ನೆನೆಯುತ್ತಾರೆ. ಕಾಳಿಂಗ ನಾವಡರ ಜೊತೆಯಲ್ಲಿ ಅವರ ತೀರ್ಥರೂಪರಾದ ರಾಮಚಂದ್ರನಾವಡರ ಹೆಸರು ಚಿರಸ್ಥಾಯಿಯಾಗಿದೆ. ದಿನಾಂಕ 14-08-1983ರಂದು ಬೆಂಗಳೂರಿನ ದಕ್ಷಿಣ ಕನ್ನಡಿಗರ ಸಂಘವು ಸನ್ಮಾನ ಪತ್ರ ನೀಡಿ ಗೌರವಿಸಿದೆ. ಅನಾರೋಗ್ಯವಿದ್ದರೂ 1988ರ ವರೆಗೂ ಅಲ್ಲಲ್ಲಿ ನಡೆದ ವಿಶೇಷ ಪ್ರದರ್ಶನಗಳಲ್ಲಿ

ಅತಿಥಿ ಕಲಾವಿದರಾಗಿ ಭಾಗವಹಿಸಿ ಸ್ವಲ್ಪ ಕಾಲ ಭಾಗವತಿಕೆ ಮಾಡಿದ್ದಾರೆ. ಸಾಲಿಗ್ರಾಮ ಮೇಳದ ಒಂದು ವಿಶೇಷ ಪ್ರದರ್ಶನದಲ್ಲಿ ಇವರು, ಇವರ ಮಕ್ಕಳಾದ ವಿಶ್ವನಾಥನಾವಡ ಹಾಗೂ ಕಾಳಿಂಗ ನಾವಡರು ಹೀಗೆ ಮೂವರು ಒಟ್ಟಿಗೆ ಭಾಗವತಿಕೆ ಮಾಡಿದ್ದು ವಿಶೇಷವಾಗಿತ್ತು. 1986ರಲ್ಲಿ ಬೈಲೂರು ಯಕ್ಷಗಾನ ಸಂಘದವರು ಸನ್ಮಾನ ಕಾರ್ಯಕ್ರಮ ಏರ್ಪಡಿಸಿ ಗೌರವಿಸಿದ್ದಾರೆ. ಲುಪ್ತವಾಗಿ ಹೋಗಿರುವ ಹಳೆಯ ಮಟ್ಟುಗಳ ಕುರಿತು ರಾಮಚಂದ್ರ ನಾವಡರು ಸಾಕಷ್ಟು ಪ್ರಾತ್ಯಕ್ಷಿಕೆ ನೀಡಿದ್ದಾರೆ 1985ರಲ್ಲಿ ತಮಿಳುನಾಡಿನ ಡಾ. ರಾಮನಾಥನ್ ಎನ್ನುವ ಸಂಗೀತ ವಿದ್ವಾಂಸರು ಆರಭಿ, ಮೋಹನ, ಮಧ್ಯಮಾವತಿ ಮುಂತಾದ ರಾಗಗಳ ತುಲನಾತ್ಮಕ ಅಭ್ಯಾಸಕ್ಕಾಗಿ ದಾಖಲೀಕರಣ ಮಾಡಿಸಿಕೊಂಡಿದ್ದಾರೆ. ಇದರಲ್ಲಿ ಕಾಳಿಂಗ ನಾವಡರು ಕೆಲವು ವಿಶಿಷ್ಟ ರಾಗಗಳನ್ನು ತಮ್ಮ ಧಾಟಿಯಲ್ಲಿ ಹಾಡಿದ್ದಾರೆ. ಶ್ರೀ ಮನೋಹರ ಕುಂದರ್ ಅವರು ನಾವಡರ ಛಾಯಾಗ್ರಹಣಗಳ ಪ್ರದರ್ಶನವೊಂದನ್ನು ನಡೆಸಿಕೊಟ್ಟಿದ್ದಾರೆ. ಗುಂಡ್ಮಿ ರಾಮಚಂದ್ರ ನಾವಡರು 19–11–1988ರಂದು ಇಹಲೋಕ ತ್ಯಜಿಸಿದರೂ, ಅವರ ಸುಶ್ರಾವ್ಯವಾದ ಗಾನದ ಗುಂಗನ್ನು ಅಭಿಮಾನಿಗಳು ಇಂದಿಗೂ ಸೀಡಿಯಲ್ಲಿ ಕೇಳುತ್ತಿರುತ್ತಾರೆ.

3. ದಾಮೋದರ ಮಂಡೆಚ್ಚ

1985ರ ನವೆಂಬರ್ 9ರಿಂದ 12 ರವರೆಗೆ ಶೇಣಿ ಗೋಪಾಲಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲಿ ದ್ವಿತೀಯ ಯಕ್ಷಗಾನ ಸಾಹಿತ್ಯ ಸಮ್ಮೇಳನವು ಮುಂಬಯಿನ ಗೋಕುಲ್ ಹಾಲ್ ನಲ್ಲಿ ನಡೆಯಿತು. ನವೆಂಬರ್ 11ರಂದು ರಾತ್ರಿ ನಡೆದ ಪ್ರದರ್ಶನದಲ್ಲಿ ಮಂಡೆಚ್ಚರು ರಂಗಸ್ಥಳದಲ್ಲಿ ಹಾಡುತ್ತಾ ಹೃದಯಾಘಾತಕ್ಕೆ ಗುರಿಯಾದರು. ಕಾರ್ಯಕ್ರಮ ಏರ್ಪಡಿಸಿದ್ದ ಮುಂಬಯಿ ಪದವೀಧರ ಸಂಘವು ಶ್ರೀ ಎಚ್.ಬಿ.ಎಲ್. ರಾವ್ ಅವರ ಪ್ರಧಾನ ಸಂಪಾದಕತ್ವದಲ್ಲಿ 'ಮಂದಾರ' ಎಂಬ ಮಂಡೆಚ್ಚರ ಸಂಸ್ಮರಣ ಗ್ರಂಥವನ್ನು 1986ರಲ್ಲಿ ಹೊರತಂದಿತು. ಆ ಗ್ರಂಥದಲ್ಲಿ ಕರ್ನಾಟಕ ಯಕ್ಷಗಾನ ನಾಟಕ ಸಭಾದ ಮುಖಸ್ಥರಾದ ಕೆ. ವಿಠಲಶೆಟ್ಟಿಯವರು ಮಂಡೆಚ್ಚರ ಎರಡು ದಶಕಗಳ ಕಾಲ ಆ ಮೇಳದೊಂದಿಗಿದ್ದ ಒಡನಾಟವನ್ನು ಆಪ್ತತೆಯಿಂದ ಸ್ಮರಿಸಿಕೊಂಡಿದ್ದಾರೆ. ಅದೇ ರೀತಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿ ಮಂಡೆಚ್ಚರು ಮಾಡಿದ ಸೇವೆಯನ್ನು ಶ್ರೀ ಎಚ್.ಎಲ್. ನಾಗೇಗೌಡರು ನೆನೆಸಿಕೊಂಡಿದ್ದಾರೆ. ಮಂಡೆಚ್ಚರ ಸರಳ ಉಡುಪು, ಹಿತಮಿತವಾದ ಮಾತು ಸಣ್ಣ ಮಗುವಿನಂತಹ ನಿಷ್ಕಲ್ಮಶ ಹೃದಯ, ಘನತೆವೆತ್ತ ಭಾಗವತಿಕೆಗಳ ಪರಿಚಯ ಈ ಕೃತಿಯಿಂದ ಮೂಡುತ್ತದೆ. ಮಲ್ಪೆ ಶಂಕರನಾರಾಯಣ ಸಾಮಗರು "ತಾನೇ ಸರಿಯೆಂಬ ಆಗ್ರಹ ಇಲ್ಲದ ಚಿತ್ತ ವೈಶಾಲ್ಯವುಳ್ಳ ಭಾವುಕ ವ್ಯಕ್ತಿತ್ವ" ಎಂದರೆ ಶ್ರೀ ಅಮೃತಸೋಮೇಶ್ವರರು "ಹೃದಯವಂತಿಕೆ, ಮಧುರಕಂಠ, ಮಂದಸ್ಮಿತ

ಉಳ್ಳ, ಬೆಚ್ಚಗಿನ ಆತ್ಮೀಯ ಸ್ಪರ್ಶ ನೀಡುವ ವ್ಯಕ್ತಿತ್ವ" ಎಂದಿದ್ದಾರೆ.ಮಂಡೆಚ್ಚರ ಗಾನ ಶೈಲಿಯ ಪರಂಪರೆಯು ಶ್ರೀ ದಿನೇಶ ಅಮ್ಮಣ್ಣಾಯರ ಭಾಗವತಿಕೆಯಲ್ಲಿ ಕಾಣಬಹುದು. ಭಾಗವತಿಕೆಗೆ ಸಂಬಂಧಿಸಿದ ಶಿಬಿರಗಳಲ್ಲಿ, ಪ್ರಾತ್ಯಕ್ಷಿಕೆಗಳಲ್ಲಿ ಇಂದಿಗೂ ದಾಮೋದರ ಮಂಡೆಚ್ಚರ ಗಾನ ಶೈಲಿಯ ಬಗ್ಗೆ ಚರ್ಚೆ ನಡೆಯುತ್ತಿರುತ್ತದೆ. ಹೀಗೆ ಮಂಡೆಚ್ಚರು ಇಂದಿಗೂ ಪ್ರಸ್ತುತರಾಗಿದ್ದಾರೆ.

4. ಕಡತೋಕ ಮಂಜುನಾಥ ಭಾಗವತ

ಬಡಗು ಹಾಗೂ ತೆಂಕುತಿಟ್ಟುಗಳೆರಡರಲ್ಲೂ ಅಪಾರ ಜನಪ್ರಿಯರಾಗಿದ್ದ ಕಡತೋಕರು 1989ರ ಆಗಸ್ಟ್ ನಲ್ಲಿ ನಡೆದ ರಸ್ತೆ ಅಪಘಾತವೊಂದರಲ್ಲಿ ತೀವ್ರ ಆಘಾತಕ್ಕೆ ಗುರಿಯಾದರು. ಆದರೂ ಮತ್ತೆರಡು ವರ್ಷ ಧರ್ಮಸ್ಥಳ ಮೇಳದಲ್ಲಿ ಭಾಗವತಿಕೆಯನ್ನು ಮುಂದುವರಿಸಿದ್ದರು. 1992ರಲ್ಲಿ ಇವರು ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದರು ಇದಲ್ಲದೆ ಇವರಿಗೆ ನಿಡ್ಲೆ ನರಸಿಂಹ ಭಟ್ ಪ್ರಶಸ್ತಿ, ದೇರಾಜೆ ಸೀತಾರಾಮಯ್ಯ ಪ್ರಶಸ್ತಿ, ಶೇಣಿ ಗೋಪಾಲಕೃಷ್ಣ ಭಟ್ ಪ್ರಶಸ್ತಿ, ದಿವಾಣ ಭೀಮಭಟ್ ಪ್ರಶಸ್ತಿ, ಕುರಿಯ ವಿಠಲಶಾಸ್ತ್ರಿ ಸ್ಮಾರಕ ಪ್ರಶಸ್ತಿ, ಪುತ್ತೂರು ನಾರಾಯಣ ಹೆಗಡೆ ಪ್ರಶಸ್ತಿ ಮುಂತಾದವುಗಳು ಲಭಿಸಿವೆ. ಕಡತೋಕರು 2005ರಲ್ಲಿ 'ಯಕ್ಷಲೋಕ' ಎಂಬ ಸಂಸ್ಥೆಯನ್ನು ಸ್ಥಾಪಿಸಿ "ಯಕ್ಷರಂಗ" ಎಂಬ ಹೆಸರಿನಲ್ಲಿದ್ದ ತಮ್ಮ ಹಿಂದಿನ ಮಾಸಪತ್ರಿಕೆಯನ್ನು ಮತ್ತೆ ಪ್ರಾರಂಭಿಸಿದರು. ಇದೀಗ ಅವರ ಸುಪುತ್ರ ಕಡತೋಕಾ ಗೋಪಾಲಕೃಷ್ಣ ಭಾಗವತರು ಸಂಪಾದಕರಾಗಿ ಮುಂದುವರಿಸುತ್ತಿದ್ದಾರೆ. 2009ರಲ್ಲಿ ಅವರ ಆತ್ಮಕಥನ "ಯಕ್ಷವನ ವಿಹಾರ"ವು ಗೋಪಾಲಕೃಷ್ಣ ಭಾಗವತರ ನಿರೂಪಣೆಯಲ್ಲಿ ಪ್ರಕಟಗೊಂಡಿದೆ. 2011ರಲ್ಲಿ ಮಂಗಳೂರು ವಿಶ್ವವಿದ್ಯಾಲಯದ ಡಾ. ದಯಾನಂದ ಪೈ ಯಕ್ಷಗಾನ ಅಧ್ಯಯನ ಕೇಂದ್ರವು "ಯಕ್ಷಮಂಗಳ" ಪ್ರಶಸ್ತಿಯನ್ನಿತ್ತು ಗೌರವಿಸಿತು. ಅದೇ ವರ್ಷ ಯಕ್ಷಗಾನ ಅಕಾಡೆಮಿಯು ಇವರಿಗೆ ಅತ್ಯುನ್ನತ 'ಪಾರ್ತಿಸುಬ್ಬ' ಪ್ರಶಸ್ತಿಯನ್ನು ಕೊಟ್ಟಿತು. ದಿನಾಂಕ 1 ನವೆಂಬರ್ 2011ರಲ್ಲಿ ಕಡತೋಕ ಮಂಜುನಾಥ್ ಭಾಗವತರು ಅಭಿಮಾನಿಗಳನ್ನು ಅಗಲಿದರು. 2012ರಲ್ಲಿ ಶ್ರೀಯುತರ ಜೀವನ ಸಾಧನೆ ಕುರಿತಾದ 'ಕಡತೋಕಾ ಕೃತಿ-ಸ್ಮೃತಿ' ಎಂಬ ಸಂಸ್ಮರಣ ಗ್ರಂಥವು ಪ್ರಕಟವಾಗಿದೆ. ಕಡತೋಕರು ಸ್ಥಾಪಿಸಿದ ಯಕ್ಷಲೋಕದ ಆಶ್ರಯದಲ್ಲಿ ಪ್ರತಿವರ್ಷ ಉತ್ತರಕನ್ನಡ ಜಿಲ್ಲೆಯ ಹಳದೀಪುರದಲ್ಲಿ "ಕಡತೋಕಾ ಸ್ಮೃತಿ ಕೃತಿ-ಯಕ್ಷ ರಂಗೋತ್ಸವ" ಎಂಬ ಯಕ್ಷಗಾನ ಉತ್ಸವವನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಅವರ ಹೆಸರಿನಲ್ಲಿ ಪ್ರಶಸ್ತಿಯ ಪ್ರಧಾನ, ಸಾಧಕರಿಗೆ ಗೌರವಾರ್ಪಣೆ, ಉಪನ್ಯಾಸ. ತಾಳಮದ್ದಲೆ, ಯಕ್ಷಗಾನ ಪ್ರದರ್ಶನ ಮುಂತಾದ ಅನೇಕ ಕಾರ್ಯಕ್ರಮಗಳು ಉತ್ಸವದಲ್ಲಿ ನಡೆಯುತ್ತವೆ.

5. ಕಾಳಿಂಗ ನಾವಡ

ಯಕ್ಷಗಾನ ಭಾಗವತಿಕೆಗೆ ತಾರಾಮೌಲ್ಯವನ್ನು ತಂದುಕೊಟ್ಟ ಕಾಳಿಂಗ ನಾವಡರು ತಮ್ಮ ಎಳೆಯ ವಯಸ್ಸಿನಲ್ಲಿ ಅಗಲಿದ್ದು ಯಕ್ಷಗಾನ ಆಸಕ್ತರೆಲ್ಲರಿಗೆ ಬಂದೆರಗಿದ ಸಿಡಿಲೇ ಸರಿ. ಅವರು ಒಂದು ಹಾಡಿನಲ್ಲೇ ಇಡೀ ರಂಗಸ್ಥಳವನ್ನು ತುಂಬಿಸಬಲ್ಲ ಶಕ್ತಿಯನ್ನು ಹೊಂದಿದ್ದರು. ಭಾಗವತರಾಗಿ ಕೆಲವೇ ಕಾಲದಲ್ಲಿ ಜನತೆ ಅವರ ಭಾಗವತಿಕೆಯನ್ನು 'ನಾವಡಶೈಲಿ' ಎಂದು ಗುರುತಿಸಿ, ಮೆಚ್ಚುಗೆಯ ಮಹಾಪೂರವನ್ನೇ ಹರಿಸಿದ್ದರು. 1977ರಿಂದ 1990ರವರೆಗೆ ಸಾಲಿಗ್ರಾಮ ಮೇಳದ ಭಾಗವತರಾಗಿ ಅದಕ್ಕೊಂದು ಭದ್ರ ಸ್ಥಾನವನ್ನು ಗಳಿಸಿಕೊಟ್ಟಿದ್ದಾರೆ. ಅದ್ಭುತವಾದ ಕಂಠಸಿರಿ, ತಪ್ಪದ ಲಯ, ತಾಳ, ಶೃತಿ, ಜ್ಞಾನ, ಕುಂಜಾಲು ಶೈಲಿಯಲ್ಲಿ ರಾಗ ಮಟ್ಟುಗಳ ಬಳಕೆ, ಪಾತ್ರಧಾರಿಯ ಸಾಮರ್ಥ್ಯವನ್ನು ಅರಿತು ಕುಣಿಸಬಲ್ಲ ಶಕ್ತಿ ಇವೆಲ್ಲವೂ ಅವರನ್ನು ಒಬ್ಬ 'ಯುಗ ಪ್ರವರ್ತಕ' ನನ್ನಾಗಿ ಮಾಡಿತು. ಅನೇಕರು ಅವರ ಹಾಡಿನ ಶೈಲಿಯನ್ನು ಅನುಕರಿಸಲು ಪ್ರಾರಂಭಿಸಿದರು. ಒಂದು ದಶಕ(1980-90) ಕಾಳಿಂಗ ನಾವಡರೇ ಯಕ್ಷಗಾನ ರಂಗವನ್ನು ಆಳುತ್ತಿದ್ದರೆಂದರೇ ತಪ್ಪಾಗಲಾರದು. 27-5-1990ರಂದು ಉಡುಪಿಯ ಹತ್ತಿರ ನಡೆದ ರಸ್ತೆಯ ಅಪಘಾತಕ್ಕೆ ಗುರಿಯಾದ ನಾವಡರು ಇಡೀ ಯಕ್ಷಲೋಕವನ್ನೇ ದುಃಖದಲ್ಲಿ ಮುಳುಗಿಸಿದರು. ಮಾರನೆಯ ದಿನ ಎಲ್ಲಾ ಪತ್ರಿಕೆಗಳು "ಯಕ್ಷಗಾನ ಯುಗ ಪ್ರವರ್ತಕ ಇನ್ನಿಲ್ಲ" ಎಂದು ಸಾರಿದವು. ಆದರೆ ಕಾಳಿಂಗ ನಾವಡರು ಹಾಡಿರುವ ಸೀಡಿ, ಕ್ಯಾಸೆಟ್ ಗಳು ಖಾಸಗಿ ಧ್ವನಿ ಮುದ್ರಣಗಳು ಇಂದು ಯೂಟ್ಯೂಬ್, ವಾಟ್ಸಫ್‌ಗಳ ಮೂಲಕ ನಾವಡರು ನಮ್ಮೊಂದಿಗೆ ಜೀವಂತವಾಗಿರುವಂತೆ ಮಾಡಿವೆ. ಗುರುಶಿಷ್ಯರು, ದೊಂದಿಬೆಳಕು, ಗಾನಕೋಗಿಲೆ, ಅಭಿಮಾನಿಬಳಗ, ಯಕ್ಷಸಿಂಚನ ಸ್ನೇಹಬಳಗ, ಯಕ್ಷಗಾನ ಉತ್ಥಾನ, ಯಕ್ಷಗಾನ ಕಲಾಕೇಂದ್ರ ಮುಂಥಾದ ವಾಟ್ಸಪ್ ಗ್ರೂಪ್‌ಗಳು ದಿನವೂ ಕಾಳಿಂಗ ನಾವಡರ ಒಂದಿಲ್ಲೊಂದು ಪದವನ್ನು ಆಸಕ್ತರು ಕೇಳುತ್ತಿರುವಂತೆ ಮಾಡಿವೆ. ಬೆಂಗಳೂರಿನ ಕಲಾ ಕದಂಬ ಆರ್ಟ್ಸ್ ಸೆಂಟರ್ ಪ್ರತಿ ವರ್ಷ ಕಾಳಿಂಗ ನಾವಡರ ಹೆಸರಲ್ಲಿ ಸಾಧಕರೊಬ್ಬರನ್ನು ಗುರುತಿಸಿ "ಕಾಳಿಂಗ ನಾವಡ ಪ್ರಶಸ್ತಿ" ನೀಡುತ್ತಿದೆ. ಅದೇ ರೀತಿ ಹಂಗಾರಕಟ್ಟೆ ಯಕ್ಷಗಾನ ಕಲಾ ಕೇಂದ್ರವು 'ಭಾಗವತ ಶ್ರೇಷ್ಠ ಕಾಳಿಂಗ ಪ್ರಶಸ್ತಿ'ಯನ್ನು ಪ್ರತಿ ವರ್ಷ ನೀಡುತ್ತಿದೆ. ಶೃಂಗೇರಿಯಲ್ಲಿ ಬೇಗೂರ್ ರಮೇಶ್ ರವರು ಕಾಳಿಂಗ ನಾವಡರ ನೆನಪಿನ ಸಂಸ್ಥೆ ಸ್ಥಾಪಿಸಿ, ವರ್ಷಂಪ್ರತಿ ಕಾರ್ಯಕ್ರಮ ನಡೆಸಿಕೊಂಡು ಬರುತ್ತಿದ್ದಾರೆ. "ಜಿ.ಆರ್. ಕಾಳಿಂಗ ನಾವಡ ಸ್ಮಾರಕ ನಿಧಿ" ಯೊಂದು ಪರಮಪೂಜ್ಯ ಧರ್ಮಸ್ಥಳ ವೀರೇಂದ್ರ ಹೆಗ್ಗಡೆಯವರ ಗೌರವಾಧ್ಯಕ್ಷತೆಯಲ್ಲಿ ಸ್ಥಾಪಿತಗೊಂಡಿದ್ದು, ಕಾಳಿಂಗನಾವಡರ ಕುಟುಂಬ ವರ್ಗದವರಿಗೆ 'ಭಾಗವತ' ಎಂಬ ಮನೆಯೊಂದನ್ನು ನಿರ್ಮಿಸಿ ಕೊಟ್ಟಿದೆ. ಅವರ ಅಭಿಮಾನಿಗಳು, ಶಿಷ್ಯರು ಯಕ್ಷಗಾನ

ಅಭಿಮಾನಿಬಂಧುಗಳು ಅಪಾರ ಕಾಣಿಕೆಯನ್ನು ಈ ನಿಧಿಗೆ ನೀಡಿ ನಾವಡರ ಮೇಲಿನ ತಮ್ಮ ಪ್ರೀತಿಯನ್ನು ತೋರಿಸಿದ್ದಾರೆ.

6. ಗುರು ವೀರಭದ್ರನಾಯಕ್

ಮಟ್ಪಾಡಿ ಶೈಲಿಯ ಪ್ರವರ್ತಕರೆಂದೇ ಖ್ಯಾತಿಗೊಂಡಿರುವ ವೀರಭದ್ರ ನಾಯಕರ ಕುಣಿತ, ಮಾತುಗಾರಿಕೆ ಹಾಗೂ ಅರ್ಥಗಾರಿಕೆಯ ಜಿಜ್ಞಾಸೆ ಅವರು ಗತಿಸಿ ನಾಲ್ಕು ದಶಕಗಳ ನಂತರವೂ ಅಲ್ಲಲ್ಲಿ ನಡೆಯುತ್ತಿದೆ ಎಂಬುದೇ ಅವರ ಪ್ರತಿಭೆಗೆ, ಕಲಾಭಿವ್ಯಕ್ತಿಗೆ ಸಂದ ಗೌರವವಾಗಿದೆ. ಅವರ ಓದಿನ ಹಸಿವು, ಪಾತ್ರ ಪರಿಪೋಷಣೆಯ ಪರಿ, ಕಿರಿಯ ಕಲಾವಿದರನ್ನು ನೇರ್ಪು ಗೊಳಿಸುತ್ತಿದ್ದ ಬಗೆ, ಯಕ್ಷಗಾನ ವಿರಳವಿದ್ದೆಡೆಗೆ ತೆರಳಿ ಹವ್ಯಾಸಿ ಕಲಾವಿದರನ್ನು ಸಂಘಟಿಸಿ ಹೊಸ ಮೇಳಗಳ ಹುಟ್ಟಿಗೆ ಕಾರಣವಾದ ವಿಚಾರಗಳೆಲ್ಲ ಈಗ ಚರ್ಚೆಯಲ್ಲಿ ಮುನ್ನೆಲೆಗೆ ಬರುತ್ತಿವೆ. ವೃತ್ತಿ ಮೇಳಕ್ಕೆ ಮೊದಲೇ ವಿದಾಯ ಹೇಳಿದ್ದರೂ 1971 ಹಾಗೂ 1972ರಲ್ಲಿ ಸಾಲಿಗ್ರಾಮ ಮೇಳದ ಅತಿಥಿ ಕಲಾವಿದರಾಗಿ ಭಾಗವಹಿಸಿ 'ಏಷ್ಯಾಸಮ್ಮೇಳನ' ದಲ್ಲಿ ಪಾತ್ರಧಾರಿಯಾಗಿ ಕಾಣಿಸಿಕೊಂಡು ಪ್ರಜ್ಞಾವಂತ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾಗಿದ್ದರು. ತಮ್ಮ 67ನೆಯ ವಯಸ್ಸಿನಲ್ಲಿ ತರುಣರಂತೆ ಕುಣಿದದ್ದನ್ನು ಆಂಗ್ಲಪತ್ರಿಕೆಗಳು ಮುಕ್ತ ಕಂಠದಿಂದ ಶ್ಲಾಘಿಸಿವೆ. ಕೊಲ್ಲೂರು ಹಾಗೂ ಮಾರಣಕಟ್ಟೆ ಮೇಳಗಳಿಗೆ ಕಾಯಕಲ್ಪ ನೀಡಿದ್ದೇ ಅಲ್ಲದೆ ಘಟ್ಟದ ಮೇಲಿನ ಅನೇಕ ಹವ್ಯಾಸಿ ಕಲಾವಿದರನ್ನು ವೃತ್ತಿ ಕಲಾವಿದರಾಗಿ ಮಾಡಿದ್ದು ಇವರ ಹಿರಿಮೆಯಾಗಿದೆ. ಹನ್ನಾರು ಮಾಗಣೆಯ ಕೆಲವು ಮೇಳಗಳ ಪುನರುಜ್ಜೀವನಕ್ಕೆ ವೀರಭದ್ರನಾಯಕರು ಕಾರಣರಾಗಿದ್ದರು ಎಂಬುದನ್ನು ರವಿ ಮಡೊಡಿಯವರು ತಮ್ಮ "ಮಲೆನಾಡಿನ ಯಕ್ಷಚೇತನಗಳು" ಎಂಬ ಸರಣಿಯಲ್ಲಿ ಪ್ರಸ್ಥಾಪಿಸಿದ್ದಾರೆ.

7. ಮಲ್ಪೆ ಶಂಕರನಾರಾಯಣ ಸಾಮಗ

ಅರ್ಥಗಾರಿಕೆಯಲ್ಲಿ ಅದ್ವಿತೀಯರೆಂದೇ ಪರಿಗಣಿತರಾಗಿದ್ದ ಶಂಕರನಾರಾಯಣ ಸಾಮಗರು ಹಲವು ನಿಟ್ಟಿನಿಂದ ವಿಶಿಷ್ಟ ವ್ಯಕ್ತಿತ್ವದವರು. ತಮ್ಮ ಬಾಳಿನುದ್ದಕ್ಕೂ ಖಾದಿಯನ್ನೇ ಧರಿಸಿ, ಮಹಾತ್ಮ ಗಾಂಧಿಯವರ ಆದರ್ಶವನ್ನೇ ಅಳವಡಿಸಿಕೊಂಡು, ಬಡವರ ಬಗ್ಗೆ ಅಸಹಾಯಕರ ಬಗ್ಗೆ ಸದಾ ಅನುಕಂಪ ತುಡಿಯುತ್ತಾ, ದಾನಶೀಲತೆ ಪ್ರಕಟಿಸುತ್ತಾ ಬಂದವರು. ಅವರು ಚೂಡಾಮಣಿ, ಅಂಗದ ಸಂಧಾನ ಪ್ರಸಂಗಗಳಿಗೆ ಅರ್ಥಗಾರಿಕೆಯನ್ನು ಪುಸ್ತಕರೂಪದಲ್ಲಿ ಹೊರತಂದಿದ್ದಾರೆ. ಇವಲ್ಲದೆ ಯಕ್ಷಗಾನ ಸೌರಭ, ದೇವರು ಎಂಬ ಕೃತಿಗಳನ್ನು ರಚಿಸಿದ್ದಾರೆ. ಇವರ ಆತ್ಮಕಥನದ ನಿರೂಪಣೆಯನ್ನು ಟಿ.ಎಸ್. ಅಂಬುಜಾ ಅವರು 'ರಂಗದ ರಂಗೋಲಿ' ಎಂಬ ಹೆಸರಲ್ಲಿ ಪ್ರಕಟಿಸಿದ್ದಾರೆ.

ಉಡುಪಿಯ ಯಕ್ಷಗಾನ ಕಲಾರಂಗದ ಆಶ್ರಯದಲ್ಲಿ ಸಾಮಗ ಶೇಣಿ ಸನ್ಮಾನ ಸಮಿತಿಯು ರೂಪುಗೊಂಡು 3-9-89ರಂದು ಅವಿಸ್ಮರಣೀಯ ಸಮಾರಂಭ ಏರ್ಪಡಿಸಿ ಪೇಜಾವರಶ್ರೀ ಹಾಗೂ ಎಡನೀರು ಶ್ರೀಗಳವರ ಸಮ್ಮುಖದಲ್ಲಿ ಗೌರವಿಸಿರುವುದು ದಾಖಲಾರ್ಹ. ಇದೇ ಸಂದರ್ಭದಲ್ಲಿ 'ಆಶುವೈಭವ' ಎಂಬ ಅಭಿನಂದನ ಗ್ರಂಥವನ್ನು ಸಮರ್ಪಿಸಲಾಯಿತು. ಪೊಳಲಿ ಶಂಕರನಾರಾಯಣ ಶಾಸ್ತ್ರಿ ಪ್ರಶಸ್ತಿ ಪುರಸ್ಕೃತರಾಗಿರುವ ಶಂಕರ ನಾರಾಯಣ ಸಾಮಗರನ್ನು ಅನೇಕ ಸಂಘ ಸಂಸ್ಥೆಗಳು ಸನ್ಮಾನ ಪತ್ರ ನೀಡಿ ಗೌರವಿಸಿವೆ. ದಿನಾಂಕ 1-8-1999ರಂದು ಸಾಮಗರು ಅಪಾರ ಅಭಿಮಾನಿಗಳನ್ನು ಅಗಲಿದರು. ಅವರ ಸುಪುತ್ರ ಪ್ರೊ॥ ಎಂ.ಎಲ್. ಸಾಮಗರು ಸಮರ್ಥ ಅರ್ಥಧಾರಿಯಾಗಿ ಹವ್ಯಾಸಿ ವೇಷಧಾರಿಯಾಗಿ ಹೆಸರು ಮಾಡಿದ್ದಾರೆ. ಇಂಗ್ಲೀಷ್ ಪ್ರಾಧ್ಯಾಪಕರಾಗಿರುವ ಇವರು ಆಂಗ್ಲ ಭಾಷೆಯಲ್ಲೂ ಅರ್ಥಗಾರಿಕೆ ಮಾಡುತ್ತಿರುವುದು ವಿಶೇಷವಾಗಿದೆ. ಇವರು ಕರ್ನಾಟಕ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಇನ್ನೊಬ್ಬ ಪುತ್ರ ಬಾ.ಸಾಮಗರು ಖ್ಯಾತ ಪತ್ರಕರ್ತರಾಗಿದ್ದು ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಯಕ್ಷಗಾನವನ್ನು ಪಸರಿಸುವಲ್ಲಿ ಸಾಕಷ್ಟು ಕೊಡುಗೆ ನೀಡಿದ್ದಾರೆ.

8. ಶೇಣಿ ಗೋಪಾಲ ಕೃಷ್ಣ ಭಟ್

ತಾಳಮದ್ದಳೆಯ ಅರ್ಥಗಾರಿಕೆಯಲ್ಲಿ ಸಾರ್ವಭೌಮರಂತೆ ಮೆರೆದ ಶೇಣಿ ಗೋಪಾಲಕೃಷ್ಣ ಭಟ್ ಜೀವಂತವಿದ್ದಾಗಲೇ ತಮ್ಮ ಅರ್ಥಗಾರಿಕೆಯ ಮೂಲಕ ಅನೇಕ ದಂತ ಕತೆಗಳಿಗೆ ಕಾರಣರಾದವರು. ಅವರ ಮಾತುಗಾರಿಕೆಯ ಓಘಕ್ಕೆ, ಪಾಂಡಿತ್ಯದ ಶಕ್ತಿಗೆ, ಪ್ರತ್ಯುತ್ಪನ್ನ ಮತಿತ್ವಕ್ಕೆ, ಪುರಾಣ ಜ್ಞಾನಕ್ಕೆ ಸರಿಸಾಟಿಯಾಗುವವರೇ ಇಲ್ಲ ಎಂಬಷ್ಟು ಖ್ಯಾತಿ ಪಡೆದವರು. ತಮ್ಮ 89ನೇ ವಯಸ್ಸಿನಲ್ಲಿ (7-4-2006) ಇಹಲೋಕವನ್ನು ತ್ಯಜಿಸಿದರು. ಅವರ ಅಭಿಮಾನಿಗಳಾದ ಪುರುಷೋತ್ತಮ ಪೈಕ ಕಾಸರಗೋಡಿನ ನೆಲ್ಲಿಕಟ್ಟೆಯಲ್ಲಿ 'ಶೇಣಿ ಅಕಾಡೆಮಿ'ಯನ್ನು ಸ್ಥಾಪಿಸಿರುವುದೇ ಅಲ್ಲದೆ, 'ತೆಂಕುತಿಟ್ಟು ಯಕ್ಷಗಾನ ಶೇಣಿ ಶೈಲಿ' ಎಂಬ ವಿಷಯದ ಮೇಲೆ ಅಧ್ಯಯನ ನಡೆಸಿ ಪ್ರೌಢ ಪ್ರಬಂಧ ಬರೆದು ಕಣ್ಣೂರು ವಿಶ್ವವಿದ್ಯಾಲಯದಿಂದ ಪಿ.ಹೆಚ್‌ಡಿ ಪದವಿಯನ್ನು ಪಡೆದಿದ್ದಾರೆ. ಶೇಣಿ ಗೋಪಾಲಕೃಷ್ಣ ಭಟ್ ರಿಗೆ 1993ರಲ್ಲಿ ಶೃಂಗೇರಿ ಪೀಠ ಸಂಸ್ಥಾನವು 'ಯಕ್ಷ ಕಲಾನಿಧಿ' ಎಂಬ ಬಿರುದನ್ನಿತ್ತು ಸನ್ಮಾನಿಸಿದೆ. ಶೇಣಿಯವರ ರಾಮಾಯಣ ಪಾತ್ರಗಳ ಅರ್ಥಗಾರಿಕೆಯನ್ನು ಸಂಕಲನ ರೂಪದಲ್ಲಿ ಸಂಗ್ರಹಿಸಿ ಕುಮಟಾದ ಶ್ರೀ ಜಿ.ಎಲ್. ಹೆಗಡೆಯವರು 'ಶೇಣಿ ರಾಮಾಯಣ' ಎಂಬ ಪುಸ್ತಕವನ್ನು ಹೊರತಂದಿದ್ದಾರೆ. 1984ರಿಂದ ಯಕ್ಷಗಾನ ವೃತ್ತಿಮೇಳಗಳ ತಿರುಗಾಟಕ್ಕೆ ವಿದಾಯ ಹೇಳಿದ್ದರೂ ತಾಳಮದ್ದಲೆಯ ಅರ್ಥಧಾರಿಯಾಗಿ ಭಾಗವಹಿಸುತ್ತಿದ್ದರು. 1997ರಲ್ಲಿ ಸಹಸ್ರ ಚಂದ್ರದರ್ಶನ

ಕಾರ್ಯಕ್ರಮಗಳನ್ನು ಅವರ ಅಭಿಮಾನಿಗಳೆಲ್ಲ ಸೇರಿ ಮಠಾಧೀಶರ ಸಮ್ಮುಖದಲ್ಲಿ ನಡೆಸಿದ್ದೇ ಅಲ್ಲದೆ ಅಂದು 'ಸಹಸ್ರಚಂದ್ರ' ಎಂಬ ಅಭಿನಂದನ ಗ್ರಂಥವನ್ನು ಸಮರ್ಪಿಸಿದರು. ಶೇಣಿಯವರಿಗೆ ಕೀರಿಕ್ಕಾಡು ಮಾಸ್ತರ್ ವಿಷ್ಣುಭಟ್ ಪ್ರಶಸ್ತಿ, ಮಲ್ಪೆ ಶಂಕರ ನಾರಾಯಣ ಸಾಮಗ ಪ್ರಶಸ್ತಿ ಬಂದಿರುವುದಲ್ಲದೆ ಅನೇಕ ಸಂಘಸಂಸ್ಥೆಗಳು ಗೌರವವಿತ್ತು ಸನ್ಮಾನಿಸಿವೆ. 2005ರಲ್ಲಿ ಮಂಗಳೂರು ವಿಶ್ವವಿದ್ಯಾಲಯ ಇವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ. ಶೇಣಿಯವರ ಅಭೀಮಾನಿಗಳೆಲ್ಲ ಸೇರಿ ಶೇಣಿ ದತ್ತಿ ನಿಧಿ ಸ್ಥಾಪಿಸಿ ಪ್ರತಿವರ್ಷ ಹಿರಿಯ ಕಲಾವಿದರ ಸಾಧನೆಯನ್ನು ಗುರುತಿಸಿ ಶೇಣಿಯವರ ಹೆಸರಿನಲ್ಲಿ ಪ್ರಶಸ್ತಿ ನೀಡಿ ಗೌರವಿಸುತ್ತಿದೆ. ಇವರು ಗತಿಸಿದ ನಂತರ 2006ರಲ್ಲಿ ಇವರ ಮೊಮ್ಮಗ ಶೇಣಿ ಬಾಲಮುರಳಿ ಕೃಷ್ಣ 'ಯಕ್ಷಗಾನ ಮತ್ತು ನಾನು' ಕೃತಿಯನ್ನು ಪರಿಷ್ಕರಣೆಯೊಂದಿಗೆ ಪ್ರಕಟಿಸಿದ್ದಾರೆ. ಇವರ ಮೊದಲ ಮಗ ಶೇಣಿ ನಾರಾಯಣ ಭಟ್ ರು ಆಟಕೂಟಗಳಲ್ಲಿ ಹವ್ಯಾಸಿಯಾಗಿ ಭಾಗವಹಿಸಿ ಶೇಣಿಯವರ ಯಕ್ಷಗಾನದ ನಂಟನ್ನು ಮುಂದುವರಿಸುತ್ತಿದ್ದಾರೆ.

9. ಮಲ್ಪೆ ರಾಮದಾಸ ಸಾಮಗ

2004ರಲ್ಲಿ ರಾಮದಾಸ ಸಾಮಗರ ಆತ್ಮವೃತ್ತಾಂತವು ಇವರ ಪುತ್ರಿ ಟಿ.ಎಸ್. ಅಂಬುಜಾ ಅವರ ನಿರೂಪಣೆಯಲ್ಲಿ 'ಸಾಮಗಾಯಣ' ಎಂಬ ಹೆಸರಿನಲ್ಲಿ ಪ್ರಕಟಗೊಂಡಿದೆ. ಸಾಮಗರ ಬದುಕಿನ ನೋವು ನಲಿವುಗಳೊಂದಿಗೆ ಅವರು ಕಲಾಬದುಕಿನೊಂದಿಗೆ ನಡೆಸಿದ ಅನುಸಂಧಾನದ ಚಿತ್ರಣವು ಇಲ್ಲಿ ದೊರೆಯುತ್ತದೆ. ಹರಿಕಥಾ ಕಾಲಕ್ಷೇಪದ ಮೂಲಕ ಖ್ಯಾತಿ ಪಡೆದಿರುವ ಸಾಮಗರು ತಾಳಮದ್ದಲೆಯ ಅರ್ಥಧಾರಿಯಾಗಿ, ಯಕ್ಷಗಾನದ ವೇಷಧಾರಿಯಾಗಿ ಪಡೆದ ಅನುಭವಗಳ ವಿವರ ಇಲ್ಲಿದೆ. 'ಸಣ್ಣಸಾಮಗರ' ಶೈಲಿ ಎಂದು ಕರೆಸಿಕೊಳ್ಳುವ ಭಾಷುತನ ಇವರ ಅರ್ಥಗಾರಿಕೆಯಲ್ಲಿದೆ, ಭಾವಪ್ರಧಾನವಾದ, ಕಾವ್ಯಾತ್ಮಕವಾದ ಮಾತುಗಾರಿಕೆಯೇ ಹೊರತು 'ವಾದ ಪ್ರಧಾನ'ವಾದದ್ದಲ್ಲ. ಇವರಿಗೆ ಪಲಿಮಾರು ಶ್ರೀಗಳಿಂದ 'ಯಕ್ಷೇಂದು' ಪ್ರಶಸ್ತಿ. ಪೊಳಲಿ ಶಂಕರನಾರಾಯಣ ಶಾಸ್ತ್ರಿ ಪ್ರಶಸ್ತಿ, ತುಳು ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ದೇರಾಜೆ ಸೀತಾರಾಮಯ್ಯ ಪ್ರಶಸ್ತಿ, ಮುದ್ದಣ ಪ್ರಶಸ್ತಿಗಳು ಲಭಿಸಿವೆ. ತುಳುಭಾಷೆಯಲ್ಲಿ ಅಪಾರ ಪಾಂಡಿತ್ಯ ಹೊಂದಿರುವ ರಾಮದಾಸ ಸಾಮಗರು ತುಳು ಪ್ರಸಂಗಗಳ ಪ್ರದರ್ಶನದಲ್ಲಿ ಅದ್ವಿತೀಯ ಮಾತುಗಾರಿಕೆಯಿಂದಾಗಿ ಅಭಿಮಾನಿ ಬಳಗವನ್ನು ಹೊಂದಿದ್ದಾರೆ. ತುಳು ಅರ್ಥಗಾರಿಕೆಗೆ ಇವರೊಂದು ಮಾದರಿಯಾಗಿರುತ್ತಾರೆ. 20-6-1926ರಲ್ಲಿ ಜನಿಸಿದ ರಾಮದಾಸಸಾಮಗರು 84 ವರ್ಷ ಬಾಳಿ ದಿನಾಂಕ 27-4-2010ರಂದು ಗತಿಸಿದರು. ಅವರ ಪುತ್ರರಾದ ವಾಸುದೇವ ಸಾಮಗರು ಪ್ರಸಿದ್ಧ ವೇಷಧಾರಿಯಾಗಿ, ಅರ್ಥಧಾರಿಯಾಗಿ ಹೆಸರು ಮಾಡಿದ್ದಾರೆ. ವಾಸುದೇವ ಸಾಮಗರ

'ಸಂಯಮಮಂ' ಎಂಬ ತಾಳಮದ್ದಲೆಯ ಸಂಘಟನೆಯಲ್ಲೂ ಮಗನೊಂದಿಗೆ ರಾಮದಾಸ ಸಾಮಗರು ಅರ್ಥ ಹೇಳಿದ್ದಾರೆ. ರಾಮದಾಸ ಸಾಮಗರ ಮೊಮ್ಮಗ ಡಾ. ಪ್ರದೀಪ ಸಾಮಗರು ಹವ್ಯಾಸಿ ಯಕ್ಷಗಾನ ಕಲಾವಿದರಾಗಿ, ಅರ್ಥಧಾರಿಯಾಗಿ ಖ್ಯಾತಿಗಳಿಸುವ ದಿಸೆಯಲ್ಲಿದ್ದಾರೆ. ಹೀಗೆ ಸಣ್ಣಸಾಮಗರ ಮೂರನೆಯ ತಲೆಮಾರು ಯಕ್ಷಗಾನ ಪರಂಪರೆಯನ್ನು ಮುಂದುವರಿಸುತ್ತಿದೆ.

10. ಕೀರಿಕ್ಕಾಡು ಮಾಸ್ತರ್ ವಿಷ್ಣುಭಟ್

ಕೀರಿಕ್ಕಾಡು ಅವರು ತಮ್ಮ ಎಪ್ಪತ್ತೂರನೇ ವಯಸ್ಸಿನಲ್ಲಿ (1986 ಮಾರ್ಚ್) ನಲ್ಲಿ ಇಹಲೋಕ ತ್ಯಜಿಸಿದರೂ ಅವರ ಅಸಂಖ್ಯ ಯಕ್ಷಗಾನ ಪ್ರಸಂಗಗಳು ಇಂದಿಗೂ ವೃತ್ತಿ ಹಾಗೂ ಹವ್ಯಾಸಿ ರಂಗಭೂಮಿಯಲ್ಲಿ ಪ್ರದರ್ಶನಗೊಳ್ಳುವ ಮೂಲಕ ಅವರ ಹೆಸರು ಚಿರಸ್ಥಾಯಿಯಾಗಿದೆ. ಇವರ ಅರ್ಥಗಾರಿಕೆಯ ಪರಂಪರೆಯನ್ನು ಅವರ ಸುಪುತ್ರ ಖ್ಯಾತ ಅರ್ಥಧಾರಿ ಡಾ. ರಮಾನಂದ ಬನಾರಿಯವರು ಮುಂದುವರಿಸುತ್ತಿದ್ದಾರೆ. ವಿಷ್ಣುಭಟ್‌ರ ಅರ್ಥಗಾರಿಕೆಯಲ್ಲಿರುವಂತೆ ಬನಾರಿಯವರ ಅರ್ಥಗಾರಿಕೆಯಲ್ಲಿ ಅದ್ಭುತವಾದ ಶೃತಿಬದ್ಧತೆ, ಲಯಬದ್ಧತೆ ಹಾಗೂ ನಾದಶೀಲತೆ ಇದೆ. 2013ರಲ್ಲಿ ಮಾಸ್ತರ್ ವಿಷ್ಣುಭಟ್‌ರ ಜನ್ಮ ಶತಮಾನೋತ್ಸವ ಸಮಾರಂಭವನ್ನು ಅವರು 1944ರಲ್ಲಿ ಸಂಸ್ಥಾಪಿಸಿದ ಬನಾರಿಶ್ರೀಗೋಪಾಲಕೃಷ್ಣ ಯಕ್ಷಗಾನ ಕಲಾ ಸಂಘದ ಆಶ್ರಯದಲ್ಲಿ ಆಚರಿಸಲಾಯಿತು. ಅವರ 'ಯಕ್ಷರಸ ಜೀವನ' ಆತ್ಮಕಥನ ಮರುಮುದ್ರಣಗೊಂಡಿತು. ಮಾಸ್ತರ್ ವಿಷ್ಣುಭಟ್‌ರು ಬನಾರಿ ಕಲಾ ಸಂಘದ ಮೂಲಕ ಅನೇಕ ಪ್ರತಿಭಾವಂತ ಯುವಕರನ್ನು ಯಕ್ಷಗಾನರಂಗಕ್ಕೆ ಪರಿಚಯಿಸಿದ್ದಾರೆ. ಪ್ರತಿವರ್ಷ ವಾರ್ಷಿಕೋತ್ಸವ ಮಾಡುವುದರೊಂದಿಗೆ ಪ್ರಶಸ್ತಿ ಪ್ರಧಾನ, ಯಕ್ಷಗಾನ ಪ್ರದರ್ಶನ ಹಾಗೂ ತಾಳಮದ್ದಳೆ ಕಾರ್ಯಕ್ರಮಗಳು ಅವಿರತವಾಗಿ ನಡೆಯುತ್ತಿವೆ. ಈಚೆಗೆ ಅಲ್ಲಿ ಯಕ್ಷಗಾನ ಕುರಿತಾದ ಅಧ್ಯಯನ ಕೇಂದ್ರವನ್ನು ಕೂಡ ಪ್ರಾರಂಭಿಸಲಾಗಿದೆ. ವಿಷ್ಣುಭಟ್‌ರ ಕನಸಿನ 'ಬನಾರಿ ಕಲಾಸಂಘ'ಕ್ಕೆ 2020 ಯಕ್ಷಗಾನ ಕಲಾರಂಗದವರ ಪ್ರಶಸ್ತಿ ಬಂದಿರುತ್ತದೆ. ಹೀಗೆ ಕೀರಿಕ್ಕಾಡು ಅವರು ನಮ್ಮೊಂದಿಗೆ ಇಲ್ಲವಾದರೂ ಅವರ ಯಕ್ಷಗಾನದ ಕುರಿತು ಕಂಡ ಕನಸುಗಳೆಲ್ಲ ಅವರ ಶಿಷ್ಯರ ಮೂಲಕ, ಪುತ್ರರ ಮೂಲಕ ಹಾಗೂ ಬನಾರಿ ಗೋಪಾಲ ಕೃಷ್ಣ ಯಕ್ಷಗಾನ ಕಲಾಸಂಘದ ಮೂಲಕ ಸಾಕಾರಗೊಂಡಿವೆ.

11. ಕೆರೆಮನೆ ಮಹಾಬಲ ಹೆಗಡೆ

ಕಾಲಮಿತಿ ಪ್ರದರ್ಶನದ ಅಗತ್ಯದ ಬಗ್ಗೆ ಬಹಳಷ್ಟು ಪ್ರತಿಪಾದಿಸುತ್ತಿದ್ದ ಕೆರೆಮನೆ ಮಹಾಬಲ ಹೆಗಡೆಯವರ ಕನಸು ಈಗ ಸಾಕಾರವಾಗುತ್ತಿದೆ. ಈಗ ಹೆಚ್ಚಿನ ವೃತ್ತಿ

ಮೇಳಗಳು ಆ ದಾರಿಗೆ ಹೊರಳಿವೆ. ಮಹಾಬಲ ಹೆಗಡೆಯವರು ವೃತ್ತಿ ಮೇಳಕ್ಕೆ ವಿದಾಯ ಹೇಳಿದ ನಂತರವೂ ಮನೆಯಲ್ಲೇ ಇದ್ದು ಅನೇಕರಿಗೆ ತಮ್ಮ ಕಲಾಜ್ಞಾನವನ್ನು ಹಂಚಿದ್ದಾರೆ. ದೇಶ ವಿದೇಶಗಳಲ್ಲಿ ಪ್ರಾತ್ಯಕ್ಷಿಕೆ ನೀಡಿದ್ದಾರೆ. 1991ರಲ್ಲಿ ಇವರಿಗೆ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಹಿಂದುಸ್ಥಾನಿ ಸಂಗೀತದಲ್ಲಿ ಅಪಾರ ಪರಿಶ್ರಮ ಹೊಂದಿರುವ ಇವರ ಖಚಿತ ಸಂಗೀತ ಜ್ಞಾನವನ್ನು ಗಮನಿಸಿದ ಗಾನ ಕಲಾ ಪರಿಷತ್ತು ಪ್ರಶಸ್ತಿಗಳನ್ನಿತ್ತು ಗೌರವಿಸಿದೆ. 2005ರಲ್ಲಿ ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿಯು ಜೀವಮಾನ ಸಾಧನೆಗಾಗಿ ಪ್ರಶಸ್ತಿ ನೀಡಿ ಗೌರವಿಸಿದೆ. ಇವರ ಭಾಗವತಿಕೆಯ ಅನೇಕ ಸ್ಮರಣಿಕೆಯ ಸೀಡಿಗಳು ಬಂದಿವೆ. ಮಹಾಬಲ ಹೆಗಡೆಯವರ ಪುತ್ರರಾದ ರಾಮಹೆಗಡೆಯವರು ವಯಲಿನ್ ವಾದಕರಾಗಿದ್ದು ತಂದೆಯವರ ಸಾಧನೆಗಳನ್ನು ಲೇಖನ ಹಾಗೂ ಪುಸ್ತಕರೂಪದಲ್ಲಿ ಪ್ರಕಟಿಸಿದ್ದಾರೆ. 'ಮಹಾಬಲ' ಎಂಬ ಅಭಿನಂದನ ಗ್ರಂಥ ಇವರಿಗೆ ಸಮರ್ಪಿಸಲಾಗಿದೆ. 14–08–83ರಲ್ಲಿ ಬೆಂಗಳೂರಿನ ದಕ್ಷಿಣ ಕನ್ನಡಿಗರ ಸಂಘವು ಸನ್ಮಾನ ನೀಡಿ ಗೌರವಿಸಿದೆ. ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಇವರಿಗೆ ಲಭಿಸಿದೆ. 30–6–1927ರಲ್ಲಿ ಜನಿಸಿದ ಮಹಾಬಲ ಹೆಗಡೆಯವರು ತಮ್ಮ 82ನೇ ವಯಸ್ಸಿನಲ್ಲಿ 29–10–2009ರಂದು ಇಹಲೋಕ ತ್ಯಜಿಸಿದ್ದಾರೆ. ಇಂದಿಗೂ ಪ್ರಜ್ಞಾವಂತ ಪ್ರೇಕ್ಷಕರು ಇವರ ಅದ್ಭುತ ಕಲಾಪ್ರತಿಭೆಯನ್ನು ನೆನೆಯುತ್ತಿರುತ್ತಾರೆ. ಇವರ ಮಾರ್ಗದರ್ಶನಗಳಿಂದ ಉಪಕೃತರಾದಮಂಟಪ ಪ್ರಭಾಕರ ಉಪಾಧ್ಯ, ಬಳ್ಕೂರು ಕೃಷ್ಣಯಾಜಿ, ಐರೋಡಿ ಗೋವಿಂದಪ್ಪ ಮುಂತಾದವರು ಈಗಲೂ ಮಹಾಬಲ ಹೆಗಡೆಯವರ ಕಲಾಪ್ರತಿಭೆಯನ್ನು ಕೊಂಡಾಡುತ್ತಿರುತ್ತಾರೆ.

12. ಕೆರೆಮನೆ ಶಂಭು ಹೆಗಡೆ

ಕೆರೆಮನೆ ಶಿವರಾಮ ಹೆಗಡೆ (1908–1993) ಯವರಿಂದ ಸ್ಥಾಪಿತಗೊಂಡ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ 1934) ಗೆ ಶಂಭೂ ಹೆಗಡೆಯವರಿಂದ ಕಾಯಕಲ್ಪ ದೊರೆಯಿತು. ಹೊಸ ಆವಿಷ್ಕಾರಗಳ ಸೇರ್ಪಡೆಯಾಯಿತು. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಕಡ್ಡಾಯ ಕಾಲಮಿತಿ ಪ್ರದರ್ಶನ, ಅರ್ಧ ಚಂದ್ರಾಕೃತಿಯ ರಂಗಮಂಟಪದ (ರಂಗಸ್ಥಳ) ನಿರ್ಮಾಣ, ಪಾತ್ರಗಳ ಸ್ವಭಾವಕ್ಕೆ ಅನುಗುಣವಾದ ತೆರೆಹಿಡಿಯುವಿಕೆ ಮುಂತಾದವುಗಳು ಮುಖ್ಯವಾದವು. ಇದರಿಂದಾಗಿ ಶಂಭು ಹೆಗಡೆಯವರೊಬ್ಬ ಪ್ರಜ್ಞಾವಂತ ರಂಗ ನಟ ಹಾಗೂ ಸಮರ್ಥ ಸಂಘಟಕ ಎಂಬುದು ಸಾಬೀತಾಯಿತು. ಗುಣವಂತೆಯಲ್ಲಿ ಎರಡು ಎಕರೆ ಜಾಗದಲ್ಲಿ 'ಕೆರೆಮನೆ ಶಿವರಾಮ ಹೆಗಡೆ ರಂಗಮಂದಿರ' ವನ್ನು ನಿರ್ಮಿಸಿದರು. ಇವರ ಕನಸಾದ ಶ್ರೀಮಯ ಯಕ್ಷಗಾನ ತರಬೇತಿ ಕೇಂದ್ರವು ಯಕ್ಷಗಾನ ಕಲಿಕಾ ಕೇಂದ್ರವಾಗಿ ಬಡಾ ಬಡಗುತಿಟ್ಟಿನ ಹಿರಿಮೆಗೆ

ಕಾರಣವಾಗಿದೆ. ಕರ್ನಾಟಕ ಸರಕಾರವು 1984ರಲ್ಲಿ ಇವರನ್ನು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿತು. ಇವರ ಕಾಲಾವಧಿಯಲ್ಲಿ ಅನೇಕ ಪ್ರಾತ್ಯಕ್ಷಿಕೆಗಳು ಶಿಬಿರಗಳು ನಡೆದಿವೆ. ಸ್ವಯಂ ಶಂಭು ಹೆಗಡೆಯವರೇ ಪ್ರಾತ್ಯಕ್ಷಿಕೆಗಳಲ್ಲಿ ಭಾಗವಹಿಸುವ ಮೂಲಕ ಯಕ್ಷಗಾನ ಪರಂಪರೆಯ ಉಳಿವಿಗೆ ಶ್ರಮಿಸಿದವರು. ಇವರ ನೇತ್ರತ್ವದಲ್ಲಿ ಇಡಗುಂಜಿ ಮೇಳವು ಬಹರೆನ್, ಫ್ರಾನ್ಸ್, ಸ್ಪೇನ್, ನೇಪಾಳ ಹಾಗೂ ಆಗ್ನೇಯ ಏಷ್ಯ ರಾಷ್ಟ್ರಗಳಲ್ಲಿ ಅಸಂಖ್ಯ ಪ್ರದರ್ಶನಗಳನ್ನು ನೀಡಿವೆ. 1994ರಲ್ಲಿ ಚೀನಾದ ಬೀಜಿಂಗ್ ನಲ್ಲಿ ಹಾಗೂ 1995ರಲ್ಲಿ ಬ್ರಿಟನ್ ನಲ್ಲಿ ನಡೆದ 'ಭಾರತೋತ್ಸವ'ಗಳಲ್ಲಿ ಇವರು ಪಾಲ್ಗೊಂಡಿದ್ದು ಅಪಾರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. 'ಪರ್ವ' ಚಲನಚಿತ್ರದಲ್ಲಿ ನಟಿಸಿದ್ದಕ್ಕೆ ಶಂಭು ಹೆಗಡೆಯವರಿಗೆ ಶ್ರೇಷ್ಠ ಪೋಷಕ ನಟ ಪ್ರಶಸ್ತಿ ಲಭಿಸಿದೆ. ಯಕ್ಷಗಾನರಂಗದಲ್ಲಂತೂ ಅನೇಕ ಪ್ರಶಸ್ತಿ, ಪುರಸ್ಕಾರಗಳಿಗೆ ಭಾಜನರಾಗಿದ್ದು ಅವುಗಳಲ್ಲಿ ಮುಖ್ಯವಾದವುಗಳೆಂದರೆ 1993ರಲ್ಲಿ ದೊರೆತ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಗೌರವ, 2000ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, 2003ರಲ್ಲಿ ಅನನ್ಯ ಪ್ರಶಸ್ತಿ, 2004ರಲ್ಲಿ ಸಾಧನಾ ಪ್ರಶಸ್ತಿ, 2006ರಲ್ಲಿ ಆರ್ಯಭಟ ಪ್ರಶಸ್ತಿ, 2009ರಲ್ಲಿ ಜೀವಮಾನ ಸಾಧನೆಗಾಗಿ ಪ್ರಶಸ್ತಿ, ಸರ್ವ ಶ್ರೇಷ್ಠ ಪುರುಷ ವೇಷಧಾರಿಯೆಂಬ ಪ್ರಶಸ್ತಿ ಮುಂತಾದವುಗಳು. ಅರವತ್ತಕ್ಕೂ ಹೆಚ್ಚಿನ ಪ್ರಸಂಗಗಳಲ್ಲಿ ನೂರ ಅರವತ್ತುಕ್ಕೂ ಹೆಚ್ಚಿನ ಪಾತ್ರವನ್ನು ವಹಿಸಿರುವ ಶಂಭು ಹೆಗಡೆಯವರು ಐದುಸಾವಿರದ ಐನೂರು ಪ್ರದರ್ಶನಗಳಲ್ಲಿ ಭಾಗಯಾಗಿದ್ದಾರೆ. ದಿನಾಂಕ 02-02-2009ರಲ್ಲಿ ಅವರ ನೆಚ್ಚಿನ ಆರಾಧ್ಯ ದೈವರಾದ ಶ್ರೀ ಇಡಗುಂಜಿ ಮಹಾಗಣಪತಿಯ ಮುಂದೆ ನಡೆದ ಶ್ರೀರಾಮ ನಿರ್ಯಾಣ ಪ್ರಸಂಗದ ರಾಮನ ಪಾತ್ರಧಾರಿಯಾಗಿ ನಟಿಸುತ್ತಾ ರಂಗಸ್ಥಳದಲ್ಲೇ ಗತಿಸಿದರು. ಕೆರೆಮನೆ ಶಂಭು ಹೆಗಡೆಯವರು ಯಕ್ಷಗಾನರಂಗದ ಅದ್ಭುತ ಪ್ರತಿಭೆಯಾಗಿದ್ದು, ಇವರ ಕುರಿತು ನಡೆಸಿದ ಅಧ್ಯಯನಕ್ಕೆ ಸಾಗರದ ಜಿ.ಎಸ್. ಭಟ್ ಎಂಬವರಿಗೆ ಪಿ.ಹೆಚ್‌ಡಿ ಪದವಿ ಲಭಿಸಿದೆ. ಇದು 'ಕೆರೆಮನೆ ಶಂಭುಹೆಗಡೆ ಅಧ್ಯಯನ' ಎಂಬ ಕೃತಿಯಾಗಿ 2004ರಲ್ಲಿ ಪ್ರಕಟಗೊಂಡಿದೆ.

13. ಚಿಟ್ಟಾಣಿ ರಾಮಚಂದ್ರ ಹೆಗಡೆ

ಚಿಟ್ಟಾಣಿಯವರ ಸಂದರ್ಶನದ ನಂತರದ ಮೂರು ದಶಕಗಳಲ್ಲಿ ಅಸಾಮಾನ್ಯ ಕಲಾವಿದರಾಗಿ ಬೆಳೆದು ಮೆರೆದ ಇವರು ಯಕ್ಷಗಾನ ಕ್ಷೇತ್ರದ ಮಡಿಲಿಗೆ ಮೊಟ್ಟಮೊದಲ 'ಪದ್ಮಶ್ರೀ' ಪ್ರಶಸ್ತಿಯನ್ನು ಗಳಿಸಿಕೊಟ್ಟರು. 2012ರಲ್ಲಿ ಇವರಿಗೆ ಅಂದಿನ ರಾಷ್ಟ್ರಪತಿ ಶ್ರೀಮತಿ ಪ್ರತಿಭಾ ಪಾಟಿಲ್ ಅವರು ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿದರು. 18-9-1935 ರಲ್ಲಿ ಜನಿಸಿದ ಇವರು ತಮ್ಮ 80ನೇ ವಯಸ್ಸಿನಲ್ಲಿ ಗೆಜ್ಜೆಕಟ್ಟಿ ರಂಗಸ್ಥಳಕ್ಕೆ

ಪ್ರವೇಶಿಸಿದರೆ ತರುಣರೇ ಆಗಿ ಮಾರ್ಪಡುತ್ತಾರೆ. ಅನನ್ಯ ಉತ್ಸಾಹ, ಅಭಿನಯ, ಕುಣಿತ ಹಾವಭಾವಗಳಲ್ಲಿ ಅವರನ್ನು ಮೀರಿಸುವವರೇ ಇಲ್ಲ ಎಂಬಂತಿದ್ದರು. 2017ರ ಅಕ್ಟೋಬರ್ 3ರಂದು ಚಿಟ್ಟಾಣಿ ರಾಮಚಂದ್ರ ಹೆಗಡೆಯವರು ಗತಿಸಿದಾಗ ಇಡೀ ಯಕ್ಷಗಾನ ಪ್ರಪಂಚವೇ ದುಃಖದಲ್ಲಿ ಮುಳುಗಿತು. ತೆಂಕು, ನಡು, ಬಡಗು ತಿಟ್ಟುಗಳೆಂಬ ಭೇದವಿಲ್ಲದೆ ಪ್ರೇಕ್ಷಕರ ಕಣ್ಮಣಿಯಾಗಿದ್ದರು. ಇವರ ಮಕ್ಕಳಾದ ಸುಬ್ರಹ್ಮಣ್ಯ ಚಿಟ್ಟಾಣಿ, ನರಸಿಂಹ ಚಿಟ್ಟಾಣಿ, ನಾರಾಯಣ ಚಿಟ್ಟಾಣಿ ಯಕ್ಷಗಾನ ರಂಗದೊಂದಿಗೆ ಸಂಪರ್ಕ ಇರಿಸಿಕೊಂಡಿದ್ದಾರೆ. ಇವರಿಗೆ 'ರಸರಾಜ' ಎಂಬ ಅಭಿನಂದನ ಗ್ರಂಥದ ಸಮರ್ಪಣೆಯಾಗಿದೆ. ಇವರ ಆತ್ಮಕಥನ 'ನಮ್ಮ ಚಿಟ್ಟಾಣಿ' ಬಹುಜನಪ್ರಿಯ ಕೃತಿಯಾಗಿದೆ. ಇವರಿಗೆ 2004ರಲ್ಲಿ ಜಾನಪದಶ್ರೀ, 2009ರಲ್ಲಿ ಶಿವರಾಮ ಕಾರಂತ ಪ್ರಶಸ್ತಿ, ಉಡುಪಿ ಮಠದಿಂದ ಆಸ್ಥಾನ ಕಲಾವಿದ ಬಿರುದು, 2012ರಲ್ಲಿ ಆಳ್ವಾಸ್ ನುಡಿಸಿರಿ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ, ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಲಭಿಸಿವೆ.

14. ಕುಂಬಳೆ ಸುಂದರರಾವ್

ಧರ್ಮಸ್ಥಳ ಮೇಳದಲ್ಲಿ ಸುದೀರ್ಘ ವೃತ್ತಿಜೀವನ ನಡೆಸಿದ ಕುಂಬಳೆ ಸುಂದರ ರಾಯರು 1994 ರಲ್ಲಿ ಕರ್ನಾಟಕ ವಿಧಾನಸಭಾಗೆ ಆಯ್ಕೆಯಾಗಿ 1999ರವರೆಗೆ ಶಾಸಕರಾಗಿದ್ದರು. ಹೀಗಿದ್ದು ಅತಿಥಿ ಕಲಾವಿದರಾಗಿ ಯಕ್ಷಗಾನ ಪ್ರದರ್ಶನಗಳಲ್ಲಿ, ತಾಳಮದ್ದಳೆಗಳಲ್ಲಿ ಭಾಗವಹಿಸಿ ಯಕ್ಷಗಾನದ ನಂಟನ್ನು ಉಳಿಸಿಕೊಂಡಿದ್ದಾರೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಕ್ರಿಯ ಸದಸ್ಯರಾಗಿದ್ದ ಇವರು 'ಸಂಸ್ಕಾರಭಾರತಿ'ಯ ರಾಜ್ಯಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿ ಸಾಹಿತ್ಯ, ಸಂಗೀತ, ಕಲೆಗಳ ಉಚ್ಛ್ರಾಯಕ್ಕಾಗಿ ಶ್ರಮಿಸಿದ್ದಾರೆ. ವಾಗ್ಮಿಗಳು ಧಾರ್ಮಿಕ ಭಾಷಣಕಾರರೂ ಆಗಿರುವ ಇವರು ಅಸಂಖ್ಯ ಉಪನ್ಯಾಸಗಳನ್ನು ನಾಡಿನಾದ್ಯಂತ ನೀಡಿದ್ದಾರೆ. 'ಸುಂದರಕಾಂಡ' ಎಂಬ ಇವರ ಅಭಿನಂದನ ಗ್ರಂಥದಲ್ಲಿ ತಮ್ಮ ಜೀವನದ ಆತ್ಮಕಥನವನ್ನು ನಿರೂಪಿಸಿದ್ದಾರೆ. ಸ್ವತಂತ್ರವಾದ ಯಕ್ಷಗಾನ ಬಯಲಾಟ ಅಕಾಡೆಮಿಯ ಮೊದಲ ಅಧ್ಯಕ್ಷರಾಗಿ ಹತ್ತು ಹಲವು ಕ್ರಿಯಾಶೀಲ ಯೋಜನೆಗಳನ್ನು ರೂಪಿಸಿಕೊಟ್ಟಿದ್ದಾರೆ. ಪತ್ನಿ ಶ್ರೀಮತಿ ಸುಶಿಲಾ ಅವರೊಂದಿಗೆ ಸುಖಜೀವನ ನಡೆಸುತ್ತಿರುವ ಇವರಿಗೆ ಐವರು ಮಕ್ಕಳು. ಬೆಹರೆನ್, ಮುಂಬಯಿ, ದೆಹಲಿ, ಬೆಂಗಳೂರು, ಮಂಗಳೂರು ಮುಂತಾದ ನಗರಗಳ ಸಂಘಸಂಸ್ಥೆಗಳು ಪ್ರಶಸ್ತಿ, ಸನ್ಮಾನ ಪತ್ರವನ್ನಿತ್ತು ಗೌರವಿಸಿವೆ. ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕೇರಳ ಕಲಾ ಮಂಡಳಿ ಪ್ರಶಸ್ತಿ, ಯಕ್ಷಮಂಗಳ ಪ್ರಶಸ್ತಿ, ಕನ್ನಡಶ್ರೀ ಪ್ರಶಸ್ತಿ, ಕರ್ನಾಟಕ ಶ್ರೀ ಪ್ರಶಸ್ತಿ ಮುಂತಾದ ಹಲವು ಪ್ರಶಸ್ತಿಗಳು ಬಂದಿವೆ.

15. ಡಾ. ಕೋಳ್ಯೂರು ರಾಮಚಂದ್ರರಾವ್

ಕಳೆದ ಏಳು ದಶಕಗಳಿಂದ ಪಾತ್ರದ ಪರಕಾಯ ಪ್ರವೇಶ ಮಾಡಿ ಅಸಾಮಾನ್ಯವಾದ ಸಾತ್ವಿಕ ಅಭಿನಯದಮೂಲಕ ಜನಮನವನ್ನು ಗೆದ್ದಿರುವ ಕೋಳ್ಯೂರರಿಗೆ 2010ರಲ್ಲಿ ಮಂಗಳೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡಿದೆ. ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿಯನ್ನು ಅಂದಿನ ರಾಷ್ಟ್ರಪತಿ ಪ್ರತಿಭಾ ಪಾಟಿಲ್ ರು ನೀಡಿ ಗೌರವಿಸಿದ್ದಾರೆ. ಇಂದಿಗೂ ಸ್ತ್ರೀ ಪಾತ್ರದ ವೇಷಗಾರಿಕೆಯ ಬಗ್ಗೆ ಸಮರ್ಥವಾಗಿ ಸಮರ್ಪಕವಾಗಿ ಮಾತನಾಡ ಬಲ್ಲ ಕೋಳ್ಯೂರು ರಾಮಚಂದ್ರ ರಾಯರು ಅನೇಕ ವಿಚಾರ ಸಂಕಿರಣಗಳಲ್ಲಿ, ಪ್ರಾತ್ಯಕ್ಷಿಕೆಗಳಲ್ಲಿ ಭಾಗವಹಿಸಿ ತಮ್ಮ ಅನುಭವವನ್ನು ಎಳೆಯರಿಗೆ ಧಾರೆಯೆರೆದಿದ್ದಾರೆ. ಇವರು ಬರಹಗಾರರಾಗಿಯೂ ಖ್ಯಾತಿ ಪಡೆದವರು. ಅನೇಕ ಸ್ಮರಣ ಸಂಚಿಕೆಗೆ, ಅಭಿನಂದನ ಗ್ರಂಥಗಳಿಗೆ ದೈನಿಕಗಳಿಗೆ ಲೇಖನ ಬರೆಯುತ್ತಿದ್ದಾರೆ. 2005ರಿಂದ ಮೂರು ವರ್ಷಗಳ ಕಾಲ ತುಳು ಅಕಾಡೆಮಿ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದಾರೆ. 9-11-1932 ರಲ್ಲಿ ಜನಸಿದ ಇವರು ಮೇಳದ ಬದುಕಿನಲ್ಲಿ ಎಪ್ಪತ್ತು ವರ್ಷಗಳ ಅನುಭವವನ್ನು ಅನೇಕ ಕಡೆ ದಾಖಲಿಸಿದ್ದಾರೆ. ಇವರ ಪುತ್ರಿ ವಿದ್ಯಾ ಕೋಳ್ಯೂರು ದೆಹಲಿಯಲ್ಲಿದ್ದು ಉತ್ತರಭಾರತದಲ್ಲಿ ಯಕ್ಷಗಾನ ಪ್ರಸಾರ ಮಾಡುವಲ್ಲಿ ಅನನ್ಯ ಕಾರ್ಯಗಳನ್ನು ಮಾಡುತ್ತಿದ್ದಾರೆ. ರಾಮಚಂದ್ರರಾಯರು ಇಂದಿಗೂ ನೂರಾರು ಶಿಷ್ಯರಿಗೆ ತರಬೇತಿ ನೀಡುತ್ತಾ, ಸಕ್ರಿಯವಾಗಿ ಯಕ್ಷಗಾನದ ಬಗ್ಗೆ ಚಿಂತಿಸಬಲ್ಲ, ಅಥೆಂಟಿಕ್ ಆಗಿ ಮಾತನಾಡಬಲ್ಲ ವ್ಯಕ್ತಿಯಾಗಿ ಯಕ್ಷಗಾನರಂಗದ ಅಮೂಲ್ಯ ಆಸ್ತಿಯಾಗಿ ನಮ್ಮೊಡನೆ ಇದ್ದಾರೆ. ಇವರಿಗೆ ಭಾರ್ಗವ ಪ್ರಶಸ್ತಿ, ತುಳು ಅಕಾಡೆಮಿ ಪ್ರಶಸ್ತಿ ಜಾನಪದ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳು ಲಭಿಸಿವೆ.

16. ಕೋಟ ವೈಕುಂಠ

ನಾಲ್ಕು ದಶಕಗಳ ಕಾಲ ಸ್ತ್ರೀಪಾತ್ರದಲ್ಲಿ ಮಿಂಚಿ ರಾಜ್ಯದಾದ್ಯಂತ ಹೆಸರು ಮಾಡಿದ ಕೋಟ ವೈಕುಂಠರು 19-8-2004ರಂದು ಅಪಾರ ಅಭಿಮಾನಿಗಳನ್ನು ಅಗಲಿದರು. ಮಳೆಗಾಲದಲ್ಲಿ ಅವರು ಬೆಂಗಳೂರು ಮತ್ತು ಅದರ ಸುತ್ತಮುತ್ತಲಿನ ನಗರಗಳಿಗೆ ಯಕ್ಷಗಾನ ಪ್ರವಾಸಿ ಮೇಳಗಳನ್ನು ಕರೆದುಕೊಂಡು ಹೋಗಿ ಪ್ರದರ್ಶಿಸುವ ಮೂಲಕ ಯಕ್ಷಗಾನ ಪ್ರಸರಣದ ಕೈಂಕರ್ಯದಲ್ಲಿ ತೊಡಗಿ ಖ್ಯಾತರಾದವರು. ಬೆಂಗಳೂರಿನ ಹೋಟೆಲ್ ಉದ್ಯಮಿಗಳಿಗೆ, ಅಲ್ಲಿನ ಕಾರ್ಮಿಕರಿಗೆ ಅವರು ಚಿರಪರಿಚಿತರು. ಅಮೃತೇಶ್ವರಿ ಮೇಳದಲ್ಲಿ ಹಾಗೂ ಬಚ್ಚಗಾರು ಮೇಳದಲ್ಲಿ ಚಿಟ್ಟಾಣಿ ರಾಮಚಂದ್ರ ಹೆಗಡೆ ಹಾಗೂ ಕೋಟ ವೈಕುಂಠರ ಜೋಡಿ ಆಕರ್ಷಣೆಯ ಕೇಂದ್ರವಾಗಿತ್ತು. ವೈಕುಂಠರ ಸ್ತ್ರೀ ಪಾತ್ರದಲ್ಲಿನ ಲಾಲಿತ್ಯ, ಸಹಜ ಲಾಸ್ಯವನ್ನು ಪ್ರೇಕ್ಷಕರು ಮುಕ್ತಕಂಠದಿಂದ ಶ್ಲಾಘಿಸುತ್ತಾರೆ. ಅವರ

ಸಹಜ ನಡಿಗೆ, ಬಾಗು ಬಳುಕು ಸೊಂಟ, ಕೈ, ಮೈಯೆಲ್ಲ ಸ್ತ್ರೀಯರ ಸಹಜಭಾವವನ್ನು ಪಡಿಮೂಡಿಸುತ್ತವೆ. ಹೆಚ್ಚು ನರ್ತನವಿಲ್ಲದ ಹಾವಭಾವದಲ್ಲೇ ಎಲ್ಲವನ್ನು ಬಿಂಬಿಸುವ ಶಕ್ತಿ ಅವರಿಗೆ ಇದೆ ಎಂಬ ಮಂಟಪ ಪ್ರಭಾಕರ ಉಪಾಧ್ಯರ ಮಾತು ಯಥಾರ್ಥವಾಗಿದೆ, ಅವರ ಮಾತುಗಾರಿಕೆ ಸಂಕ್ಷಿಪ್ತವಾಗಿದ್ದು ಸಹಜಸುಂದರವಾಗಿದೆ. 1960-70ರ ದಶಕದಲ್ಲಿ ಅವರು ನೀಡಿದ ಅಭಿಮನ್ಯು, ಸುಧನ್ವ, ಪ್ರಭಾವತಿ, ವಿಷಯೆ, ಪ್ರಮೀಳೆ ಮುಂತಾದ ಪಾತ್ರಗಳನ್ನು ಜನ ಇಂದಿಗೂ ನೆನೆಯುತ್ತಾರೆ.

17. ಪೆರುವಡಿ ನಾರಾಯಣ ಭಟ್

ತೆಂಕುತಿಟ್ಟಿನ ಹಾಸ್ಯದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿರುವ ಪೆರುವಡಿಯವರಿಗೆ ಈಗ 93 ವರ್ಷ (ಜನನ 28-5-1927). ಆದರೂ ಅವರ ಉತ್ಸಾಹ ಕುಂದಿಲ್ಲ ಅತ್ಯಂತ ಸರಳ ಜೀವಿಯಾದ ವೃತ್ತಿ ಮೇಳಗಳಿಂದ ನಿವೃತ್ತಿ ಹೊಂದಿದರೂ ಆಗಾಗ ಒಮ್ಮೊಮ್ಮೆ ಪ್ರದರ್ಶನಗಳಲ್ಲಿ ಭಾಗವಹಿಸುತ್ತಿದ್ದಾರೆ. ಇವರಿಗೆ ಮೂವರು ಹೆಣ್ಣು ಮಕ್ಕಳಿದ್ದು ಅವರು ಬೇರೆ ರಂಗಗಳಲ್ಲಿ ದುಡಿಯುತ್ತಿದ್ದಾರೆ. ಮೂಲತಃ ಪದ್ಯಾಣ ಮನೆತನದಲ್ಲಿ ಹುಟ್ಟಿದ್ದರೂ ಅಜ್ಜನ ಮನೆ ಪೆರುವಡಿಯಲ್ಲಿ ನೆಲೆಸಿದ ಇವರು ಈಗ ಪತ್ನಿ ಸಾವಿತ್ರಿಯೊಂದಿಗೆ ಸರಳ, ಸಂತೃಪ್ತ ಜೀವನ ನಡೆಸುತ್ತಿದ್ದಾರೆ. ಯಕ್ಷಗಾನ ರಂಗದಲ್ಲಿ 75 ವರ್ಷಗಳ ಸುದೀರ್ಘವಾಗಿ ವ್ಯವಸಾಯ ಮಾಡಿರುವ ನಾರಾಯಣ ಭಟ್‌ರಿಗೆ 'ವಿದೂಷಕ ಶಿಖಾಮಣಿ' 'ಹಾಸ್ಯವಿಶಾರದ' ಎಂಬೆಲ್ಲ ಬಿರುದುಗಳು ಬಂದಿವೆ. ಕೇರಳ, ಮುಂಬಯಿ, ಆಗ್ರಾ, ಅಹ್ಮದಾಬಾದ್, ದೆಹಲಿ ಮೊದಲಾದ ಕಡೆಗಳಲ್ಲಿ ಸಂಘ ಸಂಸ್ಥೆಗಳು ಸನ್ಮಾನ ಪತ್ರ ನೀಡಿ ಗೌರವಿಸಿವೆ. ರಾಜ್ಯೋತ್ಸವ ಜಿಲ್ಲಾ ಪ್ರಶಸ್ತಿ, ಉಡುಪಿಯ ಯಕ್ಷಕಲಾರಂಗದ ಪ್ರಶಸ್ತಿ, ಕೋಡಪದವು ಕರ್ಗಲ್ಲು ಸುಬ್ಬಣ್ಣ ಪ್ರಶಸ್ತಿ ಮೊದಲಾದವುಗಳಿಂದ ಗೌರವಿಸಲ್ಪಟ್ಟಿದ್ದಾರೆ. 'ಹಾಸ್ಯಗಾರನ ಅಂತರಂಗ' ಎಂಬ ಆತ್ಮಕಥನ ನಿರೂಪಣೆಯನ್ನು ನಾ. ಕಾರಂತ ಪೆರಾಜೆಯವರು 2002ರಲ್ಲಿ ಪ್ರಕಟಿಸಿದ್ದಾರೆ.

18. ಕುಂಜಾಲು ರಾಮಕೃಷ್ಣಯ್ಯ

'ಯಕ್ಷಗಾನದ ತೆನಾಲಿ' ಎಂದು ಜನರು ಪ್ರೀತಿಯಿಂದ ಕರೆದು ಗೌರವಿಸುವ ಬಡಗುತಿಟ್ಟಿನ ಕುಂಜಾಲು ರಾಮಕೃಷ್ಣಯ್ಯನವರು ಹಾಸ್ಯಪಾತ್ರದಲ್ಲಿ ಅದ್ವಿತೀಯ ಅಭಿನಯ ನೀಡಿ ಹೆಸರುಗಳಿಸಿದವರು. ಅನಾರೋಗ್ಯದಿಂದಾಗಿ 1998ರಿಂದ ವೃತ್ತಿ ಮೇಳಕ್ಕೆ ವಿದಾಯ ಹೇಳಿದ್ದಾರೆ. 37 ವರ್ಷಗಳ ಕಾಲ ಅನೇಕ ಮೇಳಗಳಲ್ಲಿ ತಿರುಗಾಟ ಮಾಡಿರುವ ಅವರ ಬೇಡರ ಕಣ್ಣಪ್ಪದ ಕಾಶಿಮಾಣಿ, ಗದಾಯುದ್ಧದ ಬೇಹಿನಚರ, ಪಟ್ಟಾಭಿಷೇಕದ ಮಂಥರೆ ವಿರಾಟಪರ್ವತ ಉತ್ತರಕುಮಾರ, ಬಾಹುಕ, ವಿಜಯ, ವಿದೂರಥನಂತಹ

ಪಾತ್ರಗಳು ಜನಮಾನಸದಲ್ಲಿ ಚಿರಸ್ಥಾಯಿಯಾಗಿವೆ. ತಮ್ಮ 69ನೇ ವರ್ಷದಲ್ಲಿ 2015ರಲ್ಲಿ ಇಹಲೋಕ ತ್ಯಜಿಸಿದರು. ಇವರಿಗೆ ರಾಜ್ಯೋತ್ಸವ ಪ್ರಶಸ್ತಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಉಡುಪಿಯ ಯಕ್ಷಗಾನ ಕಲಾರಂಗ ಪ್ರಶಸ್ತಿ, ಪಳ್ಳಿ ಸೋಮನಾಥ ಹೆಗ್ಡೆ ಪ್ರಶಸ್ತಿ, ಯಕ್ಷದೇಗುಲ ಪ್ರಶಸ್ತಿ, ಕೆರೆಮನೆ ಗಜಾನನ ಹೆಗಡೆ ಪ್ರಶಸ್ತಿ ಲಭಿಸಿವೆ. ಜೀವಿತದ ಕೊನೆಯ 17 ವರ್ಷಗಳ ಕಾಲ ಪಾರ್ಶ್ವವಾಯುಪೀಡಿತರಾಗಿ ಯಕ್ಷಗಾನದಲ್ಲಿ ಭಾಗವಹಿಸಲಾಗದೆ ಉಳಿಯಬೇಕಾಯಿತಲ್ಲ ಎಂಬ ವಿಷಾದದಲ್ಲೇ ಬದುಕನ್ನು ಸಾಗಿಸಿದ್ದು ಈ ಹಾಸ್ಯ ಚಕ್ರವರ್ತಿಯ ಪಾಲಿನ ನೋವಿನ ಸಂಗತಿ.

19. ಹಿರಿಯಡ್ಕ ಗೋಪಾಲರಾವ್

ಹಿರಿಯಡ್ಕರು ಜಪಾನಿನಲ್ಲಿ ನಡೆದ 1981ರ ಏಶಿಯನ್ ಕಲ್ಚರಲ್ ಸೆಮಿನಾರ್‌ನಲ್ಲಿ ಯಕ್ಷಗಾನ ಮದ್ದಳೆಯ ನುಡಿತದ ವಿನ್ಯಾಸ ತೋರಿಸಿಕೊಟ್ಟದ್ದು ಸರ್ವಮಾನ್ಯವಾಗಿದೆ. ಈ ಶತಾಯುಷಿಗೆ ಅನೇಕ ಸಂಘ ಸಂಸ್ಥೆಗಳು ಗೌರವಿಸಿವೆ. 1982ರಲ್ಲಿ ಜಿಲ್ಲಾಸಾಹಿತ್ಯ ಸಮ್ಮೇಳನ ಗೌರವ, 1997ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಗೌರವ ಪ್ರಶಸ್ತಿ ಕರ್ನಾಟಕ ಸರಕಾರದಿಂದ ಜಾನಪದಶ್ರೀ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ರಾಜ್ಯ ಸಂಗೀತ ನಾಟಕ ಅಕಾಡೆಮಿ ಗೌರವ ಪ್ರಶಸ್ತಿ ಮುಂತಾದವುಗಳು ಇವುಗಳಲ್ಲಿ ಮುಖ್ಯವಾದವುಗಳು. ಇವರ ಆತ್ಮ ವೃತ್ತಾಂತ ಹಾಗೂ ಅನುಭವ ಕಥನದ ನಿರೂಪಣೆಯನ್ನು ಯಕ್ಷಗಾನ ಕವಿ, ವಿದ್ವಾಂಸ ಹಾಗೂ ಪತ್ರಕರ್ತರಾದ ರಾಘವ ನಂಬಿಯಾರ್ ಅವರು 1997ರಲ್ಲಿ 'ಮದ್ದಳೆಯ ಮಾಯಾಲೋಕ' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. 15-12-2019ರಲ್ಲಿ ಜನಿಸಿದ ಹಿರಿಯಡಕ ಗೋಪಾಲರಾವ್ ಅವರ ಜನ್ಮಶತಾಬ್ಧಿ ಸಮಾರಂಭ ಕರಾವಳಿಯುದ್ದಕ್ಕೂ ಗೌರವಾದರಗಳೊಂದಿಗೆ ನಡೆಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆ, ಖ್ಯಾತ ನಟಿ ಜಯಮಾಲಾ ಅವರು ಹಿರಿಯಡಕ ಗೋಪಾಲರಾಯರ ಮನೆಗೆ ತೆರಳಿ 'ರಾಜ್ಯೋತ್ಸವ' ಪ್ರಶಸ್ತಿ ನೀಡಿ ಗೌರವಿಸಿದರು. ಹಿರಿಯಡಕ ಗೋಪಾಲರಾಯರು 17-10-2020ರಂದು ಇಹಲೋಕ ತ್ಯಜಿಸಿದರೂ ಅವರ ಮದ್ದಳೆಯ ಮಾಂತ್ರಿಕ ಧ್ವನಿ ಕೇಳುಗರ ಕಿವಿಯಲ್ಲಿ ಈಗಲೂ ಅನುರಣಿಸುತ್ತಿರುತ್ತದೆ.

20. ದುರ್ಗಪ್ಪ ಗುಡಿಗಾರ್

ನಾಲ್ಕು ದಶಕಗಳ ಕಾಲ ಮದ್ದಲೆಯನ್ನು ನುಡಿಸುತ್ತಾ' ಮದ್ದಳೆಯ ಮಾಂತ್ರಿಕ' ಎಂದೇ ಖ್ಯಾತರಾಗಿದ್ದ ಗುಡಿಗಾರ್‌ರು ಅನಾರೋಗ್ಯದಿಂದ 29-5-2007ರಂದು ಇನ್ನಿಲ್ಲವಾದರು. ಆದರೂ ಏಳು ಮದ್ದಲೆಗಳನ್ನು ಏಕಕಾಲಕ್ಕೆ ನುಡಿಸುವ ಮೂಲಕ

ದಾಖಲೆ ಸೃಷ್ಟಿಸಿದ್ದ ಇವರನ್ನು ಯಕ್ಷಗಾನ ಅಭಿಮಾನಿಗಳು ಇಂದಿಗೂ ನೆನೆಯುತ್ತಾರೆ. ಪೆರ್ಡೂರು ಮೇಳದಲ್ಲಿ ಸುಬ್ರಹ್ಮಣ್ಯ ಧಾರೇಶ್ವರರೊಂದಿಗಿನ ಇವರ ಜೋಡಿ ಜನಪ್ರಿಯವಾಗಿತ್ತು. 2003ರಲ್ಲಿ ನಡೆದ 'ಯಕ್ಷಗಾನ ಹಿಮ್ಮೇಳ ವೈಭವ'ದಲ್ಲಿ ಇವರಿಬ್ಬರ ಪ್ರದರ್ಶನ ರಸಿಕರ ಮನ ಸೆಳೆದಿತ್ತು. ಇವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಗೌರವ ಪ್ರಶಸ್ತಿ 2006ರಲ್ಲಿ ಬೆಂಗಳೂರಿನ ಯಕ್ಷ ಮಿತ್ರಕೂಟದ ರಂಗಸ್ಥಳ ಪ್ರಶಸ್ತಿ, ಜಿಲ್ಲಾಡಳಿತ ಪ್ರಶಸ್ತಿ, ಮಸ್ಕತ್‌ನಲ್ಲಿ ರಾಯಭಾರಿಗಳಿಂದ ಗೌರವಾರ್ಪಣೆ ಮುಂತಾದವು ಸಂದಿವೆ. ದುರ್ಗಪ್ಪ ಗುಡಿಗಾರ ಚಾರಿಟೆಬಲ್ ಟ್ರಸ್ಟ್ ಕಳೆದ ಹನ್ನೆರಡು ವರ್ಷಗಳಿಂದ ಯಕ್ಷಗಾನ ಪ್ರದರ್ಶನ, ಮಕ್ಕಳಿಗೆ ಯಕ್ಷಗಾನ ತರಬೇತಿ, ಸನ್ಮಾನ ಮುಂತಾದ ಕಾರ್ಯಕ್ರಮಗಳನ್ನು ನಡೆಸುತ್ತಾ ಅವರ ಹೆಸರನ್ನು ಚಿರಸ್ಥಾಯಿಯಾಗಿಸಲು ಪ್ರಯತ್ನಿಸುತ್ತಿದೆ. ಅವರ ಪುತ್ರಿ ಉಮಾ ದುರ್ಗಪ್ಪ ಗುಡಿಗಾರ್ ಈಗಲೂ ಭಾಗವತಿಕೆ ಮಾಡುವುದರ ಮೂಲಕ ಯಕ್ಷಗಾನದ ನಂಟನ್ನು ಮುಂದುವರಿಸುತ್ತಿದ್ದಾರೆ.

ಮಂಟಪ ಪ್ರಭಾಕರ ಉಪಾಧ್ಯ, ಬಳ್ಕೂರು ಕೃಷ್ಣ ಯಾಜಿ ಹಾಗೂ ತಾರಾನಾಥ ವರ್ಕಾಡಿಯವರ ಸಂದರ್ಶನಗಳು ಈಚೆಗೆ ನಡೆದಿದ್ದು ಪರಿಷ್ಕೃತ ಮುದ್ರಣದಲ್ಲಿ ಸೇರ್ಪಡೆಯಾದವು. ಆದ್ದರಿಂದ ಮರುವಿಚಾರಗಳೇನೂ ಇಲ್ಲ.

ಮುವತ್ತೈದು ವರ್ಷಗಳ ಕೆಳಗೆ ನಡೆದ ಕಲಾವಿದರ ಸಂದರ್ಶನಗಳನ್ನು ಆಧರಿಸಿ ಹಿಂದೆ ಸಮೀಕ್ಷೆ ನಡೆಸಿ ಚರ್ಚಿಸಲಾಗಿತ್ತು. ಆ ಕಾಲದ ತುರ್ತು ವಿಚಾರಗಳಾದ ಟೆಂಟ್ ಮೇಳಗಳ ಬಗ್ಗೆ, ಸಭಾಲಕ್ಷಣದ ಭಾಗ ಕುಂದುತ್ತಿರುವುದರ ಬಗ್ಗೆ, ಆಗ ಹೊಸದಾಗಿ ಹುಟ್ಟಿಕೊಂಡಿದ್ದ ತರಬೇತಿ ಕೇಂದ್ರಗಳ ಬಗ್ಗೆ, ಕಾಲಮಿತಿ ಪ್ರದರ್ಶನಗಳ ಸಾಧ್ಯತೆ ಬಗ್ಗೆ, ಯಕ್ಷಗಾನಕ್ಕೊಂದು ಅಕಾಡೆಮಿಯ ಅಗತ್ಯದ ಬಗ್ಗೆ. ನೂತನ ಮತ್ತು ತುಳು ಪ್ರಸಂಗಗಳ ಪ್ರದರ್ಶನಗಳ ಬಗ್ಗೆ ಪ್ರಸ್ತಾಪಿಸಿ ಕಲಾವಿದರ ಅಭಿಪ್ರಾಯಗಳನ್ನು ಕ್ರೋಢೀಕರಿಸಲಾಗಿತ್ತು. ಈಗ ಈ ಮೇಲಿನ ಅಂಶಗಳಲ್ಲಿ ಕೆಲವು ಸಮಸ್ಯೆಗಳು ಬಗೆಹರಿದಿವೆ. ಇನ್ನು ಕೆಲವು ಚರ್ಚೆಯ ವಿಷಯವಾಗಿಯೇ ಮುಂದುವರಿಯುತ್ತಿವೆ. ಇವಲ್ಲದೆ ಬದಲಾದ ಕಾಲದಿಂದಾಗಿ ಇನ್ನಷ್ಟು ಹೊಸ ವಿಚಾರಗಳು ಚರ್ಚೆ ಮಾಡಬೇಕಾಗಿದೆ. ಈ ಕಾರಣ ಮರುಸಮೀಕ್ಷೆಯೊಂದನ್ನು 'ಬದಲಾದ ಕಾಲ'ದಲ್ಲಿ ಮಾಡಲಾಗಿದೆ.

ಬದಲಾದ ಕಾಲ

ಈ ಶತಮಾನದ ಪ್ರಾರಂಭ ಹರಕೆಯ ಯಕ್ಷಗಾನ ಬಯಲಾಟಕ್ಕೆ ಹೊಸ ಬದುಕನ್ನು ನೀಡಿದೆ. ಹಿಂದೆ ಬೆರಳೆಣಿಕೆಯಷ್ಟರ ಹರಕೆ ಆಟದ ಮೇಳಗಳ ಸಂಖ್ಯೆ ಅತ್ಯಧಿಕವಾಗಿವೆ. ಕಟೀಲು, ಮಂದಾರ್ತಿ ದೇವಸ್ಥಾನಗಳಲ್ಲಿ ಐದೈದು ಮೇಳಗಳಿದ್ದು ಹರಕೆಗಳನ್ನು ಮುಗಿಸಲು ಸಾಧ್ಯವಾಗುತ್ತಿಲ್ಲ. ಅಲ್ಲದೆ ಹೆಚ್ಚಿನ ದೇವಸ್ಥಾನಗಳ ಹೆಸರಿನಲ್ಲಿ ಹೊಸ ಮೇಳಗಳು

ಹುಟ್ಟಿಕೊಂಡಿವೆ. ಹರಕೆ ಆಟಗಳು ಸಾಕಷ್ಟು ನಡೆಯುತ್ತಿರುತ್ತವೆ. ಆದರೆ ಮಧ್ಯರಾತ್ರಿಯನಂತರ ಅಲ್ಲಿ ನೋಡುವ ಪ್ರೇಕ್ಷಕರ ಬರ ಕಾಣುತ್ತಿದೆ. ಶ್ರೀಕ್ಷೇತ್ರ ಧರ್ಮಸ್ಥಳದ ಮೇಳ ಈಗಾಗಲೇ ಕಾಲಮಿತಿ ಪ್ರದರ್ಶನ ವ್ಯವಸ್ಥೆಗೆ ಬದಲಾಗಿವೆ. ಹೆಚ್ಚಿನ ಮೇಳಗಳು ಈ ಹೊಸ ಬಗೆಗೆ ಹೊರಳುತ್ತಿವೆ. ಈ ಬದಲಾವಣೆಯು ಯಕ್ಷಗಾನರಂಗದ ಮೇಲೆ ಉಂಟುಮಾಡಿದ ಪ್ರಭಾವವನ್ನು ಗಮನಿಸಬೇಕಾಗಿದೆ. ಪ್ರೇಕ್ಷಕರ ಪಾಲಿಗೆ ಇದು ವರದಾನವಾದರೂ ಕಲಾವಿದರಿಗೆ ಅನೇಕ ಸಮಸ್ಯೆಗಳನ್ನು ಸೃಷ್ಟಿಸಿದೆ. ಮಧ್ಯರಾತ್ರಿಯ ನಂತರ ಆಚೆ ಆಟವೂ ಇಲ್ಲದೆ ಈಚೆಗೆ ಮನೆಗೂ ಹೋಗಲಾರದ ಸ್ಥಿತಿಯಾಗಿದೆ. ಹಿಂದೆ 8–10 ತಾಸುಗಳ ಮೂರು ಪ್ರಸಂಗಗಳ ಮೂಲಕ ಎಲ್ಲಾ ಕಲಾವಿದರಿಗೆ ತಮ್ಮ ಕಲಾಭಿವ್ಯಕ್ತಿಗೆ ಅಗತ್ಯವಾಗುವಷ್ಟು ಸಮಯ ಮತ್ತು ಅವಕಾಶ ಸಿಗುತ್ತಿತ್ತು. ಈಗ ಪ್ರದರ್ಶನದ ಒಟ್ಟು ಅವಧಿ 4 ಗಂಟೆಗೆ ಇಳಿಕೆಯಾದ್ದರಿಂದ ಪ್ರತಿಯೊಬ್ಬ ಕಲಾವಿದರಿಗೆ ಕಲಾ ಅಭಿವ್ಯಕ್ತಿ ಮಾಡಲು ಸಮಯ ಸಾಧ್ಯವಾಗುತ್ತಿಲ್ಲ. ಇದರಿಂದ ಪ್ರೇಕ್ಷಕರಲ್ಲಿ ಅವರು ಸೃಷ್ಟಿಸುವ ರಸಾನುಭವಕ್ಕೆ ಧಕ್ಕೆಯಾಗಿದೆ. ಹಿಂದೆಲ್ಲ ಬೆಳಗಿನ ಜಾವಕ್ಕೆಂದೇ ಮೀಸಲಾದ ರಾಗಗಳು ಭಾಗವತ ಹಾಡಿ, ಮುಮ್ಮೇಳದ ಕಲಾವಿದ ಭಾವಾಭಿಪೂರ್ಣವಾಗಿ ನಟಿಸಿದಾಗ ಅದು ಮನದಲ್ಲಿ ಅಚ್ಚಳಿಯದೇ ಉಳಿಯುತ್ತಿತ್ತು. ಹಾಗೆ ಆಟನೋಡಿದ ಪ್ರೇಕ್ಷಕರು ಯಕ್ಷಗಾನದ ದಾಸಾನುದಾಸರಾಗುತ್ತಿದ್ದರು. ತಾವು ಯಾವ ಊರಿಗೆ ಹೋದರೂ ಅಲ್ಲಿ ಪ್ರದರ್ಶನ ನೋಡಲು ಕಾತರದಿಂದ ಕಾಯುತ್ತಾ ಇರುತ್ತಿದ್ದರು. ಹೊಸಬಗೆಯ ವ್ಯವಸ್ಥೆ ಅಂತಹ ಬದ್ಧತೆಯ ಪ್ರೇಕ್ಷಕರನ್ನು ಸೃಷ್ಟಿಸುವಲ್ಲಿ ವಿಫಲವಾಗುತ್ತಿದೆ. ಇದು ಯಕ್ಷಗಾನದ ಉಳಿವಿಗೆ ಅಪಾಯವಾಗಬಹುದು. ಕಲಾವಿದರಿಗೂ ಕೂಡ ಹಿಂದೆ ಇದ್ದ ಅವಕಾಶ ಇಲ್ಲದಂತಾಗಿ ಅವರು ವೇಗದ ಚುರುಕಿನ ಪ್ರದರ್ಶನಕ್ಕೆ ಒಗ್ಗುವುದರಿಂದ ಅವರೊಬ್ಬ 'ಸಿದ್ಧ ಉತ್ಪಾದನೆ' ಯಾಗುತ್ತಾರೆಯೇ ಹೊರತು ನಿಜವಾದ ಕಲಾವಿದರಾಗಿ ಅರಳುವುದಿಲ್ಲ, ಬೆಳೆಯುವುದಿಲ್ಲ. ಇದು ಮಾರಕವೇ ಸರಿ. ಇದೇ ರೀತಿ ಹಿಂದೆ ಡೇರೆ ಮೇಳಗಳಿಗಿದ್ದ ಆದ್ಯತೆ ಈಗ ಕಡಿಮೆಯಾಗುತ್ತಿದೆ. ಅವು ಸ್ಥಳೀಯ ಗುತ್ತಿಗೆದಾರನನ್ನು ಅವಲಂಬಿಸಿ ಬದುಕುತ್ತಿವೆ. ಹಿಂದೆಲ್ಲ ಪ್ರತಿ ಡೇರೆಮೇಳಗಳ ಗುಣಮಟ್ಟ, ಅಲ್ಲಿನ ಕಲಾವಿದರ ಕಲಾಶಕ್ತಿಯ ಮೌಲ್ಯಮಾಪನ, ಆಡುವ ಪ್ರಸಂಗಗಳ ಒಳಹೊರಗೆಲ್ಲ ಪ್ರೇಕ್ಷಕರಾದವರ ಅರಿವಿನಲ್ಲಿ ಇರುತ್ತಿತ್ತು. ಇವೆಲ್ಲ ಚರ್ಚೆಯ ವಿಷಯವಾಗಿರುತ್ತಿದ್ದವು. ಮೇಳಕ್ಕೂ ಪ್ರೇಕ್ಷಕರಿಗೂ ನೇರ ಸಂಪರ್ಕವಿರುತ್ತಿತ್ತು. ಈಗ ಗುತ್ತಿಗೆದಾರನಿಂದಾಗಿ ಈ ಬಗೆಯ ಸಂಬಂಧ ಕಡಿದುಹೋಗಿದೆ. ಇದು ಆಶಾದಾಯಕ ಬೆಳವಣಿಗೆ ಅಲ್ಲ. ಡೇರೆ ಮೇಳದ ಯಜಮಾನರು, ಹಾಗೂ ಅಲ್ಲಿನ ಕಲಾವಿದರು ಈ ಕುರಿತು ಚಿಂತಿಸಬೇಕಾಗಿದೆ. ಹಿಂದೆಲ್ಲಾ ಸಭಾ ಲಕ್ಷಣ ಭಾಗ ಕ್ರಮೇಣ ಕುಂದುತ್ತಿರುವುದರ ಬಗ್ಗೆ ಹಿರಿಯ ಕಲಾವಿದರು ಅಸಂತುಷ್ಟರಾಗಿದ್ದರು. ಆದರೆ ಈಗ ಹೆಚ್ಚಿನ ಮೇಳಗಳ ಪ್ರದರ್ಶನಗಳಲ್ಲಿ ಅವು ಸಂಪೂರ್ಣ ಇಲ್ಲವಾಗಿ

ಹೋಗಿದೆ. ಕೆಲವೆಡೆ ಇದ್ದರೂ 'ನಾಮಕಾವಾಸ್ತೆ'ಯಂತೆ ಕಾಣುತ್ತಿದೆ. ಇದು ಕೂಡ ಕಳವಳಕಾರಿ ಸಂಗತಿಯಾಗಿದೆ.

ಯಕ್ಷಗಾನ ರಂಗವು ಅನೇಕ ಬಗೆಯ ಪ್ರಯೋಗಗಳಿಗೆ ಆಡಂಬೋಲವಾಗಿದ್ದು ಕೆಲವು ಇಂದಿಗೂ ಉಳಿದುಕೊಂಡಿವೆ. ಈಚಿನ ವಿದ್ಯಮಾನವೆಂದರೆ ಭಾಗವತರು ಹೆಚ್ಚು ತಮ್ಮ ಸಂಗೀತ ಪ್ರದರ್ಶನಕ್ಕೆ ಆತುಕೊಂಡದ್ದು. ಇದರಿಂದ ಕಲಾವಿದನು ಅವರೊಂದಿಗೆ ತನ್ನ ಕಲಾಪ್ರದರ್ಶನಕ್ಕೆ ಜೋತು ಬಿದ್ದುದ್ದು. ಇಡೀ ರಂಗಸ್ಥಳದಲ್ಲಿ ಇವರಿಬ್ಬರಿಂದಾಗಿ ಒಂದು ಹಾಡಿಗೆ 30–40 ನಿಮಿಷದಷ್ಟು ಸಮಯವನ್ನು ವ್ಯಯವಾಗುವುದುಂಟು. ಮೊದಮೊದಲಿಗೆ ಇವೆಲ್ಲ ಆಕರ್ಷಣೆ ಎನಿಸಿದರೂ ಈಗ ಪ್ರೇಕ್ಷಕರು ಈ ಜಿದ್ದಾಜಿದ್ದಿಗೆ ಹೇಸಿ ಹೋಗಿದ್ದಾರೆ. ಪ್ರದರ್ಶನದ ಒಟ್ಟು ಪ್ರಭಾವಕ್ಕೆ ಇದು ಎರವಾಗಿದೆ. ಈ ಬಗೆಯ ತಮ್ಮದೊಬ್ಬರ ಕಲಾಭಿವ್ಯಕ್ತಿ ಮರೆಯಬೇಕೆಂಬ ಮನೋಭಾವ ಒಟ್ಟು ಪ್ರದರ್ಶನ ಸೋಲಲು ಕಾರಣವಾಗುತ್ತದೆ. ಇವತ್ತಿನ ಕಲಾವಿದರು ಈ ಬಗ್ಗೆ ಚಿಂತಿಸಬೇಕಾಗಿದೆ. ಯಕ್ಷಗಾನ 'ಸಮಷ್ಠಿ ಕಲೆ' ಎಂಬುದನ್ನು ಮರೆಯಬಾರದು.

ಹಿಂದೆಲ್ಲಾ ಕಾಣದ 'ಯಕ್ಷಗಾನ ಗಾನವೈಭವ' ಎಂಬ ಕಾರ್ಯಕ್ರಮ ಈಗ ಬಹಳಷ್ಟು ನಡೆಯುತ್ತಿದೆ. ಮೊದ ಮೊದಲಿಗೆ 'ಜುಗಲ್ ಬಂದಿ' ಮಾದರಿಯಲ್ಲಿ ಪ್ರಾರಂಭವಾದದ್ದು ಈಗ 2 ಅಥವಾ 4 ಭಾಗವತರು ಒಂದೆಡೆ ಕುಳಿತು ಸಂಗೀತ ಕಚೇರಿ ಮಾದರಿಯಲ್ಲಿ ಕಾರ್ಯಕ್ರಮ ನಡೆಸುತ್ತಿದ್ದಾರೆ. ಉಳಿದ ಗಾನ ಪದ್ಧತಿಯ ಪ್ರಭಾವಕ್ಕೆ ಒಳಗಾದ ಭಾಗವತರು ತಮ್ಮ ಗಾನ ಪ್ರೌಢಿಮೆ ಮೆರೆಸಲು ಇದೊಂದು ವೇದಿಕೆಯಾಗಿದೆ. ಇದೇ ರೀತಿ 'ನಾಟ್ಯವೈಭವ'ವೂ ಕೂಡ ಇದೆ. ಭಾಗವತನ ಹಾಡಿಗೆ ಸಮರ್ಥ ಮೇರು ಕಲಾವಿದ ನಾಟ್ಯದಲ್ಲಿ ತನ್ನ ಪ್ರೌಢಿಮೆಯನ್ನುಮೆರೆಯಲು ವೇದಿಕೆಯಾಗಿದೆ. ಹೀಗೆ ಯಕ್ಷಗಾನದ ಒಂದೊಂದು ಅಂಗ ಪ್ರತ್ಯೇಕವಾಗಿ ತನ್ನ ಕಲಾಭಿವ್ಯಕ್ತಿಯನ್ನು ಪ್ರದರ್ಶಿಸ ಹೊರಟಿದ್ದು ಹೊಸಬೆಳವಣಿಗೆಯಾಗಿದೆ. ಯಕ್ಷಗಾನ ಸಮಷ್ಠಿ ಕಲೆಯಾಗಿದ್ದು ಬೇರೆ ಬೇರೆ ಭಾಗಗಳು ಒಂದೊಂದು ರುಚಿಯನ್ನು ಕೊಡುತ್ತವೆ. ಅದೇ ರೀತಿ ವಿಭಿನ್ನ ಕಲಾವಿದರು ವಿಭಿನ್ನ ರುಚಿಯನ್ನು ನೀಡುತ್ತಿದ್ದರೆ ಆ ಯಕ್ಷಗಾನವು ಪ್ರೇಕ್ಷಕರಿಗೆ ಒಂದು ಸಮಾರಾಧನೆ ಇದ್ದಂತೆ ಇರುತ್ತದೆ. ಆದರೆ 'ಗಾನ ವೈಭವ' 'ನಾಟ್ಯ ವೈಭವ' ಸಮಾರಾಧನೆಯ ಅಂಶಕ್ಕೆ ಎರವಾಗುತ್ತಿವೆ. ಅಲ್ಲದೆ ಕೇವಲ ಕೆಲವೇ ಮುಖ್ಯ ಕಲಾವಿದರಿಗೆ ಅವಕಾಶ ದೊರೆಯುತ್ತದೆ. ಉಳಿದ ಬಗೆಯ ಪುಂಡ ವೇಷ, ಪುರುಷವೇಷ ಮುಂತಾದ ಬಗೆಯ ಪೋಷಕ ಪಾತ್ರಧಾರಿಗಳು ಅವಕಾಶದಿಂದ ವಂಚಿತರಾಗುವಂತಾಗುತ್ತಿದೆ. ಇದು ಕೂಡ ಚರ್ಚಿಸಬೇಕಾದ ವಿಷಯವಾಗಿದೆ. ಪ್ರತಿಯೊಬ್ಬ ಕಲಾವಿದನಿಗೂ ಸಮಾನ ಅವಕಾಶ ದೊರೆಯಬೇಕು. ಆಗ ಸರ್ವರಿಗೂ ಅನುಕೂಲ.

ಹಿಂದೆ ಸಮೀಕ್ಷೆ ನಡೆಸಿದಾಗ ತಂತ್ರಜ್ಞಾನದ ಬಳಕೆ ಇಷ್ಟೊಂದು ಇರಲಿಲ್ಲ. ಈಗ ಫೇಸ್ ಬುಕ್, ಯೂಟ್ಯೂಬ್ ಮುಂತಾದವುಗಳಿಂದ ಕಲಾಪ್ರದರ್ಶನಕ್ಕೆ ಹೊಸವೇದಿಕೆಯೊಂದು ಲಭಿಸಿದಂತಾಗಿದೆ. ಅದರಲ್ಲೂ ಕೋವಿಡ್ ಮಹಾಮಾರಿ-ಯಿಂದಾಗಿ ಭೌತಿಕ ಪ್ರದರ್ಶನಕ್ಕೆ ಅವಕಾಶವೇ ಇಲ್ಲದಂತಾಯಿತು. ಪ್ರೇಕ್ಷಕರು ನೇರ ಪ್ರದರ್ಶನದಿಂದ ವಂಚಿತರಾದರು. ಆಗ ಸಹಾಯಕ್ಕೆ ಬಂದದ್ದೆ 'ಲೈವ್' ಪ್ರದರ್ಶನಗಳು. ಇವತ್ತು ಅನೇಕ ಸಂಘ ಸಂಸ್ಥೆಗಳು, ಕಲಾವಿದರು, ಹವ್ಯಾಸಿಗಳು 'ಲೈವ್' ಮೂಲಕ ಯಕ್ಷಗಾನ ಪ್ರದರ್ಶನ ಮಾಡುತ್ತಿದ್ದು ಯಕ್ಷಗಾನ ಅಭಿಮಾನಿಗಳು ದಿನವೂ ಒಂದಿಲ್ಲೊಂದರ ಮೂಲಕ ಯಕ್ಷಗಾನವನ್ನು ನೋಡುವಂತಾಗುತ್ತಿದೆ. ನೋಡಲು ಭೌಗೋಳಿಕ ಮಿತಿ ಇಲ್ಲವಾಗಿದೆ. ಖಂಡಾಂತರದ ಪ್ರೇಕ್ಷಕರು ಕೂಡ ಏಕಕಾಲದಲ್ಲಿ 'ಆಟ' ನೋಡುವಂತಾಗುತ್ತಿದೆ, ತಾಳಮದ್ದಲೆಯ ಅರ್ಥ ಕೇಳುವಂತಾಗುತ್ತಿದೆ. 'ವಾಟ್ಸಫ್' ಗುಂಪಿನ ಮೂಲಕ ಅನೇಕ ಹಿಂದಿನ ಪ್ರದರ್ಶನಗಳ ತುಣುಕುಗಳು, ಭಾಗವತಿಕೆಯ ತುಣಿಕುಗಳು ದಿನದ ಇಪ್ಪತ್ನಾಲ್ಕು ಗಂಟೆಯೂ ಹರಿದಾಡುವಂತಾಗಿದೆ. ಈ ಬಗೆಯ ತಂತ್ರಜ್ಞಾನದ ಆಧಿಕ್ಯ ಕಲಾವಿದರಿಗೊಂದು 'ವರದಾನ' ಅಷ್ಟೇ ಅಲ್ಲ 'ಸವಾಲು' ಆಗಿ ಪರಿಣಮಿಸಿದೆ. 'ಕಾಲಕ್ಕೆ ತಕ್ಕ ಕೋಲ' ವನ್ನು ಕಲಾವಿದರು ರೂಢಿಸಿಕೊಳ್ಳಬೇಕಾಗಿದೆ. ಕೊರೋನಾದ ಒಂಬತ್ತು ತಿಂಗಳು ಕಾಲ ಕಲಾವಿದರ ಪಾಲಿಗೆ ಸಂಕಷ್ಟದ ದಿನಗಳು. ಅವರ ಕಲಾ ಬದುಕಿಗೆ ಹಾಗೂ ಕುಟುಂಬದ ಬದುಕಿಗೆ ಸಾಕಷ್ಟು ಘಾಸಿಯನ್ನು ಉಂಟು ಮಾಡಿದ ದಿನಗಳವು. ಆ ಸಂದರ್ಭದಲ್ಲಿ ಅನೇಕ ಸಂಘ ಸಂಸ್ಥೆಗಳು ಸರಕಾರ ಹಾಗೂ ಕಲಾ ಪೋಷಕರು ನೆರವಾದದ್ದು ಕೂಡ ಉಲ್ಲೇಖನಾರ್ಹ. ಈ ಸಂದರ್ಭದಲ್ಲಿ ತಂತ್ರಜ್ಞಾನದ ನೆರವು ಕಲಾವಿದರಿಗೆ ಅನುಕೂಲವಾಯಿತು. ಜಾಲತಾಣಗಳ ಮೂಲಕ ಯಕ್ಷಗಾನ ಇಂದು ವಿಶ್ವಗಾನವಾಗಿದೆ. ಗೂಗಲ್ ಮಾಮ್ ನನ್ನು ಕೇಳಿದರೆ ಕಾಲು ಕೋಟಿಯಷ್ಟು ಉಲ್ಲೇಖಗಳು ಕಂಡುಬರುತ್ತವೆ. ಬೆಂಗಳೂರಿನ ಯಕ್ಷವಾಹಿನಿ ಸಂಸ್ಥೆಯವರು ಪ್ರಸಂಗಗಳ ಡಿಜಿಟಲಿಕರಣ ಕಾರ್ಯವನ್ನು ಕೈಗೆತ್ತಿಕೊಂಡಿದ್ದಾರೆ. ಅಲ್ಲದೆ 1700 ಕ್ಕೂ ಹೆಚ್ಚಿನ ಪ್ರಸಂಗಳನ್ನು ಸ್ಕ್ಯಾನ್ ತಂತ್ರಜ್ಞಾನದ ಮೂಲಕ ಪ್ರತಿ ತೆಗೆದು ವಿದ್ಯುನ್ಮಾನ ರೂಪದಲ್ಲಿ ದೊರೆಯುವಂತೆ ಮಾಡಿದ್ದಾರೆ.

ಹಿಂದೆ ಸಂದರ್ಶನ ನಡೆಸಿದ ಸಂದರ್ಭದಲ್ಲಿ ಎಲ್ಲಾ ಕಲಾವಿದರು ಅಕಾಡೆಮಿಯ ಅಗತ್ಯದ ಬಗ್ಗೆ ಧ್ವನಿ ಎತ್ತಿದ್ದಾರೆ. ಅದು ಸಾಕಾರವಾಗಿದೆ. ಮೊದಲಿಗೆ ಜಾನಪದ ಅಕಾಡೆಮಿಯೊಂದಿಗೆ ಯಕ್ಷಗಾನವನ್ನು ತಳಕು ಹಾಕಲಾಗಿತ್ತು. ಮುಂದೆ ಯಕ್ಷಗಾನ ಬಯಲಾಟ ಅಕಾಡೆಮಿ ಎಂಬುದು ಪ್ರತ್ಯೇಕವಾಯಿತು. ಅಲ್ಲಿಗೂ ಬಯಲಾಟ ಜೊತೆ ಇದ್ದುರಿಂದ ಮತ್ತೆ ಪ್ರತ್ಯೇಕತೆಯ ಕೂಗು ಎದ್ದಿತ್ತು. ಈಗ ಯಕ್ಷಗಾನ ಅಕಾಡೆಮಿ ಸ್ವತಂತ್ರವಾಗಿದೆ. ಮೂಡಲಪಾಯ ಯಕ್ಷಗಾನದ ಹದಿನಾಲ್ಕು ಜಿಲ್ಲೆಗಳು ಹಾಗೂ

ಪಡುವಲಪಾಯ ಯಕ್ಷಗಾನದ ಆರು ಜಿಲ್ಲೆಗಳ 'ಯಕ್ಷಗಾನ' ಚಟುವಟಿಕೆಗೆ ಪ್ರೇರಕ ಶಕ್ತಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ತರಬೇತಿ ಕೇಂದ್ರಗಳಿಗೆ ಪ್ರೋತ್ಸಾಹ, ಅಕಾಡೆಮಿಕ್ ಕಾರ್ಯಕ್ರಮಗಳ ಆಯೋಜನೆ, ಕಲಾವಿದರಿಗೆ ವಿದ್ವಾಂಸರಿಗೆ ಪ್ರಶಸ್ತಿ ವಿತರಣೆ, ವಿಚಾರ ಸಂಕಿರಣ ಕಮ್ಮಟಗಳ ನಿರ್ವಹಣೆ, ಪ್ರಾತ್ಯಕ್ಷಿಕೆ ಮೂಲಕ ಹಿಂದಿನ ಸಂಪ್ರದಾಯ ರಕ್ಷಣೆ ಮುಂತಾದ ಕಾರ್ಯಗಳಲ್ಲಿ ತೊಡಗಿಕೊಂಡಿದೆ. ಕೊರೋನಾ ಕಾಲದಲ್ಲಿ ಅಕಾಡೆಮಿ ನಡೆಸಿದ 'ಮಾತಿನ ಮಂಟಪ' ಹಾಗೂ 'ನೆನಪಿನ ಬುತ್ತಿ' ಕಾರ್ಯಕ್ರಮ ಸರಣಿಯಂತು ಮಾದರಿಯಾಗಿದ್ದು ಉಳಿದ ಅಕಾಡೆಮಿಯವರು ಅಚ್ಚರಿಪಡುವಂತೆ ಕಾರ್ಯ ನಿರ್ವಹಿಸಿದೆ. ವಿಶ್ವದ ನಾನಾ ಮೂಲೆಯಿಂದ ಯಕ್ಷಗಾನ ಆಸಕ್ತರು ಈ ಕಾರ್ಯಕ್ರಮವನ್ನು ನೋಡಿದ್ದಾರೆ. ಕೆಲವೊಮ್ಮೆ 35000 ಕ್ಕೂ ಹೆಚ್ಚು ಜನರು ಈ ಕಾರ್ಯಕ್ರಮವನ್ನು ವೀಕ್ಷಿಸಿದ್ದಾರೆ. ಇದು ಅಕಾಡೆಮಿಯ ಕಾರ್ಯದಕ್ಷತೆಯೊಂದಿಗೆ ಯಕ್ಷಗಾನದ ಆಂತರಿಕ ಸತ್ವವೂ, ಶಕ್ತಿಯೂ ಆಗಿದೆ. ಹೆಚ್ಚಿನ ಅಶಕ್ತ ಕಲಾವಿದರಿಗೆ ಸರಕಾರದಿಂದ ಸಹಾಯಧನ ಕೊಡಿಸುವಲ್ಲಿ ಕೂಡ 'ಯಕ್ಷಗಾನ ಅಕಾಡೆಮಿ' ಯಶಸ್ವಿಯಾಗಿದೆ. ಅಕಾಡೆಮಿಯು ಮೂಡಲಪಾಯ ಯಕ್ಷಗಾನದ ಪುನರುತ್ಥಾನದ ಬಗ್ಗೆ ಶ್ರಮಿಸುತ್ತಿರುವುದು ಕೂಡ ಉಲ್ಲೇಖನಾರ್ಹ.

ಹಿಂದೆಲ್ಲಾ ಹವ್ಯಾಸಿರಂಗದ ಬಗ್ಗೆ ಹಿರಿಯ ಕಲಾವಿದರು ಅನೇಕ ಬಗೆಯ ವಿಶ್ವಾಸವನ್ನು ಪ್ರಕಟಿಸಿದ್ದರು. ನಾಲ್ಕು ದಶಕಗಳ ನಂತರ ಅದು ಸತ್ಯವಾಗುತ್ತಿದೆ. ಯಕ್ಷಗಾನ ರಂಗದಲ್ಲಿ ಇಂದು ಹವ್ಯಾಸಿಗಳು ಮುನ್ನೆಲೆಗೆ ಬರುತ್ತಿದ್ದಾರೆ. ಅದರಲ್ಲೂ ವಿದ್ಯಾವಂತರಾದ, ಹೊರದೇಶಗಳಲ್ಲಿ ನೆಲೆಸಿದ ಹವ್ಯಾಸಿಗಳು ಯಕ್ಷಗಾನದ ಸೀಮೋಲ್ಲಂಘನಕ್ಕೆ ಸಹಕರಿಸುತ್ತಿದ್ದಾರೆ. ಕರಾವಳಿ, ಮಲೆನಾಡು ಹಾಗೂ ಬೆಂಗಳೂರಿನಂತಹ ಮಹಾನಗರಗಳಲ್ಲಿ ಇರುವ ಹವ್ಯಾಸಿ ಸಂಘಗಳು ಯಕ್ಷಗಾನದಲ್ಲಿ ತೊಡಗಿಕೊಳ್ಳುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ಯಕ್ಷಗಾನದ ಪ್ರೇಕ್ಷಕರು ಈಗ ಮೊದಲಿಗಿಂತ ಹೆಚ್ಚು ಪ್ರೌಢರಾಗುತ್ತಿದ್ದಾರೆ, ಪ್ರಜ್ಞಾವಂತರಾಗುತ್ತಿದ್ದಾರೆ. ಹವ್ಯಾಸಿ ಕಲಾವಿದರಿಂದಾಗಿ ಕಾಲಮಿತಿಯ ಪ್ರದರ್ಶನಗಳು ನಗರಭಾಗದಲ್ಲಿ ಅಸಂಖ್ಯವಾಗಿ ನಡೆಯುತ್ತಿವೆ. ಹಿರಿಯ ಕಲಾವಿದರು ಇದರಲ್ಲಿ ಅತಿಥಿ ಕಲಾವಿದರಾಗಿ ಭಾಗವಹಿಸುತ್ತಿರುವುದೇ ಅಲ್ಲದೆ ಅವರಿಗೆ ಮಾರ್ಗದರ್ಶಕರಾಗುತ್ತಿದ್ದಾರೆ. ಅದೇ ರೀತಿ ನಗರ ಪ್ರದೇಶದಲ್ಲಿ ತರಬೇತಿ ಕೇಂದ್ರಗಳಿದ್ದು ಅಸಂಖ್ಯಬಾಲಕರು ಯಕ್ಷಗಾನವನ್ನು ಹವ್ಯಾಸಿಗಳಾಗಿ ಕಲಿಯಲು ತೊಡಗಿದ್ದಾರೆ. ಅನೇಕ ನಿವೃತ್ತ ಕಲಾವಿದರು ಈ ತರಬೇತಿ ಶಾಲೆಯ ಮೂಲಕ ತಮ್ಮ ಕಲಾಸೇವೆ ನಡೆಸುತ್ತಿದ್ದಾರೆ. 'ಯಕ್ಷಗಾನ ಕಲಾರಂಗ'ರಂತಹ ಸಂಘಟನೆಗಳು ಕಲಾವಿದರ ಬಾಳಿಗೆ ಸಾಕಷ್ಟು ನೆರವನ್ನು ನೀಡುತ್ತಿದೆ. ಅವರ ಆಶ್ರಯಕ್ಕೆ ಮನೆ, ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವು, ವಿಮಾಯೋಜನೆ ಜಾರಿ ವಾಹನ ಸೌಕ್ಯರ್ಯದ ಪಾಸ್ ಮುಂತಾದ ಅಗತ್ಯಗಳಲ್ಲಿ ತೊಡಗಿಕೊಳ್ಳುತ್ತಿರುವುದು


ಯಕ್ಷಗಾನ ಗ್ರಾಮೀಣ ಕಲೆಯಾದರೂ ಆಧುನಿಕತೆಗೆ ತೆರೆದುಕೊಳ್ಳುತ್ತಿರುವುದಕ್ಕೆ ಸಾಕ್ಷಿಯಾಗಿದೆ. ಯಕ್ಷಧ್ರುವ ಪಟ್ಲ ಫೌಂಡೇಷನ್ ಟ್ರಸ್ಟ್‌ನ ಕಾರ್ಯವು ಕೂಡ ಸ್ತುತ್ಯಾರ್ಹ. ಇದು ಯಕ್ಷಗಾನ ಕಲೆಯ ಸೌಭಾಗ್ಯವೇ ಸರಿ. ತರಬೇತಿ ಶಾಲೆಗಳು ಕೂಡ ಕರಾವಳಿ ಹಾಗೂ ಮಲೆನಾಡಿನಲ್ಲಿ ಹೆಚ್ಚಿವೆ. ಹಿಂದೆ ತಿರುಗಾಟದ ಮೇಳಗಳಲ್ಲಿದ್ದ ಶಿಕ್ಷಣ ಪದ್ಧತಿ ಕಾಣೆಯಾಗಿದೆ. ಆದ್ದರಿಂದ ವೃತ್ತಿಮೇಳಗಳು ಈಗ ತರಬೇತಿ ಕೇಂದ್ರದಿಂದ ಕಲಾವಿದರನ್ನು ಆರಿಸಿಕೊಳ್ಳುತ್ತಿವೆ. ಕೆಲವೊಮ್ಮೆ 'ಕೇಂದ್ರ'ದಲ್ಲಿ ಅರ್ಧ ಶಿಕ್ಷಣ ಮುಗಿಸಿ ಮೇಳಕ್ಕೆ ಹಾರುವುದೂ ಉಂಟು. ಇದು ತಪ್ಪಬೇಕಾಗಿದೆ. ಅಕಾಡೆಮಿಕ್ ಶಿಸ್ತು ಬರಬೇಕಾಗಿದೆ.

ಐದು ದಶಕಗಳ ಹಿಂದೆ ಕಾಣಿಸಿಕೊಂಡ ನೂತನ ಪ್ರಸಂಗಗಳ ಆಧಿಕ್ಯ ಇಂದಿಗೂ ಇದೆ. ವೃತ್ತಿ ಮೇಳಗಳು ಪ್ರತಿವರ್ಷವೂ ತಮ್ಮಲ್ಲಿನ ಕಲಾವಿದರನ್ನು ಮನದಲ್ಲಿ ಇಟ್ಟುಕೊಂಡು ಪ್ರಸಂಗಕಾರರಿಂದ ಹೊಸ ಪ್ರಸಂಗ ಬರೆಸಿ, 'ಚಾಲ್ತಿ'ಗೆ ತರುತ್ತಿವೆ. ಅವುಗಳ ಆಯುಷ್ಯ ಕಮ್ಮಿಯಾದರೂ ಒಂದು ವರ್ಷದ ತಿರುಗಾಟದಲ್ಲಿ ಸಾಕಷ್ಟು ಪ್ರದರ್ಶನಗಳನ್ನು ನೀಡುತ್ತಿವೆ. ಇದರಿಂದಾಗಿ ಕಲಾವಿದರಾದವರು ಪುರಾಣ ಪ್ರಸಂಗಗಳ ಮೂಲಕ ಕಲಿಯಲು, ಬೆಳೆಯಲು ಸಾಧ್ಯವಾಗುತ್ತಿಲ್ಲ. ನಾಟಕ, ಚಲನಚಿತ್ರದ ಮಾದರಿಯಲ್ಲಿ ಅದೇ ಸಂಭಾಷಣೆ, ಅದೇ ನಾಟ್ಯ, ಅದೇ ಹಾಡು ದಿನವೂ ಪುನರಾವರ್ತನೆಯಾಗುತ್ತಾ ಯಕ್ಷಗಾನದ ಶಕ್ತಿಯಾದ 'ರಂಗದಲ್ಲೇ ನಿರ್ಮಾಣಗೊಳ್ಳುವ ಕಲೆಗಾರಿಕೆ' ನಾಶವಾಗಿ ಹೋಗುತ್ತಿದೆ. ಈ ಬಗ್ಗೆ ಕಲಾವಿದರು, ವಿದ್ವಾಂಸರು, ಪ್ರಜ್ಞಾವಂತ ಪ್ರೇಕ್ಷಕರು ಅಸಹಾಯಕರಾಗಿದ್ದಾರೆ. ವಾಣಿಜ್ಯೀಕರಣದ ಫಲವಾಗಿ ಅತಿಯಾದ ಹಾಸ್ಯ, ಸತ್ವಶಕ್ತಿ ಇಲ್ಲದ ಕಥೆಗಳು, ಸಿನಿಮೀಯ ಘಟನೆಗಳು, ಅತಿರಂಜಕತೆ, ಇಂದಿನ ವಾಸ್ತವಕ್ಕೆ ಹತ್ತಿರವಾಗುವಂತಹ ಸಂಭಾಷಣೆಗಳು, ಸಾಮಾಜಿಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಕಾಣಿಸುವ ಕಲಾವಿದರ ಯೋಚನಾಲಹರಿ ಇವೆಲ್ಲವೂ ಯಕ್ಷಗಾನದ ಮೂಲ ಲಯ ನಡೆಗಳಿಂದ ಪ್ರದರ್ಶನ ದೂರ ಸರಿಯುತ್ತಿರುವುದನ್ನು ಕಾಣಬಹುದು. ಇದೆಲ್ಲ ಈ ಕಲೆಯ ಮೂಲ ಶಿಲ್ಪ ಶಿಥಿಲಗೊಳ್ಳಲು ಕಾರಣವಾಗಬಹುದು. ಬದಲಾವಣೆ ಬೇಕಾದರೂ ಅದು ಯಕ್ಷಗಾನೀಯವಾಗಿರಬೇಕು. ಇಲ್ಲವಾದರೆ ಮುಂದೊಂದು ದಿನ ಅಪಾಯ ಕಟ್ಟಿಟ್ಟದ್ದು. ಯಕ್ಷಗಾನ ಪ್ರದರ್ಶನ ಇನ್ನೂ ಚಂದವಾಗಬೇಕು, ಪ್ರಭಾವಿಯಾಗಬೇಕೇ ಹೊರತು ಜನಾಕರ್ಷಣೆಗಾಗಿ ಏನೇನೊ ಮಾಡುವುದು ಸಲ್ಲದು.

ಹೀಗೆ 'ಬದಲಾದ ಕಾಲ'ಕ್ಕೆ ನಮ್ಮ ಕಲಾವಿದರು ಹೇಗೆ ಸ್ಪಂದಿಸುತ್ತಾರೆ ಎಂಬುದೇ ಈ ಕಲೆಯ ಬೆಳವಣಿಗೆಗೆ ಕಾರಣವಾಗುತ್ತದೆ. ಇಲ್ಲಿನ ಇಪ್ಪತ್ಮೂರು ಕಲಾವಿದರು ತಾವು ಕಂಡುಕೊಂಡ ಅನುಭವವನ್ನು ದಾಖಲಿಸಿರುವುದರೊಂದಿಗೆ ಈ ಕಲೆಯ ಉಚ್ಛ್ರಾಯಕ್ಕೆ ಯಾವ ಬಗೆಯ ಪರಿಶ್ರಮ ಹಾಗೂ ಬದ್ಧತೆಬೇಕು ಎಂಬುದನ್ನು ತಿಳಿಸಿದ್ದಾರೆ. ಇದು

ಇಂದಿನ ಕಲಾವಿದರಿಗೆ, ಯುವಕಲಾವಿದರಿಗೆ, ಹವ್ಯಾಸಿಗಳಿಗೆ ಹಾಗೂ ಸಂಘಟಕರಿಗೆ ದಾರಿದೀಪವಾಗುತ್ತದೆ. ಇಲ್ಲಿನ ವಿಚಾರಧಾರೆಗಳ ಬೆಳಕಲ್ಲಿ ಯಕ್ಷಗಾನ ಬೆಳೆಯಲಿ, ಬೆಳಗಲಿ ಎಂಬುದೇ ಹಾರೈಕೆಯಾಗಿದೆ.

■



ಯಕ್ಷ ದರ್ಶನ

ಯಕ್ಷದರ್ಶನ–ಯಕ್ಷಗಾನದ ಕಲಾವಿದರ ಸಂದರ್ಶನಗಳ ಸಂಗ್ರಹ, ಯಕ್ಷಗಾನಕ್ಕೆ ಸಂಬಂಧಿಸಿದ ಜ್ವಲಂತ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ಎತ್ತಿ, ಯಕ್ಷಗಾನದಲ್ಲಿ ತಮ್ಮ ಬದುಕನ್ನು ತೊಡಗಿಸಿರುವ ಕಲಾವಿದರ ಅನಿಸಿಕೆಗಳನ್ನು, ಅಭಿಪ್ರಾಯಗಳನ್ನು ಸಂಗ್ರಹಿಸಿ, ಆ ಅಭಿಪ್ರಾಯಗಳ ವಿಶ್ಲೇಷಣೆಗೂ ಇಲ್ಲಿ ಲೇಖಕರು ತೊಡಗುವುದರಿಂದ, ಈ ಗ್ರಂಥಕ್ಕೆ ವಿಶೇಷ ಮಹತ್ವ ಪ್ರಾಪ್ತವಾಗಿದೆ.

ಡಾ. ಆನಂದರಾಮ ಉಪಾಧ್ಯರು ತಮ್ಮ ಲೇಖನಿಯನ್ನು ಯಕ್ಷಗಾನ ಕಲೆಯ ಪ್ರಚಾರ, ಪರಿಶೀಲನೆಗೇ ಮೀಸಲಾಗಿ ಇರಿಸಿರುವವರು; ಯಕ್ಷಗಾನಕ್ಕೆ ಸಂಬಂಧಿಸಿದ ತಮ್ಮ ಸಂಶೋಧನೆಗೆ ಪಿ.ಎಚ್.ಡಿ. ಪದವಿ ಪಡೆದವರು. ಈ ಕಲೆಯ ಬಗ್ಗೆ ಅವರಿಗಿರುವ ಪ್ರೀತಿ ಅನನ್ಯವಾದುದು. ಯಾವುದೇ ಸೀಮಿತ ಪರಿಧಿಗೂ ತನ್ನನ್ನು ಬದ್ಧಗೊಳಿಸಿಕೊಳ್ಳದೆ, ನಿರ್ಮತ್ಸರವಾದ, ಆರ್ದ್ರವಾದ ಮನೋಧರ್ಮದಿಂದ ಉಪಾಧ್ಯರು ತಮ್ಮ ಬರವಣಿಗೆಗೆ ಹೃದ್ಯತೆಯನ್ನು ದೊರಕಿಸುತ್ತಾರೆ. ಯಕ್ಷಗಾನದ ಬಗೆಗೆ ಅವರಿಗಿರುವ ಗಾಢ ಅಭಿಮಾನ ಅವರ ವಿಮರ್ಶೆಯ ಮೊನಚನ್ನು ಮೊಂಡು ಮಾಡಿಲ್ಲ. ಆದ್ದರಿಂದಲೇ ಯಕ್ಷದರ್ಶನ, ಯಕ್ಷಗಾನಕ್ಕೆ ಸಂಬಂಧಿಸಿದ ಕನ್ನಡದ ಗಮನೀಯ ಕೃತಿಗಳಲ್ಲಿ ಒಂದಾಗುತ್ತದೆ.

–ಡಾ. ಎಚ್.ಎಸ್. ವೆಂಕಟೇಶ ಮೂರ್ತಿ

ಗೀತಾಂಜಲಿ ಪಬ್ಲಿಕೇಷನ್ಸ್
ನಂ. 60, 2ನೇ 'ಡಿ' ಅಡ್ಡರಸ್ತೆ, 2ನೇ ಹಂತ
3ನೇ ಬ್ಲಾಕ್, ನಾಗರಬಾವಿ, ಬೆಂಗಳೂರು–560 072.

ISBN 8194992176
9788194992172 72

₹200/-

Design: Godavari